Uncle Tom's C...

THE ...

BANGALORE

1937

ಒಂದು ಮಾತು

ಕ್ರಿ. ಶ. 1862 ನೇ ಇಸವಿಯ ವರೆಗೂ ಅಮೆರಿಕಾ ದೇಶದಲ್ಲಿ ಗುಲಾಮರ ವ್ಯಾಪಾರವು ವಾಡಿಕೆಯಾಗಿದ್ದಿತು. ಆದರೆ ಇಡೀ ಅಮೆರಿಕಾ ದೇಶದ ಎಲ್ಲಾ ಪ್ರಾಂತ್ಯಗಳ ಪ್ರತಿನಿಧಿಗಳು ಕೂಡಿದ್ದ ಮೊದಲನೆಯ ಮಹಾ ಸಭೆಯವರಿಂದ ಇನ್ನು ಮುಂದೆ ಆಫ್ರಿಕಾ ದೇಶವಾಸಿಗಳಾದ ಕಪ್ಪು (ನೀಗ್ರೋ) ಜನರನ್ನು ಕದ್ದು ತಂದು, ಅಮೆರಿಕಾ ದೇಶದಲ್ಲಿ ಮಾರಬಾರ ದೆಂಬ ಖಂಡಿತಾಜ್ಞೆಯು ಪ್ರಕಟವಾಯಿತು. ಆದಾಗ್ಯೂ ಈ ಪ್ರಕಟನೆಯು ಹೊರಡುವುದಕ್ಕೆ ಮುಂಚೆ ಈ ದೇಶಕ್ಕೆ ಕದ್ದು ತಂದಿದ್ದ ಕಪ್ಪು ಜನರ ವಂಶೀಯರಾದವರು ಮುಖ್ಯವಾಗಿ ಉಷ್ಣಪ್ರದೇಶವಾದ ದಕ್ಷಿಣ ಪ್ರಾಂತ್ಯ ಗಳಲ್ಲಿದ್ದ ಹತ್ತಿಯ ಹೊಲಗಳಲ್ಲಿಯೂ ಕಬ್ಬಿನ ತೋಟಗಳಲ್ಲಿಯೂ ಮನೆ ಗಳಲ್ಲಿಯೂ ಎಂದಿನಂತೆ ಗುಲಾಮವೃತ್ತಿಯನ್ನು ಮಾಡಿಕೊಂಡೇ ಇರು ತ್ತಿದ್ದರು.

ದಕ್ಷಿಣ ಪ್ರಾಂತ್ಯದ ಜನರು ಕಪ್ಪುಗುಲಾಮರ ವಿಷಯದಲ್ಲಿ ಬಹಳ ಪ್ರೀತಿಯುಳ್ಳವರಾಗಿಯೇ ಇದ್ದರು. ಇಂತಹ ತಮ್ಮ ಪ್ರೀತಿಯನ್ನು ವ್ಯಕ್ತ ಪಡಿಸಲು ಇವರನ್ನು ಮಾವ, ಅತ್ತೆ ಎಂದು ಕರೆಯುವ ಪದ್ಧತಿಯಿದ್ದಿತು. ಯಜಮಾನರು ದಯಾಳುಗಳಾಗಿದ್ದರೆ ಇವರ ಜೀವನವನ್ನು ಸುಖಜೀವನ ವೆಂದೇ ಹೇಳಬೇಕು. ಆದಾಗ್ಯೂ ತಮ್ಮ ತಂದೆತಾಯಿಗಳಿಂದಲೂ ಹೆಂಡತೀ ಮಕ್ಕಳಿಂದಲೂ ಅಗಲಿಸಿ, ಯಜಮಾನರು ಯಾವ ಸಮಯದಲ್ಲಿ ತಮ್ಮನ್ನು ಮಾರಿಬಿಡುತ್ತಾರೋ ಎಂಬ ವ್ಯಸನವೂ ಭಯವೂ ಈ ಬಡಜನರನ್ನು ದಿವಾ ರಾತ್ರೆಗಳಲ್ಲಿಯೂ ಕಾಡಿಸುವುದಾಗಿದ್ದಿತು.

ಉತ್ತರ ಪ್ರಾಂತ್ಯದ ಜನರಲ್ಲನೇಕರು ಕಪ್ಪುಜನರನ್ನು ಗುಲಾಮ ರನ್ನಾಗಿ ಮಾರುವುದರ ವಿಷಯದಲ್ಲಿಯೂ ಅವರನ್ನು ನಿಷ್ಕರುಣೆಯಿಂದ ಹಿಂಸೆಪಡಿಸುವ ವಿಷಯದಲ್ಲಿಯೂ ಅತೃಪ್ತಿಯುಳ್ಳವರಾಗಿ ಈ ದುಷ್ಟ

ಪದ್ಧತಿಯನ್ನು ಮನಃಪೂರ್ವಕವಾಗಿ ವಿರೋಧಿಸುವವರಾಗಿದ್ದರು. ಯಜಮಾನರು ಕೊಡುತ್ತಿದ್ದ ಹಿಂಸೆಯನ್ನು ಸಹಿಸಲಾರದೆ ತಲೇ ತಪ್ಪಿಸಿಕೊಂಡು ಓಡಿಹೋಗುತ್ತಿದ್ದ ಗುಲಾಮರಿಗೆ ತಮ್ಮಿಂದ ಸಾಧ್ಯವಾದಷ್ಟು ಸಹಾಯವನ್ನು ಮಾಡಿ ಅವರ ಕಷ್ಟಗಳಿಂದ ಅವರನ್ನು ಪಾರುಮಾಡುತ್ತಿದ್ದರು.

ನಮ್ಮ ಈ ಕಥೆಯು ಕೆಂಟಕೀ ಎಂಬ ಊರಿನಲ್ಲಿ ಪ್ರಾರಂಭಿಸಿತು. ಈ ಊರಿನ ಉತ್ತರ ಭಾಗದಲ್ಲಿ ಓಹೈಯೋ ಎಂಬ ನದಿಯು ಹರಿಯುವುದು. ಇದು ಗುಲಾಮತನವನ್ನು ಪ್ರೋತ್ಸಾಹಿಸುವ ಜನರಿರುವ ಪ್ರಾಂತ್ಯವನ್ನು ಗುಲಾಮತನವನ್ನು ವಿರೋಧಿಸುವ ಜನರಿರುವ ಪ್ರಾಂತ್ಯದಿಂದ ಪ್ರತ್ಯೇಕಿಸುವ ಮೇರೆಯಾಗಿದ್ದಿತು.

ಹ್ಯಾರಿಯಟ್ ಬೀಚರ್ ಸ್ಟೋ ಎಂಬ ಪಾಶ್ಚಾತ್ಯ ಮಹಿಳೆಯು ಈ ಕಥಾಲೇಖಕಳು. ಓಹೈಯೋ ಪ್ರಾಂತ್ಯವೇ ಈಕೆಯ ವಾಸಸ್ಥಳವು. ಈಕೆಯು ಪ್ರೌಢವಿದ್ಯಾಶಾಲೆಯ ವಿದ್ಯಾಗುರುಗಳಲ್ಲೊಬ್ಬರ ಹೆಂಡತಿಯು. ಯಜಮಾನರು ಕೊಡುತ್ತಿದ್ದ ಹಿಂಸೆಗಳನ್ನು ತಡೆಯಲಾರದೆ ಓಡಿಹೋಗುತ್ತಿದ್ದ ಗುಲಾಮರನೇಕರನ್ನು ಕಣ್ಣಾರೆ ನೋಡುತ್ತಿದ್ದುದು ಮಾತ್ರವಲ್ಲದೆ ಅವರು ಪಡುತ್ತಿದ್ದ ಕಷ್ಟವನ್ನು ಅವರ ಬಾಯಿಂದಲೇ ಕೇಳಿ ಅರಿತವಳಾಗಿದ್ದಳು. ಈ ಬಡಗುಲಾಮರ ಕಷ್ಟ ದುಃಖಗಳನ್ನು ನೋಡಿ ಈಕೆಗೆ ಸಹಿಸಲಾಗಲಿಲ್ಲ. ಗುಲಾಮ ವ್ಯಾಪಾರವೆಂದರೆ ಈಕೆಗಾಗದು. ಬಹಳ ವಿರೋಧಿಸುತ್ತಿದ್ದಳು. ಈ ಬಡಜನರ ಕಷ್ಟವನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ನಿರ್ಧರಿಸಿದಳು. ಈ ಕಾರಣದಿಂದಲೇ ಈಕೆಯು "ಅಂಕಲ್ ಟಾಮ್ಸ್ ಕೇಬಿನ್" (*Uncle Tom's Cabin*) ಎಂಬ ಪುಸ್ತಕವನ್ನು ಕಥಾರೂಪವಾಗಿ ಬರೆದಳು. ಉತ್ತರ ಪ್ರಾಂತ್ಯದ ಜನರು ಗುಲಾಮರ ವ್ಯಾಪಾರವನ್ನು ಹೇಸಿ, ವಿರೋಧಿಸುವಂತೆ ಪ್ರೇರೇಪಿಸಿ, ಅವರನ್ನು ಹುರಿದುಂಬಿಸಿದುದು ಈ ಪುಸ್ತಕವೇ. ಅಮೆರಿಕಾ ದೇಶದ ಒಳಯುದ್ಧಕ್ಕೆ ಅನೇಕ ಕಾರಣಗಳಿದ್ದುವು. ಆ ಕಾರಣಗಳಲ್ಲಿ ಈ ಪುಸ್ತಕವು ಒಂದಾಗಿದ್ದಿತೆಂಬುವುದಕ್ಕೆ ಸಂಶಯವಿಲ್ಲ. ಈ ಯುದ್ಧದಿಂದ ಅನೇಕ ವರುಷಗಳಿಂದಲೂ

ಕಷ್ಟಪಡುತ್ತಿದ್ದ ಗುಲಾಮರೆಲ್ಲರಿಗೆ ಬಿಡುಗಡೆಯಾಗಿ ಸ್ವತಂತ್ರರಾಗಿ ಜೀವಿಸಲು ಅನುವಾಯಿತು.

ಈ ಗ್ರಂಥವು ದೊಡ್ಡದಾಗಿರುವುದರಿಂದ ವಾಚಕಮಹಾಶಯರು ಬೇಸರಗೊಳ್ಳದಂತೆ ಮೊದಲು ಟಾಂಮಾವನ (Uncle Tom) ಕಥೆಯನ್ನು "ಹಿಂಸಾ ವಿಜಯ" ವೆಂಬ ಹೆಸರಿನಿಂದ ಹೇಳಿ, ಆ ತರುವಾಯ ಎಲೈಜಾ ಎಂಬ ಗುಲಾಮ ಯುವತಿಯ ಕಥೆಯನ್ನು "ಪ್ರೇಮ" ಎಂಬ ಹೆಸರಿನಿಂದಲೂ ಟಾಪ್ಸಿ ಎಂಬ ಗುಲಾಮ ಹುಡುಗಿಯ ಕಥೆಯನ್ನು "ಕುರುಳಿನ ಮಹಿಮೆ" ಎಂಬ ಹೆಸರಿನಿಂದಲೂ ಹೇಳಿದೆ.

ವಿಷಯ ಸೂಚನೆ

ಒಂದನೆಯ ಭಾಗ

ಎರಡನೆಯ ಭಾಗ

ಮೂರನೆಯ ಭಾಗ

ಒಬ್ಬ ಗುಲಾಮನ ಅಕಾಲಮರಣ

ಅಧ್ಯಾಯ ೧

ಗುಲಾಮರ ವ್ಯಾಪಾರಿಯು

ಕೆಂಟಕೀ ಎಂಬುವುದು ಒಂದು ಸಂಸ್ಥಾನವು. ಇದರಲ್ಲಿ ಶೆಲ್ಬೀ ಎಂಬ ಹೆಸರುಳ್ಳ ಒಬ್ಬ ಮನುಷ್ಯನಿದ್ದನು. ಇವನು ಆ ಊರಿನಲ್ಲಿದ್ದವರೆಲ್ಲರಿಗಿಂತಲೂ ಹಣವಂತನಲ್ಲ. ಆದಾಗ್ಯೂ ಇವನ ಮನೆ, ಅದರೊಳಗಿದ್ದ ಸಾಮಾನುಗಳು, ಇವನ ಜಮೀನು ಮುಂತಾದವುಗಳನ್ನು ನೋಡಿದ ಯಾರಾದರೂ ಅವನನ್ನು ತಕ್ಕಷ್ಟು ಹಣವಂತನೆಂದೇ ಹೇಳಬೇಕಾಗಿದ್ದಿತು. ಇವನು ಸಂಭಾವಿತನು, ಆಳುಗಳ ವಿಷಯದಲ್ಲಿ ದಯಾಳುವು. ಕಪ್ಪುಜನರಾದ ಗುಲಾಮರನ್ನು ತಂದೆಯಂತೆ ಪ್ರೀತಿಸುತ್ತಿದ್ದನು. ಒಂದು ದಿನ ಮಧ್ಯಾಹ್ನ ಬಿಸಿಲಿಳಿಯುತ್ತಿರುವ ಹೊತ್ತು. ಇವನ ಮನೆಯ ಪಡಸಾಲೆಯಲ್ಲಿದ್ದ ಕೊಠಡಿಯೊಂದರಲ್ಲಿ ಮತ್ತೊಬ್ಬನು ಕೂತುಕೊಂಡು ಇವನೊಂದಿಗೆ ಮಾತಾಡುತ್ತಿದ್ದನು. ಮಾತಾಡುತ್ತಿದ್ದವನ ಹೆಸರು ಹೇಲೀ. ಇವನು ಸೊಗಸಾದ ಬಟ್ಟೆಗಳನ್ನು ಹಾಕಿಕೊಂಡು ಜಂಭಕೋರನಾಗಿ ಕಾಣಿಸುತ್ತಿದ್ದನು. ಇವನು ಗುಲಾಮರ ವ್ಯಾಪಾರಿಯು. ಗುಲಾಮರನ್ನು ಕೊಂಡುಕೊಂಡು, ಸಂತೆಗಳಲ್ಲಿ ಹರಾಜುಹಾಕಿ, ಯಾರು ಹೆಚ್ಚಿನ ಬೆಲೆಯನ್ನು ಕೊಡುತ್ತಾರೋ ಅಂತಹವರಿಗೆ ಮಾರಿ ಹಣವನ್ನು ಸಂಪಾದನೇ ಮಾಡಿ ಹಣವಂತನಾಗಿದ್ದನು. ಶೆಲ್ಬೀ ಮತ್ತು ಇವನು ಮಾತಾಡುತ್ತಾ ಶೆಲ್ಬೀಯು ಹೇಳಿದ ಯಾವುದೋ ಒಂದು ಬೆಲೆಗೆ ಇವನು ಸಮ್ಮತಿಸದೆ "ಅವನೊಬ್ಬನಿಗೆ ಅಷ್ಟು ಬೆಲೆಯೇನು ? ನಾನೆಂದಿಗೂ ಅಷ್ಟಕ್ಕೆ ಸಮ್ಮತಿಸುವುದಿಲ್ಲ" ಅಂದನು.

ಶೆಲ್ಬೀ—ಹೇಲೀ, ಏನು ಹೀಗೆನ್ನುತ್ತೀಯಲ್ಲಾ ? ಟಾಮನನ್ನು ಏನೆಂದು ತಿಳಿದಿದ್ದೀಯೇ ? ಅವನು ಇತರ ಗುಲಾಮರಂತಲ್ಲ. ಅವನು ಅಸಾಧಾರಣನು. ನಾನು ಹೇಳಿದ ಬೆಲೆಯು ಅವನ ಯೋಗ್ಯತೆಗೆ ಕಡಿಮೆಯೆಂದೇ

ಹೇಳಬೇಕಾಗಿದೆ. ಅವನು ಸ್ಥಿರಬುದ್ಧಿಯುಳ್ಳವನು, ಪ್ರಾಮಾಣಿಕನು, ಕೆಲಸ ಮಾಡುವುದರಲ್ಲಿ ಬಲು ಘಟ್ಟಿಗನು, ದೇವರಿಗೆ ಭಯಪಡುವವನು, ನನ್ನ ಯಾವತ್ತು ಜಮೀನಿನ ಮೇಲ್ವಿಚಾರಣೆಯನ್ನೆಲ್ಲಾ ಅವನಿಗೇ ವಹಿಸಿದ್ದೇನೆ ಅಂದನು.

ಹೇಲೀ—ನೀಗ್ರೋ ಜನರಲ್ಲಿ ದೇವರಿಗೆ ಭಯಪಡುವವರಿದ್ದಾರೆಂದು ಅನೇಕರು ನಂಬುವುದೇ ಇಲ್ಲ. ಶೆಲ್ಬೀ, ಈ ಸಂಗತಿಯು ನಿನಗೆ ತಿಳಿಯದೇ ?

ಶೆಲ್ಬೀ—ನಿನ್ನ ಮಾತು ನಿಜವಿರಬಹುದು, ಹೇಲೀ. ಟಾಮನು ಎಲ್ಲಾ ನೀಗ್ರೋ ಜನರಂತಲ್ಲ. ಇವನು ನಿಜವಾಗಿಯೂ ದೇವರಿಗೆ ಭಯಪಡುವವನಾಗಿದ್ದಾನೆ. ಇವನ ಗುಣಸ್ವಭಾವಗಳನ್ನು ನಾನು ಅನೇಕ ವರುಷಗಳಿಂದ ತಿಳಿದುಕೊಂಡಿದ್ದೇನೆ. ಆದುದರಿಂದಲೇ ಹೋದ ವರುಷ ಇವನನ್ನು ದೂರದಲ್ಲಿರುವ ಒಂದೂರಿಗೆ ಒಬ್ಬೊಂಟಿಗನನ್ನಾಗಿ ನನ್ನ ಕೆಲಸದ ಮೇಲೆ ಕಳುಹಿಸಿ ಒಂದು ಸಾವಿರದ ಐನೂರು ರೂಪಾಯಿಗಳನ್ನು ತರಿಸಿಕೊಂಡೆನು. ನನ್ನ ಗುಲಾಮನಾದ ಟಾಮನು ಬಹಳ ನಂಬಿಗಸ್ತನು. ಇಂತಹ ನಂಬಿಕೆಯುಳ್ಳವನನ್ನು ನಿನಗೆ ಮಾರುವುದಕ್ಕೆ ಸ್ವಲ್ಪವಾದರೂ ನನಗೆ ಮನಸ್ಸಿಲ್ಲ. ಮಾರದಿದ್ದರೆ ಯತ್ನವಿಲ್ಲ. ಏನು ಮಾಡಲಿ? ಹೇಗೂ ನಾನು ಟಾಮನಿಗೆ ಹೇಳಿದ ಬೆಲೆಗೆ ನೀನು ಒಪ್ಪಿಕೊಂಡು ನನ್ನಿಂದ ನಿನಗೆ ಬರಬೇಕಾಗಿರುವ ಬಾಕಿಯು ಏನಿದ್ದಾಗ್ಯೂ ಇತ್ಯರ್ಥಮಾಡಿಕೊಂಡುಹೋಗು.

ಹೇಲೀ—ಇಲ್ಲ, ನಾನು ನಿನ್ನ ಮಾತಿಗೆ ಎಂದಿಗೂ ಒಪ್ಪುವುದಿಲ್ಲ. ಹಾಗೆ ನಿನ್ನ ಬಾಕಿಯನ್ನು ಸಂಪೂರ್ಣವಾಗಿ ಇತ್ಯರ್ಥಮಾಡಿಕೊಳ್ಳುವ ಮನಸ್ಸು ನಿನಗಿದ್ದರೆ ಟಾಮನ ಜೊತೆಗೆ ಮತ್ತೊಬ್ಬ ಹುಡುಗನನ್ನಾಗಲೀ ಹುಡುಗಿಯನ್ನಾಗಲೀ ಕಳುಹಿಸು. ಅಂತಹವರು ಯಾರೂ ಇಲ್ಲವೇನು ?

ಶೆಲ್ಬೀ—ಅಂತಹವರು ಯಾರೂ ಇಲ್ಲ. ಒಂದು ವೇಳೆ ಇದ್ದಾಗ್ಯೂ ಕಳುಹಿಸುವುದಕ್ಕೆ ನನಗೆ ಮನಸ್ಸಿಲ್ಲ. ಟಾಮನನ್ನು ನಿನಗೆ ಮಾರುವುದಕ್ಕೆ ಸಹ ನನಗೆ ಸ್ವಲ್ಪವಾದರೂ ಮನಸ್ಸಿಲ್ಲ. ಆದರೂ ಯತ್ನವಿಲ್ಲದೆ ಮಾರಲು ಒಡಂಬಟ್ಟಿದ್ದೇನೆ. ಮಕ್ಕಳನ್ನು ತಂದೆತಾಯಿಗಳಿಂದ ಅಗಲಿಸಿ ಮಾರುವುದೆಂದರೆ ನನ್ನಿಂದಾಗದು.

ಹೇಲೀ—ಏನು ಹೀಗೆ ಹೇಳುತ್ತೀಯಲ್ಲಾ, ಶೆಲ್ಬೀ ? ಕಪ್ಪುಜನರಾದ ಈ ನೀಗ್ರೋ ಜನರನ್ನು ನಮ್ಮಂತಹ ಬಿಳೀ ಜನರಂತೆ ತಿಳಿಯುತ್ತೀಯಾ ? ಬಿಳೀ ಜನರಾದರೋ ಚಿಕ್ಕಂದಿನಿಂದಲೂ ಹೆಂಡತಿಯರು ತಮ್ಮ ಗಂಡಂದಿರನ್ನೂ ಗಂಡಂದಿರು ತಮ್ಮ ಹೆಂಡತಿಯರನ್ನೂ ತಾಯಿತಂದೆಗಳು ಮಕ್ಕಳನ್ನೂ ಪೋಷಿಸುವುದಕ್ಕಾಗಿಯೂ ಪ್ರೀತಿಸುವುದಕ್ಕಾಗಿಯೂ ಶಿಕ್ಷಿತರಾಗಿದ್ದಾರೆ. ನೀಗ್ರೋ ಜನರು ಹಾಗಲ್ಲವೆಂದು ತಿಳಿ. ನೀನು ಅವರನ್ನು ಎಂತಹ ರೀತಿಯಲ್ಲಿ ಬೆಳಿಸಿದರೂ ತಮ್ಮ ಸಂಸಾರ ಮಕ್ಕಳನ್ನು ಸಾಕಿ ಸಲಹಬೇಕೆಂಬ ತಿಳಿವಾಗಲೀ ಅಭಿಪ್ರಾಯವಾಗಲೀ ಅವರಿಗೆ ಎಳ್ಳಷ್ಟಾದರೂ ಇರುವುದೇ ಇಲ್ಲ. ಆದುದರಿಂದ ಅವರು ಒಬ್ಬರನ್ನೊಬ್ಬರು ಅಗಲಿರುವುದು ಕಷ್ಟವೇನೂ ಅಲ್ಲ.

ಶೆಲ್ಬೀ—ಹಾಗಾದರೆ, ನನ್ನಲ್ಲಿರುವ ನೀಗ್ರೋ ಜನರನ್ನು ಅಂತಹ ಸುಶಿಕ್ಷೆಯಲ್ಲಿ ಬೆಳೆಯಿಸಲಿಲ್ಲವೆಂಬುವುದು ನಿನ್ನ ಅಭಿಪ್ರಾಯವೇನು ?

ಹೇಲೀ—ಹೌದು. ಕೆಂಟಕೀ ಪ್ರಾಂತ್ಯದಲ್ಲಿರುವ ನೀವು ನೀಗ್ರೋ ಜನರನ್ನು ಸಂಪೂರ್ಣವಾಗಿ ಕೆಡಿಸುತ್ತಿದ್ದೀರಿ. ನೀವು ಅವರನ್ನು ಪ್ರೀತಿಸಿ ಅವರ ವಿಷಯದಲ್ಲಿ ದಯವುಳ್ಳವರಾಗಿರುವುದು ಒಳ್ಳೆಯದಲ್ಲ. ನೀನು ಇತರರಿಗೆ ಮಾರಿದರೆ ಅವರು ಇವರನ್ನು ಚೆನ್ನಾಗಿ ಹೊಡೆಯುತ್ತಾರೆ, ಉಪವಾಸ ಬಿಡುತ್ತಾರೆ, ಚೆನ್ನಾಗಿ ಕೆಲಸ ತೆಗೆದುಕೊಳ್ಳುತ್ತಾರೆ. ಕಡೆಯಲ್ಲಿ ಯಾರಿಗಾದರು ಮಾರಿ ಹಣಸಂಪಾದನೆಯನ್ನು ಮಾಡುತ್ತಾರೆ. ಅವರಿಗೆ ದಯ ತೋರಿಸುವುದರಿಂದ ಯಾವ ಪ್ರಯೋಜನವಿದೆಯೋ ನನಗಂತೂ ತಿಳಿಯದು. ನನಗಾದರೋ ಈ ನೀಗ್ರೋ ಜನರನ್ನು ಹೇಗೆ ನೋಡಿಕೊಳ್ಳಬೇಕೆಂದು ಚೆನ್ನಾಗಿ ತಿಳಿದಿದೆ. ನಾನು ಯಾವಾಗಲೂ ಇವರ ವಿಷಯ ಬಹಳ ಎಚ್ಚರಿಕೆಯಿಂದಿರುತ್ತೇನೆ. ಇವರನ್ನು ನಂಬುವುದೇ ಇಲ್ಲ. ಶೆಲ್ಬೀ, ಈ ಮಾತಂತಿರಲಿ, ಈಗ ನಿನ್ನ ಸಾಲವನ್ನು ಸಂಪೂರ್ಣವಾಗಿ ಇತ್ಯರ್ಥ ಮಾಡಿಕೊಂಡೇ ತೀರಬೇಕು. ಈ ವಿಷಯದಲ್ಲಿ ಏನನ್ನುತ್ತೀ ?

ಶೆಲ್ಬೀ—ಅನ್ನುವುದೇನು, ಹೇಲೀ ? ನಾನು ನಿನಗೆ ಕೊಡಬೇಕಾಗಿರುವ ಹಣವು ಇತ್ಯರ್ಥವಾಗಬೇಕಾದರೆ ನೀನು ಹೇಳಿದಂತೆ ನಾನು ಕೇಳಲೇ

ಬೇಕಾಗಿದೆ. ನಾನು ನಿನಗೆ ಕೊಡಬೇಕಾಗಿರುವ ಹಣವು ಸಂಪೂರ್ಣವಾಗಿ ಮುಟ್ಟಿದೆಯೆಂದು ಒಂದು ರಶೀದಿಯನ್ನು ಕೊಟ್ಟು ನಾಳೆಯ ದಿನ ಟಾಮ ನನ್ನೂ ಅವನ ಜೊತೆಗೆ ಮತ್ತೊಬ್ಬ ಸಣ್ಣ ಹುಡುಗನನ್ನೂ ಕರೆದುಕೊಂಡು ಹೋಗು ಎಂದು ಹೇಳಿ, ಅವಶ್ಯವಾದ ಕಾಗದಪತ್ರಗಳನ್ನು ಬರೆದು ಟಾಮ ನನ್ನೂ ಒಬ್ಬ ಚಿಕ್ಕ ಹುಡುಗನನ್ನೂ ಅವನ ವಶಮಾಡಿದನು.

ತನ್ನ ಬಾಕಿಯು ಇತ್ಯರ್ಥವಾಯಿತಲ್ಲಾ ಎಂದು ಮನ ಹಿಗ್ಗಿದವನಾಗಿ ಮಾರಣೆಯ ದಿನ ಬರುತ್ತೇನೆಂದು ಹೇಳಿ, ಹೇಲಿಯು ಹೊರಟುಹೋದನು.

ಸಾಯಂಕಾಲವಾಯಿತು. ಶೆಲ್ಬೀಯು ತನ್ನ ಹೆಂಡತಿಯ ಕೊಠಡಿಗೆ ಬಂದನು. ಹೆಂಡತಿಯು—ಆಗಲೇ ನಿಮ್ಮೊಂದಿಗೆ ಮಾತಾಡುತ್ತಿದ್ದವನು ಯಾರ್ರೀ ? ಅವನು ದೊಡ್ಡಮನುಷ್ಯನೆಂದು ನನಗೇನೋ ತೋರದು. ಅವನು ಗುಲಾಮ ವ್ಯಾಪಾರಿಯೇನು ? ಎಂದು ಕೇಳಿದಳು.

ಶೆಲ್ಬೀಯ ಮುಖದಲ್ಲಿ ಒಂದು ವಿಧವಾದ ಅಸಮಾಧಾನ, ಅತೃಪ್ತಿ, ಚಿಂತೆ ಹೊರಸೂಸುತ್ತಿದ್ದಿತು. ಹೆಂಡತಿಯ ಪ್ರಶ್ನೆಯು ಇವನ ಚಿಂತೆಯನ್ನು ಹೆಚ್ಚಿಸಿತು. ಗುಲಾಮ ವ್ಯಾಪಾರಿಯ ವಿಷಯ ಹೆಂಡತಿಗೆ ಏನು ಹೇಳ ಬೇಕೆಂದು ತಿಳಿಯದೆ ಹೋಯಿತು. ಕಡೆಗೆ ಹೆಂಡತಿಯನ್ನು ನೋಡಿ— ಎಮಿಲೀ (ಹೆಂಡತಿಯ ಹೆಸರು), ಅವನು ಯಾರಾದರೂ ಆಗಲಿ, ಅದರಿಂದ ನಿನಗಾಗಬೇಕಾದುದೇನು ?

ಎಮಿಲಿ—ಏನೂ ಇಲ್ರೀ, ನಮ್ಮ ಗುಲಾಮರು ಮಾತಾಡಿಕೊಳ್ಳು ತ್ತಿದ್ದರು. ಅದಕ್ಕಾಗಿಯೇ ನಾನು ನಿಮ್ಮನ್ನು ಕೇಳಿದುದು. ಅವನನ್ನು ನೋಡಿ ನಮ್ಮ ಗುಲಾಮರಿಗೆಲ್ಲಾ ಸ್ವಲ್ಪ ಘಾಬರಿಯಾಗಿದ್ದಿತು. ಅವರು ಘಾಬರಿಯಾಗದಂತೆ ಧಣಿಯವರು ನಮ್ಮ ಗುಲಾಮರಲ್ಲಿ ಯಾರನ್ನಾದರೂ ಸರಿಯೇ ಮಾರುವುದಿಲ್ಲವೆಂದು ಹೇಳಿದೆನು, ಅಂದಳು.

ಹೆಂಡತಿಯ ಮಾತುಗಳು ಗಂಡನ ಹೃದಯಕ್ಕೆ ಶೂಲದಿಂದ ಚುಚ್ಚಿ ದಂತಾಗಿ—ಎಮಿಲೀ, ಪ್ರಿಯಳೇ, ನಮ್ಮ ಗುಲಾಮರಲ್ಲಿ ಯಾರನ್ನಾದರೂ ಸರಿಯೆ, ಮಾರಬಾರದೆಂತಲೇ ನನ್ನ ಅಭಿಪ್ರಾಯವಾಗಿದ್ದಿತು. ನಾನು ಅನೇಕ ಸಾರಿ ಈ ವಿಷಯವನ್ನು ಕುರಿತು ನಿನಗೆ ಹೇಳಿರುವುದಲ್ಲದೆ ನಮ್ಮ

ಗುಲಾಮರೆಲ್ಲರಿಗೂ ಹೇಳಿದ್ದೇನೆ. ಆ . . . ದ . . . ರೇ . . . ಈ . . . ಗ . . . ನನ್ನ ಸಾಲಗಾರರ ತೊಂದರೆಯು ಹೆಚ್ಚಾಗುತ್ತಲಿದೆ. ಅವರಿಂದಾಗುತ್ತಿರುವ ತೊಂದರೆ ಅಪಮಾನಗಳನ್ನು ನಾನು ಸಹಿಸಲಾರೆನು. ಇಂತಹ ತೊಂದರೆ ಅಪಮಾನಗಳನ್ನು ತಪ್ಪಿಸಿಕೊಳ್ಳಬೇಕಾದರೆ ನಮ್ಮ ಗುಲಾಮರಲ್ಲಿ ಕೆಲವರನ್ನು ಮಾರಿದ ಹೊರತು ಬೇರೆ ಉಪಾಯವಿಲ್ಲ. ಆದುದರಿಂದ ಈಗ ನಮ್ಮ ಟಾಮನನ್ನೂ ಮತ್ತೊಬ್ಬ ಚಿಕ್ಕ ಹುಡುಗನನ್ನೂ ಮಾರುತ್ತೇನೆಂದು ಒಡಂಬಟ್ಟಿದ್ದೇನೆ ಎಂದು ಹೇಳಿ ನಿಟ್ಟುಸಿರಿಟ್ಟನು.

ಹೆಂಡತಿಯು (ಬೆಚ್ಚಿಬಿದ್ದು)—ಏನೆಂದ್ರೀ? ನಮ್ಮ ಟಾಮನನ್ನು ಮಾರಲು ಒಡಂಬಟ್ಟಿರಾ? ಅಂತಹ ಒಳ್ಳೇ ಮನುಷ್ಯನನ್ನು? ಅಂತಹ ನಂಬಿಗಸ್ತನನ್ನು? ಮಾರಿದಿರಾ? ನಿಮ್ಮ ಬಾಲ್ಯದಿಂದಲೂ ಅವನು ನಿಮ್ಮ ಸೇವೆ ಮಾಡಿದ್ದಾನಲ್ಲಾ? ಅವನನ್ನು ಬಿಡುಗಡೆ ಮಾಡುತ್ತೇನೆಂದು ಸಹ ನೀವೇ ನನಗೆ ಎಷ್ಟೋ ಸಾರಿ ಹೇಳಲಿಲ್ಲವೇ? ಇಷ್ಟು ಸ್ವಲ್ಪ ಸಾಲಕ್ಕಾಗಿ ಅಂತಹ ಒಳ್ಳೆಯವನೂ ಪ್ರಾಮಾಣಿಕನೂ ಘಟ್ಟಿಗನೂ ಭಕ್ತಿಯುಳ್ಳವನೂ ಆದ ನಮ್ಮ ಟಾಮನನ್ನು ಮಾರುವುದುಂಟೇ? ನಮ್ಮ ಗುಲಾಮರನ್ನು ಸನ್ಮಾರ್ಗ ಪ್ರವರ್ತಕರಾಗಮಾಡಲು ಇಷ್ಟು ದಿನಗಳು ನಾವು ಪಟ್ಟ ಕಷ್ಟವೆಲ್ಲವೂ ಮಣ್ಣುಪಾಲಾಯಿತೇ? ತಾಯಿತಂದೆಗಳು ಮಕ್ಕಳ ವಿಷಯದಲ್ಲಿಯೂ ಮಕ್ಕಳು ತಾಯಿತಂದೆಗಳ ವಿಷಯದಲ್ಲಿಯೂ ಗಂಡನು ಹೆಂಡತಿಯ ವಿಷಯದಲ್ಲಿಯೂ ಹೆಂಡತಿಯು ಗಂಡನ ವಿಷಯದಲ್ಲಿಯೂ ಹೇಗೆ ನಡೆದುಕೊಳ್ಳಬೇಕೆಂದು ಅವರಿಗೆ ಕಲಿಸಿದುದೆಲ್ಲವೂ ವ್ಯರ್ಥವಾಯಿತೇ? ಎಲ್ಲಾದಕ್ಕಿಂತಲು ಹಣವೇ ಪ್ರಾಮುಖ್ಯವಾದಂತಾಯಿತಲ್ಲಾ! ಜನರ ಎದುರಿನಲ್ಲಿ ನಾನು ತಲೆ ಎತ್ತಿಕೊಂಡು ತಿರುಗಾಡದಂತಾಯಿತು. ಇನ್ನು ಮಾಡುವುದೇನು? ಎಂದು ಕಣ್ಣೀರಿಟ್ಟಳು.

ಶೆಲ್ಬೀ—ಎಮಿಲೀ, ಈ ವಿಷಯದಲ್ಲಿ ನಿನಗೆ ಎಷ್ಟು ದುಃಖವಿದೆಯೋ ನನಗೂ ಅಷ್ಟೇ ದುಃಖವಿದೆ. ನಾನೇನು ಮಾಡಲಿ? ಬೇರೆ ಮಾರ್ಗವಿಲ್ಲದಿದೆ. ನಾನು ಹೇಲಿಯ ಬಳಿಯಲ್ಲಿ ಹಣವನ್ನು ಸಾಲ ತೆಗೆದುಕೊಂಡು, ನನ್ನ ಆಸ್ತಿಯನ್ನೆಲ್ಲಾ ಅವನಿಗೆ ಆಧಾರ ಬರೆದು ಕೊಟ್ಟಿದ್ದೇನೆ. ಸಾಲವನ್ನು

ಈಗ ತೀರಿಸಲೇ ಬೇಕು. ಹಣವನ್ನು ಜೊತೆಗೊಳಿಸುವುದಕ್ಕಾಗಿ ಕೆಲವು ಸಾಮಾನುಗಳನ್ನು ಮಾರಿದೆನು. ಸಾಲದುದಕ್ಕಾಗಿ ಹೊಸದಾಗಿ ಕೆಲವರಲ್ಲಿ ಕೈಗಡವನ್ನು (ಸಾಲ) ಸಹ ತೆಗೆದುಕೊಂಡು ಬಂದಿದ್ದೇನೆ. ಹಾಗೂ ಸಾಲದೆ ಬಂದಿತು. ಇನ್ನೇನು ಮಾಡಲಿ? ತೆಗೆದುಕೊಂಡಿರುವ ಸಾಲವನ್ನೆಲ್ಲಾ ಪೂರ್ತಿಯಾಗಿ ತೀರ್ಮಾನ ಮಾಡಲೇ ಬೇಕೆಂದು ಹೇಲಿಯು ನನ್ನ ಪ್ರಾಣ ವನ್ನು ಹಿಂಡುತ್ತಿದ್ದಾನೆ. ಇವನ ಹಿಂಸೆಯನ್ನು ತಡೆಯಲಾರದೆ ನಮ್ಮ ಟಾಮನನ್ನೂ ಆ ಸಣ್ಣ ಹುಡುಗನನ್ನೂ ಮಾರಬೇಕಾಯಿತು. ಇವರಿಬ್ಬ ರನ್ನು ಮಾರಿದ ಹಣದಿಂದ ಹೇಲೀ ಬಳಿ ನನಗಿರುವ ಸಾಲವು ಸಂಪೂರ್ಣ ವಾಗಿ ತೀರ್ಮಾನವಾಗುತ್ತದೆ. ಇವರಿಬ್ಬರನ್ನು ಮಾತ್ರ ಕಳೆದುಕೊಳ್ಳು ವದು ನಿನಗಿಷ್ಟವೋ ನಮ್ಮ ಮನೆಮಾರುಗಳನ್ನೂ ಗುಲಾಮರೆಲ್ಲರನ್ನೂ ಕಳೆದುಕೊಂಡು ನಾವು ನಿರ್ಗತಿಕರಾಗಿರುವುದು ನಿನಗಿಷ್ಟವೋ? ನೀನೇ ಹೇಳು ಅಂದನು. ಹೆಂಡತಿಯು ಕಣ್ಣೀರಿಡುತ್ತಾ—ಅಯ್ಯೋ, ಈ ಗುಲಾಮ ವ್ಯಾಪಾರದ ಮೇಲೆ ದೇವರ ಶಾಪವೇ ಶಾಪವು. ಮನುಷ್ಯರನ್ನು ಗುಲಾಮ ರನ್ನಾಗಿಟ್ಟುಕೊಳ್ಳುವುದು ಬಹಳ ತಪ್ಪೆಂಬುವುದೇ ಮೊದಲಿನಿಂದಲೂ ನನ ಗಿರುವ ಅಭಿಪ್ರಾಯವು. ಅವರನ್ನು ಸ್ವಲ್ಪವಾದರೂ ಕಠಿಣವಾಗಿ ನಡೆಸದೆ, ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದೆನು. ಆದರೂ ಪ್ರಯೋಜನವಿಲ್ಲದಂತಾ ಯಿತು. ಜೊತೇ ಮನುಷ್ಯರನ್ನು ಗುಲಾಮರನ್ನಾಗಿ ಭಾವಿಸುವುದು ಬಹು ದುಷ್ಕಾರ್ಯವೆಂದೇ ಹೇಳಬೇಕಾಗಿದೆ. ದೇವರು ನಮ್ಮ ಸರ್ವಾಪರಾಧ ವನ್ನು ಕ್ಷಮಿಸಿ, ಬಡ ಟಾಮನನ್ನು ಎಲ್ಲಾ ಕಷ್ಟಗಳಿಂದ ಪಾರುಮಾಡಲಿ ಎಂದು ಹಾಸಿಗೆಯ ಮೇಲೆ ಬಿದ್ದು, ಟಾಮನ ಮುಂದಿನ ಸ್ಥಿತಿಯನ್ನು ನೆನೆನೆನೆದು ಗೋಳಾಡುತ್ತಿದ್ದಳು.

ಅಧ್ಯಾಯ ೨

ದುಃಖವೆಂಬ ಸಿಡಿಲು

ಎಮಿಲಿಯ ಕೊಠಡಿಯ ಪಕ್ಕದಲ್ಲಿಯೇ ಮತ್ತೊಂದು ಕೊಠಡಿಯಿದ್ದಿತು. ಗುಲಾಮಳೊಬ್ಬಳು ಯಾವುದೋ ಒಂದು ಕೆಲಸದ ನಿಮಿತ್ತವಾಗಿ ಈ ಕೊಠಡಿಗೆ ಬಂದಿದ್ದಳು. ಪಕ್ಕದ ಕೊಠಡಿಯಲ್ಲಾಗುತ್ತಿದ್ದ ಗಂಡಹೆಂಡಿರ ಸಂಭಾಷಣೆಯನ್ನು ಈಕೆಯು ಕೇಳಿಸಿಕೊಂಡು ಸಂಗತಿಯನ್ನು ಟಾಮ ಸಿಗೂ ಇವನ ಹೆಂಡತಿ ಕ್ಲೋಯಿಗೂ ತಿಳಿಸುವುದಕ್ಕಾಗಿ ತನ್ನಿಂದಾದಷ್ಟು ಬೇಗನೆ ಓಡಿಹೋದಳು.

ಟಾಮಸು ತನ್ನ ಧಣಿಯ ಮನೆಗೆ ಸಮೀಪದಲ್ಲಿಯೇ ಮರದ ಮೊದ್ದು ಗಳಿಂದ ಕಟ್ಟಿಕೊಂಡಿದ್ದ ಒಂದು ಸಣ್ಣ ಗುಡಿಸಿಲಿನಲ್ಲಿ ತನ್ನ ಸಂಸಾರ ದೊಂದಿಗೆ ವಾಸಮಾಡಿಕೊಂಡಿದ್ದನು. ಈ ಗುಡಿಸಲಿನ ಮುಂದುಗಡೆ ಒಂದು ಸಣ್ಣ ತೋಟವನ್ನು ಮಾಡಿಕೊಂಡಿದ್ದನು. ಈ ತೋಟದಲ್ಲಿ ಆಯಾ ಕಾಲಾನುಗುಣವಾಗಿ ಹಣ್ಣುಹಂಪಲೂ ಕಾಯಿಪಲ್ಯಗಳೂ ಬೆಳೆಯುತ್ತಿ ದ್ದವು. ಯಾವ ಕಾಲದಲ್ಲಿಯಾದರೂ ಸರಿಯೇ ಹೂವುಗಳಿಗೆ ಕೊರತೆಯೇ ಇಲ್ಲ. ಈ ತೋಟವು ಚಿಕ್ಕದಾದಾಗ್ಯೂ ನೋಡುವುದಕ್ಕೆ ಬಹಳ ಅಲಂಕಾರ ವಾಗಿದ್ದಿತು. ಈ ತೋಟವನ್ನು ಈ ರೀತಿಯಲ್ಲಿಡುವುದಕ್ಕಾಗಿ ಟಾಮಸು ತನ್ನ ವಿರಾಮಕಾಲದಲ್ಲಿ ಬಹು ಕಷ್ಟಪಟ್ಟು ಕೆಲಸಮಾಡುತ್ತಿದ್ದನು. ಟಾಮನ ಹೆಂಡತಿ ಕ್ಲೋಯಿಯು ತನ್ನ ಧಣಿಯ ಮನೆಯಲ್ಲಿ ಅಡಿಗೆಯ ಕೆಲಸವನ್ನು ಮಾಡುವವಳಾಗಿದ್ದಳು. ಈಕೆಯು ಅಡಿಗೇ ಮಾಡುವುದರಲ್ಲಿ ಬಹಳ ಘಟ್ಟಿಗಳು. ಆ ರಾತ್ರೆ ಈಕೆಯು ಧಣಿಯ ಮನೆಯಲ್ಲಿ ತನ್ನ ಕೆಲಸ ವನ್ನೆಲ್ಲಾ ಪೂರೈಸಿಕೊಂಡು ತನ್ನ ಸ್ವಂತ ಗುಡಿಸಿಲಿಗೆ ಬಂದು ತನ್ನ ಗಂಡ ನಿಗೂ ಮಕ್ಕಳಿಗೂ ರಾತ್ರೆಯ ಊಟವನ್ನು ಸಿದ್ಧಪಡಿಸುತ್ತಿದ್ದಳು. ಇವ ರಿಗೆ ಮೂವ್ವರು ಗಂಡುಮಕ್ಕಳು. ಇವರಲ್ಲಿ ಒಂದು ಮಗುವು ಆಗಲೇ ನಡೆಯುವುದಕ್ಕೆ ಪ್ರಾರಂಭಿಸಿದ್ದಿತು. ಈ ಮಕ್ಕಳ ಗುಂಗುರು ಕೂದಲೂ ಕಪ್ಪುಬಣ್ಣದಿಂದ ಹೊಳೆಯುತ್ತಿದ್ದ ಕಣ್ಣುಗಳೂ ನೋಡುವವರನ್ನು

ಆಕರ್ಷಿಸುವಷ್ಟು ಅಲಂಕಾರವಾಗಿದ್ದವು. ಆ ಗುಡಿಸಿಲಿನಲ್ಲಿ ಒಂದು ಮೇಜು. ಈ ಮೇಜಿನ ಮುಂದುಗಡೆಯಲ್ಲಿ ಅಗಲವಾದ ಎದೆಯೂ ಬಹು ಬಲವಾದ ಅವಯುವಗಳು ಕಪ್ಪು ಬಣ್ಣದಿಂದ ಹೊಳೆಯುತ್ತಿದ್ದ ಘಾತ್ರವಾದ ಶರೀರವೂ ಉಳ್ಳ ಟಾಮುಸು ಕೂತಿದ್ದನು. ಧಣಿಯ ಮಗನಾದ ಜೋರ್ಜ್ ಪಕ್ಕದಲ್ಲಿ ಕೂತುಕೊಂಡು ಟಾಮನಿಗೆ ಬರೆಯುವುದಕ್ಕೆ ಕಲಿಸುತ್ತಿದ್ದನು.

ಜೋರ್ಜ್—ಕ್ಲೋಯತ್ತೇ, ಇನ್ನೂ ಅಡಿಗೆಯಾಗಲಿಲ್ಲವೇ ? ನನಗೆ ಹಸಿವೆಯಾಗುತ್ತದಲ್ಲಾ ? ನಮ್ಮ ತಾಯಿಯವರು ಮನೆಯಲ್ಲಿ ಊಟಾ ಮಾಡೆಂದರು ನನಗೇನೋ ಮನಸ್ಸಾಗಲಿಲ್ಲ. ಇಲ್ಲಿ ಊಟಾ ಮಾಡುವುದೆಂದರೆ ನನಗೆ ಬಹಳ ಇಷ್ಟವೆಂದನು.

ಎಲ್ಲರ ಊಟವಾಯಿತು. ಊಟದ ಪಾತ್ರೆಗಳೆಲ್ಲಾ ಹೊರಗೆ ಸಾಗಿದವು. ಬೆಳಗಿನಿಂದ ಹೊಲಗಳಲ್ಲಿಯೂ ತೋಟಗಳಲ್ಲಿಯೂ ಕೆಲಸಮಾಡುತ್ತಿದ್ದ ನೀಗ್ರೋಗಳು (ಗುಲಾಮರು) ಮಲಗುವ ಮುಂಚೆ ದೇವರಿಗೆ ಪ್ರಾರ್ಥನೆ ಮಾಡುವುದಕ್ಕಾಗಿ ಟಾಮನ ಗುಡಿಸಿಲಿಗೆ ಬರುವುದು ವಾಡಿಕೆಯಾಗಿದ್ದಿತು. ಅದರಂತೆ ಈ ದಿನವು ಸಹ ಬಂದರು. ಧಣಿಯ ಮಗನಾದ ಜೋರ್ಜನು ಕ್ರೈಸ್ತವೇದದಲ್ಲಿನ ಒಂದು ಅಧ್ಯಾಯವನ್ನು ಓದಿದನು. ಎಲ್ಲರೂ ಕೀರ್ತನೆ ಹಾಡಿದರು. ಟಾಮನು ಸಂಕ್ಷೇಪವಾಗಿ ಉಪದೇಶಮಾಡಿದನು. ಕಡೆಗೆ ದೇವರ ಪ್ರಾರ್ಥನೆಯಿಂದ ಕೂಟವು ಪೂರೈಸಿತು. ಸುತ್ತುಮುತ್ತಲಿನ ತೋಟಗಳಲ್ಲಿಯೂ ಹೊಲಗಳಲ್ಲಿಯೂ ಕೆಲಸಮಾಡುತ್ತಿದ್ದ ಗುಲಾಮರೆಲ್ಲರೂ ಟಾಮನಲ್ಲಿ ಗುರುಭಾವವನ್ನಿಟ್ಟುಕೊಂಡು ಬಹು ಮರ್ಯಾದೆಯಿಂದ ಕಾಣುತ್ತಿದ್ದರು.

ಪ್ರಾರ್ಥನಾ ಕೂಟವು ಪೂರೈಸುವುದಕ್ಕೆ ಆ ದಿನ ಬಹಳ ಹೊತ್ತಾಯಿತು. ಬಂದಿದ್ದವರೆಲ್ಲರು ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು. ಟಾಮನೂ ಇವನ ಹೆಂಡತಿ ಮಕ್ಕಳೂ ಮಲಗಬೇಕೆಂದು ಹಾಸಿಗೆಗಳ ಬಳಿಗೆ ಹೋದರು. ಅಷ್ಟರಲ್ಲಿ ಯಾರೋ ಬಾಗಿಲು ತಟ್ಟಿದಂತಾಯಿತು. ಕೂಡಲೇ ಗಂಡಹೆಂಡಿರಿಬ್ಬರು ಬಂದು ಬಾಗಿಲನ್ನು ತೆರೆದರು. ಯಜಮಾನ

ನಿಗೂ ಯಜಮಾನಿಗೂ ನಡೆದ ಮಾತುಕಥೆಗಳನ್ನು ಕೇಳಿಸಿಕೊಳ್ಳುತ್ತಿದ್ದ ಗುಲಾಮಳು ಒಳಗೆ ಬಂದಳು.

ಟಾಮುಸು—ಏನಮ್ಮಾ, ಇಂತಹ ಅಪರಾತ್ರಿಯಲ್ಲಿ ಬಂದಿದ್ದೀಯಲ್ಲಾ! ಸಂಗತಿಯೇನು ?

ಗುಲಾಮಳು—ಟಾಮ್ಮಾವಾ, ಧಣಿಯವರು ನಿನ್ನನ್ನು ಯಾರಿಗೋ ಮಾರಿಬಿಟ್ಟರಂತೆ. ನಾಳೆಯೇ ನೀನು ಆತನ ಸಂಗಡ ಹೊರಟುಹೋಗ ಬೇಕಂತೆ. ಯಜಮಾನರು ಯಜಮಾನಿಯ ಸಂಗಡ ಹೇಳುತ್ತಿದ್ದರು. ನಾನು ಕೇಳಿಸಿಕೊಂಡು ನಿನಗೆ ಹೇಳುವುದಕ್ಕೆ ಬಂದೆನು, ಅಂದಳು.

ಟಾಮುಸು ಈ ಸಮಾಚಾರವನ್ನು ಕೇಳಿ ಸಿಡಿಲುಬಡಿದಂತಾದನು. ಕಣ್ಣುರೆಪ್ಪೆಗಳ ಚಲನೆಯೇ ನಿಂತುಹೋಯಿತು. ಸ್ವಲ್ಪ ಹೊತ್ತು ಸ್ತಂಭ ದಂತೆ ನಿಂತುಬಿಟ್ಟನು. ಬಹಳ ಹೊತ್ತು ನಿಲ್ಲಲಾಗಲಿಲ್ಲ. ಕಡೆಗೆ ಸಮೀಪ ದಲ್ಲಿಯೇ ಇದ್ದ ಕುರ್ಚಿಯ ಮೇಲೆ ಕೂರಲು ಬಿದ್ದನು. ಮೊಣಕಾಲುಗಳ ಮೇಲೆ ತಲೆಯನ್ನಿಟ್ಟುಕೊಂಡು ನಿಟ್ಟುಸಿರುಬಿಟ್ಟನು. ಚಿಂತೆಯಿಂದ ಕುಗ್ಗಿ ಹೋದನು. ಮಾತಾಡಬೇಕೆಂದರೆ ಬಾಯಿಂದ ಒಂದು ಮಾತಾದರೂ ಹೊರಡದಂತಾಯಿತು. ಸ್ವಪ್ನಲೋಕದಲ್ಲಿ ಅಲೆದಾಡುತ್ತಿದ್ದವನಂತಾದನು.

ಕ್ಲೋಯಿ (ನಿಟ್ಟುಸಿರುಬಿಡುತ್ತಾ)—ಹಾ! ಎಲೆ ದೇವರೇ! ಎಂತಹ ಸಮಾಚಾರವಿದು ? ಸ್ವಾಮಿಾ, ಈ ಕಷ್ಟದಿಂದ ನೀನೇ ನಮ್ಮನ್ನು ಪಾರು ಗಾಣಿಸಬೇಕಾಗಿದೆ! ಈ ಸಮಾಚಾರವು ನಿಜವಿರಬಹುದೇ ? ಧಣಿಯವರು ಟಾಮುಸನ್ನು ಮಾರಲು ಅವನು ಮಾಡಿದ ಅಪರಾಧವೇನು ?

ಗುಲಾಮಳು—ಕ್ಲೋಯತ್ತೇ, ಟಾಮ್ಮಾವನು ಅಂತಹ ಅಪರಾಧ ವನ್ನೇನೂ ಮಾಡಲಿಲ್ಲ. ಕಾರಣವು ಅದಲ್ಲ. ಧಣಿಯವರಿಗೆ ಮಾವನನ್ನು ಮಾರಲು ಇಷ್ಟವಿಲ್ಲ. ಯಜಮಾನಿಗಾದರೋ ಸಂಪೂರ್ಣವಾಗಿಲ್ಲವೇ ಇಲ್ಲ. ಆಹಾ, ಯಜಮಾನಿಯು ಎಷ್ಟು ಒಳ್ಳೆಯವಳು ? ಎಂತಹ ದಯಾ ಳುವು ? ಮಾವಾ, ಯಜಮಾನಿಯು ನಿನ್ನ ವಿಷಯ ಧಣಿಯವರನ್ನು ಬಹಳ ವಾಗಿ ಬೇಡಿಕೊಂಡರು. ಯಜಮಾನರು ಪ್ರಯೋಜನವಿಲ್ಲವೆಂದೇ ಹೇಳಿ ಬಿಟ್ಟರು. ಸಾಯಂಕಾಲ ಧಣಿಯವರೊಂದಿಗೆ ಮಾತಾಡುತ್ತಿದ್ದನಲ್ಲಾ

ಅವನಲ್ಲಿ ಧಣಿಯವರು ಎಷ್ಟೋ ಹಣವನ್ನು ಸಾಲಾ ತೆಗೆದುಕೊಂಡಿದ್ದಾರಂತೆ. ಆ ಸಾಲವನ್ನು ಈಗ ತೀರ್ಮಾನಿಸದಿದ್ದರೆ ಹೊಲ, ಮನೆ, ತೋಟಾ ಎಲ್ಲವೂ ಹೋಗುತ್ತವಂತೆ. ಗುಲಾಮರನ್ನೆಲ್ಲಾ ಮಾರಿಬಿಡಬೇಕಂತೆ. ಕಡೆಗೆ ಅವರು ಈ ಸ್ಥಳವನ್ನೇ ಬಿಟ್ಟು ಎಲ್ಲಿಗಾದರೂ ಹೊರಟುಹೋಗಬೇಕಂತೆ. ಇಬ್ಬರನ್ನು ಮಾರುವುದೋ? ಎಲ್ಲವನ್ನು ಮಾರಿ ನಿರ್ಗತಿಕರಾಗುವುದೋ? ಯಾವುದು ಒಳ್ಳೇದು? ಇವೆರಡರಲ್ಲಿ ಒಂದು ಆಗಲೇ ಬೇಕು. ಬೇರೆ ಉಪಾಯವೇ ಇಲ್ಲವೆಂದು ಯಜಮಾನರು ಯಜಮಾನಿಗೆ ಹೇಳುತ್ತಿದ್ದುದನ್ನು ನಾನು ಕಿವಿಯಾರೆ ಕೇಳಿಸಿಕೊಂಡೆನು. ಹಣಕ್ಕಾಗಿ ಆ ಮನುಷ್ಯನು ಬಹಳ ತೊಂದರೆಮಾಡುತ್ತಿದ್ದಾನೆ. ಯಜಮಾನರಿಗೆ ಈ ವಿಷಯದಲ್ಲಿ ಬಹಳ ಚಿಂತೆಯುಂಟಾಗಿ ಏನು ಮಾಡುವುದಕ್ಕೂ ದಿಕ್ಕುತೋಚದಂತಿದ್ದಾರೆ. ಯಜಮಾನಿಯೋ, ಅಬ್ಬ, ಅವರು ಹೇಳಿದ ಮಾತುಗಳನ್ನು ಅವರು ಪಟ್ಟ ಸಂಕಟವನ್ನು ನಾನೇನೆಂದು ಹೇಳಲಿ? ಆ ಮಾತುಗಳನ್ನು ನೀನು ಕೇಳಬೇಕಾಗಿದ್ದಿತು. ಆ ಸಂಕಟವನ್ನು ನೀನು ನೋಡಬೇಕಾಗಿದ್ದಿತು. ಕ್ರೈಸ್ತಳೆಂದರೆ ಆಕೆಯೇ ನಿಜವಾದ ಕ್ರೈಸ್ತಳು. ಆಕೆಯನ್ನು ನಿಜವಾದ ಭಕ್ತಳೆಂದೇ ಹೇಳಬೇಕಾಗಿದೆ, ಅಂದಳು.

ಕ್ಲೋಯಿ (ಗಂಡನಿಗೆ)—ಟಾಮ್, ನೀನು ಕೆನಡಾ ದೇಶಕ್ಕೆ ತಲೆತಪ್ಪಿಸಿಕೊಂಡು ಓಡಿಹೋಗಬಾರದೇಕೆ? ದಕ್ಷಿಣ ಪ್ರಾಂತ್ಯದಲ್ಲಿ ಇರುವ ಜನರು ಗುಲಾಮರನ್ನು ಹಿಂಸೇ ಪಡಿಸಿ ಉಪವಾಸವಿಟ್ಟು ಕೊಲ್ಲುವರಲ್ಲಾ? ನೀನು ಅಂತಹ ಸ್ಥಳಕ್ಕೆ ಹೋಗಿ ಆ ಹಿಂಸೆಯನ್ನು ಅನುಭವಿಸುವುದಕ್ಕಿಂತಲೂ ಇಲ್ಲಿಯೇ ಸಾಯುವುದುತ್ತಮವಲ್ಲವೇ? ಇನ್ನಾದರೂ ನಿನಗೆ ಸಾಕಾದಷ್ಟು ಸಮಯವಿದೆಯಲ್ಲಾ? ನಿನ್ನ ಇಷ್ಟಬಂದಂತೆ ಎಲ್ಲಿಗಾದರೂ ಹೋಗಿ ಬರಲು ಯಜಮಾನರು ಕೊಟ್ಟಿರುವ ಅಪ್ಪಣೆ ಚೀಟಿಯು ನಿನ್ನಲ್ಲಿದೆಯಲ್ಲಾ? ಎದ್ದೇಳು, ಸಾವಕಾಶ ಮಾಡಬೇಡ. ದಾರಿಗೆ ಬೇಕಾಗಿರುವ ಸಾಮಾನುಗಳನ್ನು ನಾನು ಸಿದ್ಧಮಾಡಿಕೊಡುತ್ತೇನೆ. ಇಲ್ಲಿಂದ ಓಡಿಹೋಗು ಅಂದಳು.

ಟಾಮನು—ಹೆಂಡತಿಯ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಇದ್ದನು.

ಇದುವರೆಗೂ ಬೊಗ್ಗಿಸಿದ್ದ ತಲೆಯನ್ನು ಮೇಲಕ್ಕೆತ್ತಿದನು. ದುಃಖದಿಂದ ಕಣ್ಣುಗಳೆರಡರಿಂದಲೂ ನೀರು ಪ್ರವಾಹದಂತೆ ಪ್ರವಹಿಸುತ್ತಿದ್ದಿತು. ಮಂಜುಗಣ್ಣಿನಿಂದಲೇ ನಿಧಾನವಾಗಿ ಸುತ್ತಲೂ ನೋಡಿದನು. ಹೆಂಡತಿಯು ಸಮೀಪದಲ್ಲಿಯೇ ನಿಂತಿದ್ದಳು. ಆಕೆಯ ಕಣ್ಣುಗಳಿಂದಲೂ ನೀರು ಹರಿದು ಕೆನ್ನೆಗಳ ಮೇಲೆ ಹೋಗುತ್ತಿದ್ದಿತು. ಟಾಮನಿಗೆ ಮತ್ತಷ್ಟು ದುಃಖವಾಯಿತು. ತಕ್ಕಷ್ಟು ಧೈರ್ಯತಂದುಕೊಂಡನು. ಆದರೂ ಅದುರುಶಬ್ದದಿಂದ—ನೀನು ಹೀಗೆ ಹೇಳುವುದು ಸರಿಯೇ? ಓಡಿಹೋಗಲು ನಾನೆಂದಿಗೂ ಸಮ್ಮತಿಸುವುದಿಲ್ಲ. ಧಣಿಯವರು ಇಲ್ಲಿರುವ ಗುಲಾಮರೆಲ್ಲರನ್ನೂ ಮಾರುವುದಾದರೆ ನನ್ನನ್ನು ಮಾರಬಾರದೇಕೆ? ಕಷ್ಟಗಳನ್ನು ಸಹಿಸಲು ಇತರ ಗುಲಾಮರಿಗಿರುವಷ್ಟು ಶಕ್ತಿಯು ನನಗಿಲ್ಲವೇನು? ಎಂದು ಹೇಳಿ ನಿಟ್ಟುಸಿರುಬಿಟ್ಟನು. ಅವನು ನಿಟ್ಟುಸಿರುಬಿಡುವಾಗ ವಿಶಾಲವಾದವನ ಎದೆಯು ಗಡಗಡನೆ ನಡುಗಿಹೋಯಿತು. ಸ್ವಲ್ಪ ಹೊತ್ತಿನವರೆಗೂ ಮಾತಾಡಲಾಗಲಿಲ್ಲ. ಸುಧಾರಿಸಿಕೊಳ್ಳಬೇಕಾಯಿತು. ಪುನಃ ಮಾತಾಡಲು ಪ್ರಾರಂಭಿಸಿ—ನನ್ನ ಪ್ರಿಯಳೇ, ನಾನು ನನ್ನ ಕರ್ತವ್ಯವನ್ನು ನೆರವೇರಿಸುವವನೆಂದು ನನ್ನ ಧಣಿಯವರಿಗೆ ಚೆನ್ನಾಗಿ ತಿಳಿದಿದೆ. ಅವರಿಗೆ ನನ್ನ ವಿಷಯದಲ್ಲಿ ಒಳ್ಳೇ ಅಭಿಪ್ರಾಯವಿದೆ. ಇನ್ನಾದರೂ ಅದೇ ಅಭಿಪ್ರಾಯದಲ್ಲಿಯೇ ಇದ್ದಾರೆ. ಇಂತಹ ಅವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳಲೇ? ಅದೆಂದಿಗೂ ಆಗದು. ಮನೆಮಾರುಗಳನ್ನೂ ಗುಲಾಮರೆಲ್ಲರನ್ನೂ ಮಾರಿ ನನ್ನ ಧಣಿಯವರು ನಿರ್ಗತಿಕರಾಗಬೇಕೇ? ಇಷ್ಟು ದಿನಗಳೂ ಅವರ ಉಪ್ಪನ್ನು ತಿಂದ ನಾನು ಅವರಿಗೆ ದ್ರೋಹಮಾಡಲೇ? ಅವರನ್ನು ಕಷ್ಟಕ್ಕೆ ಗುರಿಪಡಿಸಲೇ? ಆಗದು, ಆಗದು, ನನ್ನಿಂದ ಖಂಡಿತವಾಗಿ ಆಗದು. ಅವರ ಮತ್ತು ಅವರ ಸಂಸಾರದವರ ಹಿತಕ್ಕಾಗಿ ನನ್ನೊಬ್ಬನನ್ನೇ ಮಾರಿ, ತಾವು ಋಣವಿಮುಕ್ತರಾಗುವುದು ಸರ್ವೋತ್ತಮವಾದುದು. ನನ್ನ ಧಣಿಯವರು ನನ್ನನ್ನು ಮಾರಿಬಿಟ್ಟರೆಂದು ನಾನು ಅವರ ಮೇಲೆ ತಪ್ಪುಹೊರಿಸಲಾರೆನು. ಧಣಿಯವರು ನನ್ನನ್ನು ಮಾರಿದಾಗ್ಯೂ . . . (ದುಃಖವು ಉಕ್ಕಳಿಸಿಕೊಂಡು ಬಂದು, ನಡುಗು ಶಬ್ದದಿಂದ) ಅವರು . . ನಿನ್ನನ್ನೂ . . . ಈ ಬಡ . . . ಮ . . ಕ್ಕ . . ಳನ್ನೂ . . .

ಪ್ರೀತಿಯಿಂದ ನೋಡಿಕೊಳ್ಳುತ್ತಾರೆ ಎಂದು ಹೇಳಿ ತಿರುಗಿ ನೋಡಿದನು. ಮಕ್ಕಳು ಮೂವರೂ ಮಲಗಿ ನಿದ್ರಿಸುತ್ತಿದ್ದರು. ಮಕ್ಕಳನ್ನು ದೃಷ್ಟಿಸಿ ನೋಡಿದನು. ದುಃಖವನ್ನು ಸಹಿಸಲಾಗಲಿಲ್ಲ. ಅಲ್ಲಿಯೇ ಇದ್ದ ಕುರ್ಚಿಯ ಬೆನ್ನಿಗೆ ಒರಗಿಕೊಂಡು, ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡನು. ಅವನು ಬಿಡುತ್ತಿದ್ದ ನಿಟ್ಟುಸಿರುಗಳ ರಭಸಕ್ಕೆ ಒರಗಿಕೊಂಡಿದ್ದ ಕುರ್ಚಿಯು ಅಲ್ಲಾಡಿಹೋಯಿತು. ಮುಖವನ್ನು ಮುಚ್ಚಿಕೊಂಡಿದ್ದ ಕೈಬೆರಳುಗಳ ಸಂದಿನಿಂದ ಕಣ್ಣೀರು ನೆಲದ ಮೇಲೆ ತಟತಟನೆ ಬೀಳುತ್ತಿದ್ದಿತು. ಅಕಟಾ! ಟಾಮನ ಮೇಲೆ ದುಃಖವೆಂಬ ಸಿಡಿಲು ಬಿದ್ದು, ಬಲಾಢ್ಯನಾದ ಅವನನ್ನು ಸಹ ಒದ್ದಾಡಿಸಿಬಿಟ್ಟಿತು.

ಅಧ್ಯಾಯ ೩

ಸಂಸಾರವಿಯೋಗ

ಇಡೀ ರಾತ್ರಿಯೆಲ್ಲಾ ಗಂಡಹೆಂಡಿರಿಬ್ಬರಿಗೂ ನಿದ್ರೆಯಿಲ್ಲ. ಬಲತ್ಕಾರದಿಂದ ಮಲಗಿದಾಗ್ಯೂ ಹೃದಯಾಂತರ್ಯದಲ್ಲಿ ಸುಳಿದಾಡುತ್ತಿದ್ದ ಯೋಚನೆಗಳ ತಂಡವು ಇವರನ್ನು ಎಚ್ಚರಪಡಿಸುತ್ತಿದ್ದವು. ಸುಖ ಸಮಾಧಾನಗಳಿಂದ ಕಂಗೊಳಿಸುತ್ತಿದ್ದ ಸಂಸಾರವೆಂಬ ಎಳೇ ಗಿಡಕ್ಕೆ ದುಃಖವೆಂಬ ಸಿಡಿಲು ಬಡೆಯಿತು. ಸಿಡಿಲು ಬಡೆದ ಗಿಡವು ಚಿಗರೀತೇ? ಸಂಸಾರದಲ್ಲಿ ಸಂತೋಷದ ಸಿರೀಕ್ಷ್ಮೆಯೇ ಇಲ್ಲದಂತಾಯಿತು. ಯೋಚನಾತರಂಗಗಳು ಒಂದರ ಮೇಲೊಂದು ಹರಿದು, ದಂಪತಿಗಳಿಬ್ಬರನ್ನು ದುಃಖಸಾಗರದಲ್ಲಿ ಮುಳುಗಿಸಿಬಿಟ್ಟವು. ಮೌನವಾದ ನಿಟ್ಟುಸಿರುಗಳಿಂದ ಗುಡಿಸಲು ತುಂಬಿಹೋಯಿತು. ಹೃದಯಗಳಲ್ಲಿ ಸಂತೋಷವೆಂಬ ಜ್ಯೋತಿಯು ನಂದಿಹೋಗಿ ಕತ್ತಲೆ ಕವಿಯಿತು. ಜಾಗರಣೆಯಿಂದಲೇ ಬೆಳಕು ಹರಿಯಿತು, ಬೆಳಗಾಯಿತು, ಸೂರ್ಯೋದಯವಾಗುವ ಸಮಯವೂ ಆಯಿತು. ಎಂದಿನಂತೆ ಆ ದಿನ ಸೂರ್ಯನು ಪ್ರಕಾಶಿಸಲಿಲ್ಲ. ಗಂಡಹೆಂಡಿರ ದುಃಖವನ್ನು ನೋಡಿ ಸೂರ್ಯನು ಸಹಿಸಲಾರದವನಾಗಿ ಮೋಡಗಳಿಂದ ಮರೆಯಾದನು.

ಮೋಡಗಳು ಮಳೆಗರೆಯುವುದನ್ನು ನೋಡಿದರೆ, ಟಾಮನ ಕುಟುಂಬಕ್ಕೆ ಅಕಸ್ಮಾತ್ತಾಗಿ ಸಂಭವಿಸಿದ ಇಂತಹ ದುಃಖಕ್ಕಾಗಿ ಅವು ಸಹ ಕಣ್ಣೀರಿಡುತ್ತವೋ ಎಂಬಂತಿದ್ದಿತು. ಮಳೆ, ಮೋಡ—ಇವುಗಳಿಂದ ಎಲ್ಲೆಲ್ಲಿಯೂ ಮೊಬ್ಬು ಗವಿಯಿತು.

ಟಾಮನೂ ಇವನ ಹೆಂಡತಿಯೂ ಎದ್ದಾಗ ನಸುಗತ್ತಲು. ಕ್ಲೋಯಿಯು ಎದ್ದ ಕೂಡಲೇ ಮೇಜಿನ ಬಳಿಗೆ ಬಂದು, ಟಾಮನ ಬಟ್ಟೆಗಳನ್ನು ಇಸ್ತ್ರೀ ಮಾಡುತ್ತಾ ನಿಂತಳು. ಆಗಲೇ ಇಸ್ತ್ರೀಮಾಡಿದ್ದ ಟಾಮನ ಎರಡು ಅಂಗಿಗಳು ಕುರ್ಚಿಯ ಮೇಲೆ ಇಟ್ಟಿದ್ದವು. ಈ ದಿನ ತನ್ನ ಗಂಡನು ತನ್ನನ್ನೂ ಮಕ್ಕಳನ್ನೂ ಬಿಟ್ಟುಹೋಗುವನಲ್ಲಾ ಎಂಬ ನೆನಪಿನಿಂದ ಮಿತಿಮೀರಿದ ದುಃಖವುಂಟಾಗಿ, ಕೆನ್ನೆಗಳ ಮೇಲೆ ಕಣ್ಣೀರು ಬಟ್ಟೆಗಳ ಮೇಲೆ ಬೀಳುತ್ತಿದ್ದುದರಿಂದ ಇಸ್ತ್ರೀ ಮಾಡುವುದನ್ನು ಆಗಾಗ್ಗೆ ನಿಲ್ಲಿಸಿ ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದಳು.

ಟಾಮನು—ಕ್ರೈಸ್ತ ವೇದವನ್ನು ತೆರೆದು, ಎದುರಾಗಿಟ್ಟುಕೊಂಡು, ಓದುತ್ತಾ ಚಿಂತಾಸಂತಪ್ತನಾಗಿ, ಹೆಂಡತಿಗೆ ಸಮೀಪದಲ್ಲಿ ನಿಶ್ಯಬ್ದವಾಗಿ ಕೂತಿದ್ದನು. ಮಕ್ಕಳು ಮೂವ್ವರೂ ಇನ್ನೂ ಮಲಗಿ ನಿದ್ರಿಸುತ್ತಿದ್ದರು. ಕೂತ ಸ್ಥಳದಿಂದ ತಟಕ್ಕನೆ ಎದ್ದು, ಮಕ್ಕಳ ಸಮೀಪಕ್ಕೆ ಬಂದು, ಮಕ್ಕಳನ್ನು ನೋಡುತ್ತಾ ನಿಂತನು. ಮಕ್ಕಳನ್ನು ನೋಡುತ್ತಿದ್ದ ಹಾಗೆಲ್ಲಾ ಇವನಿಗೆ ಬಹಳ ಸಂಕಟವಾಯಿತು. ಮಕ್ಕಳನ್ನು ಎಂದೂ ಬಿಟ್ಟಗಲಿದವನಲ್ಲ. ಈಗ ಅಗಲುವ ಕಾಲ ಒದಗಿದ್ದರಿಂದ ದುಃಖಿತನಾಗಿ—ನನ್ನ ಮಕ್ಕಳನ್ನು ನೋಡುವುದು ಇದೇ ಕಡೇ ಸಾರಿಯೇ? ಎಂದು ಗಟ್ಟಿಯಾಗಿಯೇ ಹೇಳಿದನು. ಹೆಂಡತಿಯು ಕೇಳಿಸಿಕೊಂಡಳು. ಆದರೂ ಒಂದು ಶಬ್ದವಾದರೂ ಆಕೆಯ ಬಾಯಿಂದ ಹೊರಡಲಿಲ್ಲ. ಇಸ್ತ್ರೀ ಪೆಟ್ಟಿಗೆಯನ್ನು ಮೇಜಿನ ಮೇಲಿಟ್ಟು, ನಿಟ್ಟುಸಿರಿಡುತ್ತಾ ನಿಂತಳು.

ಟಾಮನು—ಯಾಕೆ ಈ ರೀತಿ ನಿಟ್ಟುಸಿರನ್ನಿಡುತ್ತಾ ನಿಂತಿಯಲ್ಲಾ?

ಕ್ಲೋಯಿ—ನಿಟ್ಟುಸಿರಿಡದೇನು? ನನ್ನ ದುಃಖವನ್ನು ಮರೆಯಬೇಕೆಂದು ನಾನೆಷ್ಟು ಪ್ರಯತ್ನಿಸಿದಾಗ್ಯೂ ನನ್ನಿಂದಾಗದು. ನೀನು

ಹೋಗುವುದಕ್ಕಿರುವ ಸ್ಥಳವನ್ನೂ ಅಲ್ಲಿನವರು ನಿನಗೆ ಕೊಡುವ ಹಿಂಸೆಯನ್ನೂ ಯೋಚಿಸಿದ ಹಾಗೆಲ್ಲಾ ನನ್ನ ವ್ಯಥೆಯು ಹೆಚ್ಚುತ್ತದೆ. ನನ್ನಲ್ಲಿ ಅಧೈರ್ಯ ಉಂಟಾಗುತ್ತದೆ. ಯಜಮಾನಿಯವರಾದರೋ ಒಂದೆರಡು ವರುಷಗಳಲ್ಲಿ ಪುನಃ ನಿನ್ನನ್ನು ಬಿಡಿಸಿಕೊಳ್ಳುತ್ತೇವೆಂದು ಹೇಳುತ್ತಾರೆ. ಆದರೆ ಆ ಪ್ರಾಂತ್ಯಕ್ಕೆ ಹೋದವರು ಹಿಂದಿರುಗಿ ಬಂದುದನ್ನು ನಾನು ನೋಡಲೂ ಇಲ್ಲ, ಆ ವಿಷಯ ಕೇಳಲೂ ಇಲ್ಲ. ಆ ಪ್ರಾಂತ್ಯದ ಜನರು ಹತ್ತೀ ಹೊಲಗಳಲ್ಲಿ ಗುಲಾಮರಿಂದ ಮಿತಿಮೀರಿದ ಕೆಲಸವನ್ನು ಮಾಡಿಸಿ, ಉಪವಾಸದಿಂದ ಕೊಲ್ಲುತ್ತಾರಂತೆ. ನಾನಿದನ್ನೆಲ್ಲಾ ಕೇಳಿ ಸುಮ್ಮನಿರಲಾದೀತೇ ?

ಟಾಮನು (ಹೆಂಡತಿಯನ್ನು ಆದರಿಸುತ್ತಾ)—ಅಧೈರ್ಯಪಡಬೇಡ, ದುಃಖಿಸಬೇಡ. ಈ ಸ್ಥಳದಲ್ಲಿ ಇದು ವರೆಗೂ ನಮ್ಮನ್ನು ಕಾಪಾಡುತ್ತಾ ಎಲ್ಲಾ ವಿಷಯಗಳಲ್ಲಿ ನಮಗೆ ಸಹಾಯಮಾಡುತ್ತಾ ಇದ್ದ ದೇವರೇ ಆ ಸ್ಥಳದಲ್ಲಿ ಸಹ ನನ್ನನ್ನು ಕಾಪಾಡುವನು, ನನಗೆ ಸಹಾಯಮಾಡುವನು. ಇದನ್ನು ನಂಬು, ದುಃಖಿಸಬೇಡ.

ಕ್ಲೋಯಿ—ಇರಬಹುದೇನೋ. ಆದರೆ ಕೆಲವು ಸಮಯಗಳಲ್ಲಿ ಸಹಿಸುವುದು ಅಸಾಧ್ಯವೋ ಎಂಬಂತಿರುವ ಕಷ್ಟಗಳನ್ನು ದೇವರು ಬರಗೊಡಿಸುತ್ತಾನಲ್ಲಾ ? ಇದನ್ನು ಸಹಿಸುವುದು ಕಷ್ಟ, ಬಹು ಕಷ್ಟ. ಇಂತಹದ್ದರಲ್ಲಿ ನಾನು ಹೇಗೆ ಆದರಣೆ ಹೊಂದಲಿ ? ನನಗೆ ಧೈರ್ಯ ಹೇಗೆ ಬಂದೀತು ?

ಟಾಮನು—ನನ್ನ ಶರೀರಾತ್ಮಗಳು ದೇವರ ಅಧೀನದಲ್ಲಿವೆ. ಆತನ ಅಪ್ಪಣೆಯಿಲ್ಲದೆ ಯಾವುದೂ ಆಗುವುದಿಲ್ಲ. ಆದರೆ ಒಂದು ಸಂಗತಿಗಾಗಿ ನಾನು ಸಂತೋಷಿಸಿ, ಆತನಿಗೆ ಕೃತಜ್ಞನಾಗಿದ್ದೇನೆ. ಧಣಿಯವರು ನಿನ್ನನ್ನಾಗಲೀ ಮಕ್ಕಳನ್ನಾಗಲೀ ಆ ಪ್ರಾಂತ್ಯಕ್ಕೆ ಮಾರಲಿಲ್ಲ. ನನ್ನನ್ನು ಮಾರಿದ್ದಾರೆ. ನೀವು ಇಲ್ಲಿ ಸುರಕ್ಷಿತವಾಗಿದ್ದೀರಿ. ಅಲ್ಲಿ ಎಂತಹ ಕಷ್ಟ ಬಂದರೂ ಅನುಭವಿಸುವವನು ನಾನು. (ದುಃಖದಿಂದಲೂ ತಗ್ಗಿದ ಧ್ವನಿಯಿಂದಲೂ) ನನಗಾಗಿ ವ್ಯಸನಪಡಬೇಡ, ದೇವರು ನನಗೆ ಸಹಾಯ ಮಾಡೇ ಮಾಡುತ್ತಾನೆ. ನಾನು ಸಂಪೂರ್ಣವಾಗಿ ನಂಬಿದ್ದೇನೆ. ಈ ವಿಷಯದಲ್ಲಿ ನನಗೆ ಸಾಕಾದಷ್ಟು ಧೈರ್ಯವಿದೆ.

ಕ್ಲೋಯಿ (ತಿರುಗಿ ನಿಟ್ಟುಸಿರುಡುತ್ತಾ)—ಧಣಿಯವರು ನಿನ್ನನ್ನು ಮಾರಿದುದು ನ್ಯಾಯವಲ್ಲ. ಅವರ ಕೆಲಸಗಳೆಲ್ಲಾ ನಿನ್ನ ಸ್ವಂತ ಕೆಲಸವೆಂದೇ ಭಾವಿಸಿ, ಎಷ್ಟೋ ಶ್ರದ್ಧೆಯಿಂದಲೂ ನಂಬಿಕೆಯಿಂದಲೂ ಮಾಡುತ್ತಿದ್ದಿಯಲ್ಲಾ? ಅವರು ನಿನ್ನನ್ನು ಗುಲಾಮತನದಿಂದ ಬಿಡುಗಡೆ ಮಾಡುವುದಕ್ಕೆ ಬದಲಾಗಿ, ಆ ಕ್ರೂರಾತ್ಮಗಳಿಗೆ ನಿನ್ನನ್ನು ಮಾರಿಬಿಟ್ಟರಲ್ಲಾ ಎಂತಹ ಅನ್ಯಾಯ?

ಟಾಮನು—ನೀನು ನನ್ನನ್ನು ಪ್ರೀತಿಸುತ್ತೀಯಾ?

ಕ್ಲೋಯಿ—ನನ್ನ ಸಂಪೂರ್ಣಮನಸ್ಸಿನಿಂದ ನಿನ್ನನ್ನು ಪ್ರೀತಿಸುತ್ತೇನೆ. ಇದು ನಿನಗೆ ತಿಳಿಯದೇ?

ಟಾಮನು—ತಿಳಿದಿದೆ. ಹಾಗಾದರೆ, ಈ ರೀತಿ ನೀನು ಮಾತಾಡಬೇಡ. ನಾವಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡುವುದು ಇದೇ ಕಡೇಸಾರಿಯಾಗಿರಬಹುದೇನೋ, ಯಾರು ಬಲ್ಲರು? ನಮ್ಮ ಧಣಿಯವರಿಗೆ ವಿರೋಧವಾಗಿ ಒಂದು ಮಾತಾದರೂ ನಿನ್ನ ಬಾಯಿಂದ ಹೊರಡದಿರಲಿ. ನನ್ನಿಂದ ಸಹಿಸಲಾಗುವುದಿಲ್ಲ. ನಮ್ಮ ಧಣಿಯು ಇನ್ನೂ ಕೂಸಾಗಿರುವಾಗ ಆತನ ತಂದೆತಾಯಿಗಳು ಆತನನ್ನು ನನ್ನ ಕೈಯಲ್ಲಿಟ್ಟರು. ಅಂದಿನಿಂದ ಇದುವರೆಗೂ ನಾನು ಆತನನ್ನು ನನ್ನಿಂದಾದಷ್ಟು ಎಚ್ಚರಿಕೆಯಿಂದ ನೋಡಿಕೊಂಡು ಬಂದಿದ್ದೇನೆ. ನನಗೆ ಆ ನನ್ನ ಧಣಿಯ ಮೇಲಿರುವ ಅಭಿಮಾನವೂ ಪ್ರೀತಿಯೂ ಸ್ವಾಭಾವಿಕವಾದುವು. ನಾನು ಆತನ ವಿಷಯದಲ್ಲಿ ತೋರಿಸಿದ ಮಮತೆಯನ್ನು ಈಗ ಆತನು ಯೋಚಿಸಬೇಕೆಂಬುವುದೇನೂ ಇಲ್ಲ. ಈ ನಮ್ಮ ಯಜಮಾನನಿಗೂ ಇತರ ಯಜಮಾನರಿಗೂ ಇರುವ ವ್ಯತ್ಯಾಸವನ್ನು ಕುರಿತು ಆಲೋಚನೆಮಾಡು. ಈತನಂತೆ ಯಾವ ಯಜಮಾನನು ತನ್ನ ಗುಲಾಮರನ್ನು ಪ್ರೀತಿಸುತ್ತಾನೆ? ಈತನಿಂದ ನಾವು ಎಷ್ಟೋ ಉಪಕಾರಗಳನ್ನು ಹೊಂದಲಿಲ್ಲವೇ? ಆಲೋಚಿಸು. ಆತನಿಗೆ ಇಂತಹ ದೊಡ್ಡ ಸಾಲವಿಲ್ಲದಿದ್ದರೆ ನನ್ನನ್ನು ಎಂದಿಗೂ ಮಾರುತ್ತಿರಲಿಲ್ಲ. ಆ ಸಂಗತಿಯು ನನಗೆ ಚೆನ್ನಾಗಿ ತಿಳಿದಿದೆ ಅಂದನು.

ಊಟವಾಯಿತು. ಊಟವಾದನಂತರ ಕ್ಲೋಯಿಯು ಗಂಡನು ತೆಗೆದು

ಕೊಂಡುಹೋಗುವುದಕ್ಕಾಗಿ ಆತನ ಕೆಲವು ಬಟ್ಟೆಗಳನ್ನು ಪೆಟ್ಟಿಗೆಯಲ್ಲಿ ಇಡುತ್ತಿದ್ದಳು. ಆ ಸಮಯದಲ್ಲಿ ಆಕೆಯ ದುಃಖವು ಮಿತಿಮೀರಿತು. ಸಹಿಸಲಾಗಲಿಲ್ಲ. ಬೊಗ್ಗಿಕೊಂಡು ಬಟ್ಟೆಗಳನ್ನು ಅಡಕುತ್ತಿರುವಾಗ ಕಣ್ಣೀರು ಕೆನ್ನೆಗಳ ಮೇಲೆ ಹರಿದು ಬಟ್ಟೆಗಳ ಮೇಲೆ ತೊಟ್ಟಿಕ್ಕುತ್ತಿದ್ದವು. ಕಣ್ಣೀರಿನಿಂದ ಗಂಡನ ಬಟ್ಟೆಗಳನ್ನು ಮೊಹರುಮಾಡಿದಂತೆಯೇ ಆಯಿತು. ಮಕ್ಕಳು ತಾಯಿಯ ಸುತ್ತಲೂ ನಿಂತುಕೊಂಡಿದ್ದರು. ತಾಯಿಯ ಮುಖವನ್ನು ನೋಡಿದರು. ತಾಯಿಯ ಕಣ್ಣುಗಳಿಂದ ನೀರು ಹರಿಯುತ್ತಿದ್ದಿತು. ತಾಯಿಯ ದುಃಖವನ್ನು ನೋಡಿ ಬಡಮಕ್ಕಳಿಗೆ ಸಹಿಸಲಾಗಲಿಲ್ಲ. ಅವರು ಸಹ ತಾಯಿಯೊಂದಿಗೆ ಅಳುವುದಕ್ಕಾರಂಭಿಸಿದರು. ಟಾಮನು ತನ್ನ ಚಿಕ್ಕ ಮಗುವನ್ನು ತೊಡೆಯ ಮೇಲೆ ಹಾಕಿಕೊಂಡು ಕೂತಿದ್ದನು. ಒಂದೇ ದೃಷ್ಟಿಯಿಂದ ತನ್ನ ಪುಟ್ಟ ಮಗುವನ್ನು ನೋಡುತ್ತಿದ್ದನು. ನಾನಾ ಯೋಚನೆಗಳು ಸಮುದ್ರದ ಅಲೆಗಳಂತೆ ಒಂದರ ಮೇಲೊಂದು ಮನಸ್ಸಿಗೆ ಬರುತ್ತಿದ್ದಿತು. ಇನ್ನು ಮಾಡುವುದೇನು ? ತಡೆಯಲಾಗಲಿಲ್ಲ. ಕಣ್ಣೀರು ಮಗುವಿನ ಮೇಲೆ ತಟಗುಟ್ಟುತ್ತಿದ್ದಿತು. ಇಷ್ಟರಲ್ಲಿ ಯಜಮಾನಿಯು ಒಳಕ್ಕೆ ಬಂದು ಟಾಮನ ಸಮೀಪದಲ್ಲಿ ಕೂತುಕೊಂಡು—ಟಾಮ್. . . . ಮುಂದೆ ಮಾತಾಡಲಾಗಲಿಲ್ಲ. ಧ್ವನಿಯು ತಗ್ಗಿತು. ದುಃಖವನ್ನು ಸಹಿಸುವುದಕ್ಕಾಗಲಿಲ್ಲ. ಕೈವಸ್ತ್ರದಿಂದ ಮುಖವನ್ನು ಮುಚ್ಚಿಕೊಂಡು ಅತ್ತಳು.

ಕ್ಲೋಯಿ—ಯಜಮಾನಿಯೇ, ಅಳಬೇಡಿರಿ ಎಂದು ಯಜಮಾನಿಯನ್ನು ಸಮಾಧಾನಪಡಿಸಿದಾಗ್ಯೂ ತನಗೇ ದುಃಖವನ್ನು ನುಂಗಲಾಗದಂತಾಯಿತು. ಮೂವರೂ ಸ್ವಲ್ಪ ಹೊತ್ತು ಮಾತಾಡಲು ಶಕ್ತಿಯಿಲ್ಲದವರಾಗಿ ಅಳುತ್ತಾ ನಿಶ್ಶಬ್ದವಾಗಿ ಕೂತುಬಿಟ್ಟರು. ದುಃಖವು ಸ್ವಲ್ಪ ಕಡಿಮೆಯಾದ ತರುವಾಯ ಯಜಮಾನಿಯು ಕಣ್ಣೊರಿಸಿಕೊಂಡು—ಟಾಮ್, ನಿನ್ನ ವಿಷಯದಲ್ಲಿ ನನಗೆ ಹೇಳಲಾರದಷ್ಟು ದುಃಖವಿದೆ. ನಾನು ನಿನ್ನನ್ನು ಹೇಗೆ ಬಿಡಲೋ ತಿಳಿಯದು. ಯತ್ನವಿಲ್ಲದವಳಾಗಿದ್ದೇನೆ. ಈಗ ನಾನು ನಿನಗೆ ಏನು ಕೊಡಬೇಕೆಂದು ನನಗೆ ತಿಳಿಯದು. ಸ್ವಲ್ಪ ಹಣವನ್ನೇನಾದರೂ ಕೊಟ್ಟಾಗ್ಯೂ ಈಗಿನ ನಿನ್ನ ಯಜಮಾನನು ನಿನ್ನಿಂದ ಬಲತ್ಕಾರವಾಗಿ

ತೆಗೆದುಕೊಳ್ಳುತ್ತಾನೆ. ಅದರಿಂದ ನಿನಗೇನೂ ಪ್ರಯೋಜನವಾಗುವಂತಿಲ್ಲ. ಆದರೆ ದೇವರ ಮುಂದೆ ನಾನು ನಿನಗೆ ಪ್ರಮಾಣ ಪೂರ್ವಕವಾಗಿ ಹೇಳುವು ದೇನಂದರೆ—ನೀನು ಇರುವ ಸ್ಥಳವನ್ನು ಆಗಾಗ್ಯೆ ನಾನು ತಿಳಿದುಕೊಂಡು, ನನಗೆ ಹಣವು ಅನುಕೂಲವಾದ ತಕ್ಷಣವೇ ನಿನ್ನನ್ನು ಹೇಗಾದರೂ ಮಾಡಿ ಪುನಃ ಕೊಂಡುಕೊಳ್ಳುತ್ತೇನೆ. ಅದು ವರೆಗೂ ನೀನು ದೇವರಲ್ಲಿ ಪೂರ್ಣಭರ ವಸವಿಡು ಎಂದು ಹೇಳುತ್ತಿರುವಾಗ ಹುಡುಗರು—ಹೇಲೀ ಬಂದಾ, ಹೇಲೀ ಬಂದಾ, ಗುಲಾಮ ವ್ಯಾಪಾರಿಯು ಬಂದಾ ಎಂದು ಕೂಗಿಕೊಂಡರು.

ಹೇಲೀಯು—ಧಡಾರನೆ ಒದೆದು ಬಾಗಿಲನ್ನು ತೆಗೆದುಕೊಂಡು ಟಾಮನ ಗುಡಿಸಿಲಿನೊಳಕ್ಕೆ ಬಂದು—ಎಲೋ ಗುಲಾಮ, ಹೊರಡು, ಬೇಗ ಹೊರಡು! ಎಂದು ಸಿಂಹದಂತೆ ಘರ್ಜಿಸಿದನು. ಯಜಮಾನಿಯು ಅಲ್ಲಿಯೇ ಇದ್ದುದನ್ನು ನೋಡಿದನು. ಕೂಡಲೇ ತಲೆಯ ಮೇಲಣ ಟೋಪಿಯನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು ಬೊಗ್ಗಿ ನಮಸ್ಕಾರ ಮಾಡಿ—ಅಮ್ಮಾ, ನಿಮ್ಮ ಸೇವಕನು, ದಯಮಾಡಿ ಕ್ಷಮಿಸಿರಿ ಅಂದನು. ಟಾಮನು ಹೊಸ ಧಣಿಯ ಘರ್ಜನೆಯನ್ನು ಕೇಳಿದಾಕ್ಷಣವೇ ತೊಡೆಯ ಮೇಲಿದ್ದ ತನ್ನ ಪುಟ್ಟ ಮಗುವನ್ನು ಹೆಂಡತಿಯ ಕೈಗೆ ಕೊಟ್ಟು, ತನ್ನ ಬಟ್ಟೆಗಳಿಟ್ಟಿದ್ದ ಪೆಟ್ಟಿಗೆಯನ್ನು ಹೊತ್ತುಕೊಂಡು ಹೊಸ ಧಣಿಯ ಹಿಂದೆ ಹೊರಟನು. ಹೆಂಡತಿಯಾದರೋ ಮಗುವನ್ನು ಎತ್ತಿಕೊಂಡು, ಉಳಿದ ಇಬ್ಬರು ಮಕ್ಕಳ ಜೊತೆಯಲ್ಲಿ ಗೋಳಾಡುತ್ತಾ ಗಂಡನನ್ನು ಸಾಗ ಕಳುಹಿಸುವುದಕ್ಕಾಗಿ ಗಾಡಿಯ ಬಳಿಗೆ ಬಂದಳು. ಹೆಂಡತಿ ಮಕ್ಕಳ ದುಃಖವನ್ನು ಹೇಳಲಾಗದು. ಟಾಮನು ಕಣ್ಣೀರನ್ನು ಸುರಿಸುತ್ತಾ ತನ್ನ ಹೆಂಡತಿಯನ್ನೂ ಮಕ್ಕಳನ್ನೂ ಬಾರಿ ಬಾರಿಗೂ ತಿರುಗಿ ನೋಡುತ್ತಾ ಹೋಗಿ ಗಾಡಿಯ ಬಳಿ ನಿಂತನು. ಗುಲಾಮರೆಲ್ಲರೂ ಟಾಮನಲ್ಲಿ ಗುರು ಭಾವವನ್ನಿಟ್ಟುಕೊಂಡು ಬಹಳ ಮರ್ಯಾದೆಯಿಂದ ಕಾಣುತ್ತಿದ್ದುದರಿಂದ ತಮ್ಮ ಗುರುವೂ ಮುಖ್ಯಸ್ಥನೂ ಆದ ಟಾಮನನ್ನು ಸಾಗ ಕಳುಹಿಸಲು ಗಾಡಿಯ ಬಳಿಗೆ ಹೋಗಿ, ಆತನಿಗೆ ನಮಸ್ಕಾರಮಾಡಿ ದುಃಖದಿಂದ ತಮ್ಮ ಸ್ಥಳಗಳಿಗೆ ಹೊರಟುಹೋದರು.

ಟಾಮನ ಧಣಿಯಾದ ಶೆಲ್ಬೀಯು ಆ ದಿನ ಊರಲ್ಲಿರಲಿಲ್ಲ. ಕಾರ್ಯಾರ್ಥವಾಗಿ ಮತ್ತೊಂದು ಊರಿಗೆ ಹೋಗಿದ್ದನು. ಧಣಿಯ ಮಗನಾದ ಜೋರ್ಜನು ಸಹ ಮತ್ತೊಂದು ತೋಟಕ್ಕೆ ಹೋಗಿದ್ದನು. ತಮ್ಮ ತಂದೆಯು ಟಾಮನನ್ನು ಮಾರಿದ ಸಂಗತಿಯೇ ಇವನಿಗೆ ತಿಳಿಯದು. ಟಾಮನು ಇನ್ನೂ ಗಾಡಿಯ ಬಳಿಯಲ್ಲಿಯೇ ನಿಂತಿದ್ದನು. ಹೊರಟು ಹೋದವರ ಹೊರತು ಉಳಿದವರು ಟಾಮನ ಸುತ್ತಲೂ ನಿಂತಿದ್ದರು. ಟಾಮನ ಹೆಂಡತಿ ಮಕ್ಕಳೂ ಯಜಮಾನಿಯೂ ಗಾಡಿಯ ಬಳಿಯಲ್ಲಿಯೇ ಇದ್ದರು. ಹೇಲೀಯು ಬಂದನು. ಅಲ್ಲಿದ್ದವರೆಲ್ಲರೂ ಇವನನ್ನು ದುರುಗುಟ್ಟಿಕೊಂಡು ನೋಡುತ್ತಿದ್ದರು; ಹೇಲೀಯು ಇವರೆಲ್ಲರನ್ನು ಒಂದು ಕಡೆಗೆ ನೂಕಿ ಟಾಮನಿಗೆ—ಎಲೋ ಗುಲಾಮ, ಗಾಡಿಯ ಮೇಲೆ ಹತ್ತು ಎಂದು ಕೂಗಿಕೊಂಡನು. ಟಾಮನು ಅಪ್ಪಣೆಗೆ ವಿಧೇಯನಾಗಿ ಗಾಡಿಯಲ್ಲಿ ಕೂತನು. ಕೂತ ಕೂಡಲೇ ಹೇಲೀಯು ಇವನ ಕಾಲಿಗೆ ಕಬ್ಬಿಣದ ಬೇಡಿಗಳನ್ನು ಜಡಿದನು. ಅಲ್ಲಿ ನಿಂತವರಿಗೆ ಇವನು ಮಾಡಿದ ಈ ಕ್ರೂರಕೃತ್ಯವು ಬಹಳ ಕೋಪವನ್ನುಂಟುಮಾಡಿತು. ಹೇಲೀಯನ್ನು ನೋಡಿ ಕಟಕಟನೆ ಹಲ್ಲುಕಡಿಯುವವರಾದರು. ಆಗ ಯಜಮಾನಿಯು ಹೇಲೀಯನ್ನು ನೋಡಿ—ಅಯ್ಯಾ, ಟಾಮನಿಗೆ ನೀನು ಬೇಡಿ ಹಾಕುವುದು ಅನಾವಶ್ಯಕವು. ಅವನು ಎಲ್ಲಿಗೂ ಓಡಿಹೋಗುವುದಿಲ್ಲ, ತೆಗೆದುಬಿಡು ಅಂದಳು.

ಹೇಲೀಯು—ಯಾರಿಗೆ ಗೊತ್ತಮ್ಮಾ, ಈ ಕಪ್ಪು ಜನರನ್ನು ನಾನೆಂದಿಗೂ ನಂಬುವುದಿಲ್ಲ ಎಂದು ಹೇಳಿ, ಗಾಡಿಯ ಮೇಲೆ ಹತ್ತಿ ಚಬುಕಿನಿಂದ ಕುದುರೆಗಳ ಬೆನ್ನಿನ ಮೇಲೆ ಒಂದೇಟು ಕೊಟ್ಟನು. ಗಾಡಿಯು ಎಲ್ಲರ ಕಣ್ಣಿಗೂ ಮರೆಯಾಯಿತು.

ಅಧ್ಯಾಯ ೪

ಈವಾ ಸಿಂಕ್ಲೇರಳ ಜಲಗಂಡಾಂತರ

ಹೋಗುತ್ತಿರುವಾಗ ಹೇಲೀಯು ವರ್ತಮಾನಪತ್ರವನ್ನು ಜೇಬಿನಿಂದ ತೆಗೆದುಕೊಂಡು ಓದಲು ಪ್ರಾರಂಭಿಸಿದನು. ಮಾರಣೆಯದಿನ ಮುಂದಿನ ಊರಿನಲ್ಲಿ ಗುಲಾಮರ ಹರಾಜಾಗುವುದೆಂದು ಅದರಲ್ಲಿ ಪ್ರಕಟವಾಗಿದ್ದಿತು. ಆ ಊರಿಗೆ ಬರುವಷ್ಟರಲ್ಲಿ ಸಾಯಂಕಾಲವಾಯಿತು. ಟಾಮನು ಎಲ್ಲಿ ಗಾದರೂ ತಪ್ಪಿಸಿಕೊಂಡು ಓಡಿಹೋಗಬಹುದೆಂದು ನೆನಸಿ, ಅವನನ್ನು ಆ ರಾತ್ರೆ ಆ ಊರಿನ ಬಂದೀಖಾನೆಯಲ್ಲಿಟ್ಟನು. ಮಾರಣೆಯ ದಿನ ಗುಲಾಮ ರನ್ನು ಹರಾಜುಮಾಡುವ ಸ್ಥಳಕ್ಕೆ ಹೋಗಿ ಮೂವರು ಗುಲಾಮರನ್ನು ಕೊಂಡುಕೊಂಡು ಬಂದನು. ಅವರಲ್ಲಿ ಒಬ್ಬನು ಹುಡುಗನು. ಮೂವ್ವರ ಕೈಗಳನ್ನೂ ಒಂದಾಗಿ ಜೋಡಿಸಿ, ಕೈಕೋಳವನ್ನು ಹಾಕಿ ಸರಪಳಿಗೆ ಕಟ್ಟಿಕೊಂಡು ದನಗಳನ್ನು ದೊಡ್ಡಿಯೊಳಕ್ಕೆ ಓಡಿಸುವಂತೆ ಈ ಮೂವ ರನ್ನೂ ಎಳೆದುಕೊಂಡು ಬಂದು ಬಂದೀಖಾನೆಯೊಳಕ್ಕೆ ನೂಕಿ ತಾನು ಹೊರಟುಹೋದನು.

ಹೇಲೀಯು ಆ ಸ್ಥಳದಲ್ಲಿ ಕೆಲವು ದಿನಗಳು ಮಾತ್ರವಿದ್ದನು. ತರುವಾಯ ಗುಲಾಮರೊಂದಿಗೆ ತನ್ನ ಪ್ರಯಾಣವನ್ನು ಮುಂದರಿಸಿದನು. ಇದುವ ರೆಗೂ ಇವನು ಭೂಮಾರ್ಗವಾಗಿ ಪ್ರಯಾಣಮಾಡುತ್ತಿದ್ದನು. ಈಗ ಓಹೈಯೋ ಎಂಬ ನದಿಯ ಮೇಲೆ ಹಡಗಿನಲ್ಲಿ ಪ್ರಯಾಣಮಾಡಬೇಕಾ ಯಿತು. ಗುಲಾಮರನ್ನು ಯಾವ್ಯಾವ ಊರುಗಳಲ್ಲಿ ಹರಾಜುಹಾಕು ತ್ತಿದ್ದರೋ ಅಂತಹ ಸ್ಥಳಗಳಿಗೆ ತನ್ನ ಕಡೆಯವರನ್ನು ಮೊದಲೇ ಇವನು ಕಳುಹಿಸಿದ್ದನು. ಇವನು ಪ್ರಯಾಣಮಾಡುತ್ತಿದ್ದ ಹಡಗು ನಿಲ್ಲುವ ಸ್ಥಳ ಗಳಲ್ಲಿ ಈ ಹೇಲೀಯ ಕಡೆಯವರು ಗುಲಾಮರನ್ನು ಕೊಂಡುಕೊಂಡು ಬಂದು ಇವನ ವಶಕೊಪ್ಪಿಸುತ್ತಿದ್ದರು. ಇವನು ಇವರೆಲ್ಲರನ್ನು ತೆಗೆದು ಕೊಂಡುಹೋಗಿ ದಕ್ಷಿಣ ಪ್ರಾಂತ್ಯಗಳಲ್ಲಿ ಹರಾಜುಹಾಕಿ ಹಣವನ್ನು ಸಂಪಾದಿಸುತ್ತಿದ್ದನು. ಈ ಗುಲಾಮರ ಸ್ಥಿತಿಯನ್ನೂ ಅವರ ಕಣ್ಣೀರನ್ನೂ

ನೋಡಿದ ಯಾರಿಗಾದರೂ ಸಂಕಟವಾಗುತ್ತಿದ್ದಿತು. ಗುಲಾಮರೆಲ್ಲರೂ ಟಾಮನ ಸಂಗಡಲೇ ಪ್ರಯಾಣಮಾಡುತ್ತಿದ್ದರು. ಒಂದು ದಿನ ಈ ಗುಲಾಮರಲ್ಲಿ ಜಾನ್ ಎಂಬ ಗುಲಾಮನು ಸಮೀಪದಲ್ಲಿಯೇ ಕೂತಿದ್ದ ಟಾಮನ ಮೊಣಕಾಲುಗಳ ಮೇಲೆ ಬೇಡಿಗಳಿಂದ ಜಡಿಯಲ್ಪಟ್ಟಿದ್ದ ತನ್ನ ಕೈಗಳೆರಡನ್ನೂ ಇಟ್ಟು—ನನಗೊಬ್ಬ ಹೆಂಡತಿ ಇದ್ದಾಳೆ, ನನ್ನನ್ನು ಮಾರಿದ್ದು ಆಕೆಗೆ ತಿಳಿಯದು, ನಾನು ಆಕೆಗೆ ಹೇಳಿಬರುತ್ತೇನೆಂದು ಬಹಳ ಬೇಡಿಕೊಂಡೆನು, ನನ್ನನ್ನು ಬಿಡಲಿಲ್ಲ. ಅಯ್ಯೋ! ಆ ಬಡಪ್ರಾಣಿಗೆ ಗತಿ ಯಾರು? ಈ ಲೋಕದಲ್ಲಿ ಇನ್ನೊಂದಾವರ್ತಿ ನಾನು ನನ್ನ ಹೆಂಡತಿಯ ಮುಖವನ್ನು ನೋಡಿ ಸಂತೋಷಿಸುವ ಕಾಲ ಬಂದೀತೇ ? ಎಂದು ಗಳಗಳನೆ ಅತ್ತುಕೊಂಡನು. ದುಃಖವೆನ್ನುವುದು ಬಿಳೀ ಮನುಷ್ಯನಿಗೂ ಕಪ್ಪು ಮನುಷ್ಯನಿಗೂ ಒಂದೇಯಲ್ಲವೇ ? ಇವನು ಪಡುವ ದುಃಖವನ್ನು ನೋಡಿ ಟಾಮನು ಸಹಿಸಲಾಗಲಿಲ್ಲ. ಏನು ಮಾಡಬಹುದು ? ಅವನು ಸಹ ಒಬ್ಬ ಗುಲಾಮನೇ. ಆದಾಗ್ಯೂ ತನ್ನಿಂದಾದಷ್ಟು ಅವನನ್ನು ಆದರಿಸಿದನು.

ಹಡಗು ಓಹೈಯೋ ನದಿಯನ್ನು ಬಿಟ್ಟು ಮಿಸಿಸಿಪಿ ಎಂಬ ನದಿಯ ಕಡೆಗೆ ಹೊರಟಿತು. ಇಷ್ಟರಲ್ಲಿ ಟಾಮನ ಗುಣನಡತೆಗಳ ವಿಷಯದಲ್ಲಿ ಹೇಲೀಗೆ ಇವನಲ್ಲಿ ತಕ್ಕಷ್ಟು ನಂಬಿಕೆ ಹುಟ್ಟಿತು. ಆದುದರಿಂದ ಇವನು ಹಡಗಿನಲ್ಲಿ ತನ್ನ ಮನಸ್ಸಿದ್ದ ಕಡೆಗೆ ಯಾರ ಅಭ್ಯಂತರವೂ ಇಲ್ಲದೆ ಹೋಗಿ ಬರಬಹುದಾಗಿದ್ದಿತು. ತನ್ನಿಂದಾಗುವ ಕೆಲಸವೇನಾದರೂ ಇದ್ದರೆ ಆ ಕೆಲಸದಲ್ಲಿ ಹಡಗಿನವರಿಗೆ ಸಹಾಯಮಾಡುತ್ತಿದ್ದನು. ಕೆಲಸವೇನೂ ಇಲ್ಲದಿದ್ದರೆ ಮೇಲಿನ ಅಂತಸ್ತಿನಲ್ಲಿ ಅಡಕಿದ್ದ ಹತ್ತಿ ಮೂಟೆಗಳ ಮೇಲೆ ಒಂದು ಮೂಲೆಯಲ್ಲಿ ಕೂತುಕೊಂಡು ತನ್ನ ಕ್ರೈಸ್ತ ವೇದವನ್ನು ಓದುತ್ತಿರುವನು.

ಈ ಹಡಗಿನ ಪ್ರಯಾಣಿಕರಲ್ಲಿ ಒಬ್ಬ ದೊಡ್ಡಮನುಷ್ಯನಿದ್ದನು. ಇವನು ಇನ್ನೂ ಪ್ರಾಯದವನು. ಇವನ ಹೆಸರು ಸೆಂಟ್ ಕ್ಲೇರ್. ಇವನು ನ್ಯೂ ಓರ್ಲಿಯನ್ಸ್ ಎಂಬ ಊರಿನವನು. ಇವನಿಗೆ ಸುಮಾರು ಐದಾರು ವರುಷ ಪ್ರಾಯದ ಒಬ್ಬ ಮಗಳಿದ್ದಳು. ಬಹು ರೂಪವಂತಳು. ಇವಳು ಸಹ

ತಂದೆಯ ಜೊತೆಯಲ್ಲಿಯೇ ಪ್ರಯಾಣಮಾಡುತ್ತಿದ್ದಳು. ಈ ಮಗುವಿಗೆ ಹೊಸಬರನ್ನು ಕಂಡರೆ ಬಹಳ ನಾಚಿಕೆ. ಟಾಮನು ಈಕೆಯು ಹೋಗಿ ಬರುವುದನ್ನೂ ಆಟವಾಡುವುದನ್ನೂ ನೋಡಿಕೊಂಡೇ ಇರುತ್ತಿದ್ದನು. ಮಕ್ಕಳನ್ನು ಕಂಡರೆ ಟಾಮನಿಗೆ ಬಹಳ ಪ್ರೀತಿ. ಅವರನ್ನು ಒಳಪಡಿಸಿ ಕೊಳ್ಳುವುದಕ್ಕಾಗಿ ಅನೇಕ ಯುಕ್ತಿಗಳು ಇವನಿಗೆ ತಿಳಿದಿದ್ದವು. ಸಾಧಾ ರಣವಾದ ಒಂದು ಕಟ್ಟಿಗೆಯ ತುಂಡನ್ನು ತೆಗೆದುಕೊಂಡು ಅದರಿಂದ ಮಕ್ಕಳಿಗೆ ಪ್ರಿಯಕರವಾದ ಅನೇಕ ಆಟದಸಾಮಾನುಗಳನ್ನು ಮಾಡುವುದ ರಲ್ಲಿ ಬಹಳ ಘಟ್ಟಿಗನು. ದಿನಕ್ರಮೇಣ ಅಭ್ಯಾಸದಿಂದ ಈ ಚಿಕ್ಕ ಹುಡು ಗಿಯು ಟಾಮನು ಕೂತಿರುವ ಸ್ಥಳಕ್ಕೆ ಸ್ವಲ್ಪ ದೂರದಲ್ಲಿರುವ ಒಂದು ಪೆಟ್ಟಿಗೆಯ ಮೇಲೆ ಕೂತುಕೊಂಡು ಇವನು ಮಾಡುವುದನ್ನೆಲ್ಲಾ ನೋಡಿ ಕೊಂಡಿರುತ್ತಿದ್ದಳು. ಟಾಮನು ಆಟದ ಸಾಮಾನುಗಳನ್ನೇನಾದರೂ ಕೊಟ್ಟರೆ ಅವುಗಳನ್ನು ತೆಗೆದುಕೊಳ್ಳುತ್ತಿದ್ದಳು. ಈ ಮಗುವಿಗೆ ಟಾಮ ನೊಂದಿಗೆ ಮಾತಾಡುವುದಕ್ಕೆ ಸ್ವಲ್ಪ ಧೈರ್ಯ ಬಂದಂತಾಯಿತು. ಬರ ಬರುತ್ತಾ ನಾಚಿಕೆಯು ಹಿಂದಾಯಿತು. ಒಂದು ದಿನ

ಟಾಮನು—ಚಿಕ್ಕ ಯಜಮಾನಿಯೇ, ನಿನ್ನ ಹೆಸರೇನು? ಎಂದು ಕೇಳಿದನು.

ಹುಡುಗಿಯು—ನನ್ನ ಹೆಸರು ಈವಾ ಸೆಂಟ್ ಕ್ಲೇರ್. ನಿನ್ನ ಹೆಸ ರೇನು?

ಟಾಮನು—ನನ್ನ ಹೆಸರು ಟಾಮ್. ನಾನು ಮೊದಲಿದ್ದ ಊರಿನಲ್ಲಿ ಚಿಕ್ಕ ಮಕ್ಕಳೆಲ್ಲರು ನನ್ನನ್ನು "ಟಾಮ್ಮಾಮಾ" ಎಂದು ಕರೆಯುವುದು ವಾಡಿಕೆಯಾಗಿದ್ದಿತು.

ಹುಡುಗಿಯು—ಹಾಗಾದರೆ, ನಾನು ಸಹ ನಿನ್ನನ್ನು "ಟಾಮ್ಮಾಮಾ" ಎಂತಲೇ ಕರೆಯುತ್ತೇನೆ. ಟಾಮ್ಮಾಮಾ, ಈಗ ನೀನು ಎಲ್ಲಿಗೆ ಹೋಗು ತ್ತಿದ್ದೀ?

ಟಾಮನು—ಯಜಮಾನಿಯೇ, ನನಗೆ ತಿಳಿಯದು.

ಹುಡುಗಿಯು—ತಿಳಿಯದೇ! ಆಶ್ಚರ್ಯ.

ಟಾಮನು—ಇಲ್ಲ, ನನ್ನನ್ನು ಮಾರುವುದಕ್ಕೆ ತೆಗೆದುಕೊಂಡುಹೋಗುತ್ತಿದ್ದಾರೆ. ಆದರೆ ಯಾರಿಗೆ ಮಾರುತ್ತಾರೋ ನನಗಂತೂ ತಿಳಿಯದು.

ಹುಡುಗಿಯು—ತಕ್ಷಣವೇ ನಮ್ಮ ತಂದೆಯು ನಿನ್ನನ್ನು ಕೊಂಡುಕೊಳ್ಳಬಹುದು. ನಮ್ಮ ತಂದೆಯೇನಾದರೂ ನಿನ್ನನ್ನು ಕೊಂಡುಕೊಂಡರೆ ಬಹಳ ಚೆನ್ನಾಗಿರುವುದು. ನೀನು ನಮ್ಮ ಮನೆಯಲ್ಲಿ ಸಂತೋಷವಾಗಿರಬಹುದು. ನಿನ್ನನ್ನು ಕೊಂಡುಕೊಳ್ಳುವಂತೆ ಈ ಹೊತ್ತೇ ನಮ್ಮ ತಂದೆಗೆ ಹೇಳುತ್ತೇನೆ.

ಟಾಮನು—ಯಜಮಾನಿಯೇ, ನಿನಗೆ ಬಹಳ ವಂದನೆ.

ಹಡಗು ಕಟ್ಟಿಗೆ (ಸೌದೆ)ಯನ್ನು ತುಂಬಿಸಿಕೊಳ್ಳುವುದಕ್ಕಾಗಿ ನಿಂತಿತು. ತಂದೆಯ ಬಳಿಯಲ್ಲಿ ಮಾತಾಡಲು ಹುಡುಗಿಯು ಓಡಿಹೋದಳು. ಟಾಮನು ಸಹ ಎದ್ದು ನದಿಯ ದಡದಿಂದ ಹಡಗಿನೊಳಕ್ಕೆ ಸೌದೆಯನ್ನು ಹೊತ್ತು ತರುವುದಕ್ಕಾಗಿ ನಾವಿಕರಿಗೆ ಸಹಾಯಮಾಡಲು ಹೊರಟುಹೋದನು.

ಸೌದೆಯನ್ನು ತುಂಬಿಸಿಕೊಂಡ ಮೇಲೆ ಹಡಗು ಮುಂದಕ್ಕೆ ಸಾಗಿತು. ಈವಾ ಮತ್ತು ಈಕೆಯ ತಂದೆಯು ಹಡಗಿನ ತುದಿಯಲ್ಲಿ ನಿಂತಿದ್ದರು. ಈ ಚಿಕ್ಕ ಹುಡುಗಿಯು ಕಾಲುಜಾರಿ ನದಿಯೊಳಕ್ಕೆ ಬಿದ್ದುಬಿಟ್ಟಳು. ತಂದೆಗೆ ದಿಕ್ಕುತೋಚದಂತಾಯಿತು. ಕೂಡಲೆ ಮಗಳನ್ನು ಬದುಕಿಸಬೇಕೆಂದು ತಾನು ಸಹ ನೀರಿನೊಳಗೆ ಧುಮುಕಬೇಕೆಂದು ಮುಂದೆ ಬರುವಷ್ಟರೊಳಗೆ ಯಾರೋ ಆತನನ್ನು ಹಿಂದಕ್ಕೆ ನೂಕಿ ಧಡಮ್ಮನೆ ನದಿಯೊಳಗೆ ಬಿದ್ದಂತಾಯಿತು.

ತಂದೆಯೂ ಮಗಳೂ ಹಡಗಿನ ತುದಿಯಲ್ಲಿ ನಿಂತಿದ್ದಾಗ ಟಾಮನು ಅವರಿಬ್ಬರೂ ನಿಂತಿದ್ದ ಅಂತಸ್ತಿನ ಕೆಳಗಿನ ಅಂತಸ್ತಿನಲ್ಲಿ ನಿಂತಿದ್ದನು. ಹುಡುಗಿಯು ಬಿದ್ದು ಮುಳುಗಿದ್ದನ್ನು ನೋಡಿದನು. ತಕ್ಷಣವೇ ತಾನು ಸಹ ನದಿಯೊಳಕ್ಕೆ ಧುಮುಕಿದನು. ಎದೆಯು ವಿಸ್ತಾರವಾಗಿಯೂ ಕೈಗಳು ಬಲವಾಗಿಯೂ ಇದ್ದುದರಿಂದ ಮುಳುಗಿದ್ದ ಮಗುವು ಮೇಲೆ ಬರುವವರೆಗೂ ನೀರಿನ ಮೇಲೆ ತೇಲುತ್ತಾ ಇದ್ದು ಮಗುವು ಮುಳುಗಿ ಮೇಲಕ್ಕೆ ಬಂದ ಕೂಡಲೇ ತನ್ನ ಕೈಗಳಲ್ಲಿ ಹಿಡಿದುಕೊಂಡು ಈಜುತ್ತಾ ಹಡಗಿನ

ಸಮೀಪಕ್ಕೆ ಬಂದು ತನ್ನ ಮಗಳು ನೀರಿನಲ್ಲಿ ಮುಳುಗಿ ಸತ್ತುಹೋದ ಳೇನೋ ಎಂದು ದುಃಖಿಸುತ್ತಾ ನಿಂತಿದ್ದ ತಂದೆಯ ಕೈಗೆ ಆ ಮಗಳನ್ನು ಒಪ್ಪಿಸಿದನು.

ತಂದೆಯ ಸಂತೋಷವನ್ನು ಎಷ್ಟು ಹೇಳಿದರೂ ಸಾಲದು. ಕೂಡಲೇ ಮಗುವನ್ನು ಎತ್ತಿಕೊಂಡು ಹಡಗಿನಲ್ಲಿದ್ದ ತಮ್ಮ ಕೊಠಡಿಯೊಳಕ್ಕೆ ತಂದು ಮಲಗಿಸಿದನು. ಮಗುವಿಗೆ ಅರಿವೇ ಇರಲಿಲ್ಲ. ಮೈ ಮೇಲಣ ಬಟ್ಟೆಗಳೆಲ್ಲಾ ತೊಯಿದಿದ್ದವು. ಕೈಕಾಲುಗಳು ಹಿಮದಂತೆ ಕೊರೆಯುತ್ತಿದ್ದವು. ನಾನಾ ವಿಧವಾದ ಚಿಕಿತ್ಸೆ ಉಪಚಾರಗಳು ಮಾಡಲಾಯಿತು. ಮಗುವಿಗೆ ತಕ್ಕ ಮಟ್ಟಿಗೆ ಜೀವಕಳೆಯು ಬರುವ ಸೂಚನೆಯು ಕಂಡುಬಂದಿತು.

ಅಧ್ಯಾಯ ೫

ದುಃಖೋಪಶಮನ

ಮಾರಣೆಯ ದಿನ ಹಡಗು ಸೆಂಟ್ ಕ್ಲೇರನ ವಾಸಸ್ಥಳವಾದ ನ್ಯೂ ಓರ್ಲಿಯನ್ಸ್ ಎಂಬ ಊರಿಗೆ ಸಮೀಪವಾಗುತ್ತಾ ಬಂದಿತು. ಟಾಮ ನಾದರೋ ಒಂದು ವಿಧವಾದ ಚಿಂತೆಯುಳ್ಳವನಾಗಿ ತನ್ನೆರಡು ಕೈಗಳನ್ನು ಒಂದರ ಮೇಲೊಂದು ಜೋಡಿಸಿ ತನ್ನ ವಿಶಾಲವಾದ ಎದೆಯ ಮೇಲಿಟ್ಟು ಕೊಂಡು ಹಡಗಿನ ಕೆಳಗಿನ ಅಂತಸ್ತಿನಲ್ಲಿ ಕೂತು ಹಡಗಿನ ಮತ್ತೊಂದು ಭಾಗದಲ್ಲಿದ್ದ ಜನರನ್ನು ನೋಡುತ್ತಿದ್ದನು. ತಾನು ಯಾವ ಹುಡುಗಿ ಯನ್ನು ಮರಣಗಂಡಾಂತರದಿಂದ ತಪ್ಪಿಸಿದನೋ ಆ ಚಿಕ್ಕ ಹುಡುಗಿಯೂ ಈಕೆಯ ತಂದೆಯೂ ಗುಲಾಮ ವ್ಯಾಪಾರಿಯಾದ ಹೇಲೀಯ ಸಂಗಡ ಮಾತಾಡುತ್ತಾ ನಿಂತಿರುವುದನ್ನೂ ಹುಡುಗಿಯ ತಂದೆಯು ಹೇಲೀಗೆ ಹಣವನ್ನು ಎಣಿಸಿಕೊಡುವುದನ್ನೂ ಹೇಲೀಯು ಕಾಗದದ ಮೇಲೆ ಏನೋ ಬರೆದು ಹುಡುಗಿಯ ತಂದೆಗೆ ಕೊಡುವುದನ್ನೂ ಟಾಮನು ನೋಡಿದನು.

ಸ್ವಲ್ಪ ಹೊತ್ತಾದ ತರುವಾಯ ಸೆಂಟ್ ಕ್ಲೇರನು ಮಗಳ ಕೈಹಿಡಿದು ಕೊಂಡು ಟಾಮನು ಕೂತಿದ್ದ ಸ್ಥಳಕ್ಕೆ ಬಂದು ಟಾಮನ ಗಡ್ಡದ ಮೇಲೆ

ತನ್ನ ಬೆರಳನ್ನಿಟ್ಟು—ಟಾಮ್, ಇಲ್ಲಿ ನೋಡು, ನಿನ್ನ ಹೊಸ ಯಜಮಾನನಾದ ನನ್ನಲ್ಲಿ ಕೆಲಸಮಾಡಲು ನಿನಗಿಷ್ಟವಿದೆಯೋ ಏನು? ಅಂದನು.

ಟಾಮನು—ತಲೆ ಎತ್ತಿ ನೋಡಿದನು. ಕಣ್ಣುಗಳಲ್ಲಿ ನೀರು ತುಂಬಿದ್ದಿತು. ಆದಾಗ್ಯೂ ಟಾಮನು ತನ್ನ ಹೊಸ ಧಣಿಗೆ—ಧಣಿಯೇ, ದೇವರು ನಿಮಗೆ ಒಳ್ಳೇದನ್ನು ಮಾಡಲಿ ಎಂದು ಹೇಳಿ, ತಲೆಯನ್ನು ಬೊಗ್ಗಿಸಿಕೊಂಡನು.

ಸೆಂಟ್ ಕ್ಲೇರನು—ಒಳ್ಳೇದು ಮಾಡಲಿ. ಟಾಮ್, ಕುದುರೇ ಗಾಡಿಯನ್ನು ನೋಡಿಕೊಳ್ಳಲು ನಿನ್ನಿಂದಾಗುತ್ತದೋ?

ಟಾಮನು—ನೋಡಿಕೊಳ್ಳುತ್ತೇನೆ, ಧಣಿಯೇ. ಕುದುರೆಗಳ ವಿಷಯ ನನಗೆ ಬಹಳ ಅನುಭವವಿದೆ.

ಸೆಂಟ್ ಕ್ಲೇರನು—ಹಾಗಾದರೆ, ನನ್ನ ಕುದುರೇ ಗಾಡಿಯನ್ನು ನೋಡಿಕೊ. ಆದರೆ ಇಲ್ಲಿ ಕೇಳು. ವಾರಕ್ಕೆ ಒಂದು ಸಾರಿ ಮಾತ್ರ ನೀನು ಕುಡಿಯಬಹುದು. ಉಳಿದ ದಿನಗಳಲ್ಲಿ ನೀನು ಕುಡಿಯಲೇ ಬಾರದು ತಿಳಿಯಿತೋ? ಎಂದು ನಸುನಗುತ್ತಾ ಹೇಳಿದನು.

ಟಾಮನಿಗೆ ಬಹಳ ಆಶ್ಚರ್ಯವಾದುದಲ್ಲದೆ ಮನಸ್ಸಿನಲ್ಲಿ ಒಂದು ವಿಧವಾದ ವ್ಯಸನವೂ ಆಯಿತು. ಆದರೂ ಯಾವುದನ್ನೂ ತೋರ್ಪಡಿಸದೆ—ನನಗೆ ಕುಡಿಯುವ ಅಭ್ಯಾಸವೇ ಇಲ್ಲ ಧಣಿಯೇ ಅಂದನು.

ಸೆಂಟ್ ಕ್ಲೇರನು (ನಗುತ್ತಾ)—ಅಭ್ಯಾಸವಿಲ್ಲದಿದ್ದರೆ ಒಳ್ಳೇದು. ನೀನು ನಿನ್ನ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತೀಯೆಂದು ನಂಬುತ್ತೇನೆ, ಟಾಮ್.

ಟಾಮನು—ಮಾಡುತ್ತೇನೆ, ಧಣಿಯೇ.

ಹುಡುಗಿ—ಟಾಮ್ಮಾಮಾ, ನಮ್ಮ ತಂದೆಯವರು ಬಹಳ ಒಳ್ಳೆಯವರು. ಎಲ್ಲರನ್ನು ಪ್ರೀತಿಸುತ್ತಾರೆ. ಯಾವಾಗಲೂ ನಗುವುದೇ ಅವರ ವಾಡಿಕೆ.

ಸೆಂಟ್ ಕ್ಲೇರನು (ನಗುತ್ತಾ)—ಮಗಳೇ, ನಿನ್ನ ತಂದೆಯ ವಿಷಯ ಒಳ್ಳೇ ಶಿಫಾರಸು ಮಾಡಿದೆಯಲ್ಲಾ. ಅದಕ್ಕಾಗಿ ನಿನಗೆ ಬಹಳ ವಂದನೆ ಎಂದು ಹೇಳಿ, ಮಗಳನ್ನು ಟಾಮನೊಂದಿಗೆ ಮಾತಾಡಿಕೊಂಡಿರುವಂತೆ ಅಲ್ಲಿಯೇ ಬಿಟ್ಟುಹೋದನು.

ಇಷ್ಟರಲ್ಲಿ ಹಡಗು ನ್ಯೂ ಓರ್ಲಿಯನ್ಸ್ ರೇವಿಗೆ ಬಂದು ನಿಂತಿತು. ಸೆಂಟ್ ಕ್ಲೇರನು ತನ್ನ ಮಗಳೊಡನೆ ಮನೆಗೆ ಬಂದನು. ಮನೆಗೆ ಬಂದ ಕೂಡಲೇ ಈವಾ (ಹುಡುಗಿಯು) ತನ್ನ ತಾಯಿಯನ್ನು ನೋಡಿ ಅಪ್ಪಿಕೊಳ್ಳುವುದಕ್ಕಾಗಿ ತಾಯಿಯ ಕೊಠಡಿಗೆ ಓಡಿಹೋದಳು. ಟಾಮನು ತನ್ನ ಹೊಸ ಯಜಮಾನನ ಮನೆಯ ಅಂದಚಂದಗಳನ್ನು ನೋಡುತ್ತಾ ನಿಂತನು. ಯಜಮಾನನು ಸುರಕ್ಷಿತವಾಗಿ ಮನೆಗೆ ಬಂದುದಕ್ಕಾಗಿ ಗುಲಾಮರನೇಕರು ತಮ್ಮ ಸಂತೋಷವನ್ನು ತೋರಿಸಲು ಗುಂಪುಗುಂಪಾಗಿ ಬಂದರು. ಯಜಮಾನನು ಇವರ ವಿಷಯದಲ್ಲಿ ದಯವುಳ್ಳವನಾಗಿರುವುದರಿಂದಲ್ಲವೇ ಇವರು ಯಜಮಾನನನ್ನು ಇಷ್ಟು ಪ್ರೀತಿಸುವುದು ಎಂದು ಟಾಮನು ತನ್ನಲ್ಲಂದುಕೊಂಡನು.

ಸ್ವಲ್ಪ ಹೊತ್ತಾಯಿತು. ಯಜಮಾನಿಯನ್ನು ನೋಡುವುದಕ್ಕಾಗಿ ಯಜಮಾನನು ಟಾಮನನ್ನು ಒಳಗೆ ಕರೆದನು. ಟಾಮನು ಯಜಮಾನಿಯನ್ನು ನೋಡಿದ ಕೂಡಲೇ ಆಕೆಯು ಯಾವಾಗಲೂ ಕಾಯಿಲೆಯವಳೆಂತಲೂ ಬಹು ಕೋಪಿಷ್ಟಳೆಂತಲೂ ತಿಳಿದುಕೊಂಡನು. ಯಜಮಾನಿಯು—ಟಾಮನ ಎತ್ತರವನ್ನೂ ಘಾತ್ರವನ್ನೂ ನೋಡಿ ಇವನು ಕೆಟ್ಟ ಕುಡಿಗಾರನೆಂತಲೇ ತೀರ್ಮಾನಿಸಿದಳು. ತಾಯಿಯನ್ನು ನೋಡಿದಾಕ್ಷಣ ಈವಾಗೆ ಬಹಳ ಸಂತೋಷವಾಗಿ ತಾಯಿಯ ಮೇಲೆ ಬಿದ್ದು ಮುದ್ದಾಡುವುದಕ್ಕೆ ಹೋದಳು. ತಾಯಿಯು—ಈವಾ, ನನ್ನ ತಲೇ ನೋಯಿಸಬೇಡ, ಶಬ್ದ ಮಾಡದೆ ಹೊರಗೆ ಹೊರಟುಹೋಗು ಎಂದು ಓಡಿಸಿಬಿಟ್ಟಳು. ತಾಯಿಯನ್ನು ಅಪ್ಪಿಕೊಂಡು ಮುದ್ದಾಡಲು ಅವಕಾಶ ದೊರೆಯದಿದ್ದುದರಿಂದ ಮಗಳು ಖಿನ್ನಳಾಗಿ ಹೊರಗೆ ಬಂದುಬಿಟ್ಟಳು.

ಈವಾ ಹೊರಗೆ ಹೋದ ತರುವಾಯ ತಾಯಿತಂದೆಗಳಿಬ್ಬರು ಮಾತಾಡುತ್ತಾ ಕೂತಿದ್ದರು. ಇದ್ದಕ್ಕಿದ್ದ ಹಾಗೆ ಹೊರಗಿನ ಅಂಗಳದಲ್ಲಿ ಘಟ್ಟಿಯಾಗಿ ನಗುವ ಶಬ್ದವು ಕೇಳಿಸಿತು. ಯಾರಿರಬಹುದೆಂದು ತಾಯಿತಂದೆಗಳಿಬ್ಬರೂ ಇಣಕಿನೋಡಿದರು. ಅಗಲವಾದ ಎದೆಯೂ ಕಪ್ಪುಬಣ್ಣದಿಂದ ಮಿಂಚುವ ದೇಹವೂ ಉಳ್ಳ ಟಾಮನನ್ನು ಈವಾ ಒಂದು ಕುರ್ಚಿಯ

ಮೇಲೆ ಕೂಡ್ರಿಸಿ ಮಲ್ಲಿಗೇ ಹೂವುಗಳಿಂದ ಮಾಡಿದ ಒಂದು ದೊಡ್ಡ ಹಾರವನ್ನು ಅವನ ಕೊರಳಿಗೆ ಹಾಕಿ ದೊಡ್ಡ ವಿಗ್ರಹದಂತೆ ಕಾಣಿಸುವ ಅವನನ್ನು ನೋಡಿ ಕೈತಟ್ಟಿಕೊಂಡು ಸಂತೋಷದಿಂದ ನಗುತ್ತಿದ್ದಳು. ತನ್ನ ಚಿಕ್ಕ ಯಜಮಾನಿಯ ಸಂತೋಷವನ್ನು ನೋಡಿ ಟಾಮಸು ಸಹ ಸಂತೋಷಿಸಿ ನಗುಮುಖವನ್ನು ಮಾಡಿಕೊಂಡಿದ್ದನು.

ಟಾಮನ ಜೀವನವು ಈಗ ಸುಖಪ್ರದವೆಂದೇ ಹೇಳಬೇಕು. ತನ್ನ ಸಂಸಾರ ಮಕ್ಕಳನ್ನು ಅಗಲಿರುವದರ ಹೊರತು ಮತ್ಯಾವ ವ್ಯಸನವಾಗಲೀ ಕೊರತೆಯಾಗಲೀ ಟಾಮನಿಗಿರಲಿಲ್ಲ. ಯಜಮಾನಿಯ ಕುದುರೆ ಗಾಡಿಯನ್ನು ಹೊಡೆಯುವುದೇ ಇವನ ಮುಖ್ಯ ಕೆಲಸವು. ಟಾಮನ ಮೇಲೆ ಕುದುರೇ ಲಾಯದಲ್ಲಿ ಬರುವ ವಾಸನೆಯು ಬರುತ್ತಿದ್ದುದರಿಂದ ಯಜಮಾನಿಯು ಬಹಳವಾಗಿ ಕೋಪಿಸಿಕೊಳ್ಳುತ್ತಿದ್ದಳು. ಆದುದರಿಂದ ಟಾಮಸು ಕುದುರೆಗಳನ್ನು ಮುಟ್ಟುತ್ತಿರಲಿಲ್ಲ. ಕುದುರೇ ಲಾಯವನ್ನು ಗುಡಿಸುವುದು, ಕುದುರೆಗಳಿಗೆ ಮಾಲೀಸು ಮಾಡುವುದೇ ಮೊದಲಾದ ಕೆಲಸಗಳನ್ನು ಇತರ ಸೇವಕರಿಂದ ಮಾಡಿಸಿ, ತಾನು ಅವರ ಮೇಲ್ವಿಚಾರಣೆ ಮಾಡಿಕೊಂಡಿರುತ್ತಿದ್ದನು. ಟಾಮಸು ಯಾವಾಗಲೂ ಶುಚಿಯಾಗಿದ್ದು ಒಳ್ಳೇ ಬಟ್ಟೆಗಳನ್ನು ಹಾಕಿಕೊಂಡು ದೊಡ್ಡಮನುಷ್ಯನೋ ಎಂಬಂತೆ ಕಾಣಿಸುತ್ತಿದ್ದನು. ಯಜಮಾನನ ಮಗಳು ಈವಾ ಟಾಮನನ್ನು ಬಹಳ ಪ್ರೀತಿಸುತ್ತಿದ್ದಳು. ಆದುದರಿಂದ ಈವಾ ಕರೆದಾಕ್ಷಣ ಟಾಮಸು ಯಾವ ಕೆಲಸವನ್ನು ಮಾಡುತ್ತಿದ್ದಾಗ್ಯೂ ಬಿಟ್ಟು ತಕ್ಷಣವೇ ಹೋಗಬೇಕೆಂದು ಯಜಮಾನರ ಅಪ್ಪಣೆಯಾಗಿದ್ದಿತು.

ಒಂದು ದಿನ ಟಾಮನು ಲೇಖಣಿಕೆ ಕಾಗದಗಳನ್ನು ತೆಗೆದುಕೊಂಡು ತನ್ನ ಹೆಂಡತಿಯಾದ ಕ್ಲೋಯಿಗೆ ಕಾಗದವನ್ನು ಬರೆಯುವುದಕ್ಕಾಗಿ ಬಹಳ ಪ್ರಯತ್ನಿಸುತ್ತಿದ್ದುದನ್ನು ಈವಾ ನೋಡಿದಳು. ಇವನಿಗೆ ಬರೆಯಲು ಚೆನ್ನಾಗಿ ಬರುತ್ತಿರಲಿಲ್ಲ ಮತ್ತು ಅಭ್ಯಾಸವೂ ಇರಲಿಲ್ಲ. ಹಳೇ ಧಣಿಯ ಮಗನಾದ ಜೋರ್ಜ್ ಶೆಲ್ಬೀ ಎಷ್ಟು ಕಲಿಸಿದ್ದನೋ ಅಷ್ಟೇ, ಹೆಚ್ಚಿಗಿಲ್ಲ. ಆದರೂ ಕಾಗದವನ್ನು ಬರೆಯಲು ಬಹಳ ಪ್ರಯತ್ನವನ್ನು ಮಾಡುತ್ತಿದ್ದನು.

ಇವನು ಮಾಡುತ್ತಿದ್ದ ಪ್ರಯತ್ನವನ್ನೆಲ್ಲಾ ಹೊಂಚುಹಾಕಿಕೊಂಡು ನೋಡುತ್ತಿದ್ದ ಈವಾ—ಟಾಮ್ಮಾವಾ, ಎಂತಹ ತಮಾಷೆಯಾದ ಚಿತ್ರಗಳನ್ನು ಬರೆಯುತ್ತಿದ್ದೀಯಲ್ಲಾ? ಅದೇನು ನೀನು ಬರೆಯುವುದು? ಎಂದಳು.

ಟಾಮನು—ಕಣ್ಣುಗಳಿಂದ ಸುರಿಯುತ್ತಿದ್ದ ನೀರನ್ನು ಒರೆಸಿಕೊಳ್ಳುತ್ತಾ ಬಹು ದುಃಖದಿಂದ—ಯಜಮಾನಿಯೇ, ನಾನು ನನ್ನ ಬಡ ಹೆಂಡತಿಗೂ ಮಕ್ಕಳಿಗೂ ಕಾಗದ ಬರೆಯಲು ಪ್ರಯತ್ನಮಾಡುತ್ತಿದ್ದೇನೆ, ಚಿತ್ರವಲ್ಲ ಅಂದನು.

ಈವಾ—ಟಾಮ್ಮಾವಾ, ನಾನು ನಿನಗೆ ಸ್ವಲ್ಪ ಸಹಾಯಮಾಡಲೇ! ನನಗೂ ಸ್ವಲ್ಪ ಬರೆಯುವುದಕ್ಕೆ ಬರುತ್ತದೆ. ಹೋದವರುಷ ಎರಡು-ಮೂರು ಅಕ್ಷರಗಳನ್ನು ಕೂಡಿಸಿಕೊಂಡು ಬರೆಯುತ್ತಿದ್ದೆನು. ಈಗ ಅಭ್ಯಾಸ ಸ್ವಲ್ಪ ತಪ್ಪಿರುವುದರಿಂದ ಮರೆತಿರಬಹುದೇನೋ? ಎಂದು ಹೇಳಿ, ಟಾಮನ ಕಪ್ಪು ತಲೆಯ ಪಕ್ಕದಲ್ಲಿ ತನ್ನ ಬಿಳೀ ತಲೆಯನ್ನಿಟ್ಟುಕೊಂಡು, ಪ್ರತಿಯೊಂದು ಮಾತನ್ನು ಬರೆದ ಕೂಡಲೇ ಬರೆಯುವುದನ್ನು ಸ್ವಲ್ಪ ಹೊತ್ತು ನಿಲ್ಲಿಸಿ ಒಬ್ಬರ ಆಲೋಚನೆಯನ್ನೊಬ್ಬರು ಕೇಳುತ್ತಾ, ಕಾಗದವನ್ನು ಬರೆಯಲುಪಕ್ರಮಿಸಿದರು. ಬರೆಯುವುದು ಮುಂದರಿಯಿತು. ಆಗ ಈವಾ ತಾನು ಬರೆದುದನ್ನು ನೋಡಿ, ಮನಸ್ಸಿನಲ್ಲಿ ಹಿಗ್ಗಿ—ಟಾಮ್ಮಾವಾ, ಬರೆದಿರುವುದು ಎಷ್ಟು ಚೆನ್ನಾಗಿ ಕಾಣಿಸುತ್ತಿದೆ, ನೋಡು! ಈ ಕಾಗದವನ್ನು ನೋಡಿ ನಿನ್ನ ಹೆಂಡತಿ ಮಕ್ಕಳಿಗೆ ಬಹಳ ಸಂತೋಷವಾಗಬಹುದಲ್ಲವೇ? ನೀನು ಅವರನ್ನು ಬಿಟ್ಟು, ಇಷ್ಟುದೂರ ಬಂದಿರುವುದು ನಾಚಿಕೆಯ ಕೆಲಸವೆಂದೇ ನಾನು ಹೇಳಬೇಕಾಗಿದೆ. ಇರಲಿ, ನಿನ್ನನ್ನು ನಿನ್ನ ಹೆಂಡತಿಯ ಮಕ್ಕಳ ಬಳಿಗೆ ಕಳುಹಿಸುವಂತೆ ನನ್ನ ತಂದೆಯವರನ್ನು ಕೇಳಿಕೊಳ್ಳುತ್ತೇನೆ ಅಂದಳು.

ಟಾಮನು—ನನ್ನ ಯಜಮಾನಿಯು ಹಣವು ಅನುಕೂಲವಾದ ಕೂಡಲೇ ನನ್ನನ್ನು ಹಿಂದಕ್ಕೆ ಕರೆಸಿಕೊಳ್ಳುವುದಾಗಿ ನಾನು ಬರುವಾಗ ಹೇಳಿದರು. ಅದಕ್ಕಾಗಿ ನಾನು ನಿರೀಕ್ಷಿಸುತ್ತಿದ್ದೇನೆ. ನನ್ನ ಚಿಕ್ಕ ಯಜಮಾನನಾದ ಜೋರ್ಜ್ ನನ್ನನ್ನು ಕರೆದುಕೊಂಡುಹೋಗಲು ಬೇಗ ಬರುತ್ತಾನೆ. ಗುರುತಿಗಾಗಿ ಈ ರೂಪಾಯಿಯನ್ನು ಕಳುಹಿಸಿದನು ಎಂದು

ಹೇಳಿ, ತನ್ನ ಅಂಗಿಯೊಳಗಿದ್ದ ಆ ರೂಪಾಯಿಯನ್ನು ಹೊರಗೆ ತೆಗೆದು ತೋರಿಸಿದನು. ಇದು ಒಂದು ರೂಪಾಯಿಯಾದರೂ ನನಗೇನೋ ಇದು ಲಕ್ಷ ರೂಪಾಯಿಗಳಂತೆಯೇ ಇದೆ.

ಈವಾ (ಆ ರೂಪಾಯಿಯನ್ನು ನೋಡಿ)—ಹಾಗಾದರೆ ಆತನು ಖಂಡಿತ ವಾಗಿ ಬರುತ್ತಾನೆ, ನನಗೆ ಬಹಳ ಸಂತೋಷ ಅಂದಳು.

ಟಾಮಸು—ನನ್ನ ಹೆಂಡತಿಗೆ ನಾನು ಎಲ್ಲಿದ್ದೇನೆಂದು ತಿಳಿಸುವುದ ಕ್ಕಾಗಿಯೂ ನಾನು ಈ ಸ್ಥಳದಲ್ಲಿ ಸುಖವಾಗಿಯೂ ಸಂತೋಷವಾಗಿಯೂ ಇರುವುದರಿಂದ ಅವಳು ನನಗಾಗಿ ಚಿಂತೆಮಾಡಬಾರದೆಂಬದಾಗಿಯೂ ಈ ಕಾಗದವನ್ನು ಬರೆಯಬೇಕೆಂದು ಮನಸ್ಸುಮಾಡಿದೆನು. ಇದರಿಂದ ಆ ನನ್ನ ಬಡ ಹೆಂಡತಿಗೆ ಬಹಳ ಸಂತೋಷವಾಗಬಹುದು ಅನ್ನುವಷ್ಟರಲ್ಲಿ ಯಜಮಾನನು ಒಳಗೆ ಬಂದು ತನ್ನನ್ನು ಕರೆಯುವ ಶಬ್ದ ಕೇಳಿಸಿತು. ಯಜಮಾನನು ಒಳಗೆ ಬಂದನು. ಟಾಮನೂ ಈವಾ ಇಬ್ಬರು ಬೆಚ್ಚಿ ಬಿದ್ದರು. ಯಜಮಾನನು ಅವರು ಬರೆಯುತ್ತಿದ್ದ ಕಾಗದವನ್ನು ನೋಡಿ— ನೀವಿಬ್ಬರೂ ಇಲ್ಲಿ ಏನು ಮಾಡುತ್ತಿದ್ದೀರಿ? ಇದೇನು? ಎಂದು ಕೇಳಿದನು.

ಈವಾ—ಇದೂ. . . . ಟಾಮ್ಮಾವನ ಕಾಗದವಪ್ಪಾ. . . . ಇದನ್ನು ಬರೆಯುವುದಕ್ಕಾಗಿ ನಾನು ಸಹಾಯಮಾಡುತ್ತಿದ್ದೇನೆ, ಬರೆದಿರುವುದು ಚೆನ್ನಾಗಿಲ್ಲವೇನಪ್ಪಾ ?

ಸೆಂಟ್ ಕ್ಲೇರನು—ಆ ಕಾಗದವನ್ನು ಚೆನ್ನಾಗಿ ನೋಡಿ ನಕ್ಕನು. ಕಡೆಗೆ ನಿಮ್ಮಿಬ್ಬರ ಆಶೆಯನ್ನು ಭಂಗಪಡಿಸುವುದಕ್ಕೆ ನನಗೆ ಇಷ್ಟವಿಲ್ಲ. ಆದರೂ—ಟಾಮ್, ಈ ಕಾಗದವನ್ನು ಸಾಯಂಕಾಲ ನಿನಗೆ ಬರೆದು ಕೊಡುತ್ತೇನೆ ಎಂದು ಹೇಳಿ, ಸಾಯಂಕಾಲವಾಗುತ್ತಲೇ ಕಾಗದವನ್ನು ಬರೆದು ಅದನ್ನು ಟಾಪ್ಪಾಲಿನಲ್ಲಿ ಹಾಕಿಸಿದನು.

ಟಾಮನು ಇಲ್ಲಿಗೆ ಬಂದು ಎರಡು ವರುಷಗಳಾದವು. ಹೆಂಡತಿ ಮಕ್ಕ ಳನ್ನು ಬಿಟ್ಟುಬಂದಿರುವ ಚಿಂತೆಯು ಹೊರತು, ಮತ್ತೆ ಯಾವ ಚಿಂತೆ ಯಾದರೂ ಟಾಮನಿಗಿರಲಿಲ್ಲ. ಹೊಸ ಯಜಮಾನನ ಮನೆಯಲ್ಲಿ ಬಹು ಸಂತೋಷವಾಗಿದ್ದನು.

ಅಧ್ಯಾಯ ೬

ಈವಾ ಸಿಂಕ್ಲೇರಳ ಸುಹೃದಯ

ಒಂದು ದಿನ ಸಾಯಂಕಾಲ ಸೂರ್ಯನು ಅಸ್ತಮಿಸುತ್ತಿದ್ದನು. ಆ ಸಮಯದಲ್ಲಿ ಈವಾ ಮತ್ತು ಟಾಮಸು ತೋಟದಲ್ಲಿ ಕೂತಿದ್ದರು. ಈವಾ ತನ್ನದಾಗಿದ್ದ ಕ್ರೈಸ್ತರ ವೇದದಲ್ಲಿ ಪರಲೋಕದ ವಿಷಯವಾಗಿ ಬರೆದಿದ್ದ ಕೆಲವು ವೇದವಾಕ್ಯಗಳನ್ನು ಓದುತ್ತಿದ್ದವಳು ಫಕ್ಕನೆ ನಿಲ್ಲಿಸಿ–ಟಾಮ್ಮಾವಾ, ನಾನು ಇನ್ನು ಕೆಲವು ದಿನಗಳೊಳಗಾಗಿ ಪರಲೋಕಕ್ಕೆ ಹೋಗುತ್ತೇನೆ ಅಂದಳು.

ಈ ಮಗುವಿನ ಮಾತುಗಳನ್ನು ಕೇಳಿ ವೃದ್ಧನಾದ ಟಾಮಸ ಹೃದಯವು ಬಹಳ ನೊಂದುಹೋಯಿತು. ಕಳೆದ ಆರು ತಿಂಗಳಿಂದಲೂ ಆಕೆಯ ಶಾರೀರ ಪ್ರಕೃತಿಯು ಬದಲಾಗುತ್ತಿರುವುದು ನೆನಪಾಯಿತು. ಕೈಗಳು ಬರಬರುತ್ತಾ ಸಣ್ಣವಾಗುತ್ತಿದ್ದವು. ಮುಖವು ಮತ್ತು ಶರೀರಾದ್ಯಂತವೂ ಬಿಳುಚು ಹೊಡೆಯುತ್ತಿದ್ದಿತು. ಕೆಮ್ಮು ಹೆಚ್ಚಾಗುತ್ತಿದ್ದಿತು. ಉಸಿರಾಟವು ತೀವ್ರ ವಾಗುತ್ತಿದ್ದಿತು. ಮೈಯಲ್ಲಿ ಯಾವಾಗಲೂ ಜ್ವರವು ಇದ್ದೇ ಇರುತ್ತಿದ್ದಿತು. ಎಂತಹ ಔಷಧದಿಂದಲಾದರೂ ಸ್ವಲ್ಪವೂ ಕ್ಷೇಮವಾದಂತೆ ಕಾಣಲಿಲ್ಲ. ಈ ರೋಗದ ಚಿನ್ಹೆಗಳೆಲ್ಲವನ್ನೂ ಗಮನಿಸುತ್ತಿದ್ದ ಟಾಮಸಿಗೆ ಈ ದಿನ ಈವಾ ಹೇಳಿದ ಮಾತುಗಳು ಬಹಳ ತೀಕ್ಷ್ಣವಾಗಿ ಪರಿಣಮಿಸಿ ಬಹಳ ದುಃಖ ವನ್ನುಂಟುಮಾಡಿದವು.

ಕೆಲವು ದಿನಗಳಾದವು. ಈವಾ ಹಾಸಿಗೆಯಿಂದ ಮೇಲಕ್ಕೆ ಏಳಲಾರ ದಷ್ಟು ರೋಗಿಷ್ಠಳಾದಳು. ವೈದ್ಯನನ್ನು ಸಹ ಕರೆಸಿ ಚಿಕಿತ್ಸೆಮಾಡಿಸ ಲಾಯಿತು. ಬದುಕುವ ನಿರೀಕ್ಷೆಯೇ ಇಲ್ಲ. ಈವಾಗೆ ತಾನು ಸಾಯು ವುದು ನಿಶ್ಚಯವೆಂದು ಮೊದಲೇ ತಿಳಿದಿದ್ದಿತು. ಆಕೆಗೆ ತಾನು ಸಾಯು ವುದರ ವಿಷಯ ಸ್ವಲ್ಪವಾದರೂ ವ್ಯಸನವಿರಲಿಲ್ಲವಾದಾಗ್ಯೂ ತಾನು ಬಿಟ್ಟು ಹೋಗುವವರ ವಿಷಯ ಯೋಚಿಸುವಾಗ ಆಕೆಯ ಹೃದಯವು ಬಹು ನೊಂದುಹೋಗುತ್ತಿದ್ದಿತು. ಸಾಯುವ ಮುಂಚೆ ಪ್ರತಿಯೊಬ್ಬರನ್ನು ಆಶೀ

ರ್ಣದಿಸಬೇಕೆಂಬ ಕುತೂಹಲವು ಬಹಳವಾಗಿದ್ದಿತು. ಮುಖ್ಯವಾಗಿ ಯಾರ ಸ್ಥಿತಿಗತಿಗಳ ವಿಷಯದಲ್ಲಿ ಆಕೆಯು ದಿವಾರಾತ್ರಿಗಳಲ್ಲಿ ಮರುಗುತ್ತಿದ್ದಳೋ ಅಂತಹ ತನ್ನ ಮನೆಯ ಗುಲಾಮರ ವಿಷಯ ಏನಾದರೂ ಒಂದು ಒಳ್ಳೇದನ್ನು ಮಾಡಿ ಸಾಯಬೇಕೆಂದು ಬಹಳವಾಗಿ ಅಪೇಕ್ಷಿಸಿದಳು.

ಈವಾ ಸಾಯುವುದಕ್ಕೆ ಕೆಲವು ದಿನಗಳು ಮಾತ್ರವಿದ್ದವು. ಒಂದು ದಿನ ಆಕೆಯು ಟಾಮನನ್ನು ಕರೆದು—ಟಾಮ್ಮಾವಾ, ನಮ್ಮ ಸ್ವಾಮಿಯಾದ ಯೇಸುವು ನಮಗಾಗಿ ಸಾಯಲು ಯಾಕೆ ಇಷ್ಟಪಟ್ಟನೆಂದು ನನಗೆ ಈಗ ಗೊತ್ತಾಯಿತು.

ಟಾಮನು—ಯಾಕೆ ಇಷ್ಟಪಟ್ಟನಮ್ಮಾ ?

ಈವಾ—ಯಾಕೆಂದರೆ, ನನಗೆ ಹಾಗೆ ತಿಳಿಯುತ್ತದೆ.

ಟಾಮನು—ನಿನಗೆ ತಿಳಿಯಬಹುದು, ನನಗೆ ತಿಳಿಯಲಿಲ್ಲವಲ್ಲಾ ?

ಈವಾ—ನಾನು ನಿನಗೆ ಹೇಳಲು ಆಗುವುದಿಲ್ಲ. ನಾವು ಪ್ರಯಾಣ ಮಾಡುತ್ತಿದ್ದಾಗ ನೋಡಿದ ಗುಲಾಮರಲ್ಲಿ ಕೆಲವರು ತಮ್ಮ ತಾಯಂದಿರನ್ನೂ ಕೆಲವರು ತಮ್ಮ ಗಂಡಂದಿರನ್ನೂ ತಾಯಂದಿರು ತಮ್ಮ ಚಿಕ್ಕ ಮಕ್ಕಳನ್ನೂ ಕಳೆದುಕೊಂಡು ಪಡುವ ಸಂಕಟವನ್ನು ನೋಡಿ ನನಗೆ ಸಹಿಸಲಾಗಲಿಲ್ಲ. ನಾನು ಸಾಯುವುದರಿಂದ ಅವರ ದುಃಖವೂ ಸಂಕಟವೂ ಕಷ್ಟವೂ ನಿವಾರಣೆಯಾಗುವ ಹಾಗಿದ್ದರೆ ಅವರಿಗಾಗಿ ನಾನು ಸಾಯುವುದು ಬಹು ಸಂತೋಷವೆನಿಸಿತು. ಟಾಮ್ಮಾವಾ, ಹಾಗೇನಾದರೂ ಆಗುವಂತಿದ್ದರೆ ಅವರಿಗಾಗಿ ನಾನು ಸಾಯುವುದಕ್ಕೆ ಸಿದ್ಧವಾಗಿದ್ದೇನೆ ಅಂದಳು. ಈವಾ ಹಾಸಿಗೆಯ ಮೇಲೆ ಮಲಗಿಕೊಂಡು ರೋಗದಿಂದ ಸವೆದುಹೋಗಿದ್ದ ತನ್ನ ಪುಟ್ಟುಕೈಯನ್ನು ಟಾಮನ ಕೈ ಮೇಲೆ ಇಟ್ಟು ಹೃದಯಪೂರ್ವಕವಾಗಿ ಆರ್ತಧ್ವನಿಯಿಂದ ಮೇಲಿನ ಸಂಗತಿಯನ್ನು ಹೇಳುವಾಗ ಇವನು ಆಕೆಯನ್ನೇ ದೃಷ್ಟಿಸುತ್ತಾ ಕಡೆಗೆ ತನ್ನ ಮುಖವನ್ನು ತಿರುಗಿಸಿಕೊಂಡು ಸುರಿಯುತ್ತಿದ್ದ ಕಣ್ಣೀರನ್ನು ಒರೆಸಿಕೊಂಡನು.

ಸ್ವಲ್ಪ ಹೊತ್ತಿನ ತರುವಾಯ ಈವಾ ಸಿಂಕ್ಲೇರಳ ವೃದ್ಧಸೇವಕಳನ್ನು ಟಾಮನು ನೋಡಿ—ಅಮ್ಮಾ, ನಮ್ಮ ಚಿಕ್ಕ ಯಜಮಾನಿಯನ್ನು ದೇವರು

ಕರೆಯುತ್ತಿದ್ದಾನೆ. ಆದುದರಿಂದ ಆಕೆಯನ್ನು ಇಲ್ಲಿರಿಸಿಕೊಳ್ಳುವುದಕ್ಕಾಗಿ ಪ್ರಯತ್ನಿಸುವುದರಿಂದ ಯಾವ ಪ್ರಯೋಜನವೂ ಇಲ್ಲ ಎಂದು ಹೇಳಿ ನಿಟ್ಟುಸಿರಿಟ್ಟನು.

ಒಂದು ದಿನ ಸೆಂಟ್ ಕ್ಲೇರನು ಮಗಳ ಹಾಸಿಗೆಯ ಬಳಿ ಕೂತುಕೊಂಡಿದ್ದನು. ಆಗ ಈವಾ ತಂದೆಯನ್ನು ದೀನದೃಷ್ಟಿಯಿಂದ ನೋಡಿ—ಅಪ್ಪಾ, . . . ಅನೇಕ ದಿನಗಳಿಂದಲೂ ನಾನು ನಿನ್ನ ಸಂಗಡ ಕೆಲವು ಸಂಗತಿಗಳ ವಿಷಯದಲ್ಲಿ ಮಾತಾಡಬೇಕೆಂದಿದ್ದೆನು. ಈಗ ಆ ಸಂಗತಿಯನ್ನು ಹೇಳಬೇಕಾಗಿದೆ. ಯಾಕೆಂದರೆ, ನನ್ನ ರೋಗವೂ ಬಲಹೀನತ್ವವೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಅಂದಳು.

ಮಗಳ ಮಾತನ್ನು ಕೇಳಿದ ಕೂಡಲೇ ತಂದೆಗೆ ನಡುಕಹುಟ್ಟಿ ಮಗಳನ್ನು ತನ್ನ ತೊಡೆಯ ಮೇಲೆ ಕೂಡ್ರಿಸಿಕೊಂಡನು. ಮಗಳು ತೊಡೆಯ ಮೇಲೆ ಕೂತು ತಂದೆಯ ಭುಜದ ಮೇಲೆ ಒರಗಿಕೊಂಡು—ಅಪ್ಪಾ, . . . ನಾನು ಆ ಸಂಗತಿಗಳನ್ನು ನಿನಗೆ ಹೇಳುವುದಕ್ಕೆ ನಿಧಾನಮಾಡಿ ನನ್ನ ಮನಸ್ಸಿನಲ್ಲಿಯೇ ಇಟ್ಟುಕೊಳ್ಳುವುದರಿಂದ ಪ್ರಯೋಜನವಿಲ್ಲ. ನಾನು ನಿನ್ನನ್ನು ಬಿಟ್ಟುಹೋಗುವ ಸಮಯವು ಕೇವಲ ಸಮೀಪವಾಗಿದೆ. ತಂದೆಯ ಭುಜದ ಮೇಲೆ ನಿಟ್ಟುಸಿರಿಡುತ್ತಾ—ಅಪ್ಪಾ, . . . ನಾನು ಹೋದರೆ ಇನ್ನೆಂದಿಗೂ ಬರುವುದಿಲ್ಲ ಅಂದಳು.

ಸಿಂಕ್ಲೇರನು (ನಡಗು ಧ್ವನಿಯಿಂದ)—ನನ್ನ ಮಗಳೇ, ರೋಗದಿಂದ ನೀನು ಬಹಳ ಬಲಹೀನಳಾಗಿದ್ದೀ. ಇದರಿಂದ ನಿನ್ನಲ್ಲಿ ನಾನಾ ಯೋಚನೆಗಳು ತಲೆದೋರುವುದು ಸ್ವಭಾವಿಕವು. ಅಂತಹ ಯೋಚನೆಗಳನ್ನೆಲ್ಲಾ ಮರೆತು ಬಿಡು ಎಂದು ಹೇಳಿ, ಮಗಳನ್ನು ಧೈರ್ಯಪಡಿಸಲು ಪ್ರಯತ್ನಿಸಿದನು.

ಈವಾ—ಅಪ್ಪಾ, . . . ನೀವು ನನ್ನ ವಿಷಯದಲ್ಲಿ ತಪ್ಪು ಅಭಿಪ್ರಾಯ ಮಾಡಿಕೊಂಡಿದ್ದೀರಿ. ನಾನು ಎಂದಿಗಾದರೂ ಕ್ಷೇಮವಾಗುವುದಿಲ್ಲ. ಇದು ನನಗೆ ಚೆನ್ನಾಗಿ ತಿಳಿದಿದೆ. ಕೆಲವು ದಿನಗಳಲ್ಲಿಯೇ ನಾನು ನಿಮ್ಮನ್ನು ಬಿಟ್ಟುಹೋಗುತ್ತೇನೆ. ಆ ವಿಷಯದಲ್ಲಿ ನಾನೇನೂ ಭಯಪಡುವುದಿಲ್ಲ. ನಾನು ಖಿನ್ನಮನಸ್ಕಳಾಗಿಯೂ ಇಲ್ಲ. ತಂದೆಯಾದ ನಿಮ್ಮ ವಿಷಯವೂ

ಮತ್ತು ನನ್ನ ಸ್ನೇಹಿತರ ವಿಷಯವೂ ನನಗೆ ಬಹಳ ಚಿಂತೆಯಿದೆ. ಇದೊಂದು ನನಗಿಲ್ಲದಿದ್ದರೆ ನನಗಿರುವಷ್ಟು ಸಂತೋಷವು ಯಾರಿಗೂ ಇಲ್ಲ ಅಂದಳು.

ಸಿಂಕ್ಲೇರನು—ಯಾಕೆ ಮಗಳೇ, ನಿನಗೆ ಅಂತಹ ಚಿಂತೆ ಏನಿದೆ? ಯಾವ ವಿಷಯದಲ್ಲಿಯಾದರೂ ನಿನಗೆ ಕೊರತೆ ಮಾಡಲಿಲ್ಲವಲ್ಲಾ? ನೀನು ಸಂತೋಷಪಡಲು ಬೇಕಾಗಿರುವುದನ್ನೆಲ್ಲಾ ನಿನ್ನ ತಂದೆಯಾದ ನಾನು ನಿನಗೆ ಕೊಟ್ಟಿದ್ದೇನಲ್ಲಾ?

ಈವಾ—ಹೌದಪ್ಪಾ, ಎಲ್ಲವನ್ನೂ ಕೊಟ್ಟಿದ್ದೀರಿ. ನಾನು ಸತ್ತು ದೇವರ ಬಳಿಗೆ ಹೋಗುವುದಕ್ಕೆ ನನಗೆ ಬಹಳ ಮನಸ್ಸಿದೆ. ನನ್ನ ಸ್ನೇಹಿತರನ್ನು ನೆನಸಿಕೊಂಡರೆ ಇನ್ನೂ ಕೆಲವುಕಾಲ ಜೀವಿಸಿದರೆ ಒಳ್ಳೇದೆಂದೆನಿಸುತ್ತದೆ. ಇಲ್ಲಿಯೋ ನನ್ನ ಮನಸ್ಸಿಗೆ ವ್ಯಥೆಯನ್ನುಂಟುಮಾಡುವ ಸಂಗತಿಗಳನೇಕ ಇವೆ. ಅಲ್ಲಿಯಾದರೋ ಅಂತಹದ್ದೇನೂ ಇಲ್ಲ. ಆದರೂ ನಿನ್ನನ್ನು ಬಿಟ್ಟು ಹೋಗುವುದೆಂದರೆ ನನಗೆ ಬಹಳ ದುಃಖವಾಗುತ್ತದೆ. ನಾನೇನು ಮಾಡಲಿ? ಅದನ್ನು ನೆನಸಿದ ಮಾತ್ರಕ್ಕೇ ನನ್ನ ಹೃದಯವು ಸೀಳಿಹೋದಂತಾಗುತ್ತದಲ್ಲಾ?

ಸಿಂಕ್ಲೇರನು—ಮಗೂ, ಏನಮ್ಮಾ, ನಿನಗಿರುವ ಅಂತಹ ಚಿಂತೆಯು ಯಾವುದು? ಹೇಳಮ್ಮಾ, ನಾನು ನಿನ್ನ ತಂದೆಯಲ್ಲವೇ?

ಈವಾ—ಅ . . . ಪ್ಪಾ, . . . ನಮ್ಮ ಗುಲಾಮರ ವಿಷಯವಾದ ಚಿಂತೆಯು ಬಹಳವಾಗಿದೆ. ಅದರ ಹೊರತು ಮತ್ತೊಂದಿಲ್ಲ. ಅವರು ಗುಲಾಮರಾಗಿದ್ದಾಗ್ಯೂ ನನ್ನನ್ನು ಬಹಳವಾಗಿ ಪ್ರೀತಿಸುತ್ತಾರೆ. ನನ್ನನ್ನು ಬಹಳ ದಯದಿಂದ ನೋಡಿಕೊಳ್ಳುತ್ತಾರೆ. ಅಪ್ಪಾ, ಅವರೆಲ್ಲರನ್ನು ಬಿಡುಗಡೆ ಮಾಡಿದರೆ ನನಗೆ ಸಂತೋಷವಾಗಿ ನನ್ನ ಚಿಂತೆಯೆಲ್ಲಾ ಪರಿಹಾರವಾಗುವುದು.

ಸಿಂಕ್ಲೇರನು—ಮಗಳೇ, ಅವರಿಗೆ ನಾವು ಈಗ ಯಾವುದಕ್ಕೂ ಕೊರತೆಮಾಡಲಿಲ್ಲವಲ್ಲಾ! ನಮ್ಮ ಕೈಲಾದಷ್ಟು ಅವರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದೇವೆ. ಇದು ನಿನಗೆ ತಿಳಿದೇ ಇದೆ.

ಈವಾ—ಅಪ್ಪಾ, ಹೌದು, ಅವರಿಗೆ ಕೊರತೆಯಿಲ್ಲ. ಆ . . . ದ . . . ರೆ

(ನಿಟ್ಟುಸಿರಿಟ್ಟು ಕಣ್ಣೀರಿಡುತ್ತಾ)—ಅಪ್ಪಾ, ನಿಮಗೆ ವಿಪತ್ತೇನಾದರೂ ಸಂಭವಿಸಿದರೆ ಅವರ ಗತಿಯೇನಪ್ಪಾ ? ಎಲ್ಲರೂ ನಿನ್ನಂತಹ ಪ್ರೀತಿಯುಳ್ಳವರಾಗಿರುತ್ತಾರೆಯೇ ? ನಿಮ್ಮಲ್ಲಿರುವ ಸ್ವಭಾವವು ಆಲ್‌ಫರೆಡ್ ಮಾವನಲ್ಲಿಲ್ಲ, ಅಮ್ಮನಲ್ಲಿಯೂ ಇಲ್ಲ. ಆದುದರಿಂದ ನಮ್ಮ ಗುಲಾಮರೆಲ್ಲರನ್ನು ಬಿಡುಗಡೆಮಾಡಲು ಉಪಾಯವೇನೂ ಇಲ್ಲವೇ ?

ಸಿಂಕ್ಲೇರನು—ನನ್ನ ಪ್ರಿಯ ಮಗಳೇ, ಬಹಳ ಕಷ್ಟ ಅಂದನು. ಈವಾ ತಂದೆಯನ್ನು ಪೀಡಿಸುತ್ತಾ—ಅಪ್ಪಾ, ನಾನು ಸತ್ತ ಮೇಲೆ ನಾನು ಹೇಳಿದುದನ್ನು ನೀವು ಜ್ಞಾಪಕಮಾಡಿಕೊಳ್ಳುವಾಗ ನನಗೋಸ್ಕರವಾಗಿಯಾದರೂ ಅವರನ್ನು ಬಿಡುಗಡೆಮಾಡುವಿರಲ್ಲವೇ ?

ಸಿಂಕ್ಲೇರನಿಗೆ ಮಗಳ ಮಾತುಗಳನ್ನು ಕೇಳಿ ಹೃದಯವು ಶೂಲದಿಂದ ಇರಿದಂತಾಯಿತು. ಕಣ್ಣುಗಳಲ್ಲಿ ನೀರು ಉಕ್ಕಿದವು. ಬಹು ಸಂಕಟವಾಯಿತು. ತೊದಲುಮಾತಿನಿಂದ—ಅಮ್ಮಾ, ನೀನು ಸಾಯುವುದರ ವಿಷಯ ಮಾತ್ರ ಹೇಳಬೇಡ. ಮುದ್ದುಮಗಳಾದ ನಿನಗಿಂತಲೂ ಶ್ರೇಷ್ಠವಾದದ್ದು ಲೋಕದಲ್ಲಿ ನನಗೆ ಮತ್ತೊಂದಿದೆಯೇ ? ಇಲ್ಲ, ಇಲ್ಲ, ಮತ್ತೊಂದಿಲ್ಲವೇ ಇಲ್ಲ.

ಈವಾ—ನೀನು ನನ್ನನ್ನು ಹೇಗೆ ಪ್ರೀತಿಮಾಡುತ್ತೀಯೋ ಅದರಂತೆ ಈ ಬಡಗುಲಾಮರು ಸಹ ತಮ್ಮ ಮಕ್ಕಳನ್ನು ಪ್ರೀತಿಮಾಡುತ್ತಾರಲ್ಲವೇನಪ್ಪಾ . . . ಅವರಿಗಾಗಿ ಏನಾದರೂ ಒಂದು ಒಳ್ಳೇದನ್ನು ಮಾಡಪ್ಪಾ ಎಂದು ಕಣ್ಣೀರಿಟ್ಟಳು.

ಸಿಂಕ್ಲೇರನು—ಮಗಳೇ, ಮಗಳೇ, ಅಳಬೇಡ. ನೀನು ಸಾಯುವ ವಿಷಯವನ್ನು ಮಾತ್ರ ಮತ್ತೊಂದಾವರ್ತಿ ಎತ್ತಲೇ ಬೇಡ. ನಿನ್ನ ಅಪೇಕ್ಷೆಯಂತೆ ಯಾವುದನ್ನಾದರೂ ಮಾಡಲು ಸಿದ್ಧನಾಗಿದ್ದೇನಮ್ಮಾ.

ಈವಾ—ಟಾಮ್ಮಾಮನನ್ನು ನಾನು . . . ಸ . . . ತ್ತ ಕೂಡಲೇ ಬಿಡುಗಡೆ ಮಾಡುತ್ತೇನೆಂದು ಅಪ್ಪಾ ನನಗೆ ಮಾತುಕೊಡಿರಿ. ಮುಂದೆ ಮಾತಾಡಲು ದುಃಖದಿಂದ ಸಾಧ್ಯವಾಗಲಿಲ್ಲ.

ಸಿಂಕ್ಲೇರನು—ನಿನ್ನ ಅಪೇಕ್ಷೆಯಂತೆ ಈ ಲೋಕದಲ್ಲಿ ನಾನು ಯಾವು

ದನ್ನಾದರೂ ಮಾಡುತ್ತೇನಮ್ಮಾ, ನೀನು ಮಾತ್ರ ಈ ನಿನ್ನ ಚಿಂತೆಯನ್ನು ಮರೆತುಬಿಡು.

ಈವಾ ಜ್ವರದಿಂದ ಬಿಸಿಯಾಗಿದ್ದ ತನ್ನ ಕೆನ್ನೆಯನ್ನು ತಂದೆಯ ಕೆನ್ನೆಯ ಮೇಲಿಟ್ಟುಕೊಂಡು—ಅಪ್ಪಾ, ನೀನು ಸಹ ನನ್ನ ಜೊತೆಯಲ್ಲಿಯೇ ಬಂದರೆ ನನಗಾಗುವ ಸಂತೋಷವನ್ನು ಏನು ಹೇಳಲಿ?

ಸಿಂಕ್ಲೇರನು—ಎಲ್ಲಿಗೆ ಮಗಳೇ?

ಈವಾ—ಪರಲೋಕಕ್ಕೆ, ದೇವರ ಬಳಿಗೆ, ಅಲ್ಲಿಗೆ ಬರಲು ನಿನಗೆ ಮನಸ್ಸಿಲ್ಲವೇನಪ್ಪಾ?

ತಂದೆಗೆ ಮಾತಾಡಲಾಗಲಿಲ್ಲ. ತನ್ನ ಮಗಳನ್ನು ತನ್ನ ಎದೆಗೆ ಘಟ್ಟಿಯಾಗಿ ಅಪ್ಪಿಕೊಂಡು ನಿಶ್ಶಬ್ದವಾದನು.

ಈವಾ—ಬರುತ್ತೀಯಲ್ಲವೇನಪ್ಪಾ?

ಸಿಂಕ್ಲೇರನು—ನಿನ್ನ ಹಿಂದೆಯೇ ಬರುತ್ತೇನಮ್ಮಾ. ನನ್ನ ಮುದ್ದು ಮಗಳಾದ ನಿನ್ನನ್ನು ಮರೆಯುವುದುಂಟೇ? ಆಗುವುದಿಲ್ಲಮ್ಮಾ!

ದಿನದಿಂದ ದಿನಕ್ಕೆ ಈವಾ ಬಹಳ ಬಲಹೀನವಾಗುತ್ತಾ ಬಂದಳು. ಶರೀರದ ಪ್ರಕೃತಿಯೇ ಬದಲಾಗುತ್ತಿದ್ದಿತು. ಮಗಳ ಸ್ಥಿತಿಯನ್ನು ನೋಡಿ ತಂದೆಯು ಬಹಳವಾಗಿ ದುಃಖಿಸಿ ಅನ್ನಪಾನ ನಿದ್ರೆಗಳ ಮೇಲೆ ಅಭಿಲಾಷೆಯನ್ನೇ ತೊರೆದನು.

ಅಧ್ಯಾಯ ೭

ಈವಾ ಸಿಂಕ್ಲೇರಳ ಮರಣ

ಸಿಂಕ್ಲೇರನು ಮಗಳ ಹಾಸಿಗೆಯ ಬಳಿಯಲ್ಲಿಯೇ ಇರುತ್ತಿದ್ದನು. ಒಂದು ದಿನ ಮಗಳು ತಂದೆಯನ್ನು ದುಃಖದಿಂದ ನೋಡಿ—ಅಪ್ಪಾ, ದಿನಗಳೆದಂತೆಲ್ಲಾ ನನ್ನ ಶಕ್ತಿಯು ಕಡಿಮೆಯಾಗುತ್ತಾ ಬರುತ್ತಿದೆ! ನಾನು ನಿನ್ನನ್ನೂ ನನ್ನ ಎಲ್ಲಾ ಪ್ರಿಯರನ್ನೂ ಬಿಟ್ಟುಹೋಗಲೇ ಬೇಕು. ಅಪ್ಪಾ, ನಾನು ಹೇಳಬೇಕಾದ ಕೆಲವು ಸಂಗತಿಗಳು ಮತ್ತು ಮಾಡಬೇಕಾಗಿರುವ

ಕೆಲವು ಕಾರ್ಯಗಳು ಇನ್ನೂ ಇವೆ. ನಾನು ಈ ಸಂಗತಿಗಳನ್ನು ಕುರಿತು ಮಾತಾಡುವುದೆಂದರೆ ನಿಮಗಿಷ್ಟವಿಲ್ಲ. ನೀವು ಇಷ್ಟಪಟ್ಟರೆ ನಾನು ಹೇಳುತ್ತೇನೆ.

ಸಿಂಕ್ಲೇರನು—ನನ್ನ ಮಗಳೇ, ನನಗಿಷ್ಟವಿದೆ, ಹೇಳಮ್ಮಾ !

ಈವಾ—ನಮ್ಮ ಮನೆಯಲ್ಲಿರುವ ಗುಲಾಮರೆಲ್ಲರನ್ನೂ ನಾನು ನೋಡ ಬೇಕು. ದಯಮಾಡಿ ಎಲ್ಲರನ್ನು ಕರೆಸು.

ಗುಲಾಮರೆಲ್ಲರು ಬಂದು ಕಣ್ಣೀರಿಡುತ್ತಾ ಹಾಸಿಗೆಯ ಸುತ್ತಲೂ ನಿಂತುಕೊಂಡರು. ಹೆಂಗಸರಿಗಾದರೋ ತಮ್ಮ ಚಿಕ್ಕ ಯಜಮಾನಿಯ ಮುಖವನ್ನು ನೋಡಿ ಸಹಿಸಲಾರದಷ್ಟು ದುಃಖವಾಗಿ ಕೈಗಳಿಂದ ತಮ್ಮ ಮುಖಗಳನ್ನು ಮುಚ್ಚಿಕೊಂಡು ಅತ್ತರು. ಯಾರ ಮುಖದ ಮೇಲೆಯೂ ಕಳೆಯೇ ಇಲ್ಲ. ಇವರ ದುಃಖವಾದ ಮುಖಗಳಿಂದ ಕೊಠಡಿಯೆಲ್ಲಾ ಮೊಬ್ಬಾಗಿ ಕಾಣಿಸುತ್ತಿದ್ದಿತು. ನಿಟ್ಟುಸಿರುಗಳಿಂದ ಕೊಠಡಿಯು ತುಂಬಿ ಹೋಯಿತು. ಈವಾ ಹಾಸಿಗೆಯ ಮೇಲೆ ಮಲಗಿದ್ದಳು. ಗುಲಾಮರ ಕಡೆಗೆ ತನ್ನ ಮುಖವನ್ನು ತಿರುಗಿಸಿಕೊಂಡು—ನನ್ನ ಪ್ರಿಯ ಸ್ನೇಹಿತರೇ, ಇಲ್ಲಿ ನಿಂತಿರುವ ಪ್ರತಿಯೊಬ್ಬರನ್ನು ನಾನು ಮನಃಪೂರ್ವಕವಾಗಿ ಪ್ರೀತಿಸು ತ್ತೇನೆ. ಇದಕ್ಕಾಗಿಯೇ ನಾನು ನಿಮ್ಮನ್ನು ಕರೆಸಿದೆನು. ನಾನು ಈಗ ನಿಮಗೆ ಹೇಳಬೇಕಾಗಿರುವ ಒಂದು ಸಂಗತಿಯು ಇದೆ. ನೀವು ಅದನ್ನು ಯಾವಾಗಲೂ ನಿಮ್ಮ ನೆನಪಿನಲ್ಲಿಟ್ಟುಕೊಂಡಿರಬೇಕೆಂಬುವುದೇ ನನ್ನ ಅಪೇಕ್ಷೆಯಾಗಿದೆ. ಇನ್ನು ಕೆಲವು ದಿನಗಳಲ್ಲಿ ನಾನು ನಿಮ್ಮೆಲ್ಲರನ್ನು ಬಿಟ್ಟು ಹೋಗುತ್ತೇನೆ. ಇನ್ನೆಂದಿಗಾದರೂ ನೀವು ನನ್ನನ್ನು ನೋಡುವುದಿಲ್ಲ. . . ಈ ಮಾತುಗಳನ್ನು ಕೇಳಿದ ಕೂಡಲೇ ಎಲ್ಲರೂ ಘಟ್ಟಿಯಾಗಿ ಅಳುವುದ ಕ್ಕಾರಂಭಿಸಿದರು. ಈವಾ ಮಾತಾಡುವುದನ್ನು ನಿಲ್ಲಿಸಬೇಕಾಯಿತು. ಸ್ವಲ್ಪ ಹೊತ್ತಿನ ಮೇಲೆ ಎಲ್ಲರೂ ನಿಶ್ಶಬ್ದವಾದದ್ದೇ.

ಈವಾ—ಸ್ನೇಹಿತರೇ, ನೀವು ನನ್ನನ್ನು ಪ್ರೀತಿಸುವುದು ನಿಜವಾಗಿದ್ದರೆ ನಾನು ನಿಮ್ಮೊಂದಿಗೆ ಮಾತಾಡುವಾಗ ಈ ರೀತಿ ಗೋಳಾಡಿ ನನ್ನನ್ನು ಅಭ್ಯಂತರಪಡಿಸಬೇಡಿರಿ. ನಾನು ಈಗ ನಿಮ್ಮ ಅಮೂಲ್ಯವಾದ ಆತ್ಮಗಳ

ವಿಷಯದಲ್ಲಿ ಮಾತಾಡಬೇಕಾಗಿದೆ. ನಿಮ್ಮಲ್ಲಿ ಅನೇಕರು ನಿಮ್ಮ ಆತ್ಮಗಳ ವಿಚಾರದಲ್ಲಿ ಬಹಳ ಅಲಕ್ಷ್ಯಭಾವದಿಂದಿದ್ದೀರಿ. ಈ ಲೋಕದ ಸಮ್ಮಂಧವಾದವುಗಳನ್ನೇ ನೀವು ಯಾವಾಗಲೂ ಚಿಂತಿಸುತ್ತಿರುತ್ತೀರಿ. ಈ ಲೋಕಕ್ಕಿಂತಲೂ ಅಲಂಕಾರವಾಗಿರುವ ಮತ್ತೊಂದು ಲೋಕವಿದೆ. ಯೇಸುಸ್ವಾಮಿಯು ಇರುವುದು ಆ ಲೋಕದಲ್ಲಿಯೇ. ಈಗ ನಾನು ಆ ಲೋಕಕ್ಕೆ ಹೋಗುತ್ತೇನೆ. ನೀವು ಸಹ ಅಲ್ಲಿಗೆ ಬರಬಹುದು. ನೀವು ಅಲ್ಲಿಗೆ ಬರಲು ಇಷ್ಟವಿದ್ದರೆ ಸೋಮಾರಿತನದಿಂದಲೂ ನಿಮ್ಮ ಆತ್ಮಗಳ ವಿಷಯ ಅಲಕ್ಷ್ಯಭಾವದಿಂದಲೂ ಅವಿಚಾರದಿಂದಲೂ ನಿಮ್ಮ ಜೀವಮಾನವನ್ನು ಕಳೆಯಬಾರದು. ನೀವು ನಿಜಭಕ್ತರಾಗಬೇಕು. ನೀವು ನಿಜವಾದ ಭಕ್ತರಾಗಬೇಕೆಂಬ ಅಪೇಕ್ಷೆಯು ನಿಮಗಿದ್ದರೆ ಯೇಸುಸ್ವಾಮಿಯು ನಿಮಗೆ ಸಹಾಯಮಾಡಲು ಸಿದ್ಧನಾಗಿದ್ದಾನೆ. ನೀವು ಆತನನ್ನು ಬೇಡಿಕೊಳ್ಳಬೇಕು. ಆತನ ವಾಕ್ಯವನ್ನು ಓದ . . .

ಮಾತಾಡುವುದನ್ನು ನಿಲ್ಲಿಸಿ ಎಲ್ಲರನ್ನು ದಯಾದ್ರ್ರದೃಷ್ಟಿಯಿಂದ ನೋಡಿ ದುಃಖದಿಂದ—ಅಯ್ಯೋ, ನೀವು ಓದಲಾರಿರಿ ಎಂದು ಹೇಳಿ, ತನ್ನ ಮುಖವನ್ನು ತಲೆದಿಂಬಿನಲ್ಲಿ ಮುಚ್ಚಿಕೊಂಡು ನಿಟ್ಟುಸಿರಿಟ್ಟಳು. ಹಾಸಿಗೆಯು ಸುತ್ತಲೂ ನೆಲದ ಮೇಲೆ ಮೊಣಕಾಲುಗಳನ್ನೂರಿಕೊಂಡಿದ್ದವರೆಲ್ಲರೂ ಗೋಳಾಡುತ್ತಿದ್ದರು. ಕೆಲವು ನಿಮಿಷಗಳ ತರುವಾಯ ತನ್ನ ತಲೆಯನ್ನು ಮೇಲಕ್ಕೆ ಎತ್ತಿ ನೀರುತುಂಬಿರುವ ಕಣ್ಣುಗಳಿಂದ ಅವರನ್ನು ನೋಡಿ ಮುಗುಳುನಗೆಯಿಂದ—ನಿಮಗಾಗಿ ನಾನು ಪ್ರಾರ್ಥಿಸಿದೆನು. ಸ್ವಾಮಿಯ ವಾಕ್ಯವನ್ನು ಓದಲು ನಿಮಗೆ ಬಾರದಿದ್ದಾಗ್ಯೂ ಚಿಂತೆಯಿಲ್ಲ. ಯೇಸುಸ್ವಾಮಿಯು ನಿಮಗೆ ಸಹಾಯಮಾಡುತ್ತಾನೆ. ನಿಮ್ಮಿಂದಾದಷ್ಟು ಒಳ್ಳೇದನ್ನು ಮಾಡಲು ಪ್ರಯತ್ನಿಸಿರಿ. ಪ್ರತಿದಿನವೂ ಆತನನ್ನು ಬೇಡಿಕೊಳ್ಳಿರಿ. ಆತನು ನಿಮಗೆ ಸಹಾಯಮಾಡುತ್ತಾನೆ. ಅನುಕೂಲವಾಗಿದ್ದಾಗ ಯಾರಿಂದಲಾದರೂ ಸತ್ಯವೇದವನ್ನು ಓದಿಸಿ ತಿಳಿದುಕೊಳ್ಳಿರಿ, ಮರೆಯಬೇಡಿರಿ. ನಿಮ್ಮೆಲ್ಲರನ್ನು ನಾನು ಪರಲೋಕದಲ್ಲಿ ನೋಡುತ್ತೇನೆಂದು ನಂಬುತ್ತೇನೆ ಎಂದು ಹೇಳುತ್ತಿರುವಾಗ ಈವಾ ತನ್ನ ಸ್ವಂತ ತಾಯಿಯಂತೆ

ಕಾಣುತ್ತಿದ್ದ ಆಕೆಯ ವೃದ್ಧಳಾದ ಸೇವಕಳೂ ಟಾಮ್ಮಾವನೂ ತಥಾಸ್ತು (ಇಷ್ಟದಂತೆಯೇ ಆಗಲಿ) ಅಂದರು. ಉಳಿದ ಗುಲಾಮರೆಲ್ಲರು ಮೊಣಕಾಲುಗಳನ್ನೂರಿ ತಲೆಬೊಗ್ಗಿಸಿಕೊಂಡು ನಿಟ್ಟುಸಿರಿಡುತ್ತಿದ್ದರು. ಈವಾ ತಿರುಗಿ ಮಾತಾಡುವುದಕ್ಕೆ ಪ್ರಾರಂಭಿಸಿ—ನೀವೆಲ್ಲರೂ ನನ್ನನ್ನು ಪ್ರೀತಿಸುತ್ತೀರೆಂದು ನನಗೆ ತಿಳಿದಿದೆ ಅಂದಳು.

ಎಲ್ಲರು—ಚಿಕ್ಕ ಯಜಮಾನಿಯೇ, ನಿಜವಾಗಿ ನಿನ್ನನ್ನು ಪ್ರೀತಿಸುತ್ತೇವೆ. ದೇವರು ನಿನ್ನನ್ನು ಆಶೀರ್ವದಿಸಲಿ.

ಈವಾ—ಹೌದು, ನನಗೆ ಅದು ಗೊತ್ತಿದೆ. ನೀವೆಲ್ಲರೂ ನನ್ನ ವಿಷಯದಲ್ಲಿ ಯಾವಾಗಲೂ ದಯವುಳ್ಳವರಾಗಿಯೇ ಇದ್ದಿರಿ. ನನ್ನ ಜ್ಞಾಪಕಾರ್ಥವಾಗಿ ನಿಮ್ಮೆಲ್ಲರಿಗೂ ನಾನು ಏನಾದರೊಂದು ಗುರ್ತನ್ನು ಕೊಡಬೇಕೆಂಬ ಅಪೇಕ್ಷೆಯು ಇದೆ. ಏನು ಕೊಡಲಿ? ಪ್ರತಿಯೊಬ್ಬರಿಗೂ ನನ್ನ ತಲೆಯಲ್ಲಿರುವ ಎರಡೆರಡು ಉಂಗುರಗೂದಲನ್ನು ಕೊಡುತ್ತೇನೆ. ನೀವು ಅದನ್ನು ನೋಡುವಾಗಲೆಲ್ಲಾ ನಾನು ನಿಮ್ಮನ್ನು ಪ್ರೀತಿಮಾಡಿದೆನೆಂತಲೂ ನಾನು ಪರಲೋಕಕ್ಕೆ ಹೋಗಿ ದೇವರ ಬಳಿಯಲ್ಲಿರುತ್ತೇನೆಂತಲೂ ನಿಮ್ಮೆಲ್ಲರಿಗಾಗಿ ನಾನು ಆಶೆಯಿಂದ ಕಾದಿರುತ್ತೇನೆಂತಲೂ ನೆನಪುಮಾಡಿಕೊಳ್ಳಿರಿ ಅಂದಳು.

ಗುಲಾಮರು ತಮ್ಮ ಚಿಕ್ಕ ಯಜಮಾನಿಯ ಹಾಸಿಗೆಯ ಸುತ್ತಲೂ ನಿಂತುಕೊಂಡು ಆಕೆಯ ಪುಟ್ಟಕೈಯಿಂದ ತನ್ನ ಗುರುತಿಗಾಗಿ ಕೊಡುತ್ತಿರುವ ಆ ಎರಡೆರಡು ಉಂಗುರಕೂದಲನ್ನು ತೆಗೆದುಕೊಳ್ಳುವಾಗ ಅವರಿಗುಂಟಾದ ಸಂಕಟ ಮತ್ತು ದುಃಖವನ್ನು ವರ್ಣಿಸಲು ಸಾಧ್ಯವಲ್ಲ. ತಮ್ಮ ಮೊಣಕಾಲುಗಳನ್ನೂರಿದರು, ನಿಟ್ಟುಸಿರುಬಿಟ್ಟರು, ಪ್ರಾರ್ಥಿಸಿದರು. ಚಿಕ್ಕ ಯಜಮಾನಿಯು ಉಟ್ಟಿದ್ದ ಬಟ್ಟೆಗಳಿಗೆ ಮುದ್ದಿಟ್ಟುಕೊಂಡರು.

ಈವಾ ಅತ್ತೆಯು ಸಹ ಅಲ್ಲಿಯೇ ಇದ್ದಳು. ಪ್ರತಿಯೊಬ್ಬರು ಕೂದಲನ್ನು ತೆಗೆದುಕೊಂಡ ಕೂಡಲೇ ಒಬ್ಬೊಬ್ಬರಾಗಿ ಶಬ್ದಮಾಡದೆ ಹೊರಗೆ ಹೋಗುವಂತೆ ಕೈಸೌಂಜ್ಞೆಮಾಡಿದಳು. ಎಲ್ಲರು ಹೊರಟುಹೋದರು. ಟಾಮ್ಮಾವನೂ ತನ್ನನ್ನು ಸಾಕಿದ ವೃದ್ಧ ಸೇವಕಳೂ ಮಾತ್ರ ಉಳಿದರು.

ಈವಾ—ತೆಗೆದುಕೋ, ಅಲಂಕಾರವಾದ ನನ್ನ ಉಂಗುರಗೂದಲನ್ನು

ನಿನಗೆ ಬಹಳ ಕೊಡುತ್ತೇನೆ. ಟಾಮ್ಮಾವಾ, ನಿನ್ನನ್ನು ಪರಲೋಕದಲ್ಲಿ ನೋಡುವುದನ್ನು ನೆನಸಿಕೊಂಡರೆ ನನಗುಂಟಾಗುವ ಸಂತೋಷ ಎಷ್ಟೆಂಬ ದಾಗಿ ಹೇಳಲು ನನಗೆ ಶಕ್ತಿಯಿಲ್ಲ. ಅಲ್ಲಿ ನಿನ್ನನ್ನು ಖಂಡಿತವಾಗಿ ನೋಡು ತ್ತೇನೆಂಬ ಭರವಸವು ನನಗೆ ಪೂರ್ಣವಾಗಿದೆ. ಸೇವಕಳನ್ನು ತನ್ನ ಎರಡು ಕೈಗಳಲ್ಲಿಯೂ ಅಪ್ಪಿಕೊಂಡು—ಅಮ್ಮಾ, ನನ್ನ ಪ್ರಿಯ ಅಮ್ಮಾ, ನನ್ನನ್ನು ದಯದಿಂದಲೂ ಪ್ರೀತಿಯಿಂದಲೂ ಸಾಕಿದ ನನ್ನ ಮುದ್ದು ಅಮ್ಮನೇ, ನೀನು ಸಹ ಪರಲೋಕಕ್ಕೆ ಬರುತ್ತೀಯಲ್ಲವೇ? ಹೌದು, ನೀನು ಬರುತ್ತೀ ಯೆಂದು ನನಗೆ ಚೆನ್ನಾಗಿ ಗೊತ್ತಿದೆ ಅಂದಳು.

ಸೇವಕಳು—ನನ್ನ ಯಜಮಾನಿಯೇ, ನನ್ನ ಮುದ್ದು ಯಜಮಾನಿಯೇ, ನೀನಿಲ್ಲದೆ ನಾನು ಹೇಗೆ ಜೀವಿಸಲಿ? ಅಯ್ಯೋ, ನನ್ನ ಮುದ್ದಿನ ಮೊತ್ತವೇ! ನಿನ್ನನ್ನು ಹೇಗೆ ಮರೆಯಲಿ? ಹೇಗೆ ಬಿಡಲಿ? ಎಂದು ಘಟ್ಟಿಯಾಗಿ ಅಳು ವುದಕ್ಕೆ ಪ್ರಾರಂಭಿಸಿದ ಕೂಡಲೇ ಈವಾ ಅತ್ತೆಯು ಆಕೆಯನ್ನು ಸಮಾ ಧಾನಮಾಡುತ್ತಾ ಹೊರಗೆ ಕರೆದುಕೊಂಡುಹೋದಳು.

ಟಾಮ್ಮಾವನು ತನ್ನ ಚಿಕ್ಕ ಯಜಮಾನಿಯನ್ನು ಉಪಚರಿಸುವುದ ಕ್ಕಾಗಿ ಆಕೆಯ ಹಾಸಿಗೆಯ ಸಮೀಪದಲ್ಲಿಯೇ ಇರುತ್ತಿದ್ದನು. ಆಕೆಗೆ ಸಂತೋಷವೂ ಆದರಣೆಯೂ ಆಗುವಂತೆ ಹಾಡುತ್ತಿದ್ದನು. ಆಕೆಗೆ ಅವಿ ಶ್ರಾಂತಿ ಉಂಟಾದಾಗ ಎತ್ತಿಕೊಂಡು ತಿರುಗಾಡುತ್ತಿದ್ದನು. ಈವಾ ತನ್ನ ಅಂತರಂಗವನ್ನೆಲ್ಲಾ ಟಾಮ್ಮಾವನಿಗೆ ಬಿಚ್ಚಿ ಹೇಳುತ್ತಿದ್ದಳು. ಆಗಾಗ್ಗೆ ಆಕೆಯು—ಟಾಮ್ಮಾವಾ, ನಾನು ಈ ಬಲಹೀನತೆಯನ್ನು ತಾಳಿಕೊಳ್ಳಲು ಶಕ್ತಿ ಸಾಲದು. ನಾನು ಈಗಲೋ ಇನ್ನೊಂದು ಗಳಿಗೆಗೋ ಸಾಯು ತ್ತೇನೆಂದು ಹೇಳುತ್ತಿದ್ದಳು. ತಂದೆಯು ಬಹಳ ದುಃಖಪಡುತ್ತಾನೆಂದು ಆತನಿಗೆ ಯಾವುದನ್ನೂ ಹೇಳುತ್ತಲೇ ಇರಲಿಲ್ಲ.

ಟಾಮನು ತನ್ನ ಹಾಸಿಗೆಯ ಮೇಲೆ ಮಲಗುತ್ತಲೇ ಇರಲಿಲ್ಲ. ತನ್ನ ಚಿಕ್ಕ ಯಜಮಾನಿಯನ್ನು ಕರೆದುಕೊಂಡುಹೋಗಲು ದೇವರ ಕಡೆಯಿಂದ ದೂತನು ಬಂದ ಸಮಯದಲ್ಲಿ ಆಕೆಗೆ ಸಹಾಯಮಾಡುವುದಕ್ಕಾಗಿ ಕೊಠ ಡಿಯ ಬಾಗಿಲಿನಲ್ಲಿ ನೆಲದ ಮೇಲೆ ಮಲಗುತ್ತಿದ್ದನು. ಮಧ್ಯರಾತ್ರಿ, ಎಲ್ಲಿ

ಲ್ಲಿಯೂ ಕತ್ತಲು, ನಿಶ್ಶಬ್ದ. ಇಂತಹ ಸಮಯದಲ್ಲಿ ದೇವರು ತನ್ನ ದೂತನನ್ನು ಕಳುಹಿಸಿ ಈವಾ ಕ್ಲೇರಳನ್ನು ತನ್ನ ಬಳಿಗೆ ಕರೆಸಿಕೊಂಡನು. ಆ ಸಮಯದಲ್ಲಿ ಟಾಮನು ಆಕೆಯ ಸಮೀಪದಲ್ಲಿದ್ದುಕೊಂಡು ತನ್ನಿಂದಾದಷ್ಟು ಸಹಾಯಮಾಡಿ ಆದರಿಸಿದನು. ಈವಾ ತಂದೆಯು ಮಗಳ ಮರಣದ ಸಮಯದಲ್ಲಿ ಪಕ್ಕದಲ್ಲಿಯೇ ಇದ್ದಾಗ್ಯೂ ಮಗಳಿಗೆ ಸಹಾಯಮಾಡಲಾಗದೆ ದೇವರ ವಿಷಯದಲ್ಲಿ ಒಳ್ಳೇ ಅನುಭವಸ್ಥನೂ ತನ್ನ ಮಗಳನ್ನು ಬಹಳ ಪ್ರೀತಿಸುತ್ತಿದ್ದವನೂ ಆದ ಕಪ್ಪುಗುಲಾಮನಾದ ಟಾಮನಿಗೇ ಆ ಕೆಲಸವನ್ನು ಬಿಟ್ಟುಕೊಟ್ಟನು. ಈವಾ ಕರ್ತನಲ್ಲಿ ನಿದ್ರಿಸಿದಳು.

ಅಧ್ಯಾಯ ೮

ಧಣಿಯ ಮರಣ—ಟಾಮನ ನಿರಾಶೆ

ಈ ಲೋಕದಲ್ಲಿ ಎಂತಹ ಭಕ್ತರಾದಾಗ್ಯೂ ಎಂತಹ ಬಲಶಾಲಿಗಳಾದಾಗ್ಯೂ ದುಃಖಕ್ಕೆ ಸೋಲದವರೇ ಇಲ್ಲವು. ಗಿಣಿಯು ಇಲ್ಲದ ಗೂಡಿನಂತಿದ್ದ ಪ್ರಿಯ ಮಗಳ ಮೃತದೇಹವು ಹಾಸಿಗೆಯ ಮೇಲೆ ಬಿದ್ದಿದ್ದಿತು. ತಂದೆಯಾದ ಸಿಂಕ್ಲೇರನಿಗೆ ಜೀವವಿಲ್ಲದ ಮಗಳ ದೇಹವನ್ನು ನೋಡಿದ ಹಾಗೆಲ್ಲಾ ದುಃಖವೆಂಬ ಬೆಂಕಿಯ ಜ್ವಾಲೆಗಳು ಹೃದಯದಲ್ಲಿ ಧಗಧಗನೆ ಉರಿಯಲು ಪ್ರಾರಂಭಿಸಿತು. ತಡೆಯಲಾರದ ಸಂಕಟವು. ಈ ಲೋಕದಲ್ಲಿ ತನ್ನ ಸಂತೋಷಕ್ಕೆ ಯಾವುದು ಆಧಾರಭೂತವಾಗಿದ್ದಿತೋ ಅಂತಹ ಮಗಳೆಂಬ ಅಮೂಲ್ಯ ರತ್ನವನ್ನು ಕಳೆದುಕೊಂಡನು. ಇನ್ನು ಮಾಡುವುದೇನು? ಟಾಮನು ಮೃತದೇಹದ ಪಕ್ಕದಲ್ಲಿಯೇ ನಿಂತಿದ್ದನು. ತನ್ನ ಚಿಕ್ಕ ಯಜಮಾನಿಯ ಸ್ವರ್ಗ ಕಳೆಯಿಂದ ಹೊಳೆಯುತ್ತಿದ್ದ ಮುಖವನ್ನು ಎವೆಹಾಕದೆ ನೋಡುತ್ತಿದ್ದನು. ಎತ್ತರವಾದ ನಿಲುವೂ ವಿಸ್ತಾರವಾದ ಎದೆಯೂ ಪುಷ್ಟಿಯುಳ್ಳ ಶರೀರವೂ ಉಳ್ಳವನಾಗಿದ್ದಾಗ್ಯೂ ದುಃಖವನ್ನು ಸಹಿಸಲಾಗಲಿಲ್ಲ. ಸಿಂಕ್ಲೇರನ ದೃಷ್ಟಿಯು ಟಾಮನ ಮೇಲೆ ಬಿದ್ದಿತು. ಟಾಮ್, . . . ನಾನು ಯಾವ ಮಗಳಿಗಾಗಿ ಈ ಲೋಕದಲ್ಲಿ ಬದುಕಿದ್ದೆನೋ

ಅಂತಹ ನನ್ನ ಮುದ್ದು ಮಗಳನ್ನೇ ಕಳೆದುಕೊಂಡ ಮೇಲೆ ಇನ್ನು ನಾನು ಲೋಕದಲ್ಲಿ ಜೀವಿಸಿ ಮಾಡುವುದೇನಿದೆ? ನಾನು ಈ ದುಃಖವನ್ನು ಸಹಿಸಲಾರೆನು. ಈ ದುಃಖಾಗ್ನಿಯು ನನ್ನನ್ನು ಸುಡುತ್ತಲಿದೆ. ನಾನು ಬದುಕಲಾರೆನು. ಟಾಮ್, . . . ನಾನು ಬದುಕಲಾರೆನು ಎಂದು ಸಣ್ಣ ಮಗುವಿನಂತೆ ಘಟ್ಟಿಯಾಗಿ ಅತ್ತುಕೊಂಡನು. ಕಪ್ಪುಗುಲಾಮನಾದ ಟಾಮನು ತನ್ನ ಧಣಿಯ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು, ಕಪ್ಪಾದ ಕೆನ್ನೆಗಳ ಮೇಲೆ ಹರಿಯುತ್ತಿದ್ದ ಕಣ್ಣೀರನ್ನು ಒರಸಿಕೊಳ್ಳುತ್ತಾ ತನ್ನ ಯಜಮಾನನನ್ನು ಆದರಿಸಿದನು, ಧೈರ್ಯ ಹೇಳಿದನು.

ಮಗಳ ಶವಸಂಸ್ಕಾರವಾದ ತರುವಾಯ, ಸಿಂಕ್ಲೇರನು ಮಗಳಿಗೆ ಮಾಡಿದ್ದ ವಾಗ್ದಾನದಂತೆ ಟಾಮನನ್ನು ಬಿಡುಗಡೆ ಮಾಡುವ ಪ್ರಯತ್ನಕ್ಕೆ ಪ್ರಾರಂಭಿಸಿದನು. ಮಗಳ ಮರಣದ ತರುವಾಯ ಸಿಂಕ್ಲೇರನು ಟಾಮನನ್ನು ಯಾವಾಗಲೂ ತನ್ನ ಸಮೀಪದಲ್ಲಿಯೇ ಇರಿಸಿಕೊಂಡನು. ತನ್ನ ಮಗಳಾದ ಈವಾ ಟಾಮನ ಮೇಲೆ ಪಂಚಪ್ರಾಣವನ್ನಿಟ್ಟುಕೊಂಡಿದ್ದಳಲ್ಲಾ ಎಂಬ ನೆನಪಿನಿಂದ ತನ್ನ ದುಃಖವನ್ನು ಟಾಮನೊಂದಿಗೆ ಹೇಳಿಕೊಳ್ಳುತ್ತಿದ್ದನೇ ಹೊರತು ಮತ್ಯಾರೊಂದಿಗೂ ಮಾತಾಡುತ್ತಲೇ ಇರಲಿಲ್ಲ. ಟಾಮನ ಬಿಡುಗಡೆಗಾಗಿ ಸರ್ಕಾರದವರಲ್ಲಿ ಕಾಗದ ಪತ್ರಗಳನ್ನು ನಡೆಸಲು ಪ್ರಾರಂಭಿಸಿದ ಮೇಲೆ ಒಂದು ದಿನ ಸಿಂಕ್ಲೇರನು—ಟಾಮ್, ನಾನು ನಿನ್ನ ಬಿಡುಗಡೆಯ ಪತ್ರಕ್ಕಾಗಿ ಸರ್ಕಾರಕ್ಕೆ ಬರೆದಿದ್ದೇನೆ. ಕೆಂಟಕಿಯಲ್ಲಿರುವ ನಿನ್ನ ಹೆಂಡತೀ ಮಕ್ಕಳ ಬಳಿಗೆ ಹೋಗುವುದಕ್ಕಾಗಿ ನಿನ್ನ ಸಾಮಾನುಗಳನ್ನೆಲ್ಲಾ ಕಟ್ಟಿಕೊಂಡು ಸಿದ್ಧವಾಗಿರು. ಇನ್ನು ಒಂದೆರಡು ದಿನಗಳಲ್ಲಿ ನಿನ್ನ ಬಿಡುಗಡೇ ಪತ್ರವು ಬರಬಹುದೆಂದನು.

ಯಜಮಾನನ ಬಾಯಿಂದ ಈ ಮಾತು ಹೊರಟಾಕ್ಷಣವೇ ಟಾಮನ ಮುಖದಲ್ಲಿ ಸಂತೋಷವು ಪ್ರಜ್ವಲಿತವಾಗಿ, "ದೇವರೇ, ನಿನಗೆ ಸ್ತೋತ್ರವಾಗಲಿ" ಎಂದು ಯಜಮಾನನಿಗೆ ಕೇಳಿಸುವಂತೆ ಹೇಳಿದನು. ತನ್ನನ್ನು ಬಿಟ್ಟುಹೋಗಲು ಟಾಮನು ಇಷ್ಟು ಸಂತೋಷವುಳ್ಳವನಾಗಿದ್ದಾನಲ್ಲಾ ಎಂದು ಯಜಮಾನನಿಗೆ ಬಹಳ ವ್ಯಸನವಾಗಿ—ಟಾಮ್, ನಾನು ನಿನಗೆ

ಯಾವುದಕ್ಕೆ ಕೊರತೆ ಮಾಡಿದೆನು? ನನ್ನ ಬಳಿಯಲ್ಲಿ ಸುಖವಾಗಿಯೂ ಸಂತೋಷವಾಗಿಯೂ ಇದ್ದಿಯಲ್ಲಾ? ನನ್ನನ್ನು ಬಿಟ್ಟುಹೋಗುವುದೆಂದರೆ ನಿನಗೆ ಇಷ್ಟು ಸಂತೋಷವೇ?

ಟಾಮನು—ಧಣಿಯೇ, ನೀವು ನನಗೆ ಯಾವುದಕ್ಕೂ ಕೊರತೆ ಮಾಡಲಿಲ್ಲ. ನಾನು ನಿಮ್ಮನ್ನು ಬಿಟ್ಟುಹೋಗುವುದಕ್ಕಾಗಿ ಸಂತೋಷಿಸಲಿಲ್ಲ. ನಾನು ಬಿಡುಗಡೆಯಾದೆನಲ್ಲಾ ಎಂಬ ಸಂತೋಷದಿಂದ, "ದೇವರೇ, ನಿನಗೆ ಸ್ತೋತ್ರವಾಗಲಿ" ಎಂದು ಹೇಳಿದೆನೇ ಹೊರತು ಮತ್ತೊಂದಭಿಪ್ರಾಯದಿಂದಲ್ಲ. ದಯಮಾಡಿ ಕ್ಷಮಿಸಿರಿ ಎಂದನು.

ಒಂದು ದಿನ ಸಾಯಂಕಾಲ. ಯಜಮಾನನ ಮನೆಯೊಳಗೂ ವಠಾರದಲ್ಲಿಯೂ ದೀಪಗಳು ಉರಿಯುತ್ತಿದ್ದವು. ಯಜಮಾನನು ಕಾರ್ಯಾರ್ಥವಾಗಿ ಪೇಟೆಗೆ (ಬಾಜಾರಕ್ಕೆ) ಹೋಗಿದ್ದನು. ಟಾಮನೊಬ್ಬನೇ ಪಡಸಾಲೆಯಲ್ಲಿ ಕೂತುಕೊಂಡು, ತಾನು ಬಿಡುಗಡೆಯಾಗುವುದನ್ನೂ ತನ್ನ ಹೆಂಡತೀ ಮಕ್ಕಳನ್ನು ನೋಡುವುದನ್ನೂ ಕುರಿತು ಯೋಚಿಸುತ್ತಾ, ತಾನು ಹೇಗೆ ಬಿಡುಗಡೆಹೊಂದಿದನೋ ಅದರಂತೆ ತನ್ನ ಹೆಂಡತೀ ಮಕ್ಕಳನ್ನು ಸಹ ಬಿಡುಗಡೆಮಾಡುವಂತೆ ಕಷ್ಟಪಟ್ಟು ಕೆಲಸಮಾಡಲು ಶಕ್ತಿಯಿದೆಯೋ ಇಲ್ಲವೋ ಎಂದು ತನ್ನ ತೋಳುಗಳಲ್ಲಿಯೂ ವಿಶಾಲ ಖಂಡಗಳಲ್ಲಿಯೂ ಉಬ್ಬಿರುವ ಬಲಸೂಚಕವಾದ ನರಗಳನ್ನು ನೋಡಿಕೊಂಡು ಹಿಗ್ಗುತ್ತಿದ್ದನು. ಈ ನಾನಾ ಯೋಚನೆಗಳಿಂದ ಕಣ್ಣುಗಳು ಭಾರವಾಗಿ ನಿದ್ರೆಮಾಡಿಬಿಟ್ಟನು.

ಇವನು ಮಲಗಿದ ಸ್ವಲ್ಪ ಹೊತ್ತಿನೊಳಗಾಗಿ ವಠಾರದ ಹೊರ ಬಾಗಿಲು ತಟ್ಟುವ ಶಬ್ದವನ್ನೂ ಜನಗಳ ಗದ್ದಲವನ್ನೂ ಕೇಳಿ, ಕಣ್ಣನ್ನು ಹಸಕಿಕೊಂಡು ಎದ್ದು ಬಾಗಿಲು ತೆರೆದನು. ಅಂಗಿಯಿಂದ ಹೊದಿಸಿದ್ದ ಒಬ್ಬನನ್ನು ಡೋಲಿಯಲ್ಲಿ ಹೊತ್ತುಕೊಂಡು ಜನರು ಗುಂಪು ಗುಂಪಾಗಿ ಒಳಕ್ಕೆ ನುಗ್ಗಿದರು. ದೀಪದ ಬೆಳಕು ಡೋಲಿಯಲ್ಲಿ ಮಲಗಿದ್ದವನ ಮುಖದ ಮೇಲೆ ಬಿದ್ದಿತು. ಟಾಮನು ದುಃಖದಿಂದಲೂ ಆಶ್ಚರ್ಯದಿಂದಲೂ ಘಟ್ಟಿಯಾಗಿ ಕೂಗಿಕೊಂಡನು. ಕೂಗಿಕೊಳ್ಳಲು ಕಾರಣವಾದರೋ, ಇವನ ಯಜಮಾನ

ನಾದ ಸಿಂಕ್ಲೇರನು ಒಂದು ಅಕಸ್ಮಿಕದಲ್ಲಿ ಬಹಳ ಘಾಯಪಟ್ಟಿದ್ದನು. ಘಾಯಪಟ್ಟ ಯಜಮಾನನನ್ನು ಮೆಲ್ಲಗೆ ಮಂಚದ ಮೇಲೆ ಮಲಗಿಸಿದರು, ಸ್ವಲ್ಪವಾದರೂ ಅರಿವೇ ಇಲ್ಲ. ಶರೀರವೆಲ್ಲಾ ರಕ್ತಮಯವಾಗಿದ್ದಿತು. ಗುರ್ತಿಸಲು ಆಗುತ್ತಿರಲಿಲ್ಲ. ಕೂಡಲೇ ವೈದ್ಯನನ್ನು ಕರೇಕಳುಹಿಸಿ ಚಿಕಿತ್ಸೆ ಮಾಡಿಸಲಾಯಿತು. ಸಿಂಕ್ಲೇರನಿಗೆ ಹೆಚ್ಚು ಮಾತಾಡಲು ಶಕ್ತಿಯಿರಲಿಲ್ಲ. ಮುಚ್ಚಿದ್ದ ಕಣ್ಣು ತೆರೆಯಲಿಲ್ಲ. ಬಹಳ ಹೊತ್ತು ಬದುಕುವುದು ಅಸಾಧ್ಯವೆಂದೇ ತೋರಿತು. ಟಾಮನು ಯಜಮಾನನ ಹಾಸಿಗೆಯ ಸಮೀಪದಲ್ಲಿ ಮೊಣಕಾಲೂರಿದ್ದನು. ಯಜಮಾನನು ಟಾಮನ ಮೇಲೆ ಕೈಹಾಕಿ, ಟಾಮ್ ಎಂದು ಕರೆದನು.

ಟಾಮನು (ಆತುರದಿಂದ)—ಧಣಿಯೇ, ಏನು ಬೇಕು ಅಂದನು. ಸಿಂಕ್ಲೇರನು ಟಾಮನ ಕೈಯನ್ನು ಘಟ್ಟಿಯಾಗಿ ಹಿಡಿದುಕೊಂಡು—ಟಾಮ್, ನಾನು ಬದುಕುವುದಿಲ್ಲ, ನನ್ನ ಪ್ರಾಣವು ಹೋಗುತ್ತಿದೆ, ನನಗಾಗಿ ಪ್ರಾರ್ಥಿಸು ಅಂದನು.

ವೈದ್ಯನು—ಒಬ್ಬ ಗುರುವನ್ನು ಕರೆಸಲು ನಿನಗಿಷ್ಟವಾದರೆ . . .

ಸಿಂಕ್ಲೇರನು—ತಕ್ಷಣವೇ ಬೇಡವೆಂದು ತಲೆಯಾಡಿಸಿ, ವಿನಯದಿಂದ—ಟಾ . . . ಮ್, . . . ನೀನು ಪ್ರಾರ್ಥಿಸು ಅಂದನು. ಯಜಮಾನನು ತನ್ನ ಗುಲಾಮನ ಕೈಯನ್ನು ಹಿಡಿದುಕೊಂಡನು. ಗುಲಾಮನು ತನ್ನ ಯಜಮಾನರಿಗಾಗಿ ಪ್ರಾರ್ಥಿಸುತ್ತಾ ಇರುವಾಗಲೇ ಯಜಮಾನನು ತನ್ನ ಕಡೇ ಶ್ವಾಸವನ್ನು ಬಿಟ್ಟು ತನ್ನ ಪ್ರಿಯ ಮಗಳನ್ನು ಹಿಂಬಾಲಿಸಿದನು.

ಸಿಂಕ್ಲೇರನ ಮರಣದಿಂದ ಗುಲಾಮರೆಲ್ಲರಿಗೂ ಎಷ್ಟು ದುಃಖವಾಗಿರಬೇಕೆಂದು ಹೇಳುವುದು ಅನಾವಶ್ಯಕವು. ಈತನು ಬಹಳ ಒಳ್ಳೆಯವನು. ಗುಲಾಮರೆಲ್ಲರನ್ನು ತಂದೆಯಂತೆ ಪ್ರೀತಿಸಿ ಬಹಳ ದಯವಾಗಿ ನೋಡಿಕೊಳ್ಳುತ್ತಿದ್ದನು. ಸಿಂಕ್ಲೇರನ ಹೆಂಡತಿಯು ಬಹಳ ಕಠಿಣಸ್ಥಳು, ಕೋಪಿಷ್ಠಳು, ಗುಲಾಮರ ವಿಷಯದಲ್ಲಿ ಸ್ವಲ್ಪವಾದರೂ ಕನಿಕರವಿರುತ್ತಿರಲಿಲ್ಲ. ಈಕೆಯು ಗುಲಾಮರಲ್ಲಿ ಅನೇಕರನ್ನು ಮಾರಿಬಿಡುತ್ತಾಳೆಂದು ತಿಳಿದುಕೊಂಡರು.

ಕಡೆಗೆ ಇವರು ನೆನಸಿದ್ದಂತೆಯೇ ಆಯಿತು. ಸ್ವಲ್ಪ ತಪ್ಪಿಗೆಲ್ಲಾ ಶಿಟ್ಟಾಗಿ, ಸಣ್ಣವರು ದೊಡ್ಡವರೆನ್ನದೆ ಬಹು ಕ್ರೂರವಾಗಿ ಹೊಡಿಸುತ್ತಿದ್ದಳು. ಕಡೆಯಲ್ಲಿ ಮನೆಯಲ್ಲಿರುವ ಗುಲಾಮರೆಲ್ಲರನ್ನು ಮಾರಿಬಿಟ್ಟು ತನ್ನ ತೌರುಮನೆಯನ್ನು ಸೇರಿಕೊಳ್ಳಲು ನಿಶ್ಚಯಿಸಿದಳು.

ಬಿಡುಗಡೆಯಾಗಿ ತನ್ನ ಪ್ರಿಯ ಹೆಂಡತೀ ಮಕ್ಕಳನ್ನು ನೋಡುತ್ತೇನಲ್ಲಾ ಎಂದು ಸಂತೋಷದಿಂದ ಹಿಗ್ಗುತ್ತಿದ್ದ ಟಾಮನು ನಿರಾಶೆಯಾದನು. ಅವನ ಎದೆಯೇ ಒಡೆದುಹೋದಂತಾಯಿತು. ಹೆಂಡತೀ ಮಕ್ಕಳನ್ನು ನೋಡುವ ನಿರೀಕ್ಷೆಯೇ ತಪ್ಪಿಹೋಯಿತು. ಎಲ್ಲರಂತೆಯೇ ತನ್ನನ್ನು ಸಹ ಒಬ್ಬ ಕಠಿಣಸ್ಥನಾದ ಯಜಮಾನನಿಗೆ ಮಾರಿಬಿಡುವರಲ್ಲಾ ಎಂಬ ನೆನಪಿನಿಂದ ಭಯಕಂಪಿತನಾಗಿ ಅಳತೊಡಗಿದನು. ತನ್ನ ಮುಂದಿನ ಸ್ಥಿತಿಗತಿಗಳನ್ನು ಯೋಚಿಸಿದಂತೆಲ್ಲಾ ದುಃಖವು ಉಕ್ಕಿಬಂದಾಗ್ಯೂ, ಧೈರ್ಯದಿಂದ ಕಣ್ಣೀರನ್ನು ನಿಲ್ಲಿಸಿ ಪ್ರಾರ್ಥಿಸುತ್ತಿದ್ದನು. ದೇವರೇ ! ನನ್ನ ಸ್ವಾಮಿಯೇ ! ನಿನ್ನ ಚಿತ್ತ (ಇಷ್ಟ)ವಿದ್ದಂತೆಯೇ ಆಗಲಿ ಎಂದು ಪದೇಪದೇ ಹೇಳುತ್ತಿದ್ದನು.

ಅಧ್ಯಾಯ ೯

ನಿರ್ದಯನಾದ ಧಣಿಯು

ಪ್ರೀತಿಯುಳ್ಳ ಯಜಮಾನನ ಮರಣದಿಂದುಂಟಾದ ದುಃಖವು ಶಮನವಾಗುವುದಕ್ಕೆ ಮುಂಚಿತವಾಗಿಯೇ ಸಿಂಕ್ಲೇರನ ಹೆಂಡತಿಯು ಮನೆಯಲ್ಲಿದ್ದ ಗುಲಾಮರೆಲ್ಲರನ್ನೂ ಹರಾಜುಹಾಕಲು ಸಂತೆಗೆ ಕಳುಹಿಸಿದಳು. ಟಾಮನನ್ನು ಸಹ ಕಳುಹಿಸಿದಳು. ಆ ಸ್ಥಳದಲ್ಲಿ ಗುಲಾಮ ವ್ಯಾಪಾರಿಗಳು ಅನೇಕರಿದ್ದರು. ಕೆಲಸಮಾಡುವುದರಲ್ಲಿ ಘಟ್ಟಿಗರಾದ ಗುಲಾಮರನ್ನು ಸುಲಭವಾದ ಬೆಲೆಗೆ ಕೊಂಡುಕೊಳ್ಳಲು ಇವರೆಲ್ಲರು ಒಳ್ಳೇ ಸಂದರ್ಭಕ್ಕಾಗಿ ನಿರೀಕ್ಷಿಸುತ್ತಿದ್ದರು. ಕಟುಗರು ಕುರಿಗಳನ್ನೂ ದನಗಳನ್ನೂ ಕೊಂಡುಕೊಳ್ಳುವುದಕ್ಕೆ ಮುಂಚೆ ಯಾವ ರೀತಿಯಿಂದ ಅವುಗಳನ್ನು ಪರೀಕ್ಷಿಸು

ತ್ತಾರೋ ಅದರಂತೆ ಈ ವ್ಯಾಪಾರಿಗಳು ಪ್ರತಿಯೊಬ್ಬ ಗುಲಾಮನನ್ನೂ ಗುಲಾಮಳನ್ನೂ ಪರೀಕ್ಷಿಸುತ್ತಿದ್ದರು. ಟಾಮನಾದರೋ ಒಂದು ಕಡೆ ನಿಂತು ಇಷ್ಟು ಮಂದಿ ವ್ಯಾಪಾರಿಗಳಲ್ಲಿ ಯಾರು ತನ್ನ ಯಜಮಾನನಾದರೆ ಚೆನ್ನಾಗಿರುತ್ತದೆಂದು ಅವರವರ ಮುಖಭಾವಗಳನ್ನು ನೋಡಿ ತಿಳಿದು ಕೊಳ್ಳುವುದಕ್ಕಾಗಿ ಪ್ರಯತ್ನಿಸುತ್ತಿದ್ದನು. ಮಾರಾಟವು ಪ್ರಾರಂಭವಾಗು ವುದಕ್ಕೆ ಸ್ವಲ್ಪ ಹೊತ್ತಿಗೆ ಮುಂಚೆ ವ್ಯಾಪಾರಿಗಳ ಗುಂಪಿನೊಳಗಿನಿಂದ ಒಬ್ಬನು ಬಂದು, ಪ್ರತಿಯೊಬ್ಬ ಗುಲಾಮನನ್ನು ಎಚ್ಚರಿಕೆಯಿಂದ ಪರೀಕ್ಷಿ ಸಲು ಪ್ರಾರಂಭಿಸಿದನು. ಇವನು ಗಿಡ್ಡನು, ಅಗಲವಾದ ಎದೆಯುಳ್ಳವನು, ಬಲಾಢ್ಯನು, ಶುಚಿಯ ವಾಸನೆಯನ್ನೇ ಅರಿಯದ ಕೊಳಕನು. ಟಾಮನಿಗೆ ಇವನನ್ನು ಕಂಡಾಕ್ಷಣವೇ ಭಯವಾಯಿತು. ಇವನು ತನ್ನ ಸಮೀಪಕ್ಕೆ ಬಂದ ಹಾಗೆಲ್ಲಾ ಭಯವು ವೃದ್ಧಿಯಾಯಿತು. ಇವನು ಟಾಮನ ಬಾಯಿಗೆ ಕೈಹಾಕಿ ದವಡೆಯನ್ನು ಎಳೆದು ಅಗಲಿಸಿ ಅವನ ಹಲ್ಲುಗಳನ್ನು ಪರೀಕ್ಷಿಸಿ ದನು. ಕೈಚಾಚಿಸಿ ನರಗಳನ್ನು ಉಬ್ಬಿಸುವಂತೆ ಹೇಳಿದನು. ಹಿಂದೆ ಮುಂದೆ ತಿರುಗಿಸಿ ನೋಡಿದನು, ಹಾರಿಸಿದನು, ಜಿಗಿಯುವಂತೆ ಹೇಳಿದನು. ಎಲ್ಲಾ ತರವಾದ ಪರೀಕ್ಷೆಯು ತೀರಿದ ಮೇಲೆ—ಎಲೋ, ನೀನು ಯಾವ ಊರಿನವನು? ಎಂದು ಕೇಳಿದನು.

ಟಾಮನು—ನಯವಿನಯಗಳಿಂದ ನಾನು ಕೆಂಟಕಿ ಎಂಬ ಸಂಸ್ಥಾನ ದವನು, ಧಣಿಯೇ.

ವ್ಯಾಪಾರಿಯು—ಅಲ್ಲಿ ಏನು ಮಾಡುತ್ತಿದ್ದಿ?

ಟಾಮನು—ನನ್ನ ಯಜಮಾನನ ಹೊಲಗದ್ದೆಗಳನ್ನು ನೋಡಿಕೊಳ್ಳು ತ್ತಿದ್ದೆನು, ಧಣಿಯೇ.

ವ್ಯಾಪಾರಿಯು—ಹಾಗೋ? ಒಳ್ಳೇದು ಎಂದು ತಲೆಯಾಡಿಸಿ ಕೊಂಡು ಮುಂದಕ್ಕೆ ಹೊರಟುಹೋದನು.

ಮಾರಾಟವು ಪ್ರಾರಂಭವಾಗಿ ಅನೇಕ ಗುಲಾಮರನ್ನು ಹರಾಜು ಹಾಕಿದರು. ಈಗ ಟಾಮನ ಸರದೀ ಬಂದಿತು. ಟಾಮನು ಹರಾಜು ಕಟ್ಟೆಯ ಮೇಲೆ ನಿಂತು ಸುತ್ತುಮುತ್ತಲೂ ನೋಡಿದನು. ತನ್ನನ್ನು ಯಾರು

ಕೊಂಡುಕೊಳ್ಳುತ್ತಾರೋ ಎಂಬ ಲವಲವಿಕೆಯಿಂದ ತುಂಬಿದ್ದನು. ಸ್ವಲ್ಪ ಹೊತ್ತಿನೊಳಗಾಗಿ ಘಂಟೇ ಹೊಡೆಯುವ ಶಬ್ದ ಕೇಳಿಸಿತು. ತನ್ನನ್ನು ಯಾರೋ ಒಬ್ಬರು ಕೊಂಡುಕೊಂಡರೆಂದು ಟಾಮನು ತಿಳಿದುಕೊಂಡನು. ಇವನ ದುರಾದೃಷ್ಟವನ್ನು ಏನು ಹೇಳಬೇಕು? ಮೊದಲು ಇವನ ದವಡೆ, ಕೈ, ಹಲ್ಲು, ಬಾಯಿ ಮೊದಲಾದ ಅವಯವಗಳನ್ನೂ ಬಲವನ್ನೂ ಪರೀಕ್ಷಿಸಿದ್ದ ಆ ಗಿಡ್ಡನೂ ಕಠಿಣಸ್ಥನೂ ಆದ ವ್ಯಾಪಾರಿಯೇ ಕೊಂಡುಕೊಂಡನು. ಇವನು ಬಂದು ಟಾಮನ ತೋಳನ್ನು ಬಹು ಒರಟಾಗಿ ಹಿಡಿದು, ಎಳೆದು—ಎಲಾ, ಹೋಗಿ ಆ ಕಡೆ ನಿಲ್ಲು ಎಂದು ನೂಕಿದನು. ಇವನ ಧ್ವನಿಯಾದರೋ ಟಾಮನ ಕಿವಿಗೆ ಸಿಡಿಲಿನ ಘರ್ಜನೆಯಂತೆಯೇ ಇದ್ದಿತು.

ಟಾಮನನ್ನು ಕೊಂಡುಕೊಂಡವನ ಹೆಸರು ಸೈಮನ್ ಲೆಗ್ರೀ. ಇವನು ರೆಡ್ ರಿವರ್ ಎಂಬ ಒಂದು ನದಿಯ ಸಮೀಪದಲ್ಲಿದ್ದ ಹತ್ತೀ ಹೊಲಗಳ ಮಾಲೀಕನಾಗಿದ್ದನು. ಹರಾಜಿನಲ್ಲಿ ಇವನು ಟಾಮನನ್ನು ಮಾತ್ರವಲ್ಲದೆ ಇನ್ನೂ ಐದು ಮಂದಿ ಗುಲಾಮರನ್ನೂ ಒಬ್ಬ ಹೆಂಗಸನ್ನೂ ಒಬ್ಬ ಪ್ರಾಯದ ಹುಡುಗಿಯನ್ನೂ ಕೊಂಡುಕೊಂಡು ಇಬ್ಬಿಬ್ಬರನ್ನಾಗಿ ಕೂಡಿಸಿ ಅವರ ಮುಂಗೈಗಳಿಗೂ ಕಾಲುಗಳಿಗೂ ಬೇಡಿಗಳನ್ನೂ, ಅವರ ಎದೆಗಳ ಮೇಲೆ ತೂಗಾಡುವಂತೆ ಭಾರವಾದ ಕಬ್ಬಿಣವನ್ನೂ ಹಾಕಿ ನಾಯಿಗಳನ್ನು ಕಟ್ಟುವಂತೆ ಅವರನ್ನು ಸರಪಳಿಗಳಿಂದ ಕಟ್ಟಿ, ಅವರ ಪ್ರಯಾಣಕ್ಕಾಗಿ ಕಾದಿದ್ದ ಹಡಗಿನ ಬಳಿಗೆ ಎಳೆದುಕೊಂಡು ಹೋದನು. ಇವರ ಗೋಳನ್ನು ನೋಡುವುದಕ್ಕಾಗದು. ಅಯ್ಯೋ! ಕಡೆಗೆ ನಮಗೆ ಇಂತಹ ದುಷ್ಟನೂ ಕಠಿಣಸ್ಥನೂ ಆದ ಯಜಮಾನನು ದೊರೆತನಲ್ಲಾ? ಎಂದು ಕಣ್ಣೀರಿಡುತ್ತಿದ್ದರು. ತಮ್ಮ ಹೆಂಡತೀ ಮಕ್ಕಳನ್ನು ನೋಡಿ ಅವರೊಂದಿಗೆ ಒಂದು ಮಾತಾಡುವುದಕ್ಕೆ ಸಹ ಈ ದುಷ್ಟನು ಅವಕಾಶವನ್ನು ಕೊಡಲಿಲ್ಲ, ಅಂತಹ ಕಠಿಣಸ್ಥನಾಗಿದ್ದನು.

ಹಡಗು ಮುಂದರಿಯಿತು. ಲೆಗ್ರೀ ಟಾಮನಿದ್ದ ಸ್ಥಳಕ್ಕೆ ಬಂದು ಅವನು ಹಾಕಿಕೊಂಡಿದ್ದ ಒಳ್ಳೇ ಬಟ್ಟೆಗಳನ್ನು ತೆಗೆಸಿ, ಹಳೇ ಬಟ್ಟೆಗಳನ್ನು ಹಾಕಿಕೊಳ್ಳುವಂತೆ ಅಪ್ಪಣೆಮಾಡಿದನು. ಟಾಮನ ಸಾಮಾನುಗಳಲ್ಲಿಯೂ ಬಟ್ಟೆ

ಬರೆಗಳಲ್ಲಿಯೂ ತನಗೆ ಬೇಕಾದವುಗಳನ್ನಿಟ್ಟುಕೊಂಡು ಮಿಕ್ಕವುಗಳನ್ನು ಮಾರಿಬಿಟ್ಟನು. ಟಾಮನು ತನ್ನ ಬಟ್ಟೆಗಳನ್ನು ಬದಲಾಯಿಸಿದಾಗ ವೇದ ಪುಸ್ತಕವನ್ನು ತೆಗೆದಿಟ್ಟುಕೊಳ್ಳುವುದಕ್ಕೆ ಮರೆಯಲಿಲ್ಲ. ಆದರೆ ಸಂಗೀತ ಪುಸ್ತಕವನ್ನು ತೆಗೆದುಕೊಳ್ಳಲು ಮರೆತುಬಿಟ್ಟು ಬಹು ಅಂಗಲಾಚುತ್ತಿದ್ದನು.

ಸಂಗೀತ ಪುಸ್ತಕವನ್ನು ಕಳೆದುಕೊಂಡದ್ದರಿಂದ ಟಾಮನಿಗುಂಟಾದ ವ್ಯಸನವನ್ನು ಲೆಗ್ರೀಯು ತಿಳಿದುಕೊಂಡು—ಎಲೋ, ಗುಲಾಮಾ, ನೀನು ಕ್ರಿಸ್ತ ಭಕ್ತನೋ ? ಎಂದು ಕೇಳಿದನು.

ಟಾಮನು (ಧೈರ್ಯದಿಂದ)—ಧಣಿಯೇ, ಹೌದು, ನಾನು ಕ್ರಿಸ್ತ ಭಕ್ತನು ಎಂದನು.

ಲೆಗ್ರೀ—ನೀನು ನಿನ್ನ ಕ್ರೈಸ್ತತ್ವವನ್ನು ಮರೆತುಬಿಡಬೇಕು. ಕಪ್ಪು ಜನರಾದ ನೀವು ಯಾರೂ ನಾನಿರುವ ಸ್ಥಳದಲ್ಲಿ ಪ್ರಾರ್ಥನೆಮಾಡಬಾರದು, ಹಾಡಬಾರದು. ಎಲೋ, ನಾನು ಹೇಳಿದ್ದು ತಿಳಿಯಿತೋ ? ಪಾದದಿಂದ ನೆಲವನ್ನು ಒದೆಯುತ್ತಾ—ನಾನೇ ಇನ್ನು ಮೇಲೆ ನಿನ್ನ ಗುರುವು, ಪ್ರಾರ್ಥನೆ ಹಾಡು ಎಲ್ಲವೂ ನಾನೇ. ನಾನು ಹೇಳಿದಂತೆ ನೀನು ಕೇಳಿಕೊಂಡಿರಬೇಕು. ತಿಳಿಯಿತೋ ? ಎಚ್ಚರಿಕೆ, ಎಚ್ಚರಿಕೆ ಎಂದು ಘರ್ಜಿಸಿದನು.

ಟಾಮನು—ತನ್ನ ಧಣಿಯಾದ ಲೆಗ್ರೀ ಮಾತಾಡುತ್ತಿದ್ದಾಗ ತಲೆಯನ್ನು ಬೊಗ್ಗಿಸಿಕೊಂಡು ನಿಶ್ಶಬ್ದವಾಗಿ ಯಾವ ಉತ್ತರವನ್ನೂ ಕೊಡಲಿಲ್ಲ. "ಭಯಪಡಬೇಡ ನಾನು ನಿನ್ನನ್ನು ಬಿಡುಗಡೆ ಮಾಡಿದ್ದೇನೆ, ನನ್ನ ಹೆಸರಿನಿಂದ ನಿನ್ನನ್ನು ಕರೆದಿದ್ದೇನೆ, ಆದುದರಿಂದ ನೀನು ನನ್ನವನು" ಎಂಬ ವೇದವಾಕ್ಯವನ್ನು ಟಾಮನ ಚಿಕ್ಕ ಯಜಮಾನಿಯಾದ ಈವಾ ಸಿಂಕ್ಲೇರಳು ಆಗಾಗ್ಗೆ ಹೇಳುತ್ತಿದ್ದುದು ನೆನಪಿಗೆ ಬಂದುದರಿಂದ ಧಣಿಯ ಮಾತಿಗೆ ಒಪ್ಪಿಕೊಳ್ಳಲು ಮನಸ್ಸೊಡಂಬಡಲಿಲ್ಲ.

ತಲೆಯನ್ನು ಬೊಗ್ಗಿಸಿಕೊಂಡು ನಿಶ್ಶಬ್ದವಾಗಿ ನಿಂತಿದ್ದ ಟಾಮನನ್ನು ಲೆಗ್ರೀಯು ಸ್ವಲ್ಪ ಹೊತ್ತಿನ ವರೆಗೂ ದೃಷ್ಟಿಸಿ ನೋಡುತ್ತಾ ಇದ್ದು ತರುವಾಯ ಹೊರಟುಹೋದನು. ಪುನಃ ಬಂದು—ತಾನು ಹರಾಜಿನಲ್ಲಿ

ಕೊಂಡುಕೊಂಡಿದ್ದ ಆ ಪ್ರಾಯದ ಹುಡುಗಿಯ ಬಳಿಗೆ ಹೋಗಿ ಆಕೆಯ ಮೇಲೆ ಕೈ ಇಟ್ಟುಕೊಂಡು—ಹುಡುಗೀ, ಭಯಪಡಬೇಡ ಧೈರ್ಯವಾಗಿರು ಎಂದು ಹೇಳಿದನು. ಇವಳಿಗಿದ್ದ ಘಾಬರಿ, ಭಯ, ಹಗೆ ಮೊದಲಾದವು ಗಳನ್ನು ಇವಳ ಮುಖಭಾವದಿಂದಲೇ ತಿಳಿದುಕೊಂಡ ಲೆಗ್ರೀಗೆ ಶಿಟ್ಟು ತಲೆಗೇರಿಹೋಗಿ ಗುಡುಗಿನಂತಹ ಧ್ವನಿಯಿಂದ—ಯೌವನಸ್ಥಳೇ, ಹೀಗೆ ನೀನೆಂದಿಗೂ ಇರಬೇಡ. ನಾನು ನಿನ್ನೊಂದಿಗೆ ಮಾತಾಡುವಾಗ ಮುಖ ವನ್ನು ಗಂಟುಹಾಕಿಕೊಳ್ಳದೆ ಸಂತೋಷವಾಗಿರಬೇಕು, ತಿಳಿಯಿತೋ ? ಎಂದು ಹೇಳಿ, ಒಂದೆರಡು ಹೆಜ್ಜೆಗಳು ಹಿಂದಕ್ಕೆ ಸರಿದು, ಸರಪಳಿಗಳಿಂದ ಜಿಗಿಯಲ್ಪಟ್ಟಿದ್ದ ಗುಲಾಮರಿಗೆ—ಎಲಾ, ಎಲ್ಲರೂ ನನ್ನನ್ನು ನೋಡಿರಿ, ನನ್ನ ಕಣ್ಣುಗಳನ್ನು ಚೆನ್ನಾಗಿ ನೋಡಿರಿ ಅಂದನು. ಗುಲಾಮರೆಲ್ಲರು ತಮ್ಮ ಧಣಿಯ ಉರಿಯುತ್ತಿದ್ದ ಭಯಂಕರವಾದ ಕಣ್ಣುಗಳನ್ನು ದೃಷ್ಟಿಸಿ ನೋಡಿದರು.

ಲೆಗ್ರೀಯು ಕೈಚಾಚಿ ಬಲವಾದ ತನ್ನ ಮುಷ್ಟಿಯನ್ನು ಮೇಲಕ್ಕೆತ್ತಿ— ಈ ನನ್ನ ಮುಷ್ಟಿಯು ನಿಮಗೆ ಕಾಣಿಸುತ್ತದೋ ? ಎಷ್ಟು ಬಲವಾಗಿದೆ, ನೋಡಿರಿ ? ಈ ಎಲುಬುಗಳನ್ನು ನೋಡಿರಿ ? ನಿಮ್ಮಂತಹ ಗುಲಾಮರನ್ನು ಹೊಡೆದು ಹೊಡೆದು ಕಬ್ಬಿಣದಂತೆ ಘಟ್ಟಿಯಾಗಿದೆ. ಒಬ್ಬ ಗುಲಾಮನು ಅವನು ಎಂತಹ ಬಲಿಷ್ಠನಾಗಿದ್ದಾಗ್ಯೂ ಈ . . . . ಈ . . . . ನನ್ನ ಮುಷ್ಟಿಯ ಒಂದೇ ಪೆಟ್ಟಿನಿಂದ ನೆಲಕ್ಕೆ ಬಿದ್ದು ಹೊರಳಾಡಬೇಕಾಗುತ್ತದೆ. ನನ್ನ ಏಟನ್ನು ತಡೆದುಕೊಂಡವನೊಬ್ಬನನ್ನಾದರೂ ನಾನು ಇದು ವರೆಗೂ ನೋಡಲಿಲ್ಲ. ನಾನು ಗುಲಾಮರನ್ನು ನೋಡಿಕೊಳ್ಳುವುದಕ್ಕಾಗಿ ಯಾರನ್ನೂ ನೇಮಿಸುವುದಿಲ್ಲ. ಮೇಲ್ವಿಚಾರಣೆಯ ಕೆಲಸವನ್ನು ನಾನು ಸ್ವತಃ ಮಾಡುತ್ತೇನೆ. ನಾನು ಹೇಳಿದಂತೆ ನೀವು ಕೇಳಲೇ ಬೇಕು. ಇಲ್ಲ ದಿದ್ದರೆ ನಿಮ್ಮ ಎಲುಬುಗಳನ್ನು ಚೂರುಚೂರುಮಾಡಿಬಿಡುತ್ತೇನೆ. ನನ್ನಲ್ಲಿ ದಯದಾಕ್ಷಿಣ್ಯಗಳೆಂಬುದು ಇಲ್ಲವೇ ಇಲ್ಲ. ಆದುದರಿಂದ ಎಚ್ಚರಿಕೆ ಯಾಗಿರ್ರಿ ಎಂದು ಸಿಂಹನಾದವನ್ನು ಮಾಡಿದನು.

ಗುಲಾಮರೆಲ್ಲರೂ ಇವನ ಅವತಾರವನ್ನೂ ಕೋಪಾವೇಶವನ್ನೂ

ನೋಡಿದರು. ಹೆಂಗಸರಿಗಾದರೋ ಘಟ್ಟಿಯಾಗಿ ಉಸಿರಾಡಿಸುವುದಕ್ಕೂ ಧೈರ್ಯವಿಲ್ಲವಾಯಿತು. ಎಲ್ಲರೂ ತಲೆಗಳನ್ನು ನೆಲಕ್ಕೆ ಬೊಗ್ಗಿಸಿಕೊಂಡು ತಮ್ಮ ದುಸ್ಥಿತಿಯನ್ನೂ ತಮ್ಮ ರಕ್ತಸಂಬಂಧಿಗಳನ್ನೂ ನೆನೆಸಿಕೊಂಡು ಕಣ್ಣೀರು ಸುರಿಸಿದರು. ಲೆಗ್ರೀಯು ಹೋಗಿ ಸಾರಾಯಿ ಕುಡಿಯುತ್ತಾ ಅಟ್ಟಹಾಸದಿಂದ ಕೂತುಬಿಟ್ಟನು.

ಅಧ್ಯಾಯ ೧೦

ಟಾಮನ ಸಹತಾಪ

ಬಡಗುಲಾಮರ ನಿಟ್ಟುಸಿರುಗಳಿಂದಲೂ ಕಣ್ಣೀರಿನಿಂದಲೂ ತುಂಬಿ ಭಾರವಾಗಿದ್ದ ಹಡಗು ಒಂದು ಸಣ್ಣ ಊರಿನ ಬಳಿಯಲ್ಲಿ ನಿಂತಿತು. ಲೆಗ್ರೀಯು ತಾನು ಕೊಂಡುಕೊಂಡು ಬಂದಿದ್ದ ಗುಲಾಮರೊಂದಿಗೆ ಆ ಸ್ಥಳದಲ್ಲಿ ಇಳಿದನು. ಲೆಗ್ರೀಯ ವಾಸಸ್ಥಳವು ಅಲ್ಲಿಗೆ ಸ್ವಲ್ಪ ದೂರದಲ್ಲಿದ್ದಿತು. ಲೆಗ್ರೀಯು, ಮತ್ತು ಇಬ್ಬರು ಸ್ತ್ರೀಗುಲಾಮರು ಒಂದು ಗಾಡಿಯ ಮೇಲೆ ಕೂತರು. ಉಳಿದ ಗುಲಾಮರು ಗಾಡಿಯ ಹಿಂದೆ ನಡೆದುಕೊಂಡುಹೋಗಬೇಕಾಯಿತು. ಒರಟಾದ ದಾರಿಯು. ಅಡಿಗಡಿಗೂ ಕಲ್ಲುಮುಳ್ಳುಗಳನ್ನು ತುಳಿಯಬೇಕಾಗಿದ್ದಿತು. ಅಡಿಗಡಿಗೂ ಹಳ್ಳಕೊಳ್ಳಗಳನ್ನೂ ಗುಡ್ಡ ಬೆಟ್ಟಗಳನ್ನೂ ದಾಟಬೇಕಾಗಿದ್ದಿತು. ಇಂತಹ ರಸ್ತೆಯಲ್ಲಿ ಕೈಬೇಡಿಗಳಿಂದಲೂ ಸರಪಳಿಗಳಿಂದಲೂ ಬಿಗಿಯಲ್ಪಟ್ಟಿದ್ದ ಬಡಗುಲಾಮರು ಗಾಡಿಯ ಬೆನ್ನತ್ತಿ ನಡೆದುಕೊಂಡುಹೋಗುವುದು ಬಹಳ ಕಷ್ಟವಾಯಿತು. ಸ್ವಲ್ಪವೇನಾದರೂ ನಡೆಯಲಾರದೆ ಹಿಂದುಳಿದರೆ, ಆಗಲೇ ಧಣಿಯ ಕೂಗಾಟ. ಮುಖಗಳು ಕಪ್ಪಾಗಿದ್ದರೂ ಬಾಡಿ ಬತ್ತಿಹೋದವು. ಶರೀರವು ಒರಟಾಗಿದ್ದರೂ ಬಳಲಿಹೋಯಿತು. ಕಣ್ಣುಗಳು ಕುಳಿಬಿದ್ದವು. ಇವರು ಮುಂದರಿದಂತೆಲ್ಲಾ ಇವರ ಕಣ್ಣೀರು ಪ್ರವಾಹದಂತೆ ಹಿಂದ್ಹರಿದು ಹೋಗುತ್ತಿದ್ದಿತು. ಹಸಿವೆ, ಬಾಯಾರಿಕೆ, ಕೈಕಾಲುಗಳ ನಿತ್ರಾಣ, ಬಿಟ್ಟುಬಂದ ಹೆಂಡತೀ ಮಕ್ಕಳ ನೆನವು, ಸುಖಸಂತೋಷಗಳ ನಿರಾಶೆ, ಅಂತರ್ಯದ

ವ್ಯಥೆ, ಮನಸ್ಸಿನ ಭಯ—ಇವುಗಳು ಬಡಗುಲಾಮರನ್ನು ಹಿಂಡಿ ಹೀರಿ ಬಿಟ್ಟವು. ಕಡೆಗೆ ತಾವು ಸೇರಬೇಕಾದ ಸ್ಥಳವನ್ನು ಸೇರಿದರು.

ಧಣಿಯು ಹೇಗೆ ಕೊಳಕನೂ ಭಯಂಕರನೂ ಆಗಿದ್ದನೋ ಇವನ ಮನೆಯೂ ಮನೆಯ ಅಂಗಳವೂ ಹಾಗೆಯೇ ಇದ್ದವು. ಮನೆಯ ಯಾವ ಭಾಗದಲ್ಲಿ ನೋಡಿದಾಗ್ಯೂ ಮುರುಕು ಬಾಗಿಲುಗಳು, ಮುರುಕು ಕಿಟಿಕಿಗಳು, ಹಾಳುಬಿದ್ದ ಕೊಠಡಿಗಳು, ಇನ್ನೇನು ಬಿದ್ದುಹೋಗುತ್ತವೋ ಎಂಬಂತಿದ್ದ ಗೋಡೆಗಳು. ಮನೆಯೊಳಗಂತು ಮೊಳಕಾಲೆತ್ತರ ಕಸವು. ಮೊದಲನೇದಾಗಿ ಮನೆಯ ಒಳಗೆ ಹೋಗಲು ಸರಿಯಾದ ದಾರಿಯೇ ಇಲ್ಲ. ಎಲ್ಲಿ ನೋಡಿದರಲ್ಲಿ ಕಲ್ಲು ಮುಳ್ಳುಗಳು, ಗಿಡಗಂಟಿಗಳು. ಇವುಗಳಿಂದ ದಾರಿಯೇ ಮುಚ್ಚಿಹೋಗಿದ್ದಿತು. ಲೆಗ್ರೀಯ ಗಾಡಿಯ ಶಬ್ದವನ್ನು ಕೇಳಿದ ಕೂಡಲೇ ಭಯಂಕರವಾಗಿದ್ದ ಮೂರು-ನಾಲ್ಕು ದೊಡ್ಡ ನಾಯಿಗಳು ಬೊಗಳಿಕೊಂಡು ಹೊರಗೆ ಹಾರಿಬಂದವು. ಇವುಗಳ ಕಿವಿಗಳು, ತಲೆಗಳು, ಕಣ್ಣುಗಳು ನೋಡುವವರ ಶರೀರವನ್ನು ನಡುಗಿಸಿಬಿಡುತ್ತಿದ್ದವು. ಇವುಗಳು ಬೊಗಳುವ ಶಬ್ದವು ಎದೇ ಗುಂಡಿಗೆಯನ್ನು ಹಾರಿಸಿಬಿಡುತ್ತಿದ್ದಿತು. ಇವು ಹೊಸಬರಾದ ಟಾಮನನ್ನೂ ಇತರ ಗುಲಾಮರನ್ನೂ ನೋಡಿದ ಕೂಡಲೇ ಹಾರಿ ಅಪ್ಪಳಿಸಿ, ಅವರ ಮೇಲೆ ಬಿದ್ದವು. ಇವುಗಳನ್ನು ಹಿಡಿದು ಅಂಕೆಯಲ್ಲಿಡುವುದೇ ಬಹಳ ಕಷ್ಟಕ್ಕೆ ಬಂದಿತು.

ಲೆಗ್ರೀಯು ಬಹಳ ಪ್ರಯಾಸದಿಂದ ಆ ನಾಯಿಗಳನ್ನು ಸುಮ್ಮನಿರಿಸಿ, ಅವುಗಳ ತಲೆಯನ್ನೂ ಬೆನ್ನನ್ನೂ ಸವರುತ್ತಾ, ಹೊಸ ಗುಲಾಮರ ಕಡೆಗೆ ನೋಡಿ—ಈಗ ತಿಳಿಯಿತೇ ? ನೀವು ಓಡಿಹೋದರೆ ಆ ನನ್ನ ನಾಯಿಗಳು ಏನು ಮಾಡುತ್ತವೆಂದು. ಓಡಿಹೋಗುವ ಗುಲಾಮರನ್ನು ಹುಡುಕಿ, ಕಂಡು ಹಿಡಿಯುವುದಕ್ಕೆ ಕಲಿಸಿದ್ದೇನೆ. ನೀವೇನಾದರೂ ಹಾಗೆ ಓಡಿಹೋದರೆ, ಇವು ನಿಮ್ಮನ್ನು ಹಿಡಿದು ಶೀಳಿ, ತಿಂದುಹಾಕುವುದೇನೋ ನಿಜ, ಎಚ್ಚರಿಕೆ ಎಂದನು.

ಲೆಗ್ರೀ ಬಳಿಯಲ್ಲಿ ಸಾಂಬೊ ಮತ್ತು ಕಿಂಬೊ ಎಂಬ ಇಬ್ಬರು ಗುಲಾಮರಿದ್ದರು. ಇವರು ಬಹಳ ದಿನಗಳಿಂದ ಇವನಲ್ಲಿ ಗುಲಾಮ ವೃತ್ತಿಯನ್ನು

ಮಾಡಿಕೊಂಡಿದ್ದವರು. ಲೆಗ್ರೀಯು ತನ್ನ ನಾಯಿಗಳನ್ನು ಹೇಗೆ ಬೆಳೆಸಿದ್ದನೋ ಹಾಗೆಯೇ ಇವರನ್ನು ಸಹ ಬೆಳೆಸಿದ್ದನು. ಇವರಿಬ್ಬರು ಯಜಮಾನನಂತೆಯೇ ಬಹಳ ಒರಟರು, ಕಠಿಣಸ್ಥರು. ಕರುಣೆಯೆನ್ನುವುದು ಸ್ವಲ್ಪವಾದರೂ ಇಲ್ಲ. ಉಳಿದ ಗುಲಾಮರಿಂದ ಕೆಲಸಮಾಡಿಸುವುದು, ಅವರನ್ನು ಬಹು ಕ್ರೂರವಾಗಿ ಹೊಡೆಯುವುದು, ಓಡಿಹೋದರೆ ಅಂತಹವರನ್ನು ಹುಡುಕಿ, ಯಜಮಾನನ ಬಳಿಗೆ ಎಳೆದುಕೊಂಡು ಬಂದು ರಕ್ತಕಾರುವಂತೆ ಹೊಡೆಯುವುದು—ಇವೇ ಇವರಿಬ್ಬರ ಕೆಲಸವು. ಲೆಗ್ರೀಯು ಇವರಿಗೆ ಗುಲಾಮರನ್ನು ಕಾಯುವವರು ಎಂಬ ಹೆಸರಿಟ್ಟನು. ಹೊಸ ಗುಲಾಮರನ್ನು ಕರೆದುಕೊಂಡುಹೋಗಿ, ಅವರಿರುವುದಕ್ಕೆ ಸ್ಥಳವನ್ನು ತೋರಿಸಲು ಈ ಗುಲಾಮರಿಬ್ಬರಿಗೆ ಲೆಗ್ರೀಯು ಅಪ್ಪಣೆಮಾಡಿದನು. ಯಜಮಾನನ ಅಪ್ಪಣೆಯಂತೆ ಇವರು ಈ ಹೊಸಬರನ್ನು ಕರೆದುಕೊಂಡುಹೋದರು. ಗುಲಾಮರು ವಾಸಮಾಡುವುದಕ್ಕಾಗಿ ಕಟ್ಟಿಸಿದ್ದ ಗುಡಿಸಿಲುಗಳನ್ನು ನೋಡಿದ ಕೂಡಲೇ ಟಾಮನ ಹೃದಯವು ಕುಗ್ಗಿಹೋಯಿತು. ತಾನು ವಾಸಮಾಡುವುದಕ್ಕೆ ಸಾಧಾರಣವಾದ ಒಂದು ಚಿಕ್ಕ ಗುಡಿಸಿಲಾದರೂ ಸಿಕ್ಕುವುದೆಂತಲೂ ಆ ಗುಡಿಸಲು ಎಂತಹ ಅಸಹ್ಯವಾದ ಸ್ಥಿತಿಯಲ್ಲಿದ್ದಾಗ್ಯೂ ಕಷ್ಟಪಟ್ಟು ಅದನ್ನು ಚೆನ್ನಾಗಿ ಇಟ್ಟುಕೊಳ್ಳಬಹುದೆಂತಲೂ ಅದರಲ್ಲಿ ತನ್ನ ವೇದ ಪುಸ್ತಕವನ್ನಿಟ್ಟುಕೊಳ್ಳಲು ಒಂದು ಪ್ರತ್ಯೇಕವಾದ ಸ್ಥಳವನ್ನು ಮಾಡಿಕೊಳ್ಳಬಹುದೆಂತಲೂ ದಿನವೆಲ್ಲಾ ಕೆಲಸಮಾಡಿ ಬಂದಾಗ ಯಾರ ತೊಂದರೆಯೂ ಇಲ್ಲದೆ ತನ್ನಿಷ್ಟಕ್ಕೆ ತಾನು ಆ ಗುಡಿಸಿಲಿನಲ್ಲಿ ಇರಬಹುದೆಂತಲೂ ಬಹಳ ಆಶೆಗೊಂಡಿದ್ದನು. ಆದರೆ ಯಾವಾಗ ಈ ಗುಡಿಸಿಲುಗಳನ್ನು ನೋಡಿದನೋ ಆ ಕೂಡಲೇ ಇವನ ಆಶೆಯೆಲ್ಲಾ ನಿರಾಶೆಯಾಯಿತು. ಯಾವ ಗುಡಿಸಿಲಿಗೆ ಹೋಗಿ ನೋಡಿದಾಗ್ಯೂ ಒಂದು ಮೇಜಿಯಾಗಲಿ, ಒಂದು ಕುರ್ಚಿಯಾಗಲಿ ಅಥವಾ ಮತ್ಯಾವ ಸಾಮಾನುಗಳೇ ಆಗಲಿ ಇರಲಿಲ್ಲ. ಪ್ರತಿಯೊಂದು ಗುಡಿಸಿಲಿನಲ್ಲಿಯೂ ಒಂದು ಮೂಲೆಯಲ್ಲಿ ಸ್ವಲ್ಪ ಒಣ ಹುಲ್ಲು ಹಾಸಿದ್ದಿತು. ಆಯಾ ಗುಡಿಸಿಲಿನಲ್ಲಿರುವ ಗುಲಾಮರು ಈ ಹುಲ್ಲಿನ ಮೇಲೆಯೇ ಮಲಗಬೇಕಾಗಿದ್ದಿತು. ಕಡೆಯಲ್ಲಿ ಟಾಮನು—ಈ ಗುಡಿಸಿಲು

ಗಳಲ್ಲಿ ನನಗೆ ಕೊಡುವ ಗುಡಿಸಲು ಯಾವದು? ಎಂದು ಸಾಂಬೊನನ್ನು ವಿನಯದಿಂದ ಕೇಳಿದನು.

ಸಾಂಬೊ (ನಗುತ್ತಾ)—ನಿನ್ನ ಗುಡಿಸಿಲೇ? ಇಗೋ ನೋಡು? ಈ ಗುಡಿಸಿಲಿನಲ್ಲಿ ಮತ್ತೊಬ್ಬನಿಗೂ ಸ್ಥಳವಾಗಬೇಕಾಗಿದೆ. ಈಗ ಪ್ರತಿಯೊಂದು ಗುಡಿಸಿಲಿನಲ್ಲಿಯೂ ಅನೇಕ ಗುಲಾಮರು ವಾಸವಾಗಿದ್ದಾರೆ. ಹೊಸದಾಗಿ ಬಂದಿರುವ ನಿನಗೆ ಸ್ಥಳವನ್ನು ಎಲ್ಲಿ ಹುಡುಕಿಕೊಡಲೋ ನನಗಂತೂ ತಿಳಿಯದು ಅಂದನು.

ಈ ಹೊಸ ಸ್ಥಳದಲ್ಲಿ ತಾನು ಅನುಭವಿಸಬೇಕಾಗಿರುವ ಕಷ್ಟದುಃಖಗಳನ್ನು ತಿಳಿದುಕೊಳ್ಳುವುದಕ್ಕಾಗಿ ಟಾಮನಿಗೆ ಬಹಳ ಹೊತ್ತು ಹಿಡಿಯಲಿಲ್ಲ. ಟಾಮನು ಕೆಲಸಮಾಡುವುದರಲ್ಲಿ ಘಟ್ಟಿಗನು; ಯಾವ ಕೆಲಸವನ್ನು ಯಾವಾಗ ಮಾಡಬೇಕೋ ಆ ಕೂಡಲೇ ಅದನ್ನು ಮಾಡಿ ಪೂರೈಸುವವರೆಗೂ ಇವನಿಗೆ ಸಮಾಧಾನವಿರುತ್ತಿರಲಿಲ್ಲ; ಬಹಳ ನಂಬಿಗಸ್ತನು, ಒಬ್ಬರ ಗೊಡವೆಗೆ ಹೋಗದೆ ತನ್ನ ಕೆಲಸವನ್ನು ತಾನು ಮಾಡಿಕೊಂಡು, ಸಮಾಧಾನವಾಗಿರುವವನು; ಕಷ್ಟಪಟ್ಟು ಕೆಲಸಮಾಡಿ ಯಜಮಾನನನ್ನು ಮೆಚ್ಚಿಸುವುದರಿಂದ ತನಗೆ ತಕ್ಕಷ್ಟು ಸುಖಸಮಾಧಾನಗಳು ದೊರೆಯಬಹುದೆಂಬ ಆಶೆಯುಳ್ಳವನಾಗಿದ್ದನು. ಜೊತೇ ಗುಲಾಮರು ಪಡುವ ಕಷ್ಟಹಿಂಸೆಗಳನ್ನು ನೋಡುವಾಗ ಬಹು ಸಂಕಟಪಡುತ್ತಿದ್ದನು. ಆದರೂ ಎಂತಹ ಕಷ್ಟಗಳು ಬಂದಾಗ್ಯೂ ಸಕಲರಿಗೂ ನ್ಯಾಯಾಧಿಪತಿಯಾದ ದೇವರ ಮೇಲೆ ಭಾರವನ್ನು ಹಾಕಿ, ಆತನನ್ನು ನಂಬಿಕೊಂಡಿದ್ದರೆ ಎಂದಾದರೊಂದು ದಿನ ತನ್ನ ಕಷ್ಟನಿವಾರಣೆಯಾಗುವ ಮಾರ್ಗವನ್ನು ಆತನೇ ತೋರಿಸುತ್ತಾನೆಂದು ಟಾಮನು ಸಂಪೂರ್ಣ ಭರವಸವುಳ್ಳವನಾಗಿದ್ದನು.

ಟಾಮನು ಕೆಲಸಮಾಡುವುದರಲ್ಲಿ ಘಟ್ಟಿಗನೆಂಬುವ ಸಂಗತಿಯು ಲೆಗ್ರೀಗೆ ಚೆನ್ನಾಗಿ ತಿಳಿದಿದ್ದಿತು. ಆದರೂ ಟಾಮನಲ್ಲಿದ್ದ ಮೃದುಸ್ವಭಾವವನ್ನು ನೋಡಿ, ಅಂತರಂಗದಲ್ಲಿ ಇವನನ್ನು ಹಗೆಮಾಡುತ್ತಿದ್ದನು. ದಿಕ್ಕಿಲ್ಲದ ಗುಲಾಮರನ್ನು ಲೆಗ್ರೀಯು ಹಿಂಸೆಪಡಿಸುತ್ತಿದ್ದುದು ಟಾಮನಿಗೆ ಸರಿದೋರಲಿಲ್ಲ. ಇದನ್ನು ತಿಳಿದುಕೊಂಡ ಲೆಗ್ರೀಗೆ ಟಾಮನ ಮೇಲೆ ಮತ್ತಷ್ಟು

ಕೋಪವು ಹೆಚ್ಚಾಯಿತು. ಟಾಮನನ್ನು ತನ್ನ ಗುಲಾಮರ ಮೇಲೆ ಮುಖ್ಯಸ್ಥನನ್ನಾಗಿ ಮಾಡಬೇಕೆಂಬ ಉದ್ದೇಶದಿಂದಲೇ ಕೊಂಡುಕೊಂಡಿದ್ದನು. ಮುಖ್ಯಸ್ಥನಾಗಿರುವವನಿಗೆ ಕಠಿಣತ್ವವೇ ಪ್ರಾಮುಖ್ಯವಾದುದೆಂಬುವುದೇ ಲೆಗ್ರೀಯ ಅಭಿಪ್ರಾಯವಾಗಿದ್ದಿತು. ಟಾಮನಲ್ಲಿ ಇಂತಹ ಕಠಿಣತ್ವಕ್ಕೆ ಬದಲಾಗಿ ಮೃದುಸ್ವಭಾವವಿದ್ದಿತು. ಇದು ಲೆಗ್ರೀಗೆ ಸರಿಬರಲಿಲ್ಲ. ಆದುದರಿಂದ ಟಾಮನನ್ನು ಹೇಗಾದರೂ ಪ್ರಯತ್ನಪಟ್ಟು, ಸಾಂಬೊ ಕಿಂಬೊ ಇವರಂತೆ ರಾಕ್ಷಸಸ್ವಭಾವವುಳ್ಳವನಾಗಿ ಮಾಡಲು ನಿಶ್ಚಯಿಸಿದನು.

ಒಂದು ದಿನ ಟಾಮನು ತನ್ನ ಜೊತೇ ಗುಲಾಮರ ಸಂಗಡ ಯಜಮಾನನ ಹತ್ತೀ ಹೊಲದಲ್ಲಿ ಹತ್ತಿಯನ್ನು ಬಿಡಿಸುತ್ತಿದ್ದನು. ಪಕ್ಕದಲ್ಲಿಯೇ ಮತ್ತೊಬ್ಬ ಸ್ತ್ರೀಗುಲಾಮಳು. ಈಕೆಯು ರೋಗದಿಂದ ನರಳುವುದು, ಅಡಿಗಡಿಗೂ ಬೀಳುವುದು, ಏಳುವುದು, ನಿಂತುಕೊಳ್ಳಲು ಶಕ್ತಿಯಿಲ್ಲದೆ ಗಡಗಡನೆ ನಡಗುವುದು, ಅದರು ಕೈಗಳಿಂದಲೇ ಹತ್ತಿಯನ್ನು ಬಿಡಿಸುವುದು, ಇವೆಲ್ಲವನ್ನು ಸಮೀಪದಲ್ಲಿದ್ದ ಟಾಮನು ನೋಡಿದನು. ದೃಷ್ಟಿಸಿ ಚೆನ್ನಾಗಿ ನೋಡಿದನು. ಇಂತಹ ಸಂಕಟದಲ್ಲಿ ಸಹ ಈಕೆಯು ತನ್ನ ಕಣ್ಣುಗಳನ್ನು ಮೇಲಕ್ಕೆತ್ತಿ ಪ್ರಾರ್ಥಿಸುವಂತಿದ್ದಿತು. ಈ ಬಡಹೆಂಗಸಿನ ಸಂಕಟವನ್ನು ನೋಡಿ ಟಾಮನಿಗೆ ಸಹಿಸುವುದಕ್ಕಾಗಲಿಲ್ಲ. ಸಮೀಪ ಬಂದು, ತನ್ನ ಚೀಲದಲ್ಲಿದ್ದ ಬಿಡಿಸಿದ ಹತ್ತಿಯನ್ನು ತೆಗೆದು, ತೆಗೆದು, ಆ ಬಡಹೆಂಗಸಿನ ಚೀಲದಲ್ಲಿಟ್ಟನು. ಆದರೆ ಮಾತಾಡಲಿಲ್ಲ.

ಗುಲಾಮ ಸ್ತ್ರೀಯು—ಅಯ್ಯೋ, ಹೀಗೆ ಮಾಡಬೇಡ. ನೀನು ತೊಂದರೆಗೊಳಗಾಗುತ್ತೀ ಎಂದು ಹೇಳುವಷ್ಟರಲ್ಲಿ ಎಲ್ಲಿಂದಲೋ ನೋಡಿಕೊಂಡಿದ್ದ ಸಾಂಬನು ಹದ್ದುಬಂದಂತೆ ಬಂದನು. ಈ ಹೆಂಗಸಿಗೂ ಇವನಿಗೂ ಆಗುತ್ತಿರಲಿಲ್ಲ. ಇವನು ಈಕೆಯ ವಿರೋಧಿಯೆಂದೇ ಹೇಳಬೇಕಾಗಿದೆ. ತನ್ನ ಕೊರಡೆಯನ್ನು ತಿರುಗಿಸುತ್ತಾ ಭಯಂಕರವಾದ ಧ್ವನಿಯಿಂದ—ಎಲೇ, ಏನಿದು? ಮೈ ಬೊಗ್ಗಿಸಿ ಕೆಲಸಮಾಡದೆ ಮಾತಾಡಿಕೊಂಡಿದ್ದೀಯಾ? ಹೋಗು, ಕೆಲಸಮಾಡು ಎಂದು ಅಸಹ್ಯವಾದ ಮಾತುಗಳಿಂದ ಬೈದು,

ಒರಟಾದ ಬೂಟು ಕಾಲಿನಿಂದ ಆಕೆಯನ್ನು ಒದ್ದನು. ಟಾಮನನ್ನು ಸಹ ಬಿಡಲಿಲ್ಲ. ಕೊರಡೆಯಿಂದ ಅವನ ಮುಖದ ಮೇಲೆ ಬಹಳ ಹೊಡೆದನು.

ಟಾಮನು ಬದಲು ಮಾತಾಡದೆ ತನ್ನ ಕೆಲಸಕ್ಕೆ ಹೋಗಿಬಿಟ್ಟನು. ಈ ಬಡಹೆಂಗಸಾದರೋ ಸ್ಮರಣೆ ತಪ್ಪಿ ನೆಲದ ಮೇಲೆ ಬಿದ್ದಳು.

ಸಾಂಬೊ—ಮೂರ್ಛಿತಳಾಗಿರುವ ಹೆಂಗಸಿನ ಬಳಿಗೆ ಬಂದು, ಹಲ್ಲು ಕಡಿಯುತ್ತಾ—ಎಲೇ ನಿನ್ನನ್ನು ಈ ಘಳಿಗೆಯಲ್ಲಿ ಎಬ್ಬಿಸುತ್ತೇನೆ, ನೋಡು, ಎಂದು ತನ್ನ ಅಂಗಿಯಲ್ಲಿ ಚುಚ್ಚಿಕೊಂಡಿದ್ದ ಒಂದು ಗುಂಡುಸೂಜಿಯನ್ನು ತೆಗೆದುಕೊಂಡು ಆ ಗುಂಡುಸೂಜಿಯು ಸಂಪೂರ್ಣವಾಗಿ ಮಾಂಸದೊಳಗೆ ಹೋಗುವಂತೆ ಚುಚ್ಚಿದನು. ನೋವನ್ನು ತಡೆಯಲಾರದೆ ಆ ಹೆಂಗಸು ನರಳುತ್ತಾ ಸ್ವಲ್ಪ ಎದ್ದು ಕೂತಕೂತಳು. ಕೂಡಲೇ—ಎಲೇ, ಈ ಆಟವನ್ನೆಲ್ಲಾ ಯಾರ ಮುಂದೆ ಆಡುತ್ತೀ? ಏಳು, ಬೇಗ ಏಳು, ಕೆಲಸಮಾಡು, ನಾನು ಯಾರೆಂದು ಇನ್ನೂ ನಿನಗೆ ತಿಳಿಯದೇನು? ದನದಂತೆ ಬಿದ್ದುಕೊಂಡಿದ್ದೀಯಾ? ಹೌದೇಲೇ? ಇಷ್ಟಕ್ಕೇ ಬಿಟ್ಟೆನೆಂದು ನೆನಸಿದ್ದೀಯಾ? ಹುಷಾರ್, ಹುಷಾರ್ ಎಂದು ನಾನಾಹೀನವಾಗಿ ಮಾತಾಡಿದನು. ಈ ಸ್ತ್ರೀಗೆ ಶಕ್ತಿಯಂತೂ ಇಲ್ಲ. ಮಾಡುವುದೇನು? ಯತ್ನವಿಲ್ಲದೆ ತಟ್ಟಾಡಿಕೊಂಡು, ಕೆಲಸಮಾಡುವುದಕ್ಕೆ ಪ್ರಾರಂಭಿಸಿದಳು. ತಿರುಗಿ ಸಾಂಬೊ ಘರ್ಜಿಸುತ್ತಾ—ಎಲೇ, ನೀನು ಈ ರೀತಿ ಕೆಲಸಮಾಡುವುದಕ್ಕೆ ಕಳ್ಳಬಿದ್ದರೆ, ಈ ಹೊತ್ತು ಸಾಯಂಕಾಲ ನಿನ್ನ ಗತಿಯೇನಾಗುತ್ತದೆಂದು ನೋಡಿಕೋ, ನಾನು ನಿನ್ನ ಪ್ರಾಣವನ್ನು ತೆಗೆಯದೆ ಎಂದಿಗೂ ಬಿಡುವುದಿಲ್ಲ ಎಂದನು. ಈ ಹೆಂಗಸು ಮೆಲ್ಲಗೆ—ಸಾಯಂಕಾಲವೇಕೆ? ಈಗಲೇ ಸಾಯುವುದಕ್ಕೆ ಸಿದ್ಧವಾಗಿದ್ದೇನಲ್ಲಾ? ಸ್ವಾಮಿಯೇ, ಓ ನನ್ನ ಸ್ವಾಮಿಯೇ, ಇನ್ನೆಷ್ಟು ದಿನಗಳು ಈ ಹಿಂಸೆಯನ್ನು ಸಹಿಸಿಕೊಂಡಿರಬೇಕು? ಗುಲಾಮರಾದ ನಮಗೆ ನೀನು ಸಹಾಯಮಾಡುವುದಿಲ್ಲವೇಕೆ? ಎಂದು ಪ್ರಾರ್ಥಿಸಿದಳು. ಟಾಮನು ತನ್ನ ಸ್ಥಳದಲ್ಲಿದ್ದುಕೊಂಡೇ ಈಕೆಯು ದುಃಖದಿಂದ ಆಡಿದ ಮಾತುಗಳನ್ನೂ ಮಾಡಿದ ಪ್ರಾರ್ಥನೆಯನ್ನೂ ಕೇಳಿಸಿಕೊಂಡನು. ಬಹು ಸಂಕಟಪಟ್ಟನು. ಹೃದಯವು ಕರಗಿ ನೀರಾಯಿತು.

ಕೆಲಸಮಾಡಲು ಈ ಬಡ ಹೆಂಗಸಿಗೆ ಶಕ್ತಿಯೇ ಇಲ್ಲವೆಂಬುದನ್ನು ಟಾಮನು ಚೆನ್ನಾಗಿ ತಿಳಿದುಕೊಂಡು ತನ್ನ ಪ್ರಾಣದ ಮೇಲಣ ಆಶೆಯನ್ನು ತೊರೆದು, ಪುನಃ ತನ್ನ ಚೀಲದಿಂದ ಹತ್ತಿಯನ್ನು ತೆಗೆದು ಆ ಹೆಂಗಸಿನ ಚೀಲದಲ್ಲಿ ತುಂಬಿಸಿದನು.

ಗುಲಾಮ ಸ್ತ್ರೀಯು—ಬೇಡವೆಂದು ನಾನು ಆಗಲೇ ಹೇಳಲಿಲ್ಲವೇ! ಇದಕ್ಕಾಗಿ ಅವರು ನಿನಗೆ ಏನು ಮಾಡುತ್ತಾರೆಂದು ಇನ್ನೂ ತಿಳಿಯದೇ ಅಂದಳು.

ಟಾಮನು—ಅವರು ಏನಾದರೂ ಮಾಡಲಿ. ನಾನು ಅದೆಲ್ಲವನ್ನು ಸಹಿಸಿಕೊಳ್ಳಬಲ್ಲೆನು. ಆದರೆ ನೀನು ಸಹಿಸಲಾರಿ ಎಂದು ಹೇಳಿ, ಬೇಗನೆ ಓಡಿಹೋಗಿ ಪುನಃ ಹತ್ತಿ ಬಿಡಿಸುವುದಕ್ಕೆ ಪ್ರಾರಂಭಿಸಿದನು.

ಅಧ್ಯಾಯ ೧೧

ನನ್ನ ಆತ್ಮವನ್ನು ನೀವು ಕೊಂಡುಕೊಳ್ಳಲಿಲ್ಲ ಧಣಿಯೇ

ಈ ಬಡಹೆಂಗಸಿಗೆ ಟಾಮನು ಸಹಾಯಮಾಡುತ್ತಿದ್ದುದನ್ನು ನೋಡಿದ ಗುಲಾಮನೊಬ್ಬನು ಟಾಮನಿಗೆ—ನಿನಗೆ ಈ ಸ್ಥಳದ ವಿಷಯದಲ್ಲಿ ಇನ್ನೂ ಯಾವುದೂ ತಿಳಿಯದೆಂದು ಕಾಣುತ್ತದೆ. ನಿನಗೆ ತಿಳಿದಿದ್ದ ಪಕ್ಷದಲ್ಲಿ ಹೀಗೆ ಎಂದಿಗೂ ಮಾಡುತ್ತಿರಲಿಲ್ಲ. ಈ ಸ್ಥಳದ ವಿಷಯದಲ್ಲಿ ಕಡೇ ಪಕ್ಷ ಒಂದು ತಿಂಗಳಾದ ಮೇಲೆ ನಿನಗೆ ತಕ್ಕಷ್ಟು ಗೊತ್ತಾದೀತು. ಆಗ ನೀನು ಯಾರಿಗೂ ಸಹಾಯಮಾಡಲಾರಿ. ನಿನ್ನ ಚರ್ಮ ಸುಲಿಸಿಕೊಳ್ಳದಂತೆ ನಿನ್ನನ್ನು ಕಾಪಾಡಿಕೊಳ್ಳುವುದೇ ಕಷ್ಟವಾಗುತ್ತದೆ ಅಂದನು.

ಪ್ರತಿಯೊಬ್ಬ ಗುಲಾಮನು ಬೆಳಗಿನಿಂದ ಸಾಯಂಕಾಲದ ವರೆಗೆ ಬಿಡಿಸಿದ್ದ ಹತ್ತಿಯನ್ನು ತೆಗೆದುಕೊಂಡು ಯಜಮಾನನ ಗಡಂಗಿಗೆ ಹೋಗಿ ತೂಕಮಾಡಿಕೊಡಬೇಕಾಗಿದ್ದಿತು. ಸಾಯಂಕಾಲವಾಯಿತು. ಗುಲಾಮರೆಲ್ಲರು ತಾವು ಆ ದಿನವೆಲ್ಲಾ ಬಿಡಿಸಿದ ಹತ್ತಿಯನ್ನು ಹೊತ್ತುಕೊಂಡು ಹತ್ತಿಯನ್ನು ತೂಕಮಾಡುವ ಗಡಂಗಿಗೆ ಬಂದರು. ಸಾಂಬೊ ಮತ್ತು

ಕಿಂಬೊ ಎಂಬ ಇಬ್ಬರು ಮುಖ್ಯಸ್ಥರಾದ ಗುಲಾಮರೊಂದಿಗೆ ಮಾತಾಡಿಕೊಂಡು ಲೆಗ್ರೀಯು ಅಲ್ಲಿಯೇ ಇದ್ದನು.

ಸಾಂಬೊ—ಧಣಿಯೇ, ಈ ಟಾಮನ ಅವಾಂತರ ಬಹಳವಾಗಿದೆ. ಇವನು ಹತ್ತಿಯನ್ನು ಬಿಡಿಸಿಬಿಡಿಸಿ ಮತ್ತೊಬ್ಬರ ಚೀಲದಲ್ಲಿ ಹಾಕಿ ಅವರಿಗೆ ಸಹಾಯಮಾಡುತ್ತಾನೆ. ಇದರಿಂದ ಇಲ್ಲದ ತೊಂದರೆಗಳಿಗೆ ಕಾರಣವಾಗುತ್ತದೆ. ಧಣಿಯುವರು ಅವನ ವಿಷಯ ಸ್ವಲ್ಪ ಎಚ್ಚರಿಕೆಯಾಗಿರದಿದ್ದರೆ ನಿಮ್ಮ ವಿಷಯ ಗುಲಾಮರೆಲ್ಲರಲ್ಲಿ ಅತೃಪ್ತಿಯನ್ನುಂಟುಮಾಡುತ್ತಾನೆಂಬುವುದಕ್ಕೆ ಸಂಶಯವಿಲ್ಲ. ನಾವೇನೋ ಇದ್ದ ಸಂಗತಿಯನ್ನು ಅರಿಕೆಮಾಡಿದ್ದೇವೆ ಇದರ ಮೇಲೆ ಧಣಿಯವರ ಚಿತ್ತ ಅಂದನು.

ಲೆಗ್ರೀ—ಓಹೋ, ಹಾಗೋ ಆ ಕರೀ ದೆವ್ವಕ್ಕೆ ಸ್ವಲ್ಪ ಬುದ್ಧಿ ಕಲಿಸಬೇಕು ಅಂದನು.

ಧಣಿಯ ಮಾತನ್ನು ಕೇಳಿ ಗುಲಾಮರಿಬ್ಬರಿಗೂ ಸಂತೋಷವಾಗಿ ಹಲ್ಲು ಕಿಸಿದು ನಗುತ್ತಾ ಆ ಕತ್ತೆಗೆ ಬುದ್ಧಿ ಕಲಿಸುವುದಕ್ಕೆ ಧಣಿಯವರೇ ಸರಿ ಮತ್ಯಾರಿಂದಲೂ ಆಗುವುದಿಲ್ಲ ಎಂದು ಹೇಳಿದರು.

ಲೆಗ್ರೀ—ಅವನ ಸ್ವಭಾವವು ಬದಲಾಗಬೇಕಾದರೆ ಚೆನ್ನಾಗಿ ಒದೆಯಬೇಕು. ಅದು ವರೆಗೂ ಅವನ ಈಗಿನ ಸ್ವಭಾವವು ಬದಲಾಗುವುದಿಲ್ಲ ಅಂದನು.

ಸಾಂಬೊ—ಧಣಿಯವರ ಮಾತು ನಿಜ. ಅವನನ್ನು ಚೆನ್ನಾಗಿ ಒದೆಯಬೇಕು. ಅಗೋ, ಆ ಗುಲಾಮಳು ಮೈಗಳ್ಳಿಯು, ಮೈ ಬೊಗ್ಗಿಸಿ ಕೆಲಸ ಮಾಡುವುದೇ ಇಲ್ಲ. ಈ ಟಾಮನು ಆಕೆಯ ಪಕ್ಷವನ್ನು ವಹಿಸಿ, ಅವಳಿಗೆ ಸಹಾಯಮಾಡುತ್ತಾನೆ ಅಂದನು.

ಲೆಗ್ರೀ—ಆ ಮೈಗಳ್ಳಿಗೆ ಸಹಾಯಮಾಡಿದನೇ ಈ ಕರೀ ಕತ್ತೇ? ಹಾಗಾದರೆ ಅವನ ಕೈಯಿಂದಲೇ ಅವಳನ್ನು ಚೆನ್ನಾಗಿ ಒದಿಸಬೇಕು. ಹೀಗೆ ಮಾಡಿದರೆ ಅವನಿಗೆ ಹೊಡೆಯುವ ಅಭ್ಯಾಸವಾಗುತ್ತದೆ.

ಸಾಂಬೊ—ಆದರೆ ಧಣಿಯವರೇ, ಅವಳ ಚೀಲದಲ್ಲಿರುವ ಹತ್ತಿಯ ತೂಕ ಸರಿಯಾಗಿರುವುದಲ್ಲಾ? ಟಾಮನು ಬಿಡಿಸಿದ ಹತ್ತಿಯನ್ನು ಅವಳ ಚೀಲಕ್ಕೆ

ತುಂಬಿಸಿ ತಾನು ತಿರುಗಿ ಬೇರೆ ಹತ್ತಿಯನ್ನು ಬಿಡಿಸಿ ತನ್ನ ಚೀಲವನ್ನು ತುಂಬಿಸಿಕೊಂಡಿದ್ದಾನೆ.

ಲೆಗ್ರೀ—ನಾನೇ ತೂಕಮಾಡಿ ನೋಡುತ್ತೇನೆ. ಹತ್ತಿಯು ಎಷ್ಟಿರುತ್ತದೋ ನೋಡೋಣ ಎಂದು ಹೇಳಲು, ಗುಲಾಮರಿಬ್ಬರು ಪಕಪಕನೆ ನಕ್ಕರು.

ದಿನವೆಲ್ಲಾ ಕೆಲಸಮಾಡಿ ದಣಿದುಹೋಗಿದ್ದ ಗುಲಾಮರು ತಮ್ಮ ಹತ್ತಿಯನ್ನು ತೂಕಮಾಡುವುದಕ್ಕಾಗಿ ಭಯದಿಂದ ನಡುಗುತ್ತಾ ಲೆಗ್ರೀಯು ಕೂತಿದ್ದ ಕೊಠಡಿಗೆ ಬಂದು ಹತ್ತೀ ಚೀಲಗಳನ್ನು ಕೆಳಗಿಳಿಸಿದರು. ಟಾಮನ ಚೀಲವನ್ನು ತೂಕಮಾಡಿದನು. ತೂಕವು ಸರಿಯಾಗಿದ್ದಿತು. ತಾನು ಯಾರಿಗೆ ಸಹಾಯಮಾಡಿದನೋ ಆ ಬಡಹೆಂಗಸಿನ ಹತ್ತಿಯ ತೂಕವು ಸರಿಯಾಗಿರುವುದೋ ಇಲ್ಲವೋ ? ಯಜಮಾನನು ಏನು ಹೇಳುತ್ತಾನೋ ಎಂದು ಟಾಮನು ಬಹಳ ಲವಲವಿಕೆಯಿಂದ ಧಣಿಯ ಕಡೆಗೇ ನೋಡುತ್ತಿದ್ದನು. ಈ ಹೆಂಗಸು ಬಲಹೀನತ್ವದಿಂದ ತರತರನೆ ನಡಗುತ್ತಾ ಬಂದು ತನ್ನ ಚೀಲವನ್ನು ಧಣಿಯ ಮುಂದಿಟ್ಟಳು. ತೂಕವು ಸರಿಯಾಗಿಯೇ ಇದ್ದಿತು. ಆದರೂ ಲೆಗ್ರೀಯು ತನ್ನ ಕಣ್ಣುಗಳೆರಡನ್ನು ಕೆಂಪಗೆಮಾಡಿಕೊಂಡು ಕೋಪದಿಂದ—ಎಲೇ, ಸೋಮಾರಿ ಕತ್ತೇ, ಈ ಹೊತ್ತು ತಿರುಗಿ ಹತ್ತಿಯು ಕಡಿಮೆಯಾಗಿದೆಯಲ್ಲಾ, ಆ ಮೂಲೆಯಲ್ಲಿ ನಿಂತುಕೊಂಡಿರು, ನಿನ್ನನ್ನು ಚೆನ್ನಾಗಿ ಹೊಡೆಯಬೇಕು ಎಂದಾಕ್ಷಣವೇ ಅಯ್ಯೋ, ಆ ಬಡ ಹೆಂಗಸು ನಿರಾಶೆಯಿಂದ ಮೂಲುಗುತ್ತಾ ನೆಲದ ಮೇಲೆ ಕುಕ್ಕರಿಸಿದಳು.

ಗುಲಾಮರು ತಂದಿದ್ದ ಹತ್ತಿಯೆಲ್ಲವೂ ತೂಕಮಾಡಿದ್ದಾಯಿತು. ಲೆಗ್ರೀಯು ಟಾಮನನ್ನು ನೋಡಿ—ಟಾಮ್, ಇಲ್ಲಿ ಬಾ. ಸಾಧಾರಣವಾದ ಕೆಲಸಗಳನ್ನು ಮಾಡುವುದಕ್ಕಾಗಿ ನಾನು ನಿನ್ನನ್ನು ಕೊಂಡುಕೊಳ್ಳಲಿಲ್ಲ, ಈ ವಿಷಯವನ್ನು ಕುರಿತು ನಾನು ನಿನಗೆ ಮೊದಲೇ ಹೇಳಿದ್ದೇನಲ್ಲವೇ ? ನನ್ನ ಗುಲಾಮರ ಮೇಲೆ ನಿನ್ನನ್ನು ಮುಖ್ಯಸ್ಥನನ್ನಾಗಿ ನೇಮಿಸಬೇಕೆಂಬುವುದೇ ನನ್ನ ಉದ್ದೇಶವು. ಆದುದರಿಂದ ಈ ರಾತ್ರಿಯೇ ನೀನು ಆ ಕೆಲಸವನ್ನು ಪ್ರಾರಂಭಿಸಿದರೆ ಚೆನ್ನಾಗಿರುವುದು ತಿಳಿಯಿತೇ ? ಇಗೋ ಈ

ಸೋಮಾರಿ ಹೆಂಗಸನ್ನು ಎಳೆದುಕೊಂಡುಹೋಗಿ ಚೆನ್ನಾಗಿ ಹೊಡಿ, ಹೇಗೆ ಹೊಡೆಯಬೇಕೆಂದು ಹೊಸದಾಗಿ ನಾನು ನಿನಗೆ ಕಲಿಸುವುದು ಅವಶ್ಯವಿಲ್ಲ. ನಿನ್ನ ಕಣ್ಣುಗಳಿಂದ ನೋಡಿಯೇ ಇದ್ದೀ, ಹುಂ . . . . ಎಳೆದುಕೊಂಡು ಹೋಗು ತಡಮಾಡಬೇಡಾ ಅಂದನು.

ಟಾಮುನು—ಧಣಿಯೇ, ನನ್ನನ್ನು ಕ್ಷಮಿಸಿರಿ. ಆ ಕೆಲಸವನ್ನು ಮಾತ್ರ ನನಗೆ ಹೇಳಬೇಡಿರಿ. ಇಂತಹ ಕೆಲಸಗಳು ನನಗೆ ಅಭ್ಯಾಸವಿಲ್ಲ. ನಾನು ಇದು ವರೆಗೂ ಎಂದೂ ಮಾಡಲಿಲ್ಲ. ಈಗಲೂ ಮಾಡಲಾರೆನು ಎಂದು ವಿನಯದಿಂದ ಬೇಡಿಕೊಂಡನು.

ಟಾಮುನ ಮಾತುಗಳನ್ನು ಕೇಳಿದ ಕೂಡಲೇ ಲೆಗ್ರೀಯು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಕಟಕಟನೆ ಹಲ್ಲುಕಡಿಯುತ್ತಾ ಒಂದು ಕೊರಡೆ ಯನ್ನು ತೆಗೆದುಕೊಂಡು—ಹೌದೋ, ನೀನು ಮಾಡಲಾರಿಯಾ ? ನಿನಗಿಷ್ಟು ಕೊಬ್ಬಾಯಿತೇ ? ನೀನು ನನ್ನಲ್ಲಿರುವ ವರೆಗೂ ಇದು ವರೆಗೂ ನೀನು ನಾಡದ ಅನೇಕ ಕೆಲಸಗಳನ್ನು ಮಾಡಲು ಕಲಿತುಕೊಳ್ಳಬೇಕಾಗಿದೆ ತಿಳಿ ಯಿತೇ ಎಂದು ಹೇಳುತ್ತಾ ಟಾಮುನ ಕೆನ್ನೆಗಳ ಮೇಲೆಯೂ ಶರೀರದ ಮೇಲೆಯೂ ಬಾಸುಂಡೆಗಳು ಬೀಳುವಂತೆ ಕೊರಡೆಯಿಂದ ಒಂದೇ ಉಸಿರಿಗೆ ಮನಸ್ಸಿಗೆ ಬಂದಂತೆ ಹೊಡೆದು, ಸ್ವಲ್ಪ ಸುದಾರಿಸಿಕೊಂಡು—ಎಲ್ಲಿ ? ಮಾಡಲಾರೆನೆಂದು ತಿರುಗಿ ಹೇಳು ನೋಡೋಣ ಎಂದು ಅಬ್ಬರಿಸಿದನು.

ಟಾಮುನು ತನ್ನ ಮುಖದ ಮೇಲೆ ಸೋರುತ್ತಿದ್ದ ರಕ್ತವನ್ನು ಒರಸಿ ಕೊಳ್ಳುತ್ತಾ—ಧಣಿಯೇ, ನಾನು ಮಾಡಲಾರೆನು. ನನ್ನ ದೇಹದಲ್ಲಿ ಉಸಿ ರಾಡುವ ವರೆಗೂ ನೀವು ಯಾವ ಕೆಲಸವನ್ನು ಹೇಳಿದಾಗ್ಯೂ ರಾತ್ರಿ ಹಗಲೆನ್ನದೆ ಮಾಡುತ್ತೇನೆ. ಆದರೆ ಈ ಕೆಲಸ ಮಾತ್ರ ನನ್ನಿಂದಾಗದು. ಇದು ಅನ್ಯಾಯವಾದ ಕೆಲಸವು, ಕ್ರೂರವಾದ ಕೆಲಸವು. ಆದುದರಿಂದ ಧಣಿಯೇ, ನಾನೆಂದಿಗೂ ಈ ಕೆಲಸವನ್ನು ಮಾಡುವುದಿಲ್ಲ, ಎಂದಿಗೂ ಇಲ್ಲಾ ಎಂದು ಹೇಳಿದನು.

ಟಾಮುನ ಧ್ವನಿಯು ಬಹು ಮೃದುಮಧುರವಾದುದು. ಯಾವಾಗಲೂ ಮರ್ಯಾದೆಯಿಂದ ನಡೆದುಕೊಳ್ಳುವುದೇ ಇವನ ಜನ್ಮ ಸ್ವಭಾವವು. ಇದನ್ನು

ಕಂಡುಕೊಂಡ ಲೆಗ್ರೀಯು ಇವನನ್ನು ಬಹು ಸುಲಭವಾಗಿ ಒಳಪಡಿಸಿಕೊಳ್ಳ ಬಹುದೆಂದು ನಂಬಿದ್ದನು. ಧಣಿಯ ಎದುರಿನಲ್ಲಿ ಇವನಾಡಿದ ಈ ಕಡೇ ಮಾತುಗಳು ಅಲ್ಲಿದ್ದವರೆಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಧಣಿಯು ಟಾಮನಿಗೆ ಯಾರನ್ನು ಹೊಡೆಯಬೇಕೆಂದು ಅಪ್ಪಣೆಯನ್ನು ಕೊಟ್ಟಿದ್ದನೋ ಆ ಹೆಂಗಸು ತನ್ನ ಕೈಗಳನ್ನು ಜೋಡಿಸಿ ಎದೆಯ ಮೇಲಿಟ್ಟುಕೊಂಡು ದೇವರಿಗೆಪ್ರಾರ್ಥಿಸುವುದಕ್ಕಾರಂಭಿಸಿದಳು. ಬರುವುದಕ್ಕಿರುವ ತುಫಾನನ್ನು ಭಯದಿಂದ ಎದುರುನೋಡುವವರಂತೆ ಅಲ್ಲಿದ್ದವರೆಲ್ಲರು ನಿಶ್ಶಬ್ದವಾಗಿ ಧಣಿಯು ಟಾಮನನ್ನು ಏನು ಮಾಡಿಬಿಡುವನೋ ಎಂದು ನಿಂತು ನೋಡುತ್ತಿದ್ದರು.

ಟಾಮನ ಮಾತುಗಳು ಲೆಗ್ರೀಗೆ ಭ್ರಮೆಹಿಡಿಸಿತು. ಏನು ಮಾತಾಡಬೇಕೆಂದು ಮನಸ್ಸಿಗೆ ಹೊಳೆಯದೆ ಹೋಯಿತು. ಸ್ವಲ್ಪ ಹೊತ್ತು ತಡೆದು ಮಿತಿಮೀರಿದ ಕೋಪದಿಂದ—ಎಲಾ ನಾಯಿ, ಏನಂದಿ? ನಾನು ನಿನಗೆ ಮಾಡೆಂದು ಹೇಳಿದ ಕೆಲಸವು ಅನ್ಯಾಯವೂ ಕ್ರೂರವೂ ಆದ ಕೆಲಸವೆಂದು ನನಗೇ ಹೇಳಿದಿಯಾ? ಗುಲಾಮರಾದ ನಿಮಗೆ ನ್ಯಾಯಾನ್ಯಾಯಗಳು ಸಹ ತಿಳಿದಿದೆಯೇ? ಎಲಾ ಕತ್ತೇ, ಎಲಾ ನಾಯಿಾ, ನನ್ನನ್ನು ಯಾರೆಂದು ತಿಳಿದುಕೊಂಡಿದ್ದೀ? ನಿನ್ನ ಧಣಿಯ ಮುಂದೆ ನಿಂತು ನ್ಯಾಯಾನ್ಯಾಯಗಳ ವಿಷಯ ಮಾತಾಡುವುದಕ್ಕೆ ನೀನೊಬ್ಬ ಬಿಳೀ ಮನುಷ್ಯನೆಂದು ತಿಳಿದುಕೊಂಡಿದ್ದೀಯೇನು? ಆ ಹೆಂಗಸನ್ನು ಹೊಡೆಯುವುದು ಅನ್ಯಾಯವೆಂದು ನಿನ್ನ ಅಭಿಪ್ರಾಯವೇನು?

ಟಾಮನು—ಧಣಿಯೇ, ಹೌದು, ಅನ್ಯಾಯವೇ. ಆ ಬಡಹೆಂಗಸು ಕಾಯಿಲೆಯಾಗಿದ್ದಾಳೆ. ಕೆಲಸಮಾಡಲು ಬಲವೇ ಇಲ್ಲ. ಇಂತಹ ಸ್ಥಿತಿಯಲ್ಲಿರುವ ಆಕೆಯನ್ನು ಹೊಡೆಯುವುದು ಬಹು ಕ್ರೂರವಾದ ಕೆಲಸ. ಅಂತಹ ಕೆಲಸವನ್ನು ನಾನೆಂದಿಗೂ ಮಾಡುವುದಿಲ್ಲ. ಧಣಿಯೇ, ನನ್ನನ್ನು ಕೊಲ್ಲಬೇಕೆಂದಿದ್ದೀರೋ? ಕೊಲ್ಲಿರಿ. ನಾನಾದರೋ, ನನ್ನ ಕೈಯೆತ್ತಿ, ಯಾರನ್ನಾದರೂ ಹೊಡೆಯುವುದಿಲ್ಲ, ಎಂದಿಗೂ ಹೊಡೆಯುವುದಿಲ್ಲ. ಮತ್ತೊಬ್ಬರನ್ನು ಹೊಡೆಯುವುದಕ್ಕಿಂತಲೂ ಮೊದಲು ನಾನೇ ಸಾಯುತ್ತೇನೆ ಎಂದು ಬಹು ಗಂಭೀರವಾಗಿ ಹೇಳಿದನು.

ಟಾಮನು ದೀನಸ್ವರದಿಂದ ಮಾತಾಡಿದಾಗ್ಯೂ ಪ್ರತಿಯೊಂದು ಮಾತಿನಲ್ಲಿಯೂ ಅವನ ದೃಢತ್ವವು ಪರಿಷ್ಕಾರವಾಗಿ ಗೊತ್ತಾಗುತ್ತಿದ್ದಿತು. ಲೆಗ್ರೀಯು ಶರೀರವೆಲ್ಲಾ ನಡುಗುತ್ತಿದ್ದಿತು. ಕೋಪದಿಂದ ಅವನ ಕಣ್ಣುಗಳು ಬೆಂಕಿಯ ಕೆಂಡದಂತೆ ಉರಿಯುತ್ತಿದ್ದವು. ಒಂದು ಕಾಡುಮೃಗವು ತಾನು ಬೇಟೆಯಾಡಿ ಹಿಡಿದ ಪ್ರಾಣಿಯನ್ನು ತಕ್ಷಣವೇ ಕೊಂದು ತಿನ್ನದೆ ಹೇಗೆ ಸ್ವಲ್ಪಹೊತ್ತು ಆಟವಾಡಿಸಿಕೊಂಡಿರುತ್ತದೋ ಹಾಗೆಯೇ ಲೆಗ್ರೀಯು ಟಾಮನ ವಿಷಯದಲ್ಲಿ ವರ್ತಿಸಿ ಆವರಿಸಿಕೊಂಡು ಬಂದ ಕೋಪವನ್ನು ನುಂಗುತ್ತಾ ಒಂದು ವಿಧವಾದ ಹಾಸ್ಯೋಕ್ತಿಯಿಂದ—ಓಹೋ, ಇಷ್ಟು ದಿನಗಳಿಗೆ ಈ ಹೊತ್ತು ನಮಗೆ ಭಕ್ತಿಯುಳ್ಳ ಒಂದು ನಾಯಿ ದೊರೆಯಿತೇ ? ಎಂತಹ ಭಕ್ತನು ? ಎಂತಹ ದೊಡ್ಡಮನುಷ್ಯನಯ್ಯಾ ಇವನು ? ಪಾಪಾತ್ಮರಾದ ನಮ್ಮೊಂದಿಗೆ ನಮ್ಮ ಪಾಪಕಾರ್ಯಗಳ ವಿಷಯ ಮಾತಾಡುತ್ತಿದ್ದಾನೆ. ಇವನು ಎಂತಹ ಭಕ್ತನಿರಬಹುದು ? ಎಲಾ ನಾಯಿಾ, ನಮ್ಮೆದುರಿನಲ್ಲಿ ಮಹಾಭಕ್ತನಂತೆ ನಟಿಸುತ್ತಿದ್ದೀಯಾ ? ನೀನು ಎಂದಾದರೂ ಸತ್ಯವೇದ ಪುಸ್ತಕವನ್ನು ಓದಿದ್ದೀಯಾ? "ಸೇವಕರೇ, ನಿಮ್ಮ ಯಜಮಾನರಿಗೆ ವಿಧೇಯರಾಗಿರ್ರಿ" ಎಂಬ ವಾಕ್ಯವನ್ನು ಓದಲಿಲ್ಲವೇ ? ನಾನು ನಿನ್ನ ಯಜಮಾನನಲ್ಲವೇನು ? ನೀನು ಸುಮ್ಮನೇ ಬಂದಿಯಾ ? ಕರೀ ನಾಯಿಯಾದ ನಿನಗಾಗಿ ನಾನು ಮೂರು ಸಾವಿರದ ಆರುನೂರು ರೂಪಾಯಿಗಳನ್ನು ಕೊಡಲಿಲ್ಲವೇನು ? ಈಗ ನಿನ್ನ ಶರೀರವೂ ಆತ್ಮವೂ ನನ್ನದಲ್ಲವೇನು ? ಹೇಳು, ಬೇಗ ಹೇಳು ಎಂದು ತನ್ನ ಒರಟಾದ ಬೂಟು ಕಾಲಿನಿಂದ ಅವನನ್ನು ಉರುಳಾಡಿಸಿಕೊಂಡು ಒದ್ದನು.

ಕೊರಡೆಯ ಏಟುಗಳಿಂದಲೂ ಕಾಲಿನ ಒದೆಗಳಿಂದಲೂ ಮೈಯೆಲ್ಲಾ ನಜ್ಜುಗುಜ್ಜಾಗಿ ನೋಯುತ್ತಿದ್ದಾಗ್ಯೂ "ನಿನ್ನ ಶರೀರವೂ ಆತ್ಮವೂ ನನ್ನದಲ್ಲವೇನು ?" ಎಂಬ ಯಜಮಾನನ ಪ್ರಶ್ನೆಯು ಟಾಮನ ಕಿವಿಗೆ ಬಿದ್ದಾಕ್ಷಣವೇ ಟಾಮನ ಮುಖವು ಆನಂದದಿಂದಲೂ ಜಯೋತ್ಸಾಹದಿಂದಲೂ ಪ್ರಕಾಶಿಸಿತು. ಅವನ ಹೃದಯದ ಸಂತೋಷಕ್ಕೆ ಮಿತಿಯಿಲ್ಲದಾಯಿತು. ಅವನ ಮುಖದ ಮೇಲೆ ಕಣ್ಣೀರು ಮತ್ತು ರಕ್ತವೂ ಹರಿಯು

ತ್ತಿದ್ದಾಗ್ಯೂ ಆಕಾಶದ ಕಡೆಗೆ ತನ್ನ ಮುಖವನ್ನೆತ್ತಿ—ಧಣಿಯೇ, ಅಲ್ಲ, ಅಲ್ಲ, ಅಲ್ಲ! ಧಣಿಯೇ, ನನ್ನ ಆತ್ಮವು ನಿಮ್ಮದಲ್ಲ. ನೀವು ಅದನ್ನು ಕೊಂಡು ಕೊಳ್ಳಲಿಲ್ಲ. ನನ್ನ ಆತ್ಮವನ್ನು ಬೆಲೆ ಕೊಟ್ಟು ಕೊಂಡುಕೊಂಡವನು ಮತ್ತೊಬ್ಬನಿದ್ದಾನೆ. ಆತನೇ ಅದನ್ನು ಕಾಪಾಡಲು ಶಕ್ತಿಯುಳ್ಳವನಾಗಿ ದ್ದಾನೆ. ನೀವು ನನ್ನನ್ನು ಏನು ಮಾಡಿದಾಗ್ಯೂ ನನಗೆ ಎಂತಹ ಹಿಂಸೆ ಕೊಟ್ಟಾಗ್ಯೂ ಚಿಂತೆಯಿಲ್ಲ. ನನ್ನ ಆತ್ಮವನ್ನು ಮಾತ್ರ ನೀವು ಮುಟ್ಟ ಲಾರಿರಿ. ಅದಕ್ಕೆ ಯಾವ ಕೇಡನ್ನಾದರೂ ಮಾಡಲು ನಿಮಗೆ ಶಕ್ತಿಯಿಲ್ಲ ಅಂದನು.

ಲೆಗ್ರೀ—ಏನು? ನಿನ್ನ ಆತ್ಮವನ್ನು ಮುಟ್ಟಲಾರನೇ? ಅದಕ್ಕೆ ಯಾವ ಕೇಡನ್ನಾದರೂ ಮಾಡಲು ನನ್ನಿಂದಾಗುವುದಿಲ್ಲವೇ? ಇರಲಿ, ನೋಡು ತ್ತೇನೆ. ಎಲಾ ಸಾಂಬೊ, ಕ್ವಿಂಬೂ ಇಲ್ಲಿ ಬನ್ನಿರಿ. ಈ ಕೊಬ್ಬಿದ ಕತ್ತೆ ಯನ್ನು ಹಿಡಿದುಕೊಂಡು ಚೆನ್ನಾಗಿ ಹೊಡೆಯಿರಿ. ಒಂದು ತಿಂಗಳು ವರೆಗೂ ಮರೆಯಬಾರದು ತಿಳಿಯಿತೇ? ಹೊರಗೆ ಎಳೆದುಕೊಂಡುಹೋಗಿರಿ. ಹೂಂ . . . ಹೂಂ . . . ಎಲಾ ನಾಯಿ? ಇಷ್ಟು ಕೊಬ್ಬೇ ನಿನಗೆ? ಎಂದು ಟಾಮನನ್ನು ಗುಲಾಮರ ಕೈಗೆ ಒಪ್ಪಿಸಿ ತಾನು ಹೊರಟು ಹೋದನು.

ಆ ಕರೀ ರಾಕ್ಷಸಾಧಮರಾದ ಗುಲಾಮರಿಬ್ಬರು ಕೂಡಲೇ ಬಂದು ಟಾಮನನ್ನು ಹಿಡಿದುಕೊಂಡರು. ಟಾಮನಿಂದ ಸಹಾಯವನ್ನು ಹೊಂದಿದ ಆ ಬಡಹೆಂಗಸು ಈ ನೋಟವನ್ನು ನೋಡಿ ಸಹಿಸಲಾರದೆ ಅರಚಿ ಕೊಂಡಳು. ಈ ಗುಲಾಮರು ಹೊಡೆಯುವುದಕ್ಕಾಗಿ ಟಾಮನನ್ನು ಹೊರಗೆ ಎಳೆದುಕೊಂಡುಹೋಗುವಾಗ ಅಲ್ಲಿದ್ದ ಗುಲಾಮರೆಲ್ಲರೂ ಉಸಿರು ಬಿಗಿ ಹಿಡಿದುಕೊಂಡು ನಿಂತು ನೋಡುತ್ತಿದ್ದರು.

ಅಧ್ಯಾಯ ೧೨

ಸಮಯ ಸಹಾಯಕಳು

ಗುಲಾಮರು ಟಾಮನನ್ನು ಹೊರಗೆಳೆದುಕೊಂಡು ಬಂದು ಬಹಳ ಕ್ರೂರವಾಗಿ ಹೊಡೆದರು. ಏಟುಗಳನ್ನು ತಡೆಯಲಾರದೆ ನೆಲದ ಮೇಲೆ ಬಿದ್ದು ಟಾಮನು ಮೂರ್ಛೆಹೋದನು. ಕಡೆಗೆ ಇವನನ್ನು ಎಳೆದುಕೊಂಡು ಹೋಗಿ ಒಂದು ಹಳೇ ಮುರುಕು ಗುಡಿಸಿಲಿನಲ್ಲಿ ಮಲಗಿಸಿ, ಗುಲಾಮರು ಹೊರಟುಹೋದರು. ಟಾಮನಿಗೆ ಬಹಳ ಹೊತ್ತಿನ ವರೆಗೂ ಎಚ್ಚರವಾಗ ಲಿಲ್ಲ. ತರುವಾಯ ಸ್ವಲ್ಪ ಎಚ್ಚರವಾಯಿತು. ಕಣ್ಣು ತೆರೆದು ನೋಡಿದನು. ಸಮೀಪದಲ್ಲಿ ಒಬ್ಬರಾದರೂ ಇರಲಿಲ್ಲ. ಮುರುಕು ಗುಡಿಸಲು, ಎಲ್ಲಿ ನೋಡಿದಾಗ್ಯೂ ಸ್ವಲ್ಪವಾದರೂ ಬೆಳಕು ಕಾಣಿಸಲಿಲ್ಲ. ಸುತ್ತಲೂ ಕತ್ತ ಲೆಯು. ಹೊಡೆತಗಳಿಂದ ಮೈಯೆಲ್ಲಾ ನಜ್ಜುಗುಜ್ಜಾಗಿದ್ದಿತು. ಘಾಯ ಗಳಿಂದ ಸುರಿದ ರಕ್ತವು ಮೈ ಮೇಲೆ ಹೆಪ್ಪುಗಟ್ಟಿತ್ತು. ಕೈಕಾಲುಗಳನ್ನು ಆಡಿಸುವುದಕ್ಕಾಗಲಿಲ್ಲ, ತಡೆಯಲಾರದ ನೋವು. ಈ ನೋವಿನಲ್ಲಿಯೇ— ಓ ದೇವರೇ, ನನ್ನ ಸ್ವಾಮಿಯೇ, ನನ್ನ ಮೇಲೆ ಇನ್ನೂ ನಿನ್ನ ದೃಷ್ಟಿ ಬೀಳ ಲಿಲ್ಲವೇ ? ನಾನು ಅಬಲನು ! ಸ್ವಾಮಿಯೇ, ಸಹಾಯಮಾಡು ! ಕಡೆಯ ವರೆಗೂ ನನ್ನೊಂದಿಗಿದ್ದು ನನಗೆ ಜಯವನ್ನು ಕೊಡು ಎಂದು ಮೂಲು ಗುತ್ತಾ ಪ್ರಾರ್ಥಿಸಿದನು. ಗುಡಿಸಿಲಿನಲ್ಲಿ ಯಾರೋ ತಿರುಗಾಡುವ ಶಬ್ದ ಕೇಳಿಸಿದಂತಾಗಲು—ಅಯ್ಯಾ, ಯಾರಯ್ಯಾ ನೀನು ? ನೀರಿಲ್ಲದೆ ನನ್ನ ನಾಲಿಗೆಯು ಒಣಗಿಹೋಗಿದೆ, ದೇವರ ಮುಖವನ್ನಾದರೂ ನೋಡಿ ನನಗೆ ಸ್ವಲ್ಪ ನೀರು ಕೊಡು ಎಂದು ಬೇಡಿಕೊಂಡನು.

ಗುಡಿಸಿಲಿನೊಳಗೆ ಬಂದವಳು ಕ್ಯಾಸಿ ಎಂಬ ಒಬ್ಬ ಗುಲಾಮ ಸ್ತ್ರೀಯು. ಟಾಮನ ಆರ್ತಧ್ವನಿಯನ್ನು ಕೇಳಿದ ಕೂಡಲೇ ತನ್ನ ಕೈಯಲ್ಲಿದ್ದ ಕೈ ದೀಪವನ್ನು ಕೆಳಗಿಟ್ಟು, ಬಟ್ಟಲಿಗೆ ಶೀಸೆಯಲ್ಲಿ ತಂದಿದ್ದ ನೀರನ್ನು ಹಾಕಿ, ಟಾಮನ ತಲೆಯನ್ನು ಮೇಲಕ್ಕೆ ಎತ್ತಿ ಹಿಡಿದುಕೊಂಡು, ನೀರನ್ನು ಕುಡಿಸಿ

ದಳು. ಪಾಪ! ಬಡ ಟಾಮನಿಗೆ ಎಷ್ಟು ದಾಹವಾಗಿದ್ದಿತೋ! ಮೇಲಿಂದ ಮೇಲೆ ನಾಲ್ಕೈದು ಬಟ್ಟಲು ನೀರು ಕುಡಿದನು.

ಸ್ತ್ರೀಯು—ಕುಡಿಯಪ್ಪಾ ಕುಡಿ, ನಿನಗೆ ಎಷ್ಟು ಬೇಕೋ ಅಷ್ಟು ಕುಡಿ, ಬೇಕಾದಷ್ಟು ತರುತ್ತೇನೆ. ನೀನು ಈಗ ಎಂತಹ ಕಷ್ಟಕರವಾದ ಸ್ಥಿತಿಯಲ್ಲಿದ್ದೀಯೆಂದು ನಾನು ತಿಳಿದೇ ಇಲ್ಲಿಗೆ ಬಂದಿದ್ದೇನೆ. ನಿನ್ನ ಹಾಗೆ ಕಷ್ಟಪಡುವವರಿಗೆ ಇಂತಹ ಅಪರಾತ್ರಿಯಲ್ಲಿ ನೀರನ್ನು ತಂದು ಉಪಚರಿಸುವುದು ನನಗೆ ಇದೇ ಮೊದಲನೇ ಸಾರಿಯಲ್ಲ ಎಂದು ಹೇಳಿ, ತಾನು ತಂದಿದ್ದ ಹಾಸಿಗೆಯನ್ನು ನೆಲದ ಮೇಲೆ ಹಾಸಿ, ಅದರ ಮೇಲೆ ತಣ್ಣೀರಿನ ಬಟ್ಟೆಗಳನ್ನು ಹೊದಿಸಿ ಮಲಗಲು ಹೇಳಿದಳು.

ಟಾಮನ ಶರೀರವೆಲ್ಲಾ ಪೆಟ್ಟುಗಳಿಂದಲೂ ಘಾಯಗಳಿಂದಲೂ ಜಿಗಿದುಕೊಂಡು ಕದಲುವುದಕ್ಕೆ ಆಗಲಿಲ್ಲ. ಬಿದ್ದಿದ್ದ ಸ್ಥಳದಿಂದ ಎದ್ದು ಹಾಸಿಗೆಯ ಮೇಲೆ ಮಲಗಲು ಬಹಳ ಕಷ್ಟವಾಯಿತು. ಕಡೆಗೆ ಹೇಗೋ ತೆವಳಿಕೊಂಡು ಬಂದು ಮಲಗಿದನು. ಹಾಸಿಗೆಯ ಮೇಲೆ ಹಾಸಿದ್ದ ತೇವದ ಬಟ್ಟೆಯ ತನುವಿನಿಂದಲೂ ಆ ಸ್ತ್ರೀಯು ಘಾಯಗಳಿಗೆ ಹಚ್ಚಿದ ಔಷಧಗಳಿಂದಲೂ ನೋವು ಬಹಳ ಮಟ್ಟಿಗೆ ಕಡಿಮೆಯಾಯಿತು. ತರುವಾಯ ಈ ಸ್ತ್ರೀಯು ತಾನು ತಂದಿದ್ದ ಹಳೇ ಹರಳೆಯನ್ನು ಒಂದು ಬಟ್ಟೆಯಲ್ಲಿ ಸುತ್ತಿ, ತಲೆದಿಂಬಿನಂತೆ ಮಾಡಿ, ಅವನ ತಲೇ ಕೆಳಗೆ ಇಟ್ಟು—ಇದಕ್ಕಿಂತಲೂ ಹೆಚ್ಚಾಗಿ ನಾನು ಇನ್ನೇನು ಮಾಡಲಿ? ನಿನ್ನಂತಹ ಒಡಲಾಗುವುಳಾದ ನನ್ನ ಕೈಯಲ್ಲಾಗುವುದೇನು ಅಂದಳು.

ಟಾಮನು—ಅಮ್ಮಾ, ನೀನು ನನಗೆ ಬಹಳ ಉಪಕಾರವನ್ನು ಮಾಡಿದಿ, ನಿನಗೆ ನನ್ನ ವಂದನೆಗಳು. ಇದನ್ನು ನಾನೆಂದಿಗೂ ಮರೆಯಲಾರೆನು ಅಂದನು.

ಆ ಸ್ತ್ರೀಯು ಟಾಮನ ಹಾಸಿಗೆಯ ಪಕ್ಕದಲ್ಲಿ ಕೂತುಕೊಂಡು ಸ್ವಲ್ಪ ಹೊತ್ತಾದ ತರುವಾಯ—ಟಾಮ್ಮಾವಾ, ನೀನು ಬಹಳ ಧೈರ್ಯಶಾಲಿಯು. ನೀನು ಹೇಳುವುದು ನ್ಯಾಯವಾಗಿಯೇ ಇದೆ. ಆದರೂ ಪ್ರಯೋಜನವೇನು? ಇಲ್ಲಿ ನ್ಯಾಯಕ್ಕಾಗಿ ಹೋರಾಡುವುದರಿಂದ ಫಲವೇನು? ಈ

ನಮ್ಮ ಯಜಮಾನನೂ ಒಂದೇ, ಪಿಶಾಚನೂ ಒಂದೇ. ಇಂತಹವನ ಕೈಯಲ್ಲಿ ಸಿಕ್ಕಿಬಿದ್ದಿದ್ದೀ. ಇವನು ನಿನಗಿಂತಲೂ ಬಲಿಷ್ಠನು. ನೀನು ಅವನಿಗೊಳಗಾಗುವುದೇ ಒಳ್ಳೇದು ಅಂದಳು.

ಟಾಮನು—ದೇವರೇ! ದೇವರೇ! ಎಂದು ಮೂಲುಗುತ್ತಾ—ಅಯ್ಯೋ, ನಾನು ಹೇಗೆ ಇವನಿಗೊಳಗಾಗಲಿ! ಅಂದನು.

ಸ್ತ್ರೀಯು—ಟಾಮ್ಮಾವಾ, ದೇವರೇ! ದೇವರೇ! ಎಂದು ದೇವರಿಗೆ ಮೊರೆಯಿಡುವುದರಿಂದ ಪ್ರಯೋಜನವೇನೂ ಇಲ್ಲ. ದೇವರಿದ್ದಾನೆಂದು ನಾನು ನಂಬುವುದೂ ಇಲ್ಲ. ದೇವರು ಇರುವುದು ನಿಜವಾಗಿದ್ದರೂ ಆತನು ನಮ್ಮ ಪಕ್ಷವೇನೂ ಇಲ್ಲ. ನಮ್ಮನ್ನು ಬಾಧಿಸುವ ದುಷ್ಟರ ಪಕ್ಷವಾಗಿದ್ದುಕೊಂಡು, ಅವರಿಗೇ ಸಹಾಯಮಾಡುತ್ತಾನೆ ಅಂದಳು.

ಇಂತಹ ನಾಸ್ತಿಕತ್ವದ ಮಾತುಗಳನ್ನು ಕೇಳಿದ ಕೂಡಲೇ ಟಾಮನ ಮೈಯೆಲ್ಲಾ ನಡುಗಿಹೋಯಿತು. ಕಣ್ಣುಗಳನ್ನು ಮುಚ್ಚಿಕೊಂಡನು.

ಸ್ತ್ರೀಯು—ಟಾಮ್ಮಾವಾ, ಈ ಸ್ಥಳದ ವಿಷಯದಲ್ಲಿ ನಿನಗೇನೂ ತಿಳಿಯದು. ನಾನು ಇಲ್ಲಿ ಕಳೆದ ಐದು ವರುಷಗಳಿಂದ ಇದ್ದೇನೆ. ಈ ಸ್ಥಳದಲ್ಲಿ ನಡೆಯುವ ಪ್ರತಿಯೊಂದು ಸಂಗತಿಯೂ ನನಗೆ ತಿಳಿದಿದೆ. ನಾನು ದೆವ್ವವನ್ನು ಎಷ್ಟರ ಮಟ್ಟಿಗೆ ಹಗೆಮಾಡುತ್ತೇನೋ ಅದರಂತೆ ಈ ನಮ್ಮ ಯಜಮಾನನಾದ ಲೆಗ್ರೀಯನ್ನು ಸಹ ಹಗೆಮಾಡುತ್ತೇನೆ. ಇದು ಸುಡುಗಾಡಿನಂತಹ ಸ್ಥಳವು. ಸುತ್ತಲು ಹತ್ತು ಮೈಲಿಗಳ ವರೆಗೂ ಒಂದು ತೋಟವಾದರೂ ಇಲ್ಲ. ನಿನ್ನನ್ನು ಜೀವಸಹಿತ ಸುಟ್ಟರೂ ತುಂಡು ತುಂಡಾಗಿ ಕತ್ತರಿಸಿದರೂ ನಾಯಿಗಳಿಂದ ಶೀಳಿಸಿ ಕೊಲ್ಲಿಸಿದರೂ ಮರಕ್ಕೆ ತೂಗುಗಟ್ಟಿ ಕೊರಡೆಗಳಿಂದ ಹೊಡೆದು ನಿನ್ನನ್ನು ಕೊಂದರೂ ಕೇಳುವವರು ಗತಿಯಿಲ್ಲ. ಸಾಕ್ಷಿ ಹೇಳುವುದಕ್ಕೆ ಒಬ್ಬ ಬಿಳೀ ಮನುಷ್ಯನಾದರೂ ಇಲ್ಲ. ಕಪ್ಪುಗುಲಾಮರಾದ ನಮ್ಮ ವಿಷಯದಲ್ಲಿ ಇಲ್ಲಿ ಯಾವ ತರವಾದ ನ್ಯಾಯನಿಬಂಧನೆಗಳಾದರೂ ಇಲ್ಲ. ನಾನು ಇಲ್ಲಿಗೆ ಬಂದಂದಿನಿಂದ ಈ ಮನುಷ್ಯನು ಮಾಡಿರುವ ಅನೇಕಾನೇಕ ಭಯಂಕರವೂ ಕ್ರೂರವೂ ಆದ ಕೆಲಸಗಳನ್ನು ನೋಡಿದ್ದೇನೆ. ಅವುಗಳನ್ನು ನಾನು ನಿನಗೆ ಹೇಳಿದರೆ ಭಯ

ದಿಂದ ನಿನ್ನ ಮೈ ಮೇಲಣ ಕೂದಲು ಎದ್ದು ನಿಲ್ಲಬಹುದು. ಆದುದರಿಂದ ಟಾಮ್ಮಾವಾ, ನನ್ನ ಮಾತನ್ನು ಕೇಳು, ಈ ನೀಚ ರಾಕ್ಷಸನೊಂದಿಗೆ ಹೋರಾಡುವುದರಿಂದ ಏನೇನು ಪ್ರಯೋಜನವಿಲ್ಲ ಅಂದಳು.

ಈಕೆಯ ಮಾತುಗಳನ್ನು ಕೇಳಿ ಟಾಮನಿಗೆ ದಿಕ್ಕುತೋರದೆ ಭಯಂಕರ ವಾದ ಕತ್ತಲು ಮುಸಕಿದಂತಾಯಿತು. ಕೈಗಳನ್ನು ಜೋಡಿಸಿ—ಯೇಸು ಸ್ವಾಮಿಯೇ, ದಿಕ್ಕಿಲ್ಲದ ಕಪ್ಪುಗುಲಾಮರಾದ ನಮ್ಮನ್ನು ಸಂಪೂರ್ಣ ವಾಗಿ ಮರೆತಿಯಾ ಎಂದು ಪ್ರಾರ್ಥಿಸಿದನು. ಕಣ್ಣೀರು ಕಿವಿಗಳ ಮೇಲಿ ನಿಂದ ಹರಿದು ತಲೆದಿಂಬಿನ ಮೇಲೆ ತೊಟ್ಟಿಕ್ಕುತ್ತಿದ್ದಿತು.

ಸ್ತ್ರೀಯು ಪುನಃ ಮಾತಾಡಲು ಪ್ರಾರಂಭಿಸಿ—ಟಾಮ್ಮಾವಾ, ನಿನ್ನ ಜೊತೆಯಲ್ಲಿ ಕೆಲಸಮಾಡುವ ಈ ನಿರ್ಭಾಗ್ಯರಾದ ಗುಲಾಮರು ಎಂತಹ ವರೆಂದು ನೆನಸಿದ್ದೀ ? ಅವರಿಗಾಗಿ ನೀನೇಕೆ ಇಂತಹ ಬಾಧೆಯನ್ನನುಭವಿಸ ಬೇಕು ? ಸಮಯ ಬಂದಾಗ ಪ್ರತಿಯೊಬ್ಬರು ನಿನಗೆ ವಿರೋಧವಾಗಿ ತಿರುಗಿಬೀಳಲು ಹಿಂದೆಗೆಯುತ್ತಾರೆಂದು ನೆನಸಿದ್ದೀಯಾ ? ಇಂತಹ ನೀಚ ರನ್ನು ಹೊಡೆಯಬೇಕೆಂದು ಯಜಮಾನನು ನಿನಗೆ ಅಪ್ಪಣೆ ಕೊಟ್ಟಾಗ, ಆತನ ಅಪ್ಪಣೆಯನ್ನು ಮೀರಿ, ಇಂತಹ ಬಾಧೆಯನ್ನು ನೀನನುಭವಿಸು ವುದೇಕೆ ? ಇದರಿಂದ ನಿನಗಾಗುವ ಪ್ರಯೋಜನವೇನು ? ಇಲ್ಲಿರುವ ಗುಲಾ ಮರು ಬಹಳ ಕಠಿಣಸ್ಥರು. ಟಾಮ್ಮಾವಾ, ನಾನು ಹೇಳಿದುದನ್ನು ಚೆನ್ನಾಗಿ ಆಲೋಚಿಸು ಅಂದಳು.

ಟಾಮನು—ಅಯ್ಯೋ ! ಪಾಪ ! ಅವರು ಕಠಿಣಸ್ಥರಾಗಿದ್ದರೆ ಅದಕ್ಕೆ ಕಾರಣರು ಯಾರು ? ನಾನು ಸಹ ಎಚ್ಚರಿಕೆಯುಳ್ಳವನಾಗಿರದಿದ್ದರೆ ಅವ ರಂತೆಯೇ ಆಗುವುದಕ್ಕೆ ಸಂಶಯವೇನು ? ಇಲ್ಲಮ್ಮಾ ಇಲ್ಲ. ನಾನು ನನ್ನ ಹೆಂಡತಿಯನ್ನು, ಪ್ರಿಯ ಮಕ್ಕಳನ್ನು, ಮನೆಯನ್ನು, ಪ್ರೀತಿಯುಳ್ಳ ಯಜಮಾನನನ್ನು ಎಲ್ಲರನ್ನೂ ಎಲ್ಲವನ್ನೂ ಕಳೆದುಕೊಂಡಿದ್ದೇನೆ. ದಯವುಳ್ಳ ಆ ನನ್ನ ಯಜಮಾನನು ಇನ್ನೊಂದೇ ಒಂದು ವಾರ ಜೀವಿಸಿರು ತ್ತಿದ್ದರೆ, ಈ ಗುಲಾಮತ್ವದಿಂದ ನನ್ನನ್ನು ಬಿಡುಗಡೆ ಮಾಡುತ್ತಿದ್ದನು. ಈ ಲೋಕದಲ್ಲಿ ಎಲ್ಲವನ್ನು ಕಳೆದುಕೊಂಡೆನು ! ಎಲ್ಲವು ಹೋದವು !

ಇನ್ನೆಂದಿಗೂ ಅವು ನನಗೆ ದೊರೆಯಲಾರವು. ಆದರೆ ಪರಲೋಕವನ್ನು ಸಹ ನಾನು ಕಳೆದುಕೊಳ್ಳಲಾರೆನು. ಇನ್ನೆಂತಹ ಕಷ್ಟ ಬಂದಾಗ್ಯೂ ನನ್ನ ಮನಸ್ಸಾಕ್ಷಿಗೆ ವಿರೋಧವಾಗಿ ನಡೆದು ದುಷ್ಟನಾಗಲಾರೆನು ಅಂದನು.

ಈ ಗುಲಾಮ ಸ್ತ್ರೀಯು ಹೊರಟುಹೋಗಲು ಎದ್ದಳು. ಟಾಮನು— ಅವರು ನನ್ನ ಅಂಗಿಯನ್ನು ಆ ಮೂಲೆಯಲ್ಲಿ ಬಿಸಾಡಿದಂತಾಯಿತು, ಆ ಅಂಗಿಯ ಜೇಬಿನಲ್ಲಿ ನನ್ನ ವೇದಪುಸ್ತಕವಿದೆ, ಅದನ್ನು ತೆಗೆದುಕೊಂಡು ಒಂದು ಅಧ್ಯಾಯವನ್ನು ದಯವಿಟ್ಟು ಓದಮ್ಮಾ ಎಂದು ಬೇಡಿಕೊಂಡನು.

ಅಂಗಿಯ ಜೇಬಿನಲ್ಲಿದ್ದ ವೇದಪುಸ್ತಕವನ್ನು ಕೈಗೆ ತೆಗೆದುಕೊಂಡಳು. ಯೇಸು ಕ್ರಿಸ್ತನ ಶ್ರಮೆ, ಆತನ ಶಿಲುಬೆ, ಮರಣಗಳ ವಿಷಯ ಹೇಳಿರುವ ಅಧ್ಯಾಯವನ್ನು ಓದುವಂತೆ ಟಾಮನು ಹೇಳಿದನು. ಸ್ವಾಮಿಯು ಶಿಲುಬೆಯ ಮೇಲೆ ಸಾಯುವಾಗ—"ತಂದೆಯೇ, ಅವರನ್ನು ಕ್ಷಮಿಸು, ಯಾಕೆಂದರೆ ಅವರು ಏನು ಮಾಡುತ್ತಾರೆಂಬುದು ಅವರಿಗೆ ತಿಳಿಯದು" ಎಂದು ಹೇಳಿದ ಸ್ವಾಮಿಯವರ ಕಡೇ ಮಾತುಗಳನ್ನು ಓದುವಾಗ ಆಕೆಯ ಧ್ವನಿಯು ತಗ್ಗಿತು. ಮುಂದೆ ಓದಲು ಸಾಧ್ಯವಾಗಲಿಲ್ಲ. ನಿಟ್ಟುಸಿರುಗರೆದಳು. ಟಾಮನು ಸಹ ಆಕೆಯೊಂದಿಗೆ ಅತ್ತನು.

ಇಬ್ಬರ ದುಃಖವು ಸ್ವಲ್ಪ ಶಮನವಾದ ಮೇಲೆ ಎಂದಾದರೊಂದು ದಿನ ನಾನು ಸಾಯುವವನೇ ಅಲ್ಲವೇ? ಸತ್ತಮೇಲೆ ಅವರು ನನಗೇನು ಮಾಡಿಯಾರು? ನನ್ನ ಸ್ವಾಮಿಯು ನನಗೆ ಸಹಾಯಮಾಡಿ ಕಡೆದೇರಿಸುತ್ತಾನೆಂದು ನನಗೆ ಪರಿಷ್ಕಾರವಾಗಿ ತಿಳಿದಿದೆ ಅಂದನು.

ಈಕೆಯು ಮಾತಾಡದೆ ಸ್ವಲ್ಪಹೊತ್ತು ನಿಶ್ಶಬ್ದವಾಗಿದ್ದು ತರುವಾಯ— ಟಾಮಣ್ಣಾವಾ, ನನ್ನಿಂದ ಮತ್ತೇನಾದರೂ ಸಹಾಯ ಆಗಬೇಕಾಗಿದೆಯೇ? ಇನ್ನು ಸ್ವಲ್ಪ ನೀರು ಕೊಡಲೇ ಅಂದು, ಕುಡಿಯಲು ನೀರು ಕೊಟ್ಟಳು. ಟಾಮನು ನೀರು ಕುಡಿದು ಮಾತಾಡುವುದಕ್ಕೆ ಬಾಯೆತ್ತಿದನು. ಈ ಹೆಂಗಸು—ಟಾಮಣ್ಣಾವಾ, ಮಾತಾಡಬೇಡ, ಮಲಗಿ ನಿದ್ರೆಮಾಡು ಎಂದು ಅವನಿಗೆ ಎಟಕಿಸುವಂತೆ ಒಂದು ಸ್ಥಳದಲ್ಲಿ ನೀರನ್ನಿಟ್ಟು ಹೊರಟುಹೋದಳು. ಆಕೆಯು ಹೋದ ತರುವಾಯ ಬಹಳ ಹೊತ್ತಿನ ವರೆಗೂ ಟಾಮನಿಗೆ ನಿದ್ರೆ

ಬರಲಿಲ್ಲ. ಅನೇಕತರವಾದ ಯೋಚನೆಗಳು ತಲೆದೋರಿದವು. ಪ್ರಾತಃಕಾಲದ ತಂಗಾಳಿಗೆ ಸ್ವಲ್ಪ ನಿದ್ರೆ ಹತ್ತಿದಂತಾಯಿತು. ಸ್ವಲ್ಪ ಹೊತ್ತಿನೊಳಗಾಗಿಯೇ ಬೆಳಗಾಯಿತು.

ಅಧ್ಯಾಯ ೧೩

ಟಾಮನ ಭಕ್ತಿಪರೀಕ್ಷೆ

ಬೆಳಗಾಯಿತು. ಲೆಗ್ರೀಯು ಟಾಮನು ಮಲಗಿದ್ದ ಗುಡಿಸಿಲಿನೊಳಕ್ಕೆ ಬಂದು ಅವನನ್ನು ಒಂದು ಒದೆ ಒದ್ದು—ಏನೋ ಗುಲಾಮಾ, ಹೇಗಿದ್ದೀ ? ನಾನು ಹೇಳಲಿಲ್ಲ ? ನಿನಗೆ ಬುದ್ಧಿ ಕಲಿಸುತ್ತೇನೆಂದು ? ರಾತ್ರೀ ಹೊಡತದ ರುಚಿ ಹೇಗಿದೆ ? ಹೇಳು ಅಂದನು. ಟಾಮನು ಬದಲು ಮಾತಾಡಲಿಲ್ಲ. ಲೆಗ್ರೀಯು ಮತ್ತೊಂದು ಒದೆ ಒದ್ದು—ಎಲೋ ನಾಯಿ, ಏಳೋ, ಏಳು ಅಂದನು. ಟಾಮನು ಬಹಳ ಕಷ್ಟದಿಂದ ಹಾಸಿಗೆಯಿಂದ ಎದ್ದು ಲೆಗ್ರೀಯ ಮುಂದೆ ನಿಂತನು.

ಲೆಗ್ರೀ—ಎಲೋ ಗುಲಾಮಾ, ರಾತ್ರೀ ನೀನು ತೋರಿಸಿದ ಮೊಂಡುತನಕ್ಕಾಗಿ ನನ್ನ ಕಾಲಿಗೆ ಬಿದ್ದು ಕ್ಷಮಾಪಣೆಯನ್ನು ಬೇಡಿಕೊ ಅಂದನು. ಟಾಮನು ಕದಲಲಿಲ್ಲ.

ಲೆಗ್ರೀ—ಏನೋ, ಕ್ಷಮಾಪಣೆ ಕೇಳುವುದಿಲ್ಲವೇ ?

ಟಾಮನು (ಸೌಮ್ಯಭಾವದಿಂದ)—ಧಣಿಯೇ, ಕ್ಷಮಾಪಣೆಯನ್ನು ಬೇಡಲು ನಾನು ಮಾಡಿದ ಅಂತಹ ತಪ್ಪೇನು ? ನನ್ನ ಮನಸ್ಸಿಗೆ ನ್ಯಾಯವಾಗಿ ತೋರಿದುದನ್ನೇ ಮಾಡಿದ್ದೇನೆ. ಅಂತಹ ಸಂದರ್ಭ ಮತ್ತೊಂದಾವರ್ತಿ ಒದಗಿದರೆ ಅದರಂತೆಯೇ ಮಾಡುತ್ತೇನೆ. ನೀವು ನನ್ನನ್ನು ಏನು ಮಾಡಿದಾಗ್ಯೂ ಸರಿಯೆ ಅಂತಹ ಕ್ರೂರಕೆಲಸವನ್ನು ಮಾಡಲಾರೆನು ಅಂದನು. ಲೆಗ್ರೀಗೆ ಬಹಳ ಕೋಪ ಬಂದಿತು. ಸಹಿಸಲಾಗದೆ—ಹಾಗೋ ? ಸರಿ, ಸರಿ. ನಿನ್ನನ್ನು ಮರಕ್ಕೆ ಕಟ್ಟಿ ಸುತ್ತಲು ಬೆಂಕಿಯನ್ನು ಹಾಕಿಸಿ ನಿನ್ನನ್ನು ಸುಡಿಸುತ್ತೇನೆ. ಆಗ ಏನು ಮಾಡುತ್ತೀಯೋ ಗುಲಾಮ, ಹೇಳು ಅಂದನು.

ಟಾಮನು—ಧಣಿಯೇ, ನೀನು ಇದಕ್ಕಿಂತಲೂ ಬಹು ಭಯಂಕರವಾದ ಕೆಲಸಗಳನ್ನು ಮಾಡುವವನೆಂದು ನನಗೆ ತಿಳಿದೇ ಇದೆ. ಈ ನನ್ನ ಶರೀರವನ್ನು ಕೊಂದಮೇಲೆ ನನಗೆ ಮತ್ತೇನನ್ನೂ ಮಾಡಲಾರಿ. ನೀನು ನನ್ನನ್ನು ಮೂರುಸಾವಿರದ ಆರುನೂರು ರೂಪಾಯಿಗಳಿಗೆ ಕೊಂಡುಕೊಂಡದ್ದು ನಿಜ. ಅದಕ್ಕಾಗಿ ನಾನು ನಿನಗೆ ನಂಬಿಕೆಯುಳ್ಳ ಗುಲಾಮನಾಗಿರುತ್ತೇನೆ. ನನ್ನ ಕೈಕೆಲಸಗಳನ್ನೂ ನನ್ನ ಸಮಯವನ್ನೂ ನನ್ನಲ್ಲಿರುವ ಬಲವೆಲ್ಲವನ್ನೂ ನಿನಗೆ ಕೊಡುತ್ತೇನೆ. ಆದರೆ . . . ಧಣಿಯೇ, . . . ಈ . . . ಈ . . . ನನ್ನ ಆತ್ಮವನ್ನು ಯಾವ ಮನುಷ್ಯನಿಗಾದರೂ ನರಿಯೇ ವಶಪಡಿಸುವುದಿಲ್ಲ. ಸಾಯುವುದಕ್ಕೆ ನಾನು ಭಯಪಡುತ್ತೇನೆಂದು ನೆನಸುತ್ತೀಯಾ? ಹಾಗೆ ನೆನಸಬೇಡ. ನಾನೆಂದಿಗೂ ಭಯಪಡುವುದಿಲ್ಲ. ಕೊರಡೆಯಿಂದ ನನ್ನನ್ನು ಹೊಡಿ, ಉಪವಾಸ ಕೆಡುವು, ಸುಡು, ನನಗೆ ಭಯವಿಲ್ಲ. ನೀನು ಹೀಗೆ ಮಾಡುವುದರಿಂದ ನಾನು ಯಾವ ಸ್ಥಳಕ್ಕೆ ಹೋಗಬೇಕೆಂದು ಮನಃಪೂರ್ವಕವಾಗಿ ಅಪೇಕ್ಷಿಸುತ್ತೇನೋ ಅಂತಹ ಸ್ಥಳಕ್ಕೆ ಬೇಗನೆ ಹೋಗಲು ನೀನು ನನಗೆ ಸಹಾಯಮಾಡಿದಂತೆಯೇ ಆಗುತ್ತದೆ ಅಂದನು.

ಈ ಮಾತುಗಳನ್ನು ಕೇಳಿದ ಕೂಡಲೇ ಟಾಮನನ್ನು ನಿಂತಲ್ಲಿಯೇ ಕೊಲ್ಲಬೇಕೆಂದೆನಿಸಿತು. ಆದರೆ ಹತ್ತೀ ಹೊಲಗಳಲ್ಲಿ ಹತ್ತಿಯನ್ನು ಬಿಡಿಸಲು ಬಹಳ ಮಂದಿ ಗುಲಾಮರು ಅವಶ್ಯಕವಾಗಿದ್ದಾರೆಂಬ ನೆನಪುಂಟಾಗಿ ಕೋಪವನ್ನು ಸಹಿಸಲಾರದೆ ಗುಡಿಸಿಲಿನಿಂದ ಹೊರಗೆ ಹೋಗುವಾಗ—ಎಲೋ ನಾಯಿಾ, ಇರಲಿ, ಇನ್ನೊಂದಾವರ್ತಿ ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಹೇಳುತ್ತಾ ಹೊರಟುಹೋದನು.

ಟಾಮನ ಘಾಯಗಳು ಇನ್ನೂ ವಾಸಿಯಾಗಲಿಲ್ಲ. ನೈನೋವು ಕಡಿಮೆಯಾಗಲಿಲ್ಲ. ಆದರೂ ಹೊಲಗಳಿಗೆ ಹೋಗಿ ಕೆಲಸಮಾಡಲು ಲೆಗ್ರೀಯು ಬಲಾತ್ಕಾರಮಾಡಿದನು. ಟಾಮನು ಯತ್ನವಿಲ್ಲದೆ ಕೆಲಸ ಮಾಡಲೇ ಬೇಕಾಯಿತು. ದುಷ್ಟನಾದ ಲೆಗ್ರೀಯು ಟಾಮನನ್ನು ತನ್ನಿಂದಾದಷ್ಟು ಕಷ್ಟಪಡಿಸಿದನು. ಸ್ವಲ್ಪ ಹೊತ್ತಾದರೂ ಸುಮ್ಮನಿರಗೊಡುತ್ತಿರಲಿಲ್ಲ. ಬೆಳಿಗ್ಗೆ ಕೆಲಸಕ್ಕೆ ಹೋಗಿ ಸಾಯಂಕಾಲ ಗುಡಿಸಿಲಿಗೆ ಬರುವುದ

ರೊಳಗಾಗಿ ಕೈಕಾಲುಗಳಲ್ಲಿ ಉಸಿರಿಲ್ಲದೆ ಸೋತು ಸುಣ್ಣವಾಗಿ ಬರುತ್ತಿದ್ದನು. ವೇದಪುಸ್ತಕವನ್ನು ತೆಗೆದುಕೊಂಡು ಕೆಲವು ವಚನಗಳನ್ನು ಓದುವುದಕ್ಕೆ ಸಹ ಶಕ್ತಿಯಿರುತ್ತಿರಲಿಲ್ಲ. ಕರ್ಮವೇ ಜಯ ಧರ್ಮವೇ ಲಯವಾಗುತ್ತಿದ್ದಿತು. ಟಾಮನು ನಿರುತ್ಸಾಹಿಯಾಗಿ ನಿರಾಶನಾದನು. ತಾನು ತನ್ನ ಹೆಂಡತಿಗೆ ಬರೆದ ಕಾಗದದ ವಿಷಯ ಚಿಂತಿಸುತ್ತಾ ಈ ಕಷ್ಟದಿಂದ ಬಿಡುಗಡೆಮಾಡಲು ಕೆಂಟಕೀಯಿಂದ ಯಾರನ್ನಾದರು ಕಳುಹಿಸಬೇಕೆಂದು ದೇವರಿಗೆ ಪ್ರಾರ್ಥಿಸುತ್ತಿದ್ದನು. ಯಾರೂ ಬರಲಿಲ್ಲ. ದೇವರು ತನ್ನನ್ನು ಮರೆತುಬಿಟ್ಟಿದ್ದಾನಲ್ಲಾ ಎಂದು ಚಿಂತಿಸುತ್ತಿದ್ದನು.

ಒಂದು ದಿನ ಟಾಮನು ಕೆಲಸದಿಂದ ಬಂದು ತನ್ನ ಮುರುಕು ಗುಡಿಸಿಲಿನಲ್ಲಿ ಅಡಿಗೇ ಮಾಡಿಕೊಳ್ಳುತ್ತಿದ್ದಾಗ ಲೆಗ್ರೀಯು ಒಳಕ್ಕೆ ಬಂದು—ನೋಡಿದೇನೋ ಟಾಮಾ, ನಿನ್ನ ಸ್ವಾಮಿಯು ನಿನಗೆ ಸಹಾಯಮಾಡುವುದು? ಈಗಲಾದರೂ ನಿನಗೆ ತಿಳಿಯಿತೇ? ನಿನ್ನ ಮತವೋ ಬೂಟಾಟಿಕೆಯ ಮತವಾಗಿದೆ. ಅದನ್ನು ನಂಬಿಕೊಂಡಿರುವ ನಿನ್ನನ್ನು ಹುಚ್ಚನೆನ್ನಬೇಕಲ್ಲವೇ? ಈಗಲಾದರೂ ಅದನ್ನೆಲ್ಲಾ ಬಿಟ್ಟು ನಾನು ಹೇಳಿದಂತೆ ಕೇಳಿಕೊಂಡಿರು ಅಂದನು.

ಟಾಮನು—ಧಣಿಯೇ, ನಾನು ಯಾವ ಸ್ವಾಮಿಯನ್ನು ನಂಬಿಕೊಂಡಿದ್ದೇನೋ ಆ ಯೇಸುಸ್ವಾಮಿಯು ನನಗೆ ಸಹಾಯಮಾಡಿದರೂ ಸರಿಯೇ ಮಾಡದಿದ್ದರೂ ಸರಿಯೇ ನನ್ನ ಮೂಗಿನಲ್ಲಿ ಶ್ವಾಸವಾಡುವವರೆಗೂ ನಾನು ಖಂಡಿತವಾಗಿ ಆತನನ್ನು ನಂಬದೆ ಇರಲಾರೆನು. ಏನಾದರೂ ಆಗಲಿ ಚಿಂತೆಯಿಲ್ಲ ಎನ್ನಲು, ಲೆಗ್ರೀಯು ಅವನ ಮುಖದ ಮೇಲೆ ಉಗುಳಿ, ಒದ್ದು—ಈಗಿನ ಪೂರ್ತಿ ನಿನ್ನನ್ನು ಬಿಡುತ್ತೇನೆ. ಮತ್ತೊಂದಾವರ್ತಿ ನೋಡಿಕೊಳ್ಳುತ್ತೇನೆಂದು ಹೇಳಿ ಬೈದುಕೊಂಡು ಹೋಗಿಬಿಟ್ಟನು.

ಟಾಮನಿಗೆ ಏನುಮಾಡುವುದಕ್ಕಾಗಲೀ ಮಾತಾಡುವುದಕ್ಕಾಗಲೀ ದಿಕ್ಕುತೋರದಂತಾಗಿ ಹುಚ್ಚನಂತೆ ಕೂತುಬಿಟ್ಟನು. ಹೇಗೆ ಆಲೋಚಿಸಿದಾಗ್ಯೂ ತನ್ನ ಕಷ್ಟ ನಿವಾರಣೆಯಾಗುವ ಮಾರ್ಗವೇ ಕಾಣಲಿಲ್ಲ. ಇವನು ಇಂತಹ ಸ್ಥಿತಿಯಲ್ಲಿರುವಾಗ ಗುಡಿಸಲೆಲ್ಲಾ ಅಕಸ್ಮಾತ್ತಾಗಿ ಮಂಜು

ಕವಿದಂತಾಗಿ ಮುಳ್ಳಿನ ಕಿರೀಟವನ್ನು ಧರಿಸಿದ ಒಬ್ಬನು ಶಿಲುಬೆಯ ಮರಕ್ಕೆ ಮೊಳೆಗಳಿಂದ ಜಡಿಯಲ್ಪಟ್ಟಂತೆಯೂ ಘಾಯಗಳಿಂದ ರಕ್ತಸುರಿಯು ತ್ತಿರುವಂತೆಯೂ ಒಂದು ದರ್ಶನವನ್ನು ಕಂಡನು. ಟಾಮನು ಈ ದರ್ಶನ ವನ್ನು ಒಂದೇ ದೃಷ್ಟಿಯಿಂದ ನೋಡಿ ತನ್ನ ಎರಡು ಕೈಗಳನ್ನು ಚಾಚಿ ಕೊಂಡು ಮೊಣಕಾಲೂರಿಕೊಂಡಿರುವಾಗ "ನಾನು ಯಾವ ರೀತಿಯಿಂದ ಕಷ್ಟಗಳನ್ನು ಜೈಸಿ, ಅನುಭವಿಸಿ ನನ್ನ ತಂದೆಯೊಂದಿಗೆ ಆತನ ಸಿಂಹಾ ಸನದ ಮೇಲೆ ಕೂತಿರುವೆನೋ ಅದರಂತೆ ಕಷ್ಟಗಳನ್ನು ಜೈಸುವ ಪ್ರತಿ ಯೊಬ್ಬನು ನನ್ನ ಸಿಂಹಾಸನದ ಮೇಲೆ ಕೂತುಕೊಳ್ಳುವನು" ಎಂದು ಯಾರೋ ಹೇಳಿದಂತೆ ಕೇಳಿಸಿತು.

ಟಾಮನು ಒಲೆಯ ಮುಂದೆ ಎಷ್ಟು ಹೊತ್ತು ಈ ರೀತಿ ಬಿದ್ದಿದ್ದನೋ ಅವನಿಗೆ ತಿಳಿಯಲಿಲ್ಲ. ಆದರೆ ಅಂದಿನಿಂದ ಅವನ ಮನಸ್ಸಿನಲ್ಲಿ ಸಂಪೂರ್ಣ ಸಮಾಧಾನವು ನೆಲೆಗೊಂಡಿತು. ಲೆಗ್ರೀಯು ಇವನನ್ನು ಎಷ್ಟು ಹಿಂಸೆ ಪಡಿಸಿದರೂ ಎಷ್ಟು ಅವಮಾನಮಾಡಿದರೂ ಇವನ ಹೃದಯಲ್ಲಿ ಸಂತೋಷ ಉತ್ಸಾಹಗಳು ತುಂಬಿ ತುಳುಕುತ್ತಿದ್ದವು. ಲೆಗ್ರೀಯು ಇವನನ್ನು ಬಹಳ ಕ್ರೂರವಾಗಿ ಹೊಡೆಯುತ್ತಿದ್ದನು. ಆದರೂ ಏನು? ಆ ಏಟುಗಳು ಅವನ ಶರೀರದ ಮೇಲೆ ಬಿದ್ದುವೇ ಹೊರತು ಅವನ ಆತ್ಮವನ್ನು ಅಲ್ಲಾಡಿಸಲಿಲ್ಲ. ತನಗೂ ತನ್ನ ಗುಲಾಮನಿಗೂ ನಡುವೆ ದೇವರು ಅಡ್ಡವಾಗಿ ನಿಂತಿದ್ದಾ ನೆಂದು ಗ್ರಹಿಸಿ, ಲೆಗ್ರೀಯು ದೇವರನ್ನೇ ದೂಷಿಸಲಾರಂಭಿಸಿದನು.

ಟಾಮನು ತನ್ನ ಕಷ್ಟಗಳೆಲ್ಲಾ ಕೊನೆಗೊಂಡವೆಂತಲೂ ತಾನು ಬಹು ಬೇಗನೆ ಪರಲೋಕಕ್ಕೆ ಹೋಗುವುದು ನಿಜವೆಂತಲೂ ತಿಳಿದುಕೊಂಡನು. ತನ್ನಂತಹ ಗುಲಾಮರಿಗೆ ತನ್ನಿಂದಾದಷ್ಟು ಸಹಾಯಮಾಡಿದನು. ಮೊದ ಮೊದಲು ಆ ನರಾತಂಕರಾದ ಸಾಂಬೊ ಕಿಂಬೊ ಎಂಬ ಗುಲಾಮರು ಟಾಮನ ಪ್ರೀತಿ ದಯೆಗಳನ್ನು ತಿಳಿದುಕೊಳ್ಳಲಾರದೆ ಹೋದರು. ಕಡೆಗೆ ಇವರಿಬ್ಬರು ಟಾಮನ ಪ್ರೀತಿಯನ್ನೂ ಅವನ ದಯಾಳು ಸ್ವಭಾವವನ್ನೂ ಗ್ರಹಿಸಿದರು. ಅವರಿಗೆ ಸಮಯ ದೊರೆತಾಗಲೆಲ್ಲಾ ಬಂದು ಯೇಸು ಸ್ವಾಮಿಯ ಬೋಧನೆಯನ್ನು ಕೇಳುತ್ತಿದ್ದರು.

ಒಂದು ದಿನ ಇಬ್ಬರು ಗುಲಾಮ ಹೆಂಗಸರು ಓಡಿಹೋದರು. ಅವರಿಬ್ಬರು ಬಿಡುಗಡೆ ಹೊಂದಿ ಸ್ವತಂತ್ರರಾಗಲು ಪ್ರಯತ್ನಪಡುತ್ತಿದ್ದ ಸಂಗತಿಯು ಟಾಮನಿಗೆ ತಿಳಿದಿದ್ದಿತು. ಇವರು ಅನೇಕ ದಿನಗಳಿಂದ ಈ ವಿಷಯದಲ್ಲಿ ಮಾಡುತ್ತಿದ್ದ ಏರ್ಪಾಡುಗಳೂ ಇವರು ಅಡಗಿಕೊಂಡಿರುವ ಸ್ಥಳವೂ ಟಾಮನಿಗೆ ತಿಳಿಯದೆ ಇರಲಿಲ್ಲ. ಲೆಗ್ರೀ ತನ್ನ ನಾಯಿಗಳನ್ನೂ ಗುಲಾಮರನ್ನೂ ಜೊತೆಯಲ್ಲಿ ಕರೆದುಕೊಂಡು ಓಡಿಹೋದ ಹೆಂಗಸರಿಬ್ಬರನ್ನು ಬಹಳ ಹೊತ್ತಿನವರೆಗೂ ಹುಡುಕಾಡಿದನು. ಅವರು ಸಿಕ್ಕಲಿಲ್ಲ. ಈ ಹೆಂಗಸರು ಓಡಿಹೋಗಲು ಆ ಮುದಿಕತ್ತೆಯೇ ಕಾರಣನೆಂತಲೂ ಅವನ ತೊಗಲನ್ನು ಸುಲಿದು ಅವನಿಂದ ಸಂಗತಿಯನ್ನು ತಿಳಿದುಕೊಳ್ಳಬೇಕೆಂತಲೂ ಆಲೋಚಿಸಿ, ಟಾಮನನ್ನು ಕರೆದುಕೊಂಡುಬರಲು ಗುಲಾಮರನ್ನು ಕಳುಹಿಸಿದನು.

ಗುಲಾಮರನ್ನು ನೋಡಿದಾಕ್ಷಣ ಇವರು ಬಂದಿರುವ ಕಾರಣವೇನಿರಬೇಕೆಂದು ಟಾಮನು ಚೆನ್ನಾಗಿ ತಿಳಿದುಕೊಂಡವನಾಗಿ, ತನ್ನ ಮನಸ್ಸಿನಲ್ಲಿ— ಆ ಬಡಹೆಂಗಸರು ಇರುವ ಸ್ಥಳವನ್ನು ತಿಳಿಸಿ ಅವರನ್ನು ಕಷ್ಟಕ್ಕೊಳಪಡಿಸುವುದಕ್ಕಿಂತಲೂ ತಾನು ಸಾಯುವುದೇ ಮೇಲೆಂದು ನಿಶ್ಚಯಿಸಿ, ತನ್ನ ಮಂಕರಿಯನ್ನು ನೆಲದ ಮೇಲಿಟ್ಟು ನೀರು ತುಂಬಿದ ಕಣ್ಣುಗಳನ್ನು ಆಕಾಶದ ಕಡೆಗೆ ಎತ್ತಿ ಭಕ್ತಿ ವಿಶ್ವಾಸಗಳಿಂದ—ಸತ್ಯಸ್ವರೂಪನಾದ ಸ್ವಾಮಿಯೇ, ನೀನು ನನ್ನನ್ನು ವಿಮೋಚಿಸಿದ್ದೀಯಾದುದರಿಂದ ನಾನು ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸುತ್ತೇನೆಂದು ಪ್ರಾರ್ಥಿಸಿ, ತನ್ನನ್ನು ಕರೆಯಲು ಬಂದ ಗುಲಾಮರೊಂದಿಗೆ ಲೆಗ್ರೀಯ ಬಳಿಗೆ ಹೊರಟನು.

ಅಧ್ಯಾಯ ೧೪

ಹಿಂಸೆ

ಟಾಮನು ಲೆಗ್ರೀಯನ್ನು ನೋಡಲು ಹೋಗುತ್ತಿರುವಾಗ—"ನಿನ್ನ ಶರೀರವನ್ನು ಕೊಲ್ಲುವವರಿಗೆ ಭಯಪಡಬೇಡ, ಅವರು ನಿನ್ನ ಶರೀರವನ್ನು

ಕೊಂದನಂತರ ಮತ್ತೇನೂ ಮಾಡಲಾಗುವುದಿಲ್ಲ" ಎಂಬ ಆಕಾಶದಿಂದಾದ ಒಂದು ಶಬ್ದವು ಇವನಿಗೆ ಕೇಳಿಸಿತು. ಆಗ ಇವನ ಹೃದಯಾಂತರ್ಯದಲ್ಲಿ ನಡಗು ಹುಟ್ಟಿತು. ಪರಲೋಕವು ಇವನ ದೃಷ್ಟಿಗೆ ಬಿದ್ದಂತಾಯಿತು. ಎಲ್ಲಾ ಕಷ್ಟದುಃಖಗಳಿಂದ ಬಿಡುಗಡೆ ಹೊಂದುವ ಕಾಲವು ಸಮೀಪವೇ ಆಗಿದೆಯೆಂದು ತಿಳಿದುಕೊಂಡನು.

ಟಾಮನು ಲೆಗ್ರೀಯ ಮುಂದೆ ನಿಂತನು. ಕೂಡಲೇ

ಲೆಗ್ರೀ—ಎಲೋ, ಗುಲಾಮ, ಈ ದಿನ ನಾನು ನಿನ್ನನ್ನು ಕೊಂದು ಹಾಕಬೇಕೆಂದು ನಿಶ್ಚಯಿಸಿದ್ದೇನೆ ನಿನಗೆ ಗೊತ್ತಿದೆಯೋ? ಎಂದು ಶಿಟ್ಟಿನಿಂದ ಅರಚಿದನು.

ಟಾಮನು (ನಿರ್ಭಯವಾಗಿ)—ಆಗಬಹುದು, ಧಣಿಯೇ ಅಂದನು.

ಲೆಗ್ರೀ—ಓಡಿಹೋದ ಆ ಇಬ್ಬರು ಹೆಂಗಸರ ವಿಷಯ ನಿನಗೆ ತಿಳಿದಿರುವುದನ್ನು ನಿಜವಾಗಿ ಹೇಳದಿದ್ದರೆ, ಖಂಡಿತವಾಗಿ ನಿನ್ನನ್ನು ಕೊಲ್ಲುವುದೇನೋ ನಿಶ್ಚಯ ಎಂದು ಅಬ್ಬರಿಸಿದನು.

ಟಾಮನು—ಮಾತಾಡದೆ ನಿಂತನು.

ಲೆಗ್ರೀ (ಅಬ್ಬರಿಸುತ್ತಾ)—ಎಲೋ, ಮುದಿಕತ್ತೇ, ಮಾತಾಡುವುದಿಲ್ಲವೇನು? ನಾನು ಹೇಳಿದುದು ಕೇಳಿಸಲಿಲ್ಲವೇ?

ಟಾಮನು—ಧಣಿಯೇ, ನಾನು ನಿಮಗೆ ಹೇಳಬೇಕಾದುದು ಏನೂ ಇಲ್ಲ ಅಂದನು.

ಲೆಗ್ರೀ—ಏನು? ನಿಜವೇ? ಅವರ ಸಂಗತಿಯು ನಿನಗೆ ತಿಳಿದೇ ಇಲ್ಲವೇ?

ಟಾಮನು—ಮಾತಾಡದೆ ನಿಂತನು.

ಲೆಗ್ರೀ—ಟಾಮನನ್ನು ಬಹಳ ಕ್ರೂರವಾಗಿ ಹೊಡೆಯುತ್ತಾ ಭಯಂಕರವಾದ ಶಬ್ದದಿಂದ—ನಿನಗೇನೂ ತಿಳಿಯದೇ? ಬಾಯಿಬಿಟ್ಟು ಮಾತಾಡು ಅಂದನು.

ಟಾಮನು—ಧಣಿಯೇ, ನನಗೆ ತಿಳಿದಿದೆ, ಆದರೆ ಹೇಳುವುದಿಲ್ಲ. ನಾನು ಸಾಯುವುದಕ್ಕೆ ಸಿದ್ಧವಾಗಿದ್ದೇನೆ ಅಂದನು.

ಲೆಗ್ರೀಯು ಶಿಟ್ಟಿನಿಂದ ಕಟಕಟನೆ ಹಲ್ಲುಗಳನ್ನು ಕಡಿಯುತ್ತಾ ಟಾಮನ

ಕೈಹಿಡಿದುಕೊಂಡು, ಅವನ ಶರೀರವನ್ನೆಲ್ಲಾ ಅಲ್ಲಾಡಿಸುತ್ತಾ—ಎಲೋ, ಮೊದಲಿನಿಂದಲೂ ನೀನು ನನಗೆ ವಿರೋಧವಾಗಿಯೇ ಇದ್ದೀ. ಈಗ ನಾನು ನಿನ್ನ ಗರ್ವವನ್ನು ಅಣಗಿಸಬೇಕು ಇಲ್ಲವೇ ಕೊಲ್ಲಬೇಕು. ಈ ಎರಡರಲ್ಲಿ ಒಂದು ಆಗಲೇ ಬೇಕಾಗಿದೆ. ನಿನ್ನ ಶರೀರದಲ್ಲಿರುವ ರಕ್ತವನ್ನು ತೊಟ್ಟು ತೊಟ್ಟಾಗಿ ಹೊರಗೆ ತೆಗೆದು ಎಣಿಸಿಕೊಳ್ಳುತ್ತೇನೆ ತಿಳಿದಿದೆಯೇ ಅಂದನು.

ಟಾಮನು ಲೆಗ್ರೀಯನ್ನು ಪರಿತಾಪವಾದ ದೃಷ್ಟಿಯಿಂದ ನೋಡುತ್ತಾ—ಧಣಿಯೇ, . . . ನೀವು ರೋಗದಲ್ಲಿದ್ದಾಗ್ಯೂ ಕಷ್ಟದಲ್ಲಿದ್ದಾಗ್ಯೂ ಮರಣ ಗಂಡಾಂತರದಲ್ಲಿದ್ದಾಗ್ಯೂ ನಿಮ್ಮನ್ನು ಕಾಪಾಡಲು ಸಾಧ್ಯವಾದರೆ, ನನ್ನ ಗುಂಡಿಗೆಯಲ್ಲಿರುವ ರಕ್ತವನ್ನು ನಿಮಗಾಗಿ ಚೆಲ್ಲಲು ಸಿದ್ಧವಾಗಿದ್ದೇನೆ. ಈ ನನ್ನ ದೇಹದಲ್ಲಿರುವ ರಕ್ತದ ಪ್ರತಿಯೊಂದು ತೊಟ್ಟಿನಿಂದಲೂ ಅಮೂಲ್ಯವಾದ ನಿಮ್ಮ ಆತ್ಮವು ಉದ್ಧಾರವಾಗುವುದಾಗಿದ್ದರೆ, ನನ್ನ ಸ್ವಾಮಿಯಾದ ಯೇಸು ಕ್ರಿಸ್ತನು ತನ್ನ ರಕ್ತವನ್ನು ನನಗಾಗಿ ಸುರಿಸಿದಂತೆಯೇ, ನನ್ನ ರಕ್ತವನ್ನು ನಿಮಗೋಸ್ಕರ ಹೃದಯಪೂರ್ವಕವಾಗಿ ಅರ್ಪಿಸುತ್ತೇನೆ. ಆದುದರಿಂದ ನಿಮ್ಮ ಮನಸ್ಸು ಬಂದಂತೆ ನನಗೆ ಮಾಡಿರಿ. ನನ್ನನ್ನು ಕೊಲ್ಲುವಿರಾ? ನನ್ನ ಕಷ್ಟಬಾಧೆಗಳೆಲ್ಲವೂ ಕೊನೆಗಾಣುತ್ತವೆ. ಆ . . ದ . . ರೇ . . . ಧಣಿಯೇ, ನೀವು ಮಾತ್ರ ನಿಮ್ಮ ಭಯಂಕರವಾದ ಪಾಪಗಳನ್ನು ದೇವರ ಮುಂದೆ ಅರಿಕೆಮಾಡಿ, ಒಪ್ಪಿಕೊಳ್ಳದೆ ಹೋದಿರಾ, ನಿಮ್ಮ ಕಷ್ಟಗಳು ಎಂದಿಗಾದರೂ ಕೊನೆಗಾಣವು, ಇದು ನಿಶ್ಚಯ ಎಂದು ಹೇಳಿದನು.

ಲೆಗ್ರೀಯು ಟಾಮನು ಹೇಳಿದುದನ್ನೆಲ್ಲಾ ಕೇಳಿದನು. ದಿಗ್ಭ್ರಮೆ ಹೊಂದಿದನು. ಸ್ವಲ್ಪ ಹೊತ್ತು ಸುಮ್ಮನೆ ನಿಂತನು. ಪುನಃ ಕೋಪವು ಉಕ್ಕೇರಿತು. ಬಲವಾದ ಒಂದೇ ಏಟಿನಿಂದ ಟಾಮನನ್ನು ನೆಲಕ್ಕೆ ಕೆಡವಿದನು. ಟಾಮನು ಬಿದ್ದು ಒದ್ದಾಡುತ್ತಿದ್ದನು. ತರುವಾಯ ಅವನನ್ನು ಒಂದು ಹಳೇ ಗುಡಿಸಿಲಿಗೆ ಎಳೆಸಿಕೊಂಡುಹೋಗಿ, ಅರಿವಿಲ್ಲದೆ ಬಿದ್ದವನನ್ನು ಕೊರಡೆಯಿಂದಲೂ ಮುಷ್ಟಿಯಿಂದಲೂ ದೊಣ್ಣೆಯಿಂದಲೂ ಬಹು ಕ್ರೂರವಾಗಿ ಹೊಡೆದು ಚಿತ್ರಹಿಂಸೆ ಮಾಡಿದನು. ಇಷ್ಟೆಲ್ಲಾ ಆದಾಗ್ಯೂ ಟಾಮನ

ಬಾಯಿಂದ ಪ್ರಾರ್ಥನಾ ಶಬ್ದಗಳ ಹೊರತು ಮತ್ತೊಂದು ಶಬ್ದ ಹೊರ ಬೀಳಲಿಲ್ಲ.

ಟಾಮನನ್ನು ಹೊಡೆಯುತ್ತಿದ್ದ ಗುಲಾಮನಾದ ಸಾಂಬೊವಿಗೆ ಮನಸ್ಸು ಕರಗಿ, ಹೊಡೆಯುವುದನ್ನು ನಿಲ್ಲಿಸಿ—ಧಣಿಯೇ, ಪ್ರಾಣಹೋದಂತಿದೆ ಅಂದನು.

ಲೆಗ್ರೀ—ಇನ್ನೂ ಹೊಡಿ, ಪ್ರಾಣಹೋದರೂ ಹೋಗಲಿ. ಆ ಇಬ್ಬರು ಹೆಂಗಸರು ಎಲ್ಲಿದ್ದಾರೆಂದು ಹೇಳುವವರೆಗೂ ಬಿಡಬೇಡ, ಹೊಡೀ, ಹೊಡೀ ಎಂದು ಸ್ವಲ್ಪವಾದರೂ ಕರುಣೆಯಿಲ್ಲದೆ ಅಬ್ಬರಿಸುತ್ತಿದ್ದನು.

ಟಾಮನು ಕಣ್ಣುತೆರೆದು ಲೆಗ್ರೀಯನ್ನು ನೋಡಿ—ಧಣಿಯೇ, ನೀವು ಮಾಡಬೇಕಾಗಿರುವುದು ಇನ್ನೇನೂ ಇಲ್ಲ. ಎಲ್ಲಾ ಮಾಡಿದಿರಿ. ಹೃದಯ ಪೂರ್ವಕವಾಗಿ ನಾನು ನಿಮ್ಮನ್ನು ಕ್ಷಮಿಸುತ್ತೇನೆ ಎಂದು ಹೇಳಿ, ಸಂಪೂರ್ಣ ವಾಗಿ ಮೂರ್ಛೆಹೋದನು.

ಟಾಮನು ಇನ್ನೂ ಅರೆಜೀವದಿಂದಲೇ ಇದ್ದನು. ಇವನ ತಾಳ್ಮೆ, ಧೈರ್ಯ, ದೈವಭಕ್ತಿಗಳನ್ನು ನೋಡಿದ ಗುಲಾಮರಾದ ಸಾಂಬೊ, ಕಿಂಬೊ ಇಬ್ಬರಿಗೂ ಬಹಳ ಆಶ್ಚರ್ಯವಾಯಿತು. ಕಡೆಗೆ ಅವರ ಕಠಿಣವಾದ ಹೃದಯವು ಕರಗಿ ನೀರಾಯಿತು. ಲೆಗ್ರೀಯು ಕಣ್ಣಿಗೆ ಮರೆಯಾದ ಕೂಡಲೇ ಅವರಿಬ್ಬರು ಟಾಮನ ಘಾಯಗಳನ್ನು ತೊಳೆದು, ಒಂದು ಹಾಸಿಗೆಯನ್ನು ಸಿದ್ಧಪಡಿಸಿ, ಅದರ ಮೇಲೆ ಮಲಗಿಸಿದರು.

ಸಾಂಬೊ—ಟಾಮನ ವಿಷಯದಲ್ಲಿ ನಾವು ಬಹು ಕ್ರೂರವಾಗಿ ವರ್ತಿಸಿದ್ದೇವೆ. ನಾವು ಈ ವಿಷಯದಲ್ಲಿ ದೇವರಿಗೆ ಜವಾಬ್ದಾರರಲ್ಲವೆಂದು ನೆನಸುತ್ತೇನೆ ಎಂದು ಕಿಂಬೊವಿಗೆ ಹೇಳಿದನು.

ಕಿಂಬೊ—ಟಾಮ್, ನಾವಿಬ್ಬರು ನಿನ್ನನ್ನು ಬಹು ಕ್ರೂರವಾಗಿ ಹೊಡೆದಿದ್ದೇವೆ ಅಂದನು.

ಟಾಮನು (ಬಲಹೀನವಾದ ಸ್ವರದಿಂದ)—ಸ್ನೇಹಿತರೇ, ನಿಮ್ಮಿಬ್ಬರನ್ನು ಮನಃಪೂರ್ವಕವಾಗಿ ಕ್ಷಮಿಸಿದ್ದೇನೆ ಅಂದನು.

ಸಾಂಬೊ—ಟಾಮ್, ರಾತ್ರಿಯೆಲ್ಲಾ ನಿನ್ನೊಂದಿಗಿದ್ದುಕೊಂಡು, ನಿನಗೆ

ಇಂತಹ ಧೈರ್ಯವನ್ನು ಉಂಟುಮಾಡಿದ ಆ ಯೇಸು ಯಾರು? ಆತನ ವಿಷಯ ನಮಗೆ ಹೇಳಯ್ಯಾ ಎಂದು ಬೇಡಿಕೊಂಡನು.

ಈ ಮಾತುಗಳು ಟಾಮನ ಕಿವಿಗೆ ಬಿದ್ದಾಕ್ಷಣವೇ ಹೋದ ಪ್ರಾಣವು ತಿರುಗಿ ಬಂದಂತಾಯಿತು. ತಕ್ಷಣವೇ ಮಹಾ ಸಂತೋಷದಿಂದ ಆ ಮಹಾ ಸ್ವಾಮಿಯಾದ ಯೇಸು ಕ್ರಿಸ್ತನು ಹೇಳಿದ ಕೆಲವು ವಾಕ್ಯಗಳನ್ನು ಹೇಳಿ, ಅಹಾ! ಎಂತಹ ಜೀವಮಾನವು! ಎಂತಹ ಪವಿತ್ರವಾದ ಮರಣವು! ಎಂತಹ ಶಾಶ್ವತವಾದ ಪ್ರಭಾವವು! ಆ ರಕ್ಷಣಾ ಬಲವನ್ನು ನಾನೇನೆಂದು ಹೇಳಲಿ! ಎಂದು ಸ್ತೋತ್ರಮಾಡಿದನು.

ಕಾಡುಮೃಗಗಳಂತಿದ್ದ ಆ ಗುಲಾಮರಿಬ್ಬರೂ ತಾವು ಮಾಡಿದ ಭಯಂಕರವಾದ ಪಾಪಕಾರ್ಯಗಳಿಗಾಗಿ ಅತ್ತು ಗೋಳಾಡಿದರು.

ಸಾಂಬೊ—ಅಯ್ಯೋ, ಇದುವರೆಗೂ ಇಂತಹ ಘನವಾದ ಸಂಗತಿಯನ್ನು ಕೇಳದೆ ಹೋದೆನಲ್ಲಾ ಈಗ ನಾನು ಈ ಮಹಾ ಸ್ವಾಮಿಯನ್ನು ನಂಬಲೇ ಬೇಕು. ನಂಬದಿದ್ದರೆ ಯತ್ನವಿಲ್ಲ. ಓ ಯೇಸುಸ್ವಾಮಿಯೇ, ಪಾಪಿಗಳಾದ ನಮ್ಮನ್ನು ಕರುಣಿಸು ಎಂದು ಪ್ರಾರ್ಥಿಸಿದನು.

ಟಾಮನು ತನ್ನ ಮನಸ್ಸಿನಲ್ಲಿಯೇ—ಅಯ್ಯೋ ಬಡಪ್ರಾಣಿಗಳು! ಎಂದಂದುಕೊಂಡು—ಸ್ನೇಹಿತರೇ, ನಾನು ಇದುವರೆಗೂ ಅನುಭವಿಸಿದ ಕಷ್ಟಹಿಂಸೆಗಳು ನಿಮ್ಮಿಬ್ಬರನ್ನು ಯೇಸುಸ್ವಾಮಿಯ ಪಾದಗಳ ಬಳಿಗೆ ತಂದರೆ, ಅವೆಲ್ಲವೂ ಸಾರ್ಥಕವಾಯಿತೆಂದೇ ಹೇಳಬೇಕು. ಅದರಿಂದ ನನಗುಂಟಾಗುವ ಸಂತೋಷವು ಎಷ್ಟೆಂದು ಹೇಳಲಾರೆನು. ಕಣ್ಣುಮುಚ್ಚಿಕೊಂಡು—ಓ ಸ್ವಾಮೀ, ಈ ಎರಡು ಆತ್ಮಗಳನ್ನು ಸಹ ನನಗೆ ಕೊಡು ಎಂದು ಪ್ರಾರ್ಥಿಸಿದನು. ಸ್ವಾಮಿಯು ಇವನ ಪ್ರಾರ್ಥನೆಯನ್ನು ಕೇಳೇ ಕೇಳಿದನು.

ಎರಡು ದಿನಗಳಾದ ತರುವಾಯ ಒಬ್ಬ ಮನುಷ್ಯನು ಒಂದು ಕುದುರೇ ಗಾಡಿಯ ಮೇಲೆ ಈ ಸ್ಥಳಕ್ಕೆ ಬಂದನು. ಈತನು ಮತ್ತ್ಯಾರೂ ಅಲ್ಲ. ನಮ್ಮ ಪರಿಚಯಸ್ಥನೇ. ಟಾಮನು ಮೊಟ್ಟಮೊದಲು ಯಾರ ಬಳಿಯಲ್ಲಿ ಗುಲಾಮನಾಗಿದ್ದನೋ ಆ ಶೆಲ್ಬೀ ದೊರೆಯ ಮಗನಾದ ಜೋರ್ಜನೇ ಈತನು.

ಜೋರ್ಜ್ ಗಾಡಿಯನ್ನಿಳಿದು ಲೆಗ್ರೀಯ ಬಳಿಗೆ ಹೋಗಿ—ಅಯ್ಯಾ, ನ್ಯೂ ಓರ್ಲಿಯನ್ಸ್ ಪಟ್ಟಣದ ಗುಲಾಮರ ಸಂತೆಯಲ್ಲಿ ನೀವು ಟಾಮ್ ಎಂಬ ಹೆಸರುಳ್ಳ ಒಬ್ಬ ಗುಲಾಮನನ್ನು ಕೊಂಡುಕೊಂಡಿರೆಂದು ವರ್ತಮಾನವನ್ನು ಕೇಳಿದೆನು. ಆತನು ಮೊದಲು ನಮ್ಮ ತಂದೆಯ ಬಳಿಯಲ್ಲಿ ಗುಲಾಮನಾಗಿದ್ದನು. ಆತನನ್ನು ತಿರುಗಿ, ಕೊಂಡುಕೊಂಡುಹೋಗಬೇಕೆಂದು ನಾನು ಬಂದಿದ್ದೇನೆ ಅಂದನು.

ಈ ಸಂಗತಿಯನ್ನು ಕೇಳಿದ ಕೂಡಲೇ ಲೆಗ್ರೀಯು ಬಹಳ ಕೋಪದಿಂದ—ಅವನನ್ನು ನಾನು ಕೊಂಡುಕೊಂಡಿರುವುದು ನಿಜವೇ. ಅವನನ್ನು ಕೊಂಡುಕೊಂಡು ಬಹಳ ನಷ್ಟಪಟ್ಟಿದ್ದೇನೆ. ಇಂತಹ ನಷ್ಟವು ನನಗೆ ಎಂದೂ ಆಗಿರಲಿಲ್ಲ. ಅವನಂತಹ ತಲೆಹರಟೆಯವನನ್ನೂ ಮೊಂಡುಕತ್ತೆಯನ್ನೂ ನಾನೆಂದೂ ನೋಡಿರಲಿಲ್ಲ. ನನ್ನ ಅಪ್ಪಣೆಯನ್ನು ಸ್ವಲ್ಪವಾದರೂ ಲಕ್ಷ್ಯಕ್ಕೆ ತರುವುದಿಲ್ಲ. ಇದಲ್ಲದೆ ನನ್ನ ಇಬ್ಬರು ಗುಲಾಮ ಸ್ತ್ರೀಯರನ್ನು ಎಲ್ಲಿಗೋ ಓಡಿಸಿಬಿಟ್ಟಿದ್ದಾನೆ. ಅವರೆಲ್ಲಿದ್ದಾರೆ ಹೇಳು ಎಂದು ನಾನು ಎಷ್ಟು ಬಗೆಯಿಂದ ಕೇಳಿದಾಗ್ಯೂ, ಅವನಿಗೆ ತಿಳಿದಿದ್ದರೂ ಹೇಳುವುದಿಲ್ಲ. ನಾನು ಅವನನ್ನು ಎಷ್ಟು ಹೊಡೆದು, ಹಿಂಸೆಪಡಿಸಿದಾಗ್ಯೂ ತನ್ನ ಹಠವನ್ನು ಬಿಡುವುದಿಲ್ಲ. ಅವನು ಕೆಟ್ಟ ಹಠಮಾರಿಯು. ಅವನು ಸತ್ತಿರಬಹುದು ಅಥವಾ ಇಷ್ಟರಲ್ಲಿಯೇ ಸಾಯಬಹುದೇನೋ ಅಂದನು.

ಲೆಗ್ರೀಯ ಮಾತುಗಳು ಜೋರ್ಜನ ಸಿಟ್ಟನ್ನು ತಲೆಗೇರಿಸಿತು. ಆದರೂ ಇದು ಸಮಯವಲ್ಲವೆಂದರಿತು—ಅಯ್ಯಾ, ಈಗ ಅವನು ಎಲ್ಲಿದ್ದಾನೆ? ದಯಮಾಡಿ ತೋರಿಸಿರಿ ಎಂದು ಬಹಳ ಆತುರದಿಂದ ಕೇಳಿದನು.

ಜೋರ್ಜನ ಕುದುರೆಗಳ ಕಡಿವಾಣವನ್ನು ಹಿಡಿದುಕೊಂಡಿದ್ದ ಗುಲಾಮನು—ಅಗೋ, ಆ ಗುಡಿಸಿಲಿನಲ್ಲಿದ್ದಾನೆ ಎಂದು ತೋರಿಸಿದನು. ಜೋರ್ಜ್ ಒಂದು ಮಾತಾದರೂ ಆಡದೆ ಆ ಗುಡಿಸಿಲಿನ ಕಡೆಗೆ ಅವಸರದಿಂದ ಹೋದನು. ಲೆಗ್ರೀಯಾದರೋ ಜೋರ್ಜಿಗೆ ಗುಡಿಸಿಲನ್ನು ತೋರಿಸಿದ ಗುಲಾಮನನ್ನು ಬೈದು, ಚೆನ್ನಾಗಿ ಒದ್ದನು.

ಅಧ್ಯಾಯ ೧೫

ಪ್ರಾರ್ಥನೆಗೆ ಉತ್ತರ—ಟಾಮನ ಮರಣ

ಟಾಮನಾದರೋ ಎರಡು ದಿನಗಳಿಂದಲೂ ಮೈಮೇಲೆ ಅರಿವಿಲ್ಲದೆ ಬಿದ್ದಿದ್ದನು. ಪಾಪ! ಕೆಲವರು ಗುಲಾಮರು ಮಾತ್ರ ಯಜಮಾನನಿಗೆ ತಿಳಿದರೆ ತಮಗೆ ಏನು ವಿಪತ್ತು ಬರುತ್ತದೋ ಎಂಬ ಭಯದಿಂದ ರಾತ್ರಿಯ ಹೊತ್ತು ಟಾಮನಿದ್ದಲ್ಲಿಗೆ ಕಳ್ಳತನವಾಗಿ ಬಂದು, ಟಾಮನು ತಮಗೆ ಮಾಡಿದ ಉಪಕಾರ ಸಹಾಯಗಳಿಗೆ ಪ್ರತ್ಯುಪಕಾರವನ್ನು ಮಾಡಲು ಪ್ರಯತ್ನಿಸಿದರು. ಈ ಬಡಗುಲಾಮರು ಯಾವ ಸಹಾಯವನ್ನು ಮಾಡಿಯಾರು? ಇವರಲ್ಲೇನಿದೆ? ತಾವೇ ನಿರ್ಗತಿಕರು. ಯಜಮಾನನ ಅಂಕೆಯಲ್ಲಿರುವವರು. ಟಾಮನಿಗೆ ಬಾಯಿಯು ಒಣಗಿದಾಗಲೆಲ್ಲಾ ಒಂದು ಬಟ್ಟಲು ನೀರನ್ನು ಮಾತ್ರ ಹೃದಯಪೂರ್ವಕವಾದ ಪ್ರೀತಿಯಿಂದ ಕುಡಿಸುತ್ತಾ ಅವನ ಪಕ್ಕದಲ್ಲಿ ಕೂತು ಗೋಳಾಡುತ್ತಾ ಅವನ ಮೂಲಕ ತಾವು ತಿಳಿದುಕೊಂಡ ಯೇಸುಸ್ವಾಮಿಗೆ ಪ್ರಾರ್ಥಿಸುತ್ತಿದ್ದರು.

ಜೋರ್ಜ್ ಗುಡಿಸಿಲಿಗೆ ಬಂದನು. ಒಳಗೆ ಕಾಲಿಟ್ಟನು. ಟಾಮನ ಸ್ಥಿತಿಯನ್ನು ನೋಡಿದನು. ಕಣ್ಣುಗಳು ಮೊಬ್ಬಾಗಿ ತಿರುಗಿದಂತಾಯಿತು. ಹೃದಯವು ಕುಗ್ಗಿ ಹೋಯಿತು. ಅವನ ಪಕ್ಕದಲ್ಲಿ ಮೊಣಕಾಲುಗಳನ್ನೂರಿ ಬೊಗ್ಗಿಕೊಂಡು ಅವನನ್ನು ನೋಡುತ್ತಾ—ಹಾ! ಟಾಮ್ಮಾಮಾ, ಟಾಮ್ಮಾಮಾ, ಅಯ್ಯೋ! ಟಾಮ್ಮಾಮಾ, ನಿನ್ನ ಈ ಸ್ಥಿತಿಯನ್ನು ನೋಡುವುದಕ್ಕಾಗಿಯೇ ಇಷ್ಟು ದೂರ ಬಂದೆನೇ? ಇದು ನನ್ನ ದುರಾದೃಷ್ಟವೇ! ಕಡೆಗೂ ನಿನಗೆ ಇಂತಹ ಅವಸ್ಥೆಯು ಬಂದಿತೇ? ಹಾ! ಟಾಮ್ಮಾಮಾ, ಎಂದು ಹೇಳಿಕೊಂಡು, ಅವನ ಮೇಲೆ ಬಿದ್ದು ಗೋಳಾಡಿದನು.

ಅರಿವಿಲ್ಲದೆ ಬಿದ್ದಿದ್ದ ಟಾಮನಿಗೆ ಜೋರ್ಜನ ಧ್ವನಿಯು ಕಿವಿಗೆ ಬಿದ್ದಾಕ್ಷಣವೇ ಸ್ವಲ್ಪ ಅರಿವುಂಟಾದಂತಾಗಿ ತಲೆಯನ್ನು ಸ್ವಲ್ಪಮಟ್ಟಿಗೆ ತಿರುಗಿಸಿ ಬಲಹೀನವಾದ ಸ್ವರದಿಂದ—ದೇವರೇ, ನನ್ನ ದೇವರೇ, ನಿನಗೆ ಸ್ತೋತ್ರವಾಗಲಿ. ನನ್ನ ಬಡಪ್ರಾರ್ಥನೆಯನ್ನು ಕೇಳಿದಿ, ನನ್ನ ಕೋರಿಕೆ

ಯನ್ನು ನೆರವೇರಿಸಿದಿ, ನನ್ನ ನನು. . . ನನ್ನ ನನು. . . ನನ್ನನ್ನು ಮರೆಯಲಿಲ್ಲ. ನನ್ನಾತ್ಮಕ್ಕೆ ತೃಪ್ತಿಯಾಯಿತು. ಮುದುಕನಾದ ನನ್ನ ಹೃದಯದಲ್ಲಿ ಸಂತೋಷವು ಉಕ್ಕುತ್ತಿದೆಯಲ್ಲಾ. ಈಗ ನಾನು ಸಂತೋಷದಿಂದ ನನ್ನ ಪ್ರಾಣವನ್ನು ದೇವರೇ, ನಿನ್ನ ಕೈಗೆ ಒಪ್ಪಿಸುತ್ತೇನೆ. ನನ್ನ ದೇವರೇ, ನನ್ನ ಸ್ವಾಮಿಯೇ, ನನ್ನ ರಕ್ಷಕನೇ, ನಿನಗೆ ಸ್ತೋತ್ರವಾಗಲಿ, ನನ್ನ ಆತ್ಮವೇ ಸ್ವಾಮಿಯನ್ನು ಕೊಂಡಾಡು ಎಂದು ದೇವರಿಗೆ ಸ್ತೋತ್ರವನ್ನರ್ಪಿಸಿದನು.

ಜೋರ್ಜ್—ಬೇಡಾ . . . ಬೇಡಾ . . . ಟಾಮಣ್ಣಾ, ನೀನು ಸಾಯುವುದಿಲ್ಲಾ . . . ಆ ವಿಷಯವನ್ನು ಎತ್ತಲೇ ಬೇಡಾ . . . ನಿನ್ನನ್ನು ತಿರುಗಿ ಕೊಂಡುಕೊಂಡುಹೋಗಲು ನಾನು ಬಂದಿದ್ದೇನೆ, ಮನೆಗೆ ಕರೆದು ಕೊಂಡು ಹೋಗುತ್ತೇನೆ ಅಂದನು.

ಟಾಮನು—ನನ್ನ ಧಣಿಯೇ, ನನ್ನ ಚಿಕ್ಕಧಣಿಯೇ, ಕಾರ್ಯವು ಮಿಂಚಿಹೋಯಿತು. ನೀನು ನನ್ನನ್ನು ಕೊಂಡುಕೊಳ್ಳುವುದಕ್ಕೆ ಮುಂಚಿತ ವಾಗಿ ನನ್ನ ಸ್ವಾಮಿಯೇ ನನ್ನನ್ನು ಕೊಂಡುಕೊಂಡಿದ್ದಾನೆ. ಆತನಿರುವ ಸ್ಥಳಕ್ಕೆ ನನ್ನನ್ನು ಕರೆದುಕೊಂಡುಹೋಗುತ್ತಾನೆ. ಆತನ ಬಳಿಗೆ ಹೋಗ ಬೇಕೆಂಬ ಅಪೇಕ್ಷೆಯು ನನಗೆ ಸಹ ಬಹಳವಾಗಿದೆ. ಕೆಂಟಕೀಗಿಂತಲೂ ಪರಲೋಕವೇ ಉತ್ತಮವಾದ ಸ್ಥಳವಲ್ಲವೇ ? ಅಂದನು.

ಜೋರ್ಜ್—ಟಾಮಣ್ಣಾ, ಬೇಡಾ, ನೀನು ಸಾಯಬೇಡ. ನೀನು ಆ ಮಾತನ್ನು ಹೇಳಿದ ಕೂಡಲೆ ನನ್ನ ಪ್ರಾಣವೇ ಹಾರಿಹೋಗುವಂತಾ ಗುವುದು, ನನ್ನ ಹೃದಯವು ಎರಡಾಗಿ ಸೀಳಿಹೋದಂತಾಗುವುದು. ಅಯ್ಯೋ ! ನೀನು ಬಾಧೆಪಡುವುದನ್ನು ನೋಡಿದರೆ ನನ್ನ ಹೊಟ್ಟೆಯಲ್ಲಿ ಬೆಂಕಿಯು ಬಿದ್ದಂತಾಗುವುದಲ್ಲಾ ! ಅಯ್ಯೋ ! ಬಡ ಟಾಮಣ್ಣಾ ! ನಿನ ಗೆಂತಹ ವಿಪತ್ತು ಸಂಭವಿಸಿತಲ್ಲಾ ? ಅಂದು ಅತ್ತನು.

ಟಾಮನು (ಗಂಭೀರವಾಗಿ)—ನಾನು ಇಷ್ಟು ದಿನಗಳು ಬಡವನಾ ಗಿಯೇ ಇದ್ದೆನು. ಈಗ ನಾನು ಬಡವನಲ್ಲ, ನನ್ನನ್ನು ಬಡವನೆನ್ನಬೇಡ. ಧಣಿಯೇ, ಈಗಲೋ, ನಾನು ಆ ಮಹಾಮಹಿಮಾ ಲೋಕವಾದ ಪರಲೋಕದ ಬಾಗಿಲಲ್ಲಿ ನಿಂತಿದ್ದೇನೆ. ಓ ಜೋರ್ಜ್, ಧಣಿಯೇ,

ಪರಲೋಕವು ನನಗೆ ಸಮೀಪಿಸುತ್ತಿದೆ, ನನ್ನ ಸ್ವಾಮಿಯಾದ ಯೇಸು ಕ್ರಿಸ್ತನು ನನಗೆ ಜಯವನ್ನು ದಯಪಾಲಿಸಿದ್ದಾನೆ. ಆತನ ಪವಿತ್ರವಾದ ನಾಮಕ್ಕೆ ಮಹಿಮೆಯುಂಟಾಗಲಿ ಅಂದನು.

ಜೋರ್ಜ್—ದಿಗ್ಭ್ರಮೆಹೊಂದಿ, ನಿಶ್ಶಬ್ದವಾಗಿ ಟಾಮನನ್ನು ದೃಷ್ಟಿಸುತ್ತಿದ್ದನು.

ಟಾಮನು ಜೋರ್ಜನ ಕೈಯನ್ನು ಹಿಡಿದುಕೊಂಡು—ಜೋರ್ಜ್, ನನ್ನ ಧಣಿಯೇ, ನೀನು ನನ್ನನ್ನು ಇಂತಹ ಸ್ಥಿತಿಯಲ್ಲಿ ನೋಡಿದಿ ಎಂದು ಕ್ಲೋ ಅತ್ತೆಗೆ ಹೇಳಬೇಡ. ಈ ನನ್ನ ಸಂಗತಿಯನ್ನು ಕೇಳಿದರೆ ಆ . . . ನನ್ನ ಪ್ರಿ . . . ಯ . . . ಹೆಂಡ . . . ತಿಯು ಎಷ್ಟು ದುಃಖಪಡುಪಡುವಳೋ ಎಷ್ಟು ಗೋಳಾಡುವಳೋ ಹೇಳಲಾರೆನು. ನಾನು ಸಂತೋಷದಿಂದ ದೇವರ ಬಳಿಗೆ ಹೋದೆನೆಂತಲೂ ನಾನು ಯಾರಿಗೋಸ್ಕರವಾಗಿಯಾದರೂ ಈ ಲೋಕದಲ್ಲಿ ನಿಲ್ಲಲಾಗುವುದಿಲ್ಲವೆಂತಲೂ ಹೇಳು. ನಾನು ಹೋದ ಎಲ್ಲಾ ಸ್ಥಳಗಳಲ್ಲಿಯೂ ದೇವರು ಎಡೆಬಿಡದೆ ನನ್ನೊಂದಿಗಿದ್ದು, ಕಷ್ಟಗಳನ್ನು ಸಹಿಸಲು ನನಗೆ ತಾಳ್ಮೆ ಬಲಗಳನ್ನು ಕೊಟ್ಟನೆಂದು ಹೇಳು. ಹಾ! ನನ್ನ ಮಕ್ಕಳು! . . . ಪ್ರಿಯ ಮಕ್ಕಳು! . . . ನನ್ನ ಚಿಕ್ಕ ಮಗುವು! ಅವರನ್ನು ನೆನಸಿಕೊಂಡಾಗಲೆಲ್ಲಾ ನನ್ನ ಹೃದಯವು ಸೀಳಿಹೋಗುತ್ತಿದ್ದಿತು. ಅವರು ನನ್ನನ್ನು ಹಿಂಬಾಲಿಸಲು ಹೇಳು. ನನ್ನ ಧಣಿಯವರಿಗೂ ನನ್ನ ದಯವುಳ್ಳ ಯಜಮಾನಿಗೂ ನನ್ನ ವಿನಯ ನಮಸ್ಕಾರಗಳನ್ನು ಹೇಳು. ಅಲ್ಲಿರುವ ಪ್ರತಿಯೊಬ್ಬರನ್ನು ನಾನು ನೆನಪು ಮಾಡಿಕೊಂಡು ಕೇಳಿದೆನೆಂದು ಹೇಳು. ನಾನು ಅವರೆಲ್ಲರನ್ನು ಪ್ರೀತಿಸುತ್ತೇನೆ. ಪ್ರತಿಯೊಂದು ಪ್ರಾಣಿಯನ್ನೂ ನಾನು ಪ್ರೀತಿಸುತ್ತೇನೆ. ಪ್ರಪಂಚವೆಲ್ಲಾ ಪ್ರೀತಿಯಿಂದ ತುಂಬಿತುಳುಕುತ್ತಿದೆ. ಧಣಿಯೇ, ಕ್ರೈಸ್ತನಾಗಿರುವುದು ಎಷ್ಟು ಭಾಗ್ಯಕರವು? ಎಂದು ಹೇಳಿದನು.

ಈ ಸಮಯದಲ್ಲಿ ಲೆಗ್ರೀಯು ಗುಡಿಸಿಲಿನ ಬಳಿಗೆ ಬಂದು ಒಳಗೆ ಇಣಕಿನೋಡಿ ಹೊರಟುಹೋದನು.

ಜೋರ್ಜ್ (ಕೋಪದಿಂದ ಅವನನ್ನು ನೋಡಿ)—ಸೈತಾನನ ದಾಸಾನು

ದಾಸನಾಗಿರುವ ಇವನಿಗೆ ಇವನು ಮಾಡುವ ದುಷ್ಟಕಾರ್ಯಗಳಿಗಾಗಿ ಶಿಕ್ಷೆಯಾಗದಿರುವುದಿಲ್ಲ. ಸೈತಾನನು, ಪಿಶಾಚನು . . . ಎಂದನು.

ಟಾಮನು—ಧಣಿಯೇ, ಅವನ ಮೇಲೆ ಸಿಟ್ಟಾಗಬೇಡ. ಅವನೊಬ್ಬ ಬಡಪ್ರಾಣಿಯು. ಅವನು ಈಗಲಾದರೂ ತಾನು ಮಾಡಿರುವ ದುಷ್ಕಾರ್ಯಗಳಿಗಾಗಿ ಪಶ್ಚಾತ್ತಾಪಪಟ್ಟು, ಅವುಗಳನ್ನು ಬಿಟ್ಟುಬಿಟ್ಟರೆ, ಸ್ವಾಮಿಯು ಅವನಿಗೆ ಕ್ಷಮಾಪಣೆಯನ್ನು ಕೊಡುತ್ತಾನೆ. ಆದರೆ ಇವನು ಪಶ್ಚಾತ್ತಾಪಪಡುವಂತೆ ನನಗೇನೋ ತೋರುವುದಿಲ್ಲ ಅಂದನು.

ಜೋರ್ಜ್—ಅವನೆಂದಿಗೂ ಪಶ್ಚಾತ್ತಾಪಪಡುವುದಿಲ್ಲ. ನಾನು ಅವನನ್ನು ಪರಲೋಕದಲ್ಲಿ ನೋಡಲು ಎಂದಿಗೂ ಇಷ್ಟಪಡುವುದಿಲ್ಲ. . .

ಟಾಮನು—ಧಣಿಯೇ, ಹುಷ್ . . . ಸುಮ್ಮನಿರು . . . ಹಾಗೆಲ್ಲಾ ಮಾತಾಡಬಾರದು. ನಿಜ ಹೇಳಬೇಕಾದರೆ ಅವನು ನನಗೆ ಕೇಡೇನೂ ಮಾಡಲಿಲ್ಲ. ಪರಲೋಕದ ಬಾಗಿಲನ್ನು ತೆರೆದುಕೊಟ್ಟಿದ್ದಾನೆ. ಅವನು ಮಾಡಿರುವ ಕೆಲಸವೆಲ್ಲಾ ಇಷ್ಟೇ ಹೊರತು ಮತ್ತೇನೂ ಮಾಡಲಿಲ್ಲ ಅಂದನು.

ಜೋರ್ಜನನ್ನು ನೋಡಿದುದರಿಂದ ಅಕಸ್ಮಾತ್ತಾಗಿ ಉಂಟಾದ ಶಕ್ತಿಯು ಕಡಿಮೆಯಾಗುತ್ತಾ ಬಂದಿತು. ಕಣ್ಣುಗಳು ಮುಚ್ಚಿಹೋದವು. ಉಸಿರಾಡಿಸುವುದು ಕಷ್ಟವಾಯಿತು. ಇಂತಹ ಸ್ಥಿತಿಯಲ್ಲಿ ಸಹ—ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು ? ಎಂದು ಪಿಸುಮಾತಿನಲ್ಲಿ ಹೇಳಿ, ಟಾಮನು ಕರ್ತನಲ್ಲಿ ನಿದ್ರೆಹೋದನು. ಇಹಲೋಕದ ಕಷ್ಟ ಹಿಂಸೆಗಳಿಂದ ಬಿಡುಗಡೆಯನ್ನು ಹೊಂದಿ ನಿತ್ಯಾನಂದ ಪದವಿಗೆ ಸೇರಿದನು.

ಅಧ್ಯಾಯ ೧೬

ಟಾಮನ ಶವಸಂಸ್ಕಾರ

ಜೋರ್ಜನು ಯೌವನಸ್ಥನು, ಬಲಶಾಲಿಯು, ಎಂತಹ ಕಷ್ಟಗಳನ್ನಾದರೂ ಸಹಿಸಬಲ್ಲವನು. ಆದರೂ ತನ್ನ ಹಳೇ ಸ್ನೇಹಿತನೂ ತನ್ನ ತಂದೆ

ಯನ್ನು ಬಾಲ್ಯದಿಂದಲೂ ಸಾಕಿ ಸಲಹಿದವನೂ ಆದ ಪ್ರಿಯ ಟಾಮ್ಮಾ ವನು ಸತ್ತು ನಿರ್ಜೀವಿಯಾಗಿ ಬಿದ್ದಿರುವುದನ್ನು ನೋಡಿ ಸಹಿಸಲಾಗಲಿಲ್ಲ. ಸಣ್ಣ ಮಗುವಿನಂತೆ ಅತ್ತನು. ಏನು ಮಾಡಬೇಕೆಂದು ಮುಂದೋರಲಿಲ್ಲ. ಟಾಮನು ಸತ್ತ ಸ್ಥಳವು ಮಹಾ ಪವಿತ್ರವಾದ ಸ್ಥಳವೆಂದೇ ಭಾವಿಸಿದನು. ಸತ್ತು ನಿರ್ಜೀವವಾಗಿ ಬಿದ್ದಿದ್ದ ಟಾಮನ ಕಣ್ಣುರೆಪ್ಪೆಗಳನ್ನು ಮುಚ್ಚಿ, ಮುಂದಿನ ಏರ್ಪಾಡಿಗಾಗಿ ಕೂತಿದ್ದ ಸ್ಥಳವನ್ನು ಬಿಟ್ಟು ಎದ್ದನು. ಕೂತ ಸ್ಥಳವನ್ನು ಬಿಟ್ಟಾಗ್ಯೂ "ಧಣಿಯೇ, ಕ್ರೈಸ್ತಭಕ್ತನಾಗಿರುವುದು ಎಂತಹ ಭಾಗ್ಯಕರವು?" ಎಂದು ಟಾಮನು ಹೇಳಿದ ಮಾತುಗಳು ಇವನ ಕಿವಿ ಗಳಲ್ಲಿ ಝೇಂಕರಿಸುತ್ತಿದ್ದವು.

ಜೋರ್ಜನು ಗುಡಿಸಿಲಿನ ಹೊರಗೆ ಬಂದನು. ಲೆಗ್ರೀಯು ಗಂಟು ಮುಖವನ್ನಿಟ್ಟುಕೊಂಡು ಜೋರ್ಜನ ಹಿಂದುಗಡೆಯೇ ನಿಂತಿದ್ದನು.

ಜೋರ್ಜನು ಲೆಗ್ರೀಯನ್ನು ನೋಡಿ ಟಾಮನ ಶವವನ್ನು ತೋರಿ ಸುತ್ತಾ—ಅಯ್ಯಾ, ಈ ಮನುಷ್ಯನು ಬದುಕಿರುವಾಗ ನಿನ್ನ ಮನಸ್ಸಿಗೆ ಬಂದಂತೆ ಇವನನ್ನು ಹಿಂಸೆಪಡಿಸಿದಿ. ಕಡೆಗೂ ನೀನು ನಿಶ್ಚಯಿಸಿದಂತೆಯೇ ಕೊಂದಿ. ಅವನ ದೇಹವಾದರೋ ಇಲ್ಲಿ ಬಿದ್ದಿದೆ. ಈ ದೇಹಕ್ಕಾಗಿ ಎಷ್ಟು ರೂಪಾಯಿಗಳನ್ನು ಕೇಳುತ್ತೀ ಕೇಳು. ನೀನು ಕೇಳಿದಷ್ಟು ಕೊಟ್ಟು, ಆ ದೇಹವನ್ನು ತೆಗೆದುಕೊಂಡುಹೋಗಿ, ಮರ್ಯಾದೆಯಿಂದ ಸಮಾಧಿ ಯಲ್ಲಿಡುತ್ತೇನೆ ಅಂದನು. ಲೆಗ್ರೀಯು ಅಹಂಕಾರದಿಂದ—ಸತ್ತ ಗುಲಾಮ ರನ್ನು ನಾನು ಮಾರುವುದಿಲ್ಲ. ನಿನಗೆ ಇಷ್ಟ ಬಂದಾಗ ತೆಗೆದುಕೊಂಡು ಹೋಗಿ ನಿನಗೆ ಮನಸಿಗೆ ಬಂದ ಸ್ಥಳದಲ್ಲಿ ಸಮಾಧಿ ಮಾಡಬಹುದು. ನನ್ನ ಅಭ್ಯಂತರವೇನೂ ಇಲ್ಲ ಅಂದನು.

ಜೋರ್ಜನು ಸಮೀಪದಲ್ಲಿಯೇ ನಿಂತಿದ್ದ ಇಬ್ಬರು ಗುಲಾಮರಿಗೆ— ಶವವನ್ನು ಎತ್ತಿ ನನ್ನ ಗಾಡಿಯಲ್ಲಿ ಇಡಲು ನನಗೆ ಸ್ವಲ್ಪ ಸಹಾಯಮಾಡಿ, ಒಂದು ಗುದ್ದಲಿಯನ್ನೋ ಒಂದು ಸಲಿಕೆಯನ್ನೋ ತಂದುಕೊಡಿರಿ ಎಂದು ಹೇಳಿ, ತನ್ನ ಅಂಗಿಯನ್ನು ಬಿಚ್ಚಿ ಗಾಡಿಯ ಮೇಲೆ ಹಾಸಿ, ಶವವನ್ನು ಎಚ್ಚರಿಕೆಯಿಂದ ಅದರ ಮೇಲೆ ಮಲಗಿಸಿದನು.

ತರುವಾಯ ಅಲ್ಲಿಯೇ ಇದ್ದ ಲೆಗ್ರೀಯನ್ನು ನೋಡಿ—ಇಲ್ಲಿ ನಡೆದ ಸಂಗತಿಯ ವಿಚಾರವಾಗಿ ನನ್ನ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ನಿನಗೆ ಇನ್ನೂ ಹೇಳಲಿಲ್ಲ. ಹೇಳುವುದಕ್ಕೆ ಇದು ತಕ್ಕ ಸಮಯವೂ ಅಲ್ಲ, ಸ್ಥಳವೂ ಅಲ್ಲ. ಆದರೆ ಒಂದು ಮಾತು ನಿನ್ನ ಮನಸ್ಸಿನಲ್ಲಿರಲಿ, ಈ ನಿರ್ದೋಷಿಯನ್ನು ಅನ್ಯಾಯವಾಗಿ ಕೊಂದ ನಿನಗೆ ಪ್ರತೀಕಾರವಾಗದೆ ಇರುವುದಿಲ್ಲ. ನೀನು ಮಾಡಿರುವ ಈ ಕೊಲೆಯ ವಿಷಯ ಬಹಿರಂಗಪಡಿಸಿ, ಸರ್ಕಾರದವರಿಂದ ನಿನಗೆ ತಕ್ಕ ಶಿಕ್ಷೆಮಾಡಿಸುತ್ತೇನೆ ಅಂದನು.

ಲೆಗ್ರೀಯು—ಶಿಕ್ಷೆಮಾಡಿಸುತ್ತೀಯಾ? ಮಾಡಿಸು, ಮಾಡಿಸು, ನಾನು ನೋಡಿಕೊಳ್ಳುತ್ತೇನೆ. ನಿನಗೆ ಸಾಕ್ಷಿಗಳನ್ನು ಎಲ್ಲಿಂದ ತರುತ್ತೀ? ಇದನ್ನು ನಿಶ್ಚಯಪಡಿಸುವ ಬಗೆ ಹೇಗೆ?

ಲೆಗ್ರೀ ಹೇಳಿದ ಮಾತು ನಿಜವೆಂದು ಜೋರ್ಜಿಗೆ ತಿಳಿಯಿತು. ಸಾಕ್ಷಿ ಹೇಳುವುದಕ್ಕಾಗಿ ಆ ಸ್ಥಳದಲ್ಲಿ ಒಬ್ಬನಾದರೂ ಬಿಳೀ ಮನುಷ್ಯನಿಲ್ಲ, ಆ ದಕ್ಷಿಣ ಪ್ರಾಂತ್ಯಗಳಲ್ಲಿ ಬಿಳೀ ಜನರ ಸಾಕ್ಷ್ಯವನ್ನು ಹೊರತು ಕಪ್ಪುಜನರಾದ ಗುಲಾಮರ ಸಾಕ್ಷ್ಯವನ್ನು ಸರ್ಕಾರದವರು ಅಂಗೀಕರಿಸುತ್ತಿರಲಿಲ್ಲ.

ಲೆಗ್ರೀಯು—ಏನು? ಸತ್ತ ಒಬ್ಬ ಕಪ್ಪು ಗುಲಾಮನಿಗೋಸ್ಕರ ನೀನು ಇಷ್ಟು ಪ್ರಯಾಸ ತೆಗೆದುಕೊಳ್ಳುವುದೇಕೆ? ಇದರಿಂದ ಸ್ವಲ್ಪವಾದರೂ ಪ್ರಯೋಜನವೇ ಇಲ್ಲವೆಂದು ತಿಳಿದುಕೋ ಅಂದನು.

ಈ ಲೆಗ್ರೀಯ ಮಾತುಗಳು ಮದ್ದಿನ ಮನೆಗೆ ಬೆಂಕಿಯ ಕಿಡಿಯು ಬಿದ್ದಂತಾಯಿತು. ಜೋರ್ಜನಿಗೆ ಕೋಪವು ಮಿತಿಮೀರಿ ಸಹಿಸುವುದಸಾಧ್ಯವಾಯಿತು. ಫಕ್ಕನೆ ಲೆಗ್ರೀಯ ಕಡೆಗೆ ತಿರುಗಿ, ತನ್ನ ಬಲವಾದ ಮುಷ್ಟಿಯ ಒಂದೇ ಏಟಿನಿಂದ ಅವನನ್ನು ನೆಲಕ್ಕೆ ಕೆಡವಿದನು. ಜೋರ್ಜನು ಅಲ್ಲಿರುವವರೆಗೂ ಲೆಗ್ರೀಯು ಬಿದ್ದ ಸ್ಥಳದಲ್ಲಿಯೇ ಬಿದ್ದುಕೊಂಡಿದ್ದನು. ಜೋರ್ಜನು ತನ್ನ ಗಾಡಿಯನ್ನು ಓಡಿಸಿಕೊಂಡು ಒಂದು ಗುಡ್ಡದ ಬಳಿಗೆ ಬಂದು ನಿಂತನು.

ಆ ಗುಡ್ಡದ ಮೇಲೆ ಒಂದು ಕುಳಿಯನ್ನು ಅಗೆದು ತನ್ನ ಚಿಕ್ಕ ಧಣಿಯ ಅಂಗಿಯಿಂದ ಸುತ್ತಲ್ಪಟ್ಟಿದ್ದ ಟಾಮನ ದೇಹವನ್ನು ಅದರಲ್ಲಿಟ್ಟು, ಸಮಾಧಿ

ಮಾಡಲಾಯಿತು. ಜೋರ್ಜನು ತನಗೆ ಸಹಾಯಮಾಡಿದ ಇಬ್ಬರು ಗುಲಾಮರಿಗೆ ಸ್ವಲ್ಪ ಹಣವನ್ನು ಕೊಟ್ಟು ಅವರನ್ನು ಕಳುಹಿಸಿಬಿಟ್ಟನು.

ಜೋರ್ಜನು ಒಂಟಿಯಾಗಿ ನಿಂತನು. ಸಮಾಧಿಯನ್ನು ನೋಡಿದ ಹಾಗೆಲ್ಲಾ ಇವನ ದುಃಖವು ಹೆಚ್ಚಾಯಿತು. ಸಹಿಸಲಾರದೆ ಸಮಾಧಿಯ ಮೇಲೆ ತನ್ನ ಮೊಣಕಾಲುಗಳನ್ನೂರಿ, ಸಮಾಧಿಯನ್ನು ತನ್ನ ಕಣ್ಣೀರಿನಿಂದ ತೋಯಿಸುತ್ತಾ—ನಿತ್ಯನಾದ ದೇವರೇ, ಈ ಘಳಿಗೆಯಿಂದ ಜತೇ ಮನುಷ್ಯರಾದ ಕಪ್ಪುಜನರನ್ನು ಗುಲಾಮರನ್ನಾಗಿ ಮಾಡುವ ಶಾಪಕರವಾದ ಈ ದುರ್ವ್ಯಾಪಾರವನ್ನು ಈ ದೇಶದಿಂದ ಹೋಗಲಾಡಿಸಲು ನನ್ನ ಕೈಲಾದ ಮಟ್ಟಿಗೂ ನನ್ನ ತನುಮನಧನಗಳಿಂದ ಮನಃಪೂರ್ವಕವಾಗಿ ಪ್ರಯತ್ನ ಮಾಡುತ್ತೇನೆಂದು ನಿನ್ನ ಮುಂದೆ ದೃಢ ಪ್ರತಿಜ್ಞೆಯನ್ನು ಮಾಡುತ್ತೇನೆ. ಈ ನನ್ನ ಪ್ರತಿಜ್ಞೆಗೆ ದೇವರೇ, ನೀನೇ ಸಾಕ್ಷಿಯಾಗಿರು ಎಂದು ಟಾಮ್ಮಾವನು ಯಾವ ದೇವರನ್ನು ತನ್ನ ಅಂತ್ಯಕಾಲದವರೆಗೂ ನಂಬಿದ್ದನೋ ಆ ದೇವರಿಗೆ ಭಕ್ತಿಪೂರ್ವಕವಾಗಿ ಪ್ರಾರ್ಥಿಸಿದನು.

ಭಕ್ತಿಯುಳ್ಳ ಗುಲಾಮನಾದ ಟಾಮ್ಮಾವನ ಕಡೇ ವಿಶ್ರಾಂತಿಯ ಸ್ಥಳದ ಗುರುತೇ ಇಲ್ಲ. ಆ ಸ್ಥಳದ ಜ್ಞಾಪಕಾರ್ಥವಾಗಿ ಸಮಾಧಿಯನ್ನು ಯಾರೂ ಕಟ್ಟಿಸಲಿಲ್ಲ. ಅಂತಹ ಜ್ಞಾಪಕಾರ್ಥದ ಅವಶ್ಯಕತೆಯು ಸಹ ಇಲ್ಲ. ಅವನ ವಿಶ್ರಾಂತಿಯ ಸ್ಥಳವು ಯಾವುದೆಂದು ಮನುಷ್ಯರಿಗೆ ತಿಳಿಯದಿದ್ದಾಗ್ಯೂ ಸ್ವಾಮಿಗೆ ತಿಳಿದಿದೆ. ಆತನು ಮಹಿಮಾಸ್ವರೂಪನಾಗಿ ಈ ಲೋಕಕ್ಕೆ ತಿರುಗಿ ಬಂದಾಗ, ಟಾಮ್ಮಾವನನ್ನು ಸಮಾಧಿಯಿಂದ ಎಬ್ಬಿಸಿ ತನ್ನ ಮಹಿಮಾಲೋಕಕ್ಕೆ ಕರೆದುಕೊಂಡುಹೋಗುವನು.

ಹಿಂಸಾ ವಿಜಯ ಸಮಾಪ್ತ

PRINTED AT THE WESLEY PRESS AND PUBLISHING HOUSE, MYSORE

ಎರಡನೆಯ ಭಾಗ

ಪ್ರೇಮ

ಅಧ್ಯಾಯ ೧

ಗಂಡಹೆಂಡಿರ ಅಗಲುವಿಕೆಯು

ಎಲ್ಶೈಜಾ ಎಂಬ ಯುವತಿಯು ನೀಗ್ರೋ ಅಂದರೆ ಕಪ್ಪು ಜನಾಂಗಕ್ಕೆ ಸೇರಿದವಳು. ಈಕೆಯ ಬಣ್ಣವು ಕಪ್ಪಾಗಿದ್ದಾಗ್ಯೂ ನೋಡುವುದಕ್ಕೆ ಬಹಳ ರೂಪವತಿಯು. ಕೆಂಟಕೀ ಎಂಬ ಸಂಸ್ಥಾನದಲ್ಲಿ ಗುಲಾಮ ವೃತ್ತಿಯನ್ನು ಮಾಡುತ್ತಿದ್ದಳು. ಚಿಕ್ಕಮಗುವಾಗಿದ್ದಂದಿನಿಂದಲೂ ಯಜಮಾನಿಯು ಬಹು ಮುದ್ದಾಗಿ ಬೆಳೆಸಿ, ಕೆಲಸಕಾರ್ಯಗಳನ್ನೆಲ್ಲಾ ಅಚ್ಚುಕಟ್ಟಾಗಿ ಮಾಡುವಂತೆ ಕಲಿಸಿದ್ದಳು.

ಈಕೆಯು ದೊಡ್ಡವಳಾದ ತರುವಾಯ ಯಜಮಾನಿಯು ಈಕೆಯನ್ನು ಪಕ್ಕದ ತೋಟದಲ್ಲಿ ಗುಲಾಮನಾಗಿದ್ದ ಒಬ್ಬ ನೀಗ್ರೋ ಯುವಕನಿಗೆ ಮದುವೆಮಾಡಿಕೊಟ್ಟಿದ್ದಳು. ಇವನ ಹೆಸರು ಜೋರ್ಜ್. ಇವನ ಧಣಿಯು ಇವನನ್ನು ಮತ್ತೊಬ್ಬರ ಕಾರ್ಖಾನೆಯಲ್ಲಿ ಸಂಬಳಕ್ಕೆ ಇಟ್ಟಿದ್ದನು. ಕೆಲಸದಲ್ಲಿ ಜೋರ್ಜ್ ಬಹಳ ಜಾಣನು. ಆ ಕಾರ್ಖಾನೆಯ ಯಂತ್ರದ ಸಾಮಾನು ಗಳಲ್ಲಿ ಒಂದನ್ನು ಇವನು ತನ್ನ ಸ್ವಂತ ಬುದ್ಧಿಶಕ್ತಿಯಿಂದ ಹೊಸದಾಗಿ ಕಂಡುಹಿಡಿದಿದ್ದನು. ಇವನ ಬುದ್ಧಿಶಕ್ತಿಗೆ ಕಾರ್ಖಾನೆಯ ಯಜಮಾನನು ಬಹಳ ಮೆಚ್ಚಿಕೊಂಡನು. ಸ್ವಂತ ಯಜಮಾನನಾದರೋ—ಇವನು ಕಪ್ಪು ಮನುಷ್ಯನಾಗಿದ್ದಾಗ್ಯೂ ಇಂತಹ ಯಂತ್ರವನ್ನು ಹೊಸದಾಗಿ ಕಂಡು ಹಿಡಿದನಲ್ಲಾ ಎಂದು ಹೊಟ್ಟೆಕಿಚ್ಚು ಪಟ್ಟನು. ತನ್ನಿಂದಾಗದ ಕೆಲಸವನ್ನು ಇವನು ಮಾಡಿದುದೇ ಇಂತಹ ಹೊಟ್ಟೆಕಿಚ್ಚಿಗೆ ಕಾರಣವಾಯಿತು. ಇದರ ಫಲವಾಗಿ ಇವನನ್ನು ಆ ಕಾರ್ಖಾನೆಯ ಕೆಲಸದಿಂದ ಬಿಡಿಸಿದನು.

ಯಜಮಾನನು ಇವನನ್ನು ಮನೆಗೆ ಕರೆದುಕೊಂಡು ಬಂದು ಬಹಳ ಹೀನವಾದ ಕೆಲಸಗಳನ್ನು ಮಾಡಲು ನೇಮಿಸಿದನು. ಕಾರ್ಖಾನೆಯ ಯಜಮಾನನು ಪುನಃ ಜೋರ್ಜನನ್ನು ಕಾರ್ಖಾನೆಯ ಕೆಲಸಕ್ಕೆ ಕಳುಹಿಸ

ಬೇಕೆಂದು ಬಹಳ ಕೇಳಿಕೊಂಡನು. ಯಜಮಾನನು ಕಳುಹಿಸಲಿಲ್ಲ. ಯಾವ ಕೆಲಸಗಳು ಕಷ್ಟವೂ ಹೀನವೂ ಎಂದು ಯಜಮಾನನು ತಿಳಿಯುತ್ತಿದ್ದನೋ ಆ ಕೆಲಸಗಳನ್ನೆಲ್ಲಾ ಮಾಡಲು ಜೋರ್ಜಿಗೆ ಹೇಳುತ್ತಿದ್ದನು. ಕಠಿಣಸ್ಥನೂ ದುಷ್ಟನೂ ಆದ ಯಜಮಾನನ ದುಷ್ಪ್ರವರ್ತನೆಯು ಜೋರ್ಜಿಗೆ ವಿಷಮಯವಾಯಿತು.

ಜೋರ್ಜನು ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದಾಗಲೇ ಇವನು ಎಲೈಜಳನ್ನು ಮದುವೆಯಾದುದು. ಇವನು ತನ್ನ ಕೆಲಸಕಾರ್ಯಗಳಲ್ಲಿ ನಂಬಿಗಸ್ತನಾಗಿಯೂ ಅಚ್ಚುಮೆಚ್ಚಾಗಿಯೂ ಇದ್ದುದರಿಂದ ಹೆಂಡತಿಯು ಇರುವ ಸ್ಥಳಕ್ಕೆ ತನ್ನ ಮನಸ್ಸಿಗೆ ಬಂದಾಗ ಹೋಗಿಬರಲು ಯಜಮಾನನು ಅಭ್ಯಂತರಿಸುತ್ತಿರಲಿಲ್ಲ. ಎಲೈಜಳು ತನ್ನ ಗಂಡನನ್ನು ಆಗಾಗ್ಯೆ ನೋಡುವ ಸಂದರ್ಭವು ಇರುತ್ತಿದ್ದುದರಿಂದ ಬಹು ಸಂತೋಷಪಡುತ್ತಿದ್ದಳು. ಕಡೆಗೆ ಅವರಿಗೆ ಒಂದು ಗಂಡು ಮಗುವು ಹುಟ್ಟಿತು. ಮಗುವು ಸಹ ನೋಡುವುದಕ್ಕೆ ಬಹು ಮುದ್ದಾಗಿದ್ದನು. ಮಗುವಿನ ಹೆಸರು ಹ್ಯಾರಿ.

ಯಜಮಾನನು ಜೋರ್ಜನನ್ನು ಕಾರ್ಖಾನೆಯ ಕೆಲಸದಿಂದ ಬಿಡಿಸಿ ತನ್ನ ಸ್ವಂತ ಕೆಲಸಗಳ ಮೇಲೆ ನೇಮಿಸಿಕೊಂಡನಷ್ಟೆ. ಕೆಲವು ದಿನಗಳ ಮೇಲೆ ಜೋರ್ಜನು ಇದ್ದಕ್ಕಿದ್ದ ಹಾಗೆ ತನ್ನ ಹೆಂಡತಿಯ ಮನೆಗೆ ಬಂದನು. ಎಲೈಜ ಬಾಗಿಲಲ್ಲಿಯೇ ನಿಂತಿದ್ದಳು. ಗಂಡನನ್ನು ನೋಡಿ ನಗುಮುಖಮಾಡಿ, ನೆಟ್ಟದೃಷ್ಟಿಯಿಂದ ನೋಡಿದಳು. ಮುಖವನ್ನು ದುಃಖದ ಮೋಡವು ಕವಿದಿದ್ದಂತೆ ಕಾಣಿಸಿತು.

ಎಲೈಜ—ಏನ್ರೀ, ನಗುವುದಿಲ್ಲವೇಕೆ? ನಮ್ಮ ಹ್ಯಾರಿಯನ್ನು ನೋಡಿರಿ, ದಿನದಿನವು ಹೇಗೆ ಬೆಳೆಯುತ್ತಿದ್ದಾನೆ . . . ಎಷ್ಟು ಸೊಗಸಾಗಿದ್ದಾನಲ್ಲವೇ? . . . ಮುದ್ದು ಹ್ಯಾರಿಯು ತಂದೆಯನ್ನು ನೋಡಿದ ಕೂಡಲೆ ಓಡಿಬಂದು, ತಾಯಿಯು ಉಟ್ಟಿದ್ದ ಬಟ್ಟೆಯ ಸೆರಿಗೆಯನ್ನು ಮೈಗೆ ಸುತ್ತಿಕೊಂಡು ತಂದೆಯನ್ನು ನಾಚಿಕೆಯಿಂದ ಪಿಳಿಪಿಳನೆ ನೋಡುತ್ತಿದ್ದನು. ಜೋರ್ಜ್ ನಿಟ್ಟುಸಿರಿಡುತ್ತಾ—ಎಲೈಜಾ, ಅವನು ಹುಟ್ಟದಿದ್ದರೆ ಚನ್ನಾಗಿತ್ತು! ನಾನು ತಾನೇ ಹುಟ್ಟಿದನೇಕೋ ತಿಳಿಯದು ಅಂದನು.

ಗಂಡನ ಮಾತುಗಳು ಕಿವಿಗೆ ಬಿದ್ದಾಕ್ಷಣ ಎಲ್ಯೆಜಳಿಗೆ ಮೈಯಲ್ಲಿ ನಡುಗು ಹುಟ್ಟಿತು. ಗಂಡನನ್ನು ಎವೆ ಹಾಕದೆ ನೋಡಿದಳು. ಮಾತಾಡಲು ನಾಲಿಗೆಯು ಒಣಗಿಹೋಯಿತು. ಕಡೆಗೆ—ಏನ್ರೀ . . . ಈ ದಿನ ಹೀಗೆ ಮಾತಾಡುವಿರಲ್ಲಾ . . . ! ಅಂದಳು.

ಜೋರ್ಜ್—ಹೀಗೆ ಮಾತಾಡಲೇ ಬೇಕು! ನನ್ನ ಸ್ಥಿತಿಯು ಹಾಗಾಗಿದೆ! ಬಹು ದುಃಖದಲ್ಲಿದ್ದೇನೆ. ನಾನು ಜೀವಿಸಿಯೂ ಫಲವೇನು? ಸಾಯುವುದೇ ಸರ್ವೋತ್ತಮವೆಂದೆನಿಸುತ್ತದೆ! ಮತ್ತೊಬ್ಬನು ನನಗೆ ಧಣಿಯಾಗಬೇಕೇ! ಅವನ ಹಾಗೆಯೇ ನಾನು ಸಹ ಮನುಷ್ಯನಲ್ಲವೇ? ಅವನಿಗಿರುವ ಬುದ್ಧಿಗಿಂತಲೂ ದೇವರು ನನಗೆ ಹೆಚ್ಚಿನ ಬುದ್ಧಿಯನ್ನು ಕೊಟ್ಟಿದ್ದಾನೆ. ನಾನು ಮಾಡುವ ಕೆಲಸಗಳನ್ನು ಸ್ವತಃ ಕಲಿತುಕೊಂಡೆನು. ಯಾರೂ ನನಗೆ ಕಲಿಸಲಿಲ್ಲ. ಅವನು ನನ್ನನ್ನು ಇಷ್ಟು ಕಠಿಣವಾಗಿ ನಡೆಸುತ್ತಾನಲ್ಲಾ! ಅವನಿಗೇನು ಅಧಿಕಾರವಿದೆ? ಇದು ಯಾವ ನ್ಯಾಯ? ಕಷ್ಟವಾದ ಮತ್ತು ಬಹು ಹೀನವಾದ ಕೆಲಸಗಳನ್ನು ಕೊಡುತ್ತಾನೆ. ನಾನು ಮಾಡುತ್ತೇನೆ. ಆದರೂ ಕೆಟ್ಟ ಬೈಗಳು ಹಿಂಸೆ ನನಗೆ ತಪ್ಪಿದ್ದಲ್ಲ. ಏನು ಮಾಡಲಿ? ಧಣಿಯ ಮಗನು ನೆನ್ನೆಯ ದಿನ ಕೊರಡೆಯನ್ನು ತೆಗೆದುಕೊಂಡು ಕುದುರೆಗಳನ್ನು ಬೆದರಿಸುತ್ತಿದ್ದನು. ನಾನು ಮರ್ಯಾದೆಯಿಂದ, ಧಣಿಯೇ, ಹಾಗೆ ಮಾಡಬೇಡವೆಂದು ಹೇಳಿದೆನು. ಇಷ್ಟಕ್ಕೆ ನನ್ನನ್ನು ಹೊಡೆಯುವುದಕ್ಕೆ ಪ್ರಾರಂಭಿಸಿದನು. ಧಣಿಯೇ, ನಾನು ಏನು ತಾನೇ ಹೇಳಿದೆನು, ದಯಮಾಡಿ ಹೊಡೆಯಬೇಡಿರಿ ಎಂದು ಕೈಹಿಡಿದುಕೊಂಡೆನು. ಕೂಡಲೆ ಗಟ್ಟಿಯಾಗಿ ಅರಚಿಕೊಂಡನು. ಅವನ ತಂದೆಯು ಬಂದು ನನ್ನನ್ನು ಒಂದು ಮರಕ್ಕೆ ಕಟ್ಟಿಹಾಕಿಸಿ, ನಿನಗೆ ಮನಸ್ಸು ಬಂದಷ್ಟು ಹೊಡಿ ಎಂದು ಮಗನಿಗೆ ಹೇಳಿದನು. ಅವನು ಅದರಂತೆಯೇ ನನ್ನನ್ನು ಅವನ ಕೈ ಸೋಲುವವರೆಗೂ ಹೊಡೆದನು. ಇವನನ್ನು ನನ್ನ ಧಣಿಯಾಗಿ ಮಾಡಿದವರು ಯಾರು? ನಾನು ಅದನ್ನು ತಿಳಿದುಕೊಳ್ಳಬೇಕು.

ಎಲ್ಯೆಜ (ಕಣ್ಣೀರಿಡುತ್ತಾ)—ಯಾರೋ ನನಗೆ ತಿಳಿಯದು. ನಾನಾದರೋ ಯಾವಾಗಲೂ ನನ್ನ ಧಣಿಯು ಹೇಳಿದಂತೆ ಕೇಳಬೇಕೆಂದು ನೆನೆಸಿದ್ದೆನು.

ಜೋರ್ಜ್—ನಿನ್ನ ವಿಷಯ ಬೇರೆ. ನಿನ್ನ ಧಣಿಯು ತಮ್ಮ ಸ್ವಂತ ಮಗುವಿನಂತೆ ನಿನ್ನನ್ನು ಸಾಕಿ ಸಲಹಿದರು. ಅವರು ನಿನಗೆ ಊಟಾ ಬಟ್ಟೆಗಳನ್ನು ಕೊಟ್ಟರು. ಒಳ್ಳೇ ರೀತಿಯಲ್ಲಿ ಬೆಳೆಸಿ, ಯಾವ ಯಾವ ಕೆಲಸ ಗಳನ್ನು ಹೇಗೆ ಮಾಡಬೇಕೆಂದು ಕಲಿಸಿದರು. ನಿನ್ನ ಮೇಲೆ ಅವರಿಗೇನು ಹಕ್ಕು ಇದೆಯೆಂಬುದಕ್ಕೆ ಕಾರಣವು ಇದ್ದೇ ಇದೆ. ಆದರೆ ನನ್ನ ಧಣಿಯೋ ನನ್ನನ್ನು ಒದೆಯುತ್ತಾನೆ, ಅಸಹ್ಯವಾದ ಮಾತುಗಳಿಂದ ಬೈಯುತ್ತಾನೆ, ಕತ್ತೆಯು ದುಡಿಯುವಂತೆ ದುಡಿಸಿಕೊಳ್ಳುತ್ತಾನೆ. ಇವುಗಳನ್ನೆಲ್ಲಾ ಇನ್ನೆಷ್ಟು ದಿನಗಳು ಸಹಿಸಿಕೊಂಡಿರಲಿ! ಸಹಿಸಲಾರೆನು, ಎಂದಿಗೂ ಸಹಿಸಲಾರೆನು. ಇನ್ನು ಮೇಲೆ ಇಲ್ಲಿ ಬಂದು ನಿನ್ನನ್ನು ನೋಡಬಾರದೆಂದು ಈಗ ಹೇಳು ತ್ತಾನೆ. ಅವನ ತೋಟದಲ್ಲಿರುವ ಮೈನಾ ಎಂಬ ಹುಡುಗಿಯನ್ನು ಹೆಂಡತಿಯಾಗಿಟ್ಟುಕೊಳ್ಳಬೇಕಂತೆ, ನಮಗೆ ಒಂದು ಸಣ್ಣ ಗುಡಿಸಿಲನ್ನು ಕೊಡುತ್ತಾನಂತೆ, ಅದರಲ್ಲಿ ನಾವಿಬ್ಬರು ವಾಸಮಾಡಿಕೊಂಡಿರಬೇಕಂತೆ, ಇಲ್ಲದಿದ್ದರೆ ನನ್ನನ್ನು ದೂರದೇಶಕ್ಕೆ ಮಾರುತ್ತಾನಂತೆ, ನಾನೇನು ಮಾಡಲಿ ಈಗ, ಎಲೈಜಾ? . . .

ಎಲೈಜ—ಬಿಳೀ ಮನುಷ್ಯರಂತೆಯೇ ನಾವು ಸಹ ಮದುವೆಮಾಡಿ ಕೊಂಡಿದ್ದೇವಲ್ಲಾ? ಗುರುವೇ ನಮಗೆ ಆ ದಿನ ಮದುವೇ ಕೊಡಲಿಲ್ಲವೇ?

ಜೋರ್ಜ್—ಎಲೈಜಾ, ಗುಲಾಮರಿಗೆ ಮದುವೆ ಇಲ್ಲವೆಂಬ ಸಂಗ ತಿಯು ನಿನಗೆ ತಿಳಿಯದೇ? ನನ್ನ ಧಣಿಯು ನಮ್ಮಿಬ್ಬರನ್ನು ಅಗಲಿಸ ಬೇಕೆಂದು ಮನಸ್ಸುಮಾಡಿದರೆ ನಾನು ನಿನ್ನನ್ನು ಹೆಂಡತಿಯಾಗಿ ಇಟ್ಟು ಕೊಳ್ಳುವುದಕ್ಕಾಗುವುದಿಲ್ಲ. ನಾನು ನಿನ್ನ ಮುಖವನ್ನೇ ನೋಡದಿದ್ದರೆ ಚೆನ್ನಾಗಿದ್ದಿತು. ಈಗ ನಿನ್ನನ್ನು ಬಿಟ್ಟು ಹೇಗಿರಲಿ? ಹ್ಯಾರಿಯು ಹುಟ್ಟ ದಿದ್ದರೆ ಚೆನ್ನಾಗಿದ್ದಿತಲ್ಲಾ! ಮಗನು ಎಷ್ಟು ಸೊಗಸಾಗಿದ್ದಾನೆ! ಅವನು ಅಷ್ಟು ರೂಪವಾಗಿರುವುದರಿಂದ ಅವನನ್ನು ಒಂದಾನೊಂದು ದಿನ ಹೆಚ್ಚಿನ ಬೆಲೆಗೆ ಮಾರುವುದೇನೋ ನಿಜವೆಂದು ತಿಳಿದುಕೋ. ಎಲೈಜಾ, . . . ಇಂತಹ ಕಷ್ಟಸ್ಥಿತಿಯಲ್ಲಿ ನಾನಿರಲಾರೆನು. ನಾನು ಹೊರಟುಹೋಗುತ್ತೇನೆ.

ಎಲೈಜಾ—ಎಲ್ಲಿಗೆ?

ಜೋರ್ಜ್—ಕೆನಡಾ ದೇಶಕ್ಕೆ. ನಾನು ಅಲ್ಲಿಗೆ ಹೋಗಿ ಕಷ್ಟಪಟ್ಟು ಕೆಲಸಮಾಡಿ, ಹಣವನ್ನು ಸಂಪಾದಿಸಿಕೊಂಡು ಬಂದು, ನಿನ್ನನ್ನು ಕೊಂಡು ಕೊಳ್ಳುತ್ತೇನೆ. ನಾನಿಷ್ಟು ಮಾಡದಿದ್ದರೆ ಆಗುವುದೇ ಇಲ್ಲ. ನಿನ್ನ ಧಣಿಯು ಬಹಳ ಒಳ್ಳೆಯವರು, ದಯಾಳುವು. ಅವರು ನಿನ್ನನ್ನು ನನಗೆ ಮಾರುವುದಕ್ಕೆ ಎಂದಿಗೂ ಇಲ್ಲವೆನ್ನುವುದಿಲ್ಲ. ನಾನು ನಿನ್ನನ್ನೂ ಮಗ ನನ್ನೂ ಸಾಧ್ಯವಾದಷ್ಟು ಬೇಗ ಕೊಂಡುಕೊಳ್ಳುತ್ತೇನೆ. ನಾವಿಬ್ಬರೂ ನಂಬಿಕೊಂಡಿರುವ ಆ ದೇವರೇ ನಮಗೆ ಸಹಾಯಮಾಡಲಿ.

ಎಲೈಜ—ನಿಮ್ಮನ್ನು ಹಿಡಿದುಕೊಂಡರೆ ಏನು ಮಾಡುತ್ತೀರಿ? ನಿಮ್ಮ ಸ್ಥಿತಿಯು ಎಷ್ಟೋ ಭಯಂಕರವಾಗುತ್ತದಲ್ಲಾ!

ಜೋರ್ಜ್—ನಾನು ಯಾರ ಕೈಗೂ ಸಿಕ್ಕುವುದಿಲ್ಲ ಎಲೈಜಾ, . . . ಹೇಗಾದರೂ ತಪ್ಪಿಸಿಕೊಳ್ಳುತ್ತೇನೆ. ಹಾಗೆ ತಪ್ಪಿಸಿಕೊಳ್ಳಲಾಗದಿದ್ದರೆ ಸಾಯುತ್ತೇನೆ.

ಎಲೈಜ—ನೀವೇ ನಿಮ್ಮನ್ನು ಕೊಂದುಕೊಳ್ಳುವುದಿಲ್ಲವಷ್ಟೆ?

ಜೋರ್ಜ್—ನಾನೇಕೆ ನನ್ನನ್ನು ಕೊಂದುಕೊಳ್ಳಲಿ? ಅವರಿಗೆ ನನ್ನ ಮೇಲಿನ ಸಿಟ್ಟು ಹೆಚ್ಚಾಗಿರುವುದರಿಂದ ಅವರೇ ನನ್ನನ್ನು ಕೊಲ್ಲುತ್ತಾರೆ. ಅವರು ನನ್ನನ್ನು ಮಾರುವ ವರೆಗೂ ನಾನು ಜೀವಿಸುವುದಿಲ್ಲ. ಇಲ್ಲ, ಎಂದಿಗೂ ಇಲ್ಲ.

ಎಲೈಜ—ಏನ್ರೀ, ಎಚ್ಚರಿಕೆಯಾಗಿರ್ರಿ. ಏನೂ ಅಪಾಯಮಾಡಿ ಕೊಳ್ಳಬೇಡಿರಿ; ನನ್ನ ಮುಖವನ್ನು ನೋಡಿರಿ, ನಮ್ಮ ಮಗುವಿನ ಮುಖ ವನ್ನು ನೋಡಿರಿ. ನಿಮಗೂ ಕೇಡುಮಾಡಿಕೊಳ್ಳಬೇಡಿರಿ. ಇತರರಿಗೂ ಯಾವ ವಿಧವಾದ ಕೇಡನ್ನಾದರೂ ಮಾಡಬೇಡಿರಿ. ನಿಮ್ಮ ಕಷ್ಟಗಳ ಭಾರದಿಂದ ನಿಮ್ಮ ಮನಸ್ಸು ಕುಂದಿಹೋಗಿದೆ. ಅದು ನನಗೆ ತಿಳಿದದೆ. ಆದರೂ ಎಚ್ಚರಿಕೆ, ಎಚ್ಚರಿಕೆ. ನೀವು ಕೇನಡಾ ದೇಶಕ್ಕೆ ಹೋಗಬೇಕು. ಅದು ಒಳ್ಳೇ ಯೋಚನೆಯು. ಯಾವ ಕೆಲಸವನ್ನು ಮಾಡಬೇಕಾದರೂ ವಿವೇಕದಿಂದ ಮಾಡಿರಿ; ದುಡುಕಬೇಡಿರಿ. ನಿಮಗೆ ಸಹಾಯವು ದೊರಕು ವಂತೆ ದೇವರನ್ನು ಬೇಡಿಕೊಳ್ಳಿರಿ.

ಜೋರ್ಜ್—ನನ್ನಲ್ಲಿರುವ ಯೋಚನೆ ಏನೆಂದು ಹೇಳುತ್ತೇನೆ, ಕೇಳು—ಧಣಿಯು ಒಂದು ಕಾಗದವನ್ನು ಕೊಟ್ಟು ಕೆಲಸದ ಮೇಲೆ ನನ್ನನ್ನು ಇಲ್ಲಿಗೆ ಕಳುಹಿಸಿದನು. ನಾನು ನಿನ್ನನ್ನು ನೋಡಿ ಮೈನಾಳನ್ನು ಹೆಂಡತಿಯಾಗಿ ತೆಗೆದುಕೊಳ್ಳುವ ವಿಷಯ ಹೇಳುತ್ತೇನೆಂದು ಆತನು ಸಂಪೂರ್ಣವಾಗಿ ನಂಬಿದ್ದಾನೆ. ನಾನು ಇಲ್ಲಿಂದ ಮನೆಗೆ ಹೋಗಿ ಮೈನಾಳನ್ನು ಮದುವೆಮಾಡಿಕೊಳ್ಳುವಂತೆ ನಟಿಸುತ್ತೇನೆ. ನಾನು ನಿನಗೆ ಹೇಳಿದ ಎಲ್ಲವುಗಳ ವಿಷಯ ಮೊದಲೇ ಏರ್ಪಾಡುಮಾಡಿಕೊಂಡಿದ್ದೇನೆ. ನನಗೆ ಸಹಾಯ ಮಾಡುವವರು ಸಹ ಇದ್ದಾರೆ. ಸುಮಾರು ಏಳೆಂಟು ದಿನಗಳಾದ ತರುವಾಯ ನಾನು ತಪ್ಪಿಸಿಕೊಂಡು ಓಡಿಹೋಗುತ್ತೇನೆ. ಎಲ್ಯೈಜಾ, ನನಗಾಗಿ ದೇವರನ್ನು ಬೇಡಿಕೊ. ದೇವರು ನಿನ್ನ ಬೇಡುವಿಕೆಯನ್ನು ಕೇಳುತ್ತಾನೆಂಬ ಭರವಸವು ನನಗಿದೆ ಅಂದನು.

ಗಂಡಹೆಂಡಿರ ಹೃದಯವೇದನೆಯು ಅಧಿಕವಾಯಿತು. ಕಣ್ಣೀರು ಇಬ್ಬರ ಕಣ್ಣುಗಳಲ್ಲಿ ತುಂಬಿ ತೊಟ್ಟಿಕ್ಕುತ್ತಿದ್ದಿತು. ಜೋರ್ಜನು ಹೆಂಡತಿಯನ್ನೂ ಮುದ್ದು ಮಗನನ್ನೂ ನೀರುದುಂಬಿದ ಕಣ್ಣುಗಳಿಂದ ಕಡೇ ಸಾರಿ ನೋಡಿ ಹೊರಟೇ ಹೋದನು.

ಅಧ್ಯಾಯ ೨

ಎಲ್ಯೈಜಾ ಮಗನೊಂದಿಗೆ ಓಡಿಹೋದುದು

ಗಂಡನು ಕಣ್ಣಿಗೆ ಮರೆಯಾಗುವ ವರೆಗೂ ಎಲ್ಯೈಜಾ ನೋಡುತ್ತಿದ್ದು ತರುವಾಯ ತನ್ನ ಕೊಠಡಿಗೆ ಬಂದಳು. ಗಂಡನನ್ನು ಮತ್ತೊಂದಾವರ್ತಿ ನೋಡುವ ನಿರೀಕ್ಷೆಯಿಲ್ಲ. ಮುದ್ದುಮುದ್ದಾಗಿ ಆಟವಾಡುತ್ತಿದ್ದ ಮಗನನ್ನು ನೋಡಿದ ಹಾಗೆಲ್ಲಾ ಈಕೆಯ ದುಃಖವು ಇಮ್ಮಡಿಯಾಯಿತು. ಒಬ್ಬಳೇ ಇರುವುದರಿಂದ ದುಃಖವು ಕಡಿಮೆಯಾಗುವುದಿಲ್ಲವೆಂದು ಹೊರಗೆ ಹೋಗಿ ಯಜಮಾನರ ಮನೆಯಲ್ಲಿ ತನ್ನ ವಾಡಿಕೆಯಾದ ಕೆಲಸಗಳನ್ನು ಮಾಡಲು ಪ್ರಾರಂಭಿಸಿದಳು.

ಜೋರ್ಜನು ಹೆಂಡತಿಗೆ ತಾನು ಓಡಿಹೋಗುವ ಸಂಗತಿಯನ್ನು ಹೇಳಿ ಹೋಗುವುದಕ್ಕೆ ಬಂದಿದ್ದ ದಿನವೇ ಒಬ್ಬ ಗುಲಾಮರ ವ್ಯಾಪಾರಿಯು ಎಲ್ಯೈಜಳ ಧಣಿಯಾದ ಶೆಲ್ಬೀ ದೊರೆಯ ಬಳಿಗೆ ಬಂದು ಮಾತನ್ನಾಡಿ ಕೊಂಡು ಕೂತಿದ್ದನು. ಇವನು ಕೂತ ಸ್ಥಳದಿಂದಲೇ ಚಿಕ್ಕ ಹ್ಯಾರಿಯನ್ನು ದಿಟ್ಟಿಸಿ ನೋಡುತ್ತಿದ್ದನು. ಇದು ಎಲ್ಯೈಜಳಿಗೆ ಗೊತ್ತಾಯಿತು. ಇವನು ತನ್ನ ಮಗನನ್ನು ಕೊಂಡುಕೊಳ್ಳುವುದಕ್ಕೆ ಆಲೋಚಿಸುತ್ತಿರಬಹುದೆಂದು ನೆನಸಿ ಭಯಪಟ್ಟಳು. ಈ ಭಯವು ಹೆಚ್ಚಾಗುತ್ತಿದ್ದುದರಿಂದ ತನ್ನ ಯಜಮಾನಿಯ ಬಳಿಗೆ ಹೋಗಿ ತನ್ನ ಭಯಕ್ಕೆ ಕಾರಣವನ್ನು ತಿಳಿಸಿದಳು. ಧಣಿಯು ಯಾರನ್ನೂ ಮಾರುವುದಿಲ್ಲವೆಂದು ಖಚಿತವಾಗಿ ಹೇಳಿದಳು. ಎಲ್ಯೈಜಳ ಭಯವು ಇನ್ನೂ ನಿವಾರಣೆಯಾಗಲಿಲ್ಲ. ಆದುದರಿಂದ ಆ ರಾತ್ರೆ ತನ್ನ ಧಣಿಯೂ ಯಜಮಾನಿಯೂ ಕೂತು ಮಾತಾಡುವ ಕೊಠಡಿಯ ಪಕ್ಕದ ಕೊಠಡಿಯಲ್ಲಿ ಅವಿತುಕೊಂಡು ಅವರಿಬ್ಬರು ಮಾತಾಡುವುದನ್ನು ಕೇಳಿಸಿಕೊಂಡಳು. ಕೊಠಡಿಯು ಕತ್ತಲಾಗಿದ್ದುದರಿಂದ ಯಾರೂ ಈಕೆ ಯನ್ನು ನೋಡಲಿಲ್ಲ. ಶೆಲ್ಬೀ ದೊರೆಯು ಹ್ಯಾರಿಯನ್ನೂ ಮತ್ತೊಬ್ಬ ಗುಲಾಮನಾದ ಟಾಂಮಾವನನ್ನೂ ಈಗ ಬಂದಿರುವಾತನಿಗೆ ಮಾರಿರುವು ದಾಗಿಯೂ ಮಾರಣೆಯ ದಿನವೇ ಗುಲಾಮ ವ್ಯಾಪಾರಿಯು ಅವರಿಬ್ಬರನ್ನು ಕರೆದುಕೊಂಡುಹೋಗುವುದಾಗಿಯೂ ಹೆಂಡತಿಯೊಂದಿಗೆ ಹೇಳುತ್ತಿದ್ದನು. ಅವರಿಬ್ಬರನ್ನೂ ಮಾರಬಾರದೆಂದು ಯಜಮಾನಿಯು ಯಜಮಾನನ್ನು ಬಹಳವಾಗಿ ಕೇಳಿಕೊಂಡಳು. ಅದಕ್ಕೆ ಶೆಲ್ಬೀಯು—ತನಗೂ ಮಾರುವುದಕ್ಕೆ ಇಷ್ಟವಿಲ್ಲವೆಂತಲೂ ಈ ವ್ಯಾಪಾರಿಯಲ್ಲಿ ತನಗೆ ಬಹಳ ಸಾಲವಿರುವು ದೆಂತಲೂ ಇವರಿಬ್ಬರನ್ನು ಮಾರದಿದ್ದರೆ ಎಲ್ಲರನ್ನೂ ಮಾರಬೇಕಾಗುತ್ತ ದೆಂತಲೂ ಹೇಳಿ ಬಹಳ ವ್ಯಸನಪಡುತ್ತಿದ್ದನು.

ಇವರಿಬ್ಬರು ಮಾತಾಡುವುದು ನಿಂತಿತು. ಎಲ್ಯೈಜಳು ತಾನು ಅಡಗಿ ಕೊಂಡಿದ್ದ ಕೊಠಡಿಯನ್ನು ಬಿಟ್ಟು ಯಾರೂ ಕಾಣದಂತೆ ತನ್ನ ಸ್ವಂತ ಕೊಠಡಿಗೆ ಬಂದಳು. ಸುತ್ತಲೂ ನೋಡಿದಳು. ಮುದ್ದು ಹ್ಯಾರಿಯು ಮಲಗಿಕೊಂಡು ನಿದ್ರೆಮಾಡುತ್ತಿದ್ದನು. ಮಗನ ಹಾಸಿಗೆಯ ಬಳಿಗೆ

ಬಂದು—ಮಗುವೇ ! ನನ್ನ ಮುದ್ದು ಮಗನೇ ! ನಿನ್ನನ್ನು ಧಣಿಯು ಮಾರಿಬಿಟ್ಟಿದ್ದಾರಲ್ಲಾ ! ಆದರೂ ಭಯಪಡಬೇಡ. ನಾನು, ನಿನ್ನ ತಾಯಿಯಾದ ನಾನು, ನಿನ್ನನ್ನು ಆ ವ್ಯಾಪಾರಿಯ ಕೈಯಿಂದ ತಪ್ಪಿಸಿ ಕಾಪಾಡುತ್ತೇನೆ ಎಂದು ಹೇಳಿ, ಯಜಮಾನಿಗೆ ಅವಸರಸರವಾಗಿ ಒಂದು ಪತ್ರವನ್ನು ಬರೆದಳು. ಆ ಪತ್ರದಲ್ಲಿ ಹೀಗೆ ಬರೆದಿದ್ದಳು—

ನನ್ನ ಪ್ರಿಯ ಯಜಮಾನಿಯೇ,

ನಾನು ಉಪಕಾರ ನೆನಸದವಳೆಂದಾಗಲೀ ದುಸ್ವಭಾವದವಳೆಂದಾಗಲೀ ದಯವಿಟ್ಟು ನೆನಸಬೇಡಿರಿ. ಈಗ ನೀವೂ ಧಣಿಯವರೂ ಆಡಿದ ಮಾತುಗಳನ್ನೆಲ್ಲಾ ಕೇಳಿಸಿಕೊಂಡೆನು. ನಾನು ನನ್ನ ಮುದ್ದು ಮಗುವನ್ನು ಆ ವ್ಯಾಪಾರಿಯ ಕೈಯಿಂದ ತಪ್ಪಿಸಲು ಪ್ರಯತ್ನ ಮಾಡುವವಳಾಗಿದ್ದೇನೆ. ದಯಮಾಡಿ ನನ್ನ ಮೇಲೆ ಸಿಟ್ಟಾಗಬೇಡಿರಿ. ನೀವು ನನಗೆ ಬಹಳ ಉಪಕಾರಗಳನ್ನು ಮಾಡಿದ್ದೀರಿ. ಇದಕ್ಕಾಗಿ ದೇವರು ನಿಮಗೆ ಆಯುರಾರೋಗ್ಯ ಭಾಗ್ಯಾದಿಗಳನ್ನು ಅನುಗ್ರಹಿಸಲಿ.

ಇತಿ, ನಿಮ್ಮ ಗುಲಾಮಳು

ಎಲೈಜಾ.

ಪತ್ರಕ್ಕೆ ವಿಳಾಸವನ್ನು ಬರೆದು ತನ್ನ ಕೊಠಡಿಯ ಒಂದು ಮಣೆಯ ಮೇಲೆ ಕಾಣಿಸುವಂತೆ ಇಟ್ಟಳು. ತನ್ನ ಮಗುವಿನ ಬಟ್ಟೆಗಳನ್ನು ಒಂದು ಬಟ್ಟೆಯಲ್ಲಿ ಗಂಟುಕಟ್ಟಿ ನಡುವಿಗೆ ಬಿಗಿದುಕೊಂಡಳು. ಮಗನನ್ನು ಎಬ್ಬಿಸಿ ಅವನಿಗೆ ಅಂಗಿಯನ್ನೂ ಟೊಪ್ಪಿಗೆಯನ್ನೂ ತೊಡಿಸಲು ಪ್ರಾರಂಭಿಸಿದಳು.

ಮಗನು—ನಾವು ಎಲ್ಲಿಗ್ಹೋಗಬೇಕಮ್ಮಾ ?

ಎಲೈಜ—ಹುಷ್ . . . ಮಗೂ, . . . ಗಟ್ಟಿಯಾಗಿ ಮಾತಾಡಬೇಡ. ಯಾರಾದರೂ ಕೇಳಿಸಿಕೊಂಡಾರು. ಇಲ್ಲಿ ಒಬ್ಬ ಕೆಟ್ಟ ಮನುಷ್ಯನಿದ್ದಾನೆ. ಅವನು ಈಗ ಬಂದು ನಿನ್ನನ್ನು ಅಮ್ಮನಿಂದ ಕಿತ್ತುಕೊಂಡುಹೋಗುತ್ತಾನೆ. ಅಮ್ಮ ನಿನ್ನನ್ನು ಅವನಿಗೆ ಕೊಡುವುದಿಲ್ಲ. ಬೇಗ ಅಂಗಿಯನ್ನೂ ಟೊಪ್ಪಿಗೆಯನ್ನೂ ಹಾಕಿಕೊ. ತಪ್ಪಿಸಿಕೊಂಡು ಓಡಿಹೋಗೋಣ. ಆಗ ಆ ಕೆಟ್ಟ

ಮನುಷ್ಯನು ನಿನ್ನನ್ನು ಹಿಡಿದುಕೊಂಡುಹೋಗುವುದಿಲ್ಲ ಎಂದು ಮಗನಿಗೆ ಬಟ್ಟೆಗಳನ್ನು ತೊಡಿಸಿ ಎತ್ತಿಕೊಂಡು ಕೊಠಡಿಯಿಂದ ಹೊರಗೆ ಬಂದಳು. ಆಕಾಶದಲ್ಲಿ ನಕ್ಷತ್ರಗಳು ಥಳಥಳಾ ಎಂದು ಹೊಳೆಯುತ್ತಿದ್ದವು.

ರಾತ್ರಿಯು ಕತ್ತಲಾಗಿದ್ದಿತು. ಅಂತಹ ಕತ್ತಲಿನಲ್ಲಿಯೇ ಮಗನನ್ನು ಹೊತ್ತುಕೊಂಡು ಟಾಮನ ಗುಡಿಸಿಲಿಗೆ ಬಂದು—ಟಾಂಮಾವಾ, ಧಣಿಯವರು ನಿನ್ನನ್ನೂ ಈ ಚಿಕ್ಕ ಹ್ಯಾರಿಯನ್ನೂ ಮಾರಿಬಿಟ್ಟರು. ಆದುದರಿಂದ ನಾನು ನನ್ನ ಮಗನನ್ನು ಎತ್ತಿಕೊಂಡು ಓಡಿಹೋಗುತ್ತಿದ್ದೇನೆ. ಈ ಮಧ್ಯಾಹ್ನವೇ ನನ್ನ ಗಂಡನನ್ನು ನೋಡಿದೆನು. ಆಗಿನ ಸಮಯದಲ್ಲಿ ಯಾವ ಸಂಗತಿಯೂ ನನಗೆ ತಿಳಿದಿರಲಿಲ್ಲ. ನನ್ನ ಗಂಡನ ಧಣಿಯು ಆತನನ್ನು ಬಹು ಕ್ರೂರವಾಗಿ ನಡೆಸುತ್ತಿದ್ದಾನಂತೆ. ಆ ಹಿಂಸೆಯನ್ನು ಸಹಿಸಲಾರದೆ ಅವರು ತಪ್ಪಿಸಿಕೊಂಡು ಓಡಿಹೋಗುವುದಾಗಿ ಹೇಳಿದರು. ದಯಮಾಡಿ ನಾನು ಎಲ್ಲಿಗೆ ಹೋಗುತ್ತೇನೆ, ಏಕೆ ಹೋಗುತ್ತೇನೆ ಎಂದು ಅವರಿಗೆ ತಿಳಿಸಿರಿ. ನಾನು ಕೆನಡಾ ದೇಶಕ್ಕೆ ಹೋಗುವುದಕ್ಕೆ ಪ್ರಯತ್ನಿಸುತ್ತೇನೆ. ನಾನು ಯಾವಾಗಲೂ ಅವರ ವಿಷಯದಲ್ಲಿ ಚಿಂತಿಸಿ, ಅವರನ್ನು ನೆನಸುತ್ತಿರುತ್ತೇನೆಂತಲೂ ಹೇಳಿರಿ. ನಾನು ಈ ಲೋಕದಲ್ಲಿ ಆ ನನ್ನ ಪ್ರಿಯ ಗಂಡನನ್ನು ಇನ್ನೊಂದಾವರ್ತಿ ನೋಡುವುದಕ್ಕೆ ಸಾಧ್ಯವೋ ಅಲ್ಲವೋ ನನಗೆ ತಿಳಿಯದು. ಒಳ್ಳೆಯವರಾಗಿರುವಂತೆಯೂ ಪರಲೋಕದಲ್ಲಿ ನನ್ನನ್ನು ನೋಡಲು ಪ್ರಯತ್ನಿಸುವಂತೆಯೂ ದಯವಿಟ್ಟು ಹೇಳಿರಿ ಎಂದು ಮುಖವನ್ನು ವಾರೆಯಾಗಿಟ್ಟುಕೊಂಡು ಕಣ್ಣೀರಿಡುತ್ತಾ ಟಾಂಮಾವನಿಗೂ ಇವನ ಹೆಂಡತಿ ಕ್ಲೋಯಿ ಅತ್ತೆಗೂ ಹೇಳಿ, ಅವರಿಂದ ಅಪ್ಪಣೆಯನ್ನು ಪಡೆದು ಮುದ್ದು ಮಗನನ್ನು ಹೊತ್ತುಕೊಂಡು ಕಗ್ಗತ್ತಲಿನಲ್ಲಿ ನಿಶ್ಶಬ್ದವಾಗಿ ಹೊರಬಿದ್ದಳು.

ಅಧ್ಯಾಯ ೩

ಏಂಡೀ ಮತ್ತು ಸೆಮ್ ಎಂಬ ಗುಲಾಮರ ಯುಕ್ತಿಯು

ಬೆಳಗಾಯಿತು. ಸೂರ್ಯನು ಒಂದೆರಡು ಮಾರುದ್ದ ಮೇಲಕ್ಕೂ ಬಂದುದಾಯಿತು. ಯಜಮಾನಿಯು ಎಲ್ಯೆಜಳನ್ನು ಕರೆಯುವುದಕ್ಕಾಗಿ ಗಂಟೆಯನ್ನು ಬಾರಿಸಿ ಬೇಸರವಾಯಿತು. ಇನ್ನೆಷ್ಟು ಸಾರಿ ಗಂಟೆಯನ್ನು ಬಾರಿಸಲಿ? ಎಲ್ಯೆಜಾಗೆ ಕೇಳಿಸಿತೋ ಇಲ್ಲವೋ? ಏನು ಮಾಡುತ್ತಾಳೆ? ಇನ್ನೂ ಬರಲಿಲ್ಲ ಅಂದಳು ಯಜಮಾನಿಯು.

ಶೆಲ್ಬೀ ದೊರೆಯು ಕನ್ನಡಿಯ ಎದುರಿಗೆ ನಿಂತುಕೊಂಡು ಕ್ಷೌರದ ಕತ್ತಿಯನ್ನು ಹದಮಾಡುತ್ತಿದ್ದನು. ಒಬ್ಬ ನೀಗ್ರೊ ಸೇವಕನು ಬಾಗಿಲು ತೆರೆದುಕೊಂಡು ಒಳಕ್ಕೆ ಬಂದು ಕ್ಷೌರಕ್ಕಾಗಿ ನೀರನ್ನು ಕೊಟ್ಟನು.

ಯಜಮಾನಿ—ಏಂಡೀ (ಸೇವಕನ ಹೆಸರು), ಎಲ್ಯೆಜಳ ಕೊಠಡಿಗೆ ಹೋಗಿ ಆಕೆಯು ಏನು ಮಾಡುತ್ತಿದ್ದಾಳೆ, ನೋಡು? ಇನ್ನೆಷ್ಟು ಸಾರಿ ಗಂಟೆಯನ್ನು ಬಾರಿಸಲಿ? ಬೇಗ ಕರೆದುಕೊಂಡು ಬಾ ಅಯ್ಯೋ ಬಡ ಪ್ರಾಣಿ ಎಂದು ಹೇಳಿ ಏಕೋ ನಿಟ್ಟುಸಿರಿಟ್ಟಳು.

ಏಂಡೀ ಸ್ವಲ್ಪ ಹೊತ್ತಿನೊಳಗಾಗಿ ಹಿಂದಿರುಗಿದನು. ಘಾಬರಿಯಿಂದ ಕಣ್ಣು ಬಾಯಿಗಳನ್ನು ಅಗಲವಾಗಿ ತೆರೆದುಕೊಂಡು ಅಮ್ಮಾ . . . ಅಮ್ಮಾ, ಎಲ್ಯೆಜಳ ಪೆಟ್ಟಿಗೆಯು ತೆರೆದು ಬಿದ್ದಿದೆ. ಸಾಮಾನುಗಳೆಲ್ಲಾ ಚಿಲ್ಲಾಪಿಲ್ಲಿಯಾಗಿ ಬಿದ್ದಿವೆ. ಓಡಿಹೋದಳೋ ಏನೋ? ಎಂದನು.

ಆಳಿನ ಮಾತುಗಳು ಕಿವಿಗೆ ಬಿದ್ದಾಕ್ಷಣವೇ ಧಣಿಗೂ ಯಜಮಾನಿಗೂ ಯಥಾರ್ಥ ತಿಳಿದಂತಾಗಿ, ಧಣಿಯು ಆಕೆಗೆ—ಸಂಗತಿಯು ತಿಳಿದಂತೆ ಕಾಣಿಸುತ್ತದೆ. ಅದಕ್ಕಾಗಿಯೇ ಓಡಿಹೋಗಿದ್ದಾಳೆ ಅಂದನು.

ಹೌದು ಓಡಿಹೋಗಿರಬಹುದು. ದೇವರಿಗೆ ಅನಂತ ಸ್ತೋತ್ರವಾಗಲಿ ಅಂದಳು ಯಜಮಾನಿಯು.

ಧಣಿಯು—ಏನೂ . . . . ನಿನಗೆ ಸ್ವಲ್ಪವಾದರೂ ಬುದ್ಧಿಯಿಲ್ಲ. ಹುಚ್ಚಿಯಂತೆ ಮಾತಾಡುತ್ತಿದ್ದೀ. ನಿಜವಾಗಿ ಆಕೆಯು ಹಾಗೆ ಓಡಿಹೋಗಿದ್ದರೆ

ನನ್ನ ಕುತ್ತಿಗೆಗೇ ಬಂತೆಂದು ತಿಳಿದುಕೊ. ಆ ಮಗುವನ್ನು ಮಾರು ವುದಕ್ಕೆ ನನಗೆ ಸ್ವಲ್ಪವಾದರೂ ಮನಸ್ಸಿರಲಿಲ್ಲವೆಂದು ಹೇಲೀಗೆ ಚೆನ್ನಾಗಿ ತಿಳಿದಿದೆ. ನಾನೇ ಉದ್ದಿಶ್ಯಪೂರ್ವಕವಾಗಿ ಆ ಮಗುವನ್ನು ಪರಾರಿಮಾಡಿ ದ್ದೇನೆಂದು ಆತನು ತಿಳಿದೇ ತಿಳಿದುಕೊಳ್ಳುತ್ತಾನೆ. ಇದರಿಂದ ನನ್ನ ಹೆಸರು ಕೆಡುವಂತಾಯಿತು ಎಂದು ಹೇಳಿ, ತಕ್ಷಣವೇ ಕೊಠಡಿಯಿಂದ ಹೊರಗೆ ಬಂದನು.

ಎಲೈಜಳು ತನ್ನ ಮಗನನ್ನು ಎತ್ತಿಕೊಂಡು ಓಡಿಹೋದ ಸುದ್ದಿಯು ಇಡೀ ತೋಟದಲ್ಲೆಲ್ಲಾ ಹಬ್ಬಿತು. ಸುಮಾರು ಹತ್ತನ್ನೆರಡು ಮಂದಿ ಯುವಕ ಗುಲಾಮರು ಈ ಸುದ್ದಿಯನ್ನು ಗುಲಾಮ ವ್ಯಾಪಾರಿಯಾದ ಹೇಲೀಗೆ ಹೇಳುವುದಕ್ಕಾಗಿ ನಾನು ಮುಂದು, ತಾನು ಮುಂದು ಎಂದು ಧಣಿಯ ವಟಾರದಲ್ಲಿ ಕಾದಿದ್ದರು.

ಹೇಲೀಗೆ ಸಮಾಚಾರವು ತಿಳಿಯಿತು. ಸಿಟ್ಟಿನಿಂದ ಮುಖವು ಕೆಂಪೇ ರಿತು. ಪಕ್ಕನೆ ಶೆಲ್ಬೀ ಇದ್ದ ಕೊಠಡಿಯೊಳಕ್ಕೆ ಹೋಗಿ ಸ್ವಲ್ಪವಾದರೂ ಮರ್ಯಾದೆಯಿಲ್ಲದೆ ಒರಟು ಮಾತುಗಳಿಂದ—ಶೆಲ್ಬೀ, ಏನಿದು ಸುದ್ದಿ? ಹುಡುಗಿಯು ಮಗುವನ್ನು ಎತ್ತಿಕೊಂಡು ಓಡಿಹೋಗಿದ್ದಾಳಂತಲ್ಲಾ. ಏನು ಇಂತಹ ಮೋಸವು? ಅಂದನು.

ಇವನ ಒರಟುತನಕ್ಕಾಗಿಯೂ ತನ್ನ ಮೇಲೆ ಇಲ್ಲದ ತಪ್ಪನ್ನು ಹೊರಿಸುವ ಮಾತುಗಳಿಗಾಗಿಯೂ ಶೆಲ್ಬೀಗೆ ಬಹಳ ಸಿಟ್ಟು ಬಂದು— ಹೇಲೀ, ಕೇಳಿಲ್ಲಿ. ನೀನು ಯಾವ ವಿಷಯದಲ್ಲಾಗಲೀ ನನ್ನ ಮೇಲೆ ತಪ್ಪು ಹೊರಿಸುವುದು ನನಗಿಷ್ಟವಿಲ್ಲ. ಎಲೈಜಾ ಮಗುವಿನೊಂದಿಗೆ ಓಡಿಹೋದದ್ದಕ್ಕೂ ನನಗೂ ಎಳ್ಳಷ್ಟಾದರೂ ಸಮ್ಮಂಧವಿಲ್ಲ. ಇದನ್ನು ಚೆನ್ನಾಗಿ ತಿಳಿದುಕೊ. ಓಡಿಹೋಗಿರುವ ಆ ಹುಡುಗಿಯನ್ನೂ ಆಕೆಯ ಮಗುವನ್ನೂ ಹುಡುಕುವುದಕ್ಕಾಗಿ ನನ್ನಿಂದಾದಷ್ಟು ನಿನಗೆ ಸಹಾಯ ಮಾಡುವುದು ನನ್ನ ಕರ್ತವ್ಯವಾಗಿದೆ. ಬೇಕಾದರೆ ನನ್ನ ಕುದುರೆಗಳನ್ನೂ ಆಳುಗಳನ್ನೂ ತೆಗೆದುಕೊ. ಆಕೆಯನ್ನು ಹುಡುಕು. ನಾನು ನಿನ್ನನ್ನು ಅಭ್ಯಂತರಿಸುವುದಿಲ್ಲ ಎಂದು ತನ್ನ ಸ್ವಾಭಾವಿಕವಾದ ಧ್ವನಿಯಿಂದಲೂ

ಶಾಂತತೆಯಿಂದಲೂ ಹೇಳಿ ಪುನಃ ಹೇಲೀಗೆ—ಹೇಲೀ, ನೀನು ಈ ರೀತಿಯಾಗಿ ಆತುರಪಡುವುದರಿಂದ ಪ್ರಯೋಜನವಿಲ್ಲ. ಸ್ವಲ್ಪ ತಾಳ್ಮೆಯನ್ನು ತೆಗೆದುಕೊಂಡು ಮೊದಲು ಸ್ವಲ್ಪ ಊಟಾಮಾಡು, ತರುವಾಯ ಏನು ಮಾಡುವುದೆಂದು ಆಲೋಚಿಸೋಣ ಅಂದನು.

ಕೂಡಲೇ ಏಂಡೀ ಮನೆಯಿಂದ ಓಡಿ ಬಂದು ಮತ್ತೊಬ್ಬ ಗುಲಾಮನನ್ನು ಕರೆದು—ಸೆಮ್, ಓ ಸೆಮ್, ಬಿಲ್ ಮತ್ತು ಜೆರ್ರಿ (ಕುದುರೆಗಳ ಹೆಸರು) ಎರಡನ್ನೂ ಹಿಡಿದು ತಡೀ ಹಾಕಬೇಕಂತೆ. ಧಣಿಯವರು ಹೇಳಿದರು—ನಾನು ಮತ್ತು ನೀನು ಹೇಲೀ ಧಣಿಯೊಂದಿಗೆ ಎಲೈಜಳನ್ನು ಹುಡುಕಲು ಹೋಗಬೇಕಂತೆ. ಬೇಗ ಓಡು, ತಡಮಾಡಬೇಡವೆಂದನು.

ಸೆಮ್—ಗೊತ್ತಾಯಿತು. ಈ ಹೊತ್ತು ನಾನು ಎಲೈಜಳನ್ನು ಹಿಡಿಯದೆ ಹೋದರೆ ನಾನು ಸೆಮನೇ ಅಲ್ಲ. ನಾನು ಯಾರೆಂದು ಧಣಿಯವರಿಗೆ ಈ ಹೊತ್ತು ಗೊತ್ತಾದೀತು. ಅಮ್ಮಾ . . . ಎಂತಹ ಕೆಲಸ ಕೊಟ್ಟಳು ಎಲೈಜ ಅಂದನು.

ಏಂಡೀ—ಎಲೋ, . . . ಸೆಮ್ . . . ಸ್ವಲ್ಪ ಹುಷಾರಾಗಿರು. ಮಾತಾಡಬೇಕಾದರೆ ಸ್ವಲ್ಪ ಹಿಂದು ಮುಂದು ಆಲೋಚಿಸು. ನಾನಾಗಲೀ ನೀನಾಗಲೀ ಎಲೈಜಳನ್ನು ಈ ಹೇಲೀ ಧಣಿಗೆ ಹಿಡಿದುಕೊಡುವುದು ಯಜಮಾನಿಗೆ ಇಷ್ಟವಿಲ್ಲ. ಹಾಗೇನಾದರೂ ಹಿಡಿದುಕೊಟ್ಟರೆ ನಮ್ಮ ತಲೆ ಎರಡು ಹೋಳಾದೀತು ಅಂದನು.

ಸೆಮ್—ಆಕೆಯನ್ನು ಹಿಡಿದುಕೊಡುವುದು ಯಜಮಾನಿಗೆ ಇಷ್ಟವಿಲ್ಲವೇ ? ಆಶ್ಚರ್ಯ ! ಆಶ್ಚರ್ಯ . . . ಎಲೋ ಅದು ನಿನಗೆ ಹೇಗೆ ಗೊತ್ತು ?

ಏಂಡೀ—ಧಣಿಯವರಿಗೆ ಬೆಳಿಗ್ಗೆ ಕ್ಷೌರಕ್ಕಾಗಿ ನೀರು ತೆಗೆದುಕೊಂಡು ಹೋಗಿ ಕೊಟ್ಟೆನು. ಆಗ ಯಜಮಾನಿಯು ಧಣಿಯವರ ಹತ್ತಿರ ಹೇಳುವುದನ್ನು ಕೇಳಿಸಿಕೊಂಡೆನು. ಧಣಿಯವರು ಈಗ ಬಹಳ ಸಿಟ್ಟಾಗಿದ್ದಾರೆ. ಆದರೂ ಏನು ? ಯಜಮಾನಿಯ ಕಡೆ ಇದ್ದು ಅವರು ಹೇಳಿದಂತೆ ಕೇಳುವುದೇ ಒಳ್ಳೇದು.

ಕಪ್ಪುಗುಲಾಮನಾದ ಸೆಮನಿಗೆ ಏಂಡೀ ಹೇಳಿದುದು ಬುದ್ಧಿಗೆ ಹೊಳೆಯಲಿಲ್ಲ. ಒರಟು ಗುಂಗುರು ಕೂದಲಿದ್ದ ತಲೆಯನ್ನು ಕೆರೆದುಕೊಂಡು ಯೋಚನೆಮಾಡುತ್ತಾ ನಿಂತುಬಿಟ್ಟನು.

ಏಂಡೀ—ಎಲೋ ಸೆಮ್, ಎಂತಹ ಮುಟ್ಠಾಳನು ನೀನು. ನಾನು ಹೇಳಿದುದು ನಿನಗೆ ತಿಳಿಯಲಿಲ್ಲವೇ ? ಹೇಲೀ ಧಣಿಯ ಕೈಗೆ ಎಲೈಜ ತನ್ನ ಮಗನನ್ನು ಸಿಕ್ಕಿಸಬಾರದೆಂಬುದೇ ಯಜಮಾನಿಯ ಅಪೇಕ್ಷೆಯು. ಆ ಮೇಲೆ ಮತ್ತೊಂದು ಸಂಗತಿಯನ್ನು ನಿನಗೆ ಹೇಳುತ್ತೇನೆ. ಈಗ ಸದ್ಯಃ ಕುದುರೆಗಳನ್ನು ಹಿಡಿಯುತ್ತಿರು ಅಂದನು.

ಸೆಮನು ಹುಲ್ಲುಗಾವಲಿಗೆ ಓಡಿಹೋಗಿ ಸ್ವಲ್ಪ ಹೊತ್ತಿನೊಳಗಾಗಿಯೇ ಬಿಲ್ ಮತ್ತು ಜೆರ್ರಿ ಎಂಬ ಎರಡು ಕುದುರೆಗಳನ್ನು ಹಿಡಿದುಕೊಂಡು ಬಂದು ಮನೆಯ ಮುಂದುಗಡೆ ನಿಲ್ಲಿಸಿದನು. ಹೇಲೀಯ ಕುದುರೆಯನ್ನು ಒಂದು ಗೂಟಕ್ಕೆ ಕಟ್ಟಿಹಾಕಿದ್ದರು. ಈ ಸೆಮನು ಕುದುರೆಗಳನ್ನು ಮನೆಯ ಮುಂದುಗಡೆಗೆ ಹಿಡಿದುಕೊಂಡುಹೋಗುತ್ತಿರುವಾಗ್ಯೆ ಹೇಲಿಯ ಕುದುರೆಯು ಬೆದರಿ ಗೂಟದಿಂದ ಕಿತ್ತುಕೊಂಡು ಓಡಿಹೋಗುವುದಕ್ಕೆ ಪ್ರಯತ್ನಮಾಡಿತು.

ಸೆಮನು ಅದನ್ನು ನೋಡಿ ಕಣ್ಣು ಹೊಡೆಯುತ್ತ—ಓ . . . ಹೋ . . . ಬೆದರಿದೆಯಾ ನೀನು . . . ಸ್ವಲ್ಪ ಸುಮ್ಮನಿರು ನಿನಗೆ ಮಾಡ್ತೀನಿ ಕೆಲ್ಸಾ ಎಂದು ಹೇಳಿದನು.

ಸೆಮನು ಸ್ವಲ್ಪ ದೂರ ಬಂದನು. ನೆಲದ ಮೇಲೆ ಒಂದು ಹುಲಿಗಿಲೀ ಕಾಯಿಯು ಬಿದ್ದಿದ್ದುದು ಇವನ ಕಣ್ಣಿಗೆ ಬಿದ್ದಿತು. ಅದನ್ನು ತೆಗೆದುಕೊಂಡು ಹೇಲೀ ಕುದುರೆಯ ಸಮೀಪಕ್ಕೆ ಬಂದು ಅದರ ಮೈ ಸವರುತ್ತಾ ಅದನ್ನು ಸಮಾಧಾನಮಾಡಲು ಪ್ರಯತ್ನಿಸಿದನು. ಅದು ಸ್ವಲ್ಪ ಸುಮ್ಮನಾದ ಮೇಲೆ ಅದಕ್ಕೆ ತಡಿಯನ್ನು ಹಾಕುವ ನೆವದಿಂದ ಕೈಯಲ್ಲಿದ್ದ ಆ ಹುಲಿಗಿಲೀ ಕಾಯನ್ನು ತಡಿಯ ಕೆಳಗೆ ಉಪಾಯದಿಂದ ಇಟ್ಟನು. ತಡಿಯ ಮೇಲೆ ಸ್ವಲ್ಪ ಭಾರ ಬಿದ್ದಕೂಡಲೇ ಆ ಕಾಯಿಯು ಕುದುರೆಯ ಬೆನ್ನಿಗೆ ಒತ್ತಿ ನೋವನ್ನುಂಟುಮಾಡಿ ಕುದುರೆಯು ಬೆದರಿ ಕುಣಿದಾಡುವಂತೆ ಮಾಡುತ್ತಿದ್ದಿತು. ಘಾಯ ಮಾತ್ರವಾಗುತ್ತಿರಲಿಲ್ಲ.

ಈ ಸಮಯದಲ್ಲಿ ಯಜಮಾನಿಯಾದ ಶೆಲ್ಬೀ ದೊರೆಸಾನಿಯು ಮನೆಯ ಮುಂದಿನ ಪಡಸಾಲೆಯಲ್ಲಿ ನಿಂತು, ಕೈಸೌಂಜ್ಞೆಯಿಂದ ಸೆಮನನ್ನು ಕರೆದು ಹೀಗೆಂದಳು—

ಸೆಮ್, ನೀನು ಹೇಲೀ ಧಣಿಯೊಂದಿಗೆ ಹೋಗಿ ಆತನಿಗೆ ದಾರಿಯನ್ನು ತೋರಿಸಿ ಸಹಾಯಮಾಡು. ಕುದುರೆಗಳ ವಿಷಯದಲ್ಲಿ ಮಾತ್ರ ಜಾಗ್ರತೆಯಾಗಿರು. ಹೋದ ವಾರ ಜೆರ್ರಿಯ ಕಾಲಿಗೆ ಪೆಟ್ಟು ತಗಲಿ ಕುಂಟಾಗಿರುವುದು ನಿನಗೆ ತಿಳಿದೇ ಇದೆ. ಬಹಳ ಬಿರುಸಾಗಿ ಓಡಿಸಬೇಡ.

ಕಡೇ ವಾಕ್ಯವನ್ನು ಯಜಮಾನಿಯು ಮೆಲ್ಲನೆ ಶಬ್ದದಿಂದ ಒತ್ತಿ ಹೇಳಿದಳು.

ಸೆಮುಸು—ಅದು ಅರ್ಥಗರ್ಭಿತವಾಗಿದ್ದುದರಿಂದ—ಅಮ್ಮಾ, ಅದರ ವಿಷಯ ನೀವೇನೂ ಚಿಂತೆಮಾಡಬೇಡಿರಿ. ನಾನು ಕುದುರೆಗಳ ವಿಷಯ ನೋಡಿಕೊಳ್ಳುತ್ತೇನೆ ಅಂದನು.

ಇಷ್ಟರಲ್ಲಿ ಹೇಲೀಯು ಮನೆಯೊಳಗಿನಿಂದ ಬಂದನು. ಏಂಡೀಯು ಮತ್ತು ಸೆಮುಸು ಹುಲ್ಲಿನಿಂದ ಮಾಡಿದ ದೊಡ್ಡ ಟೋಪಿಗಳನ್ನು ಕೈಯಲ್ಲಿ ಹಿಡಿದುಕೊಂಡು ಕುದುರೆಗಳನ್ನು ಕಟ್ಟಿದ್ದ ಸ್ಥಳಕ್ಕೆ ಓಡಿಬಂದರು. ಹೇಲೀಯು ತನ್ನ ಕುದುರೆಯ ಸಮೀಪಕ್ಕೆ ಬಂದ ಕೂಡಲೇ ಅದರ ಲಗಾಮನ್ನು ಸೆಮುಸು ಹೇಲೀಯ ಕೈಗೆ ಕೊಟ್ಟು ಸುಲಭವಾಗಿ ಹತ್ತುವಂತೆ ರಿಕಾಪ್ಪನ್ನು ಹಿಡಿದುಕೊಂಡನು. ಏಂಡೀಯು ಮತ್ತೆರಡು ಕುದುರೆಗಳನ್ನು ಗೂಟಗಳಿಂದ ಬಿಚ್ಚಿದನು.

ಹೇಲೀಯು ತನ್ನ ಕುದುರೆಯನ್ನು ಹತ್ತುವುದಕ್ಕೋಸ್ಕರ ತಡಿಯ ಮೇಲೆ ಕೈಹಾಕಿದ ತಕ್ಷಣವೇ ಸೆಮುಸು ತಡಿಯ ಕೆಳಗೆ ಇಟ್ಟಿದ್ದ ಹುಲಿಗಿಲೀ ಕಾಯಿಯು ಕುದುರೆಯ ಬೆನ್ನಿಗೆ ಚುಚ್ಚಿತು. ಕೂಡಲೇ ಕುದುರೆಯು ಹಾರಿಬಿದ್ದು ಹಿಂದಿನ ಎರಡು ಕಾಲುಗಳಲ್ಲಿ ನಿಂತಿತು. ಹೇಲೀಯು ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದನು. ಹಿಂಗಾಲುಗಳಲ್ಲಿ ನಿಂತಿದ್ದ ಕುದುರೆಯ ಲಗಾಮನ್ನು ಹಿಡಿದು ಕುದುರೆಯನ್ನು ಹತೋಟಿಗೆ ತರುವವನಂತೆ ಸೆಮುಸು ನಟಿಸಿ ತನ್ನ ದೊಡ್ಡ ಹುಲ್ಲಿನ ಟೋಪಿಯನ್ನು ಅದರ ಮುಂದೆ ಬೀಸಿ

ದನು. ಆ ಕುದುರೆಯು ಮತ್ತಷ್ಟು ಬೆದರಿ ಹುಲ್ಲುಮೈದಾನದ ಕಡೆ ನಾಗಾಲು ಓಟ ಓಡಿತು. ಮತ್ತೆರಡು ಕುದುರೆಗಳ ಲಗಾಮನ್ನು ಹಿಡಿದುಕೊಂಡವನಂತೆ ನಟಿಸುತ್ತಿದ್ದ ಏಂಡೀಯು ಆ ಕುದುರೆಗಳ ಲಗಾಮನ್ನು ಸಡಿಲಬಿಟ್ಟನು. ಆ ಕುದುರೆಗಳು ಸಹ ಹೇಲೀಯ ಕುದುರೆಯೊಂದಿಗೆ ಓಡಿಹೋದವು. ಸೇಮನೂ ಏಂಡೀಯೂ ಕೂಗಿಕೊಂಡು ಅವುಗಳ ಹಿಂದೆಯೇ ಓಡಿದರು. ಇವರಿಬ್ಬರ ಹಿಂದೆ ತೋಟದಲ್ಲಿ ಕೆಲಸಮಾಡುತ್ತಿದ್ದ ಶೆಲ್ಬೀಯ ಗುಲಾಮರೆಲ್ಲರೂ ಕೂಗಿಕೊಂಡು ಓಡಿದರು. ಇವರ ಹಿಂದೆ ನಾಯಿಗಳು ಬೊಗಳಿಕೊಂಡು ಓಡಿದವು. ಇಷ್ಟು ಮಂದಿ ಕೂಗಿಕೊಂಡು ಓಡಾಡಿದಾಗ್ಯೂ ಕುದುರೆಗಳನ್ನು ಹಿಡಿಯುವುದಕ್ಕೆ ಒಬ್ಬರಾದರೂ ನಿಜವಾದ ಪ್ರಯತ್ನವನ್ನು ಮಾಡಲಿಲ್ಲ. ಕುದುರೆಯು ಕೈಗೆ ಸಿಕ್ಕುವ ಸಮಯದಲ್ಲಿ ಸೇಮನು ಅದರ ಮುಂದೆ ಓಡಿಹೋಗಿ ಕುದುರೆಯನ್ನು ಬೆದರಿಸುವುದಕ್ಕಾಗಿ ತನ್ನ ದೊಡ್ಡ ಟೋಪಿಯನ್ನು ಅದರ ಮುಖದ ಮುಂದೆ ಬೀಸುತ್ತಾ—ಸಿಕ್ಕಿತು, ಹಿಡಿದುಕೊಳ್ಳಿರಿ, ಹಿಡಿದುಕೊಳ್ಳಿರಿ ಎಂದು ಸುಮ್ಮನೆ ಕೂಗಾಡುತ್ತಿದ್ದನು.

ಕುದುರೆಯಿಂದ ಬಿದ್ದು ನೆಲದ ಮೇಲೆ ಹೊರಳಾಡುತ್ತಿದ್ದ ಹೇಲೀಯು ಮೇಲಕ್ಕೆದ್ದು ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಾಡುತ್ತಾ ಎಲ್ಲರನ್ನು ಬೈಯುತ್ತಾ ಇದ್ದನು. ಶೆಲ್ಬೀ ದೊರೆಯು ಕುದುರೆಗಳನ್ನು ಬೇಗ ಹಿಡಿಯುವಂತೆ ತನ್ನ ಗುಲಾಮರಿಗೆ ಅಪ್ಪಣೆಯನ್ನು ಕೊಡುತ್ತಾ ಮನೆಯ ಪಡಸಾಲೆಯಲ್ಲಿ ನಿಂತಿದ್ದನು. ಯಜಮಾನಿಯಾದ ಶೆಲ್ಬೀ ದೊರೆಸಾನಿಯು ಕಿಟಕಿಯಲ್ಲಿ ಕೂತು ಆಗುತ್ತಿದ್ದ ತಮಾಷೆಯನ್ನೆಲ್ಲಾ ನೋಡಿಕೊಂಡು ನಗುತ್ತಿದ್ದಳು.

ಮೂರು ಗಂಟೆಗಳ ಹೊತ್ತು ಕುದುರೆಗಳನ್ನು ಹಿಡಿಯುವ ಪ್ರಯತ್ನ ನಡೆಯಿತು. ಕಡೆಗೆ ಮಧ್ಯಾಹ್ನ ಹನ್ನೆರಡು ಗಂಟೆಯಾಯಿತು. ಸೇಮನು ಜೆರ್ರಿಯ ಮೇಲೆ ಹತ್ತಿಕೊಂಡು ಹೇಲೀಯ ಕುದುರೆಯನ್ನು ತಂದು ಮನೆಯ ಮುಂದುಗಡೆ ನಿಲ್ಲಿಸಿ ಧಣಿಯವರೇ, ಕಡೆಗೆ ಕುದುರೆಯು ಸಿಕ್ಕಿತು. ನಾನಾದದ್ದಕ್ಕೆ ಹಿಡಿದುತಂದಿದ್ದೇನೆ. ಇಲ್ಲದಿದ್ದರೆ ಕುದುರೆಗಳು ಓಡಿ, ಓಡಿ ಅನ್ಯಾಯವಾಗಿ ಸಾಯುತ್ತಿದ್ದವು. ಇವುಗಳನ್ನು ಬಹಳ ಕಷ್ಟಪಟ್ಟು ಹಿಡಿದಿದ್ದೇನೆ ಎಂದು ಜಂಬಕೊಚ್ಚಿಕೊಂಡನು.

ಹೇಲೀ—ಎಲೋ, ನೀನಾದದ್ದಕ್ಕೆ ಹಿಡಿದಿದ್ದೀಯಾ? ಇಷ್ಟೆಲ್ಲಾ ಆದದ್ದು ನಿನ್ನಿಂದಲೇ. ನೀನಿಲ್ಲದಿದ್ದರೆ ಇಷ್ಟು ತೊಂದರೆಯು ಆಗುತ್ತಲೇ ಇರಲಿಲ್ಲ, ತಿಳಿಯಿತೇ?

ಸೆಮುಸು (ಸ್ವಲ್ಪ ತೀಕ್ಷ್ಣವಾಗಿ)—ಧಣಿಯವರೇ, ಇಷ್ಟೆಲ್ಲಾ ಆದದ್ದು ನಿನ್ನಿಂದಲೇ ಅನ್ನುತ್ತೀರಲ್ಲಾ? ಮೈಯೆಲ್ಲಾ ಬೆವರು ಸುರಿಸಿಕೊಂಡು ಈ ಕುದುರೆಗಳ ಹಿಂದೆ ಇದು ವರೆಗೂ ಓಡಾಡಿಕೊಂಡಿರಲು ನನಗೆ ಕಾರಣವೇನಿತ್ತು? ಬೇಕೆಂದು ಓಡಾಡಿದೆನೇ? ಚೆನ್ನಾಗಿ ಹೇಳಿದಿರಿ ಅಂದನು.

ಹೇಲೀ—ಸಾಕು, ಸಾಕು, ಸುಮ್ಮನಿರು. ಬಹಳ ಹರಟೇ ಹೊಡೆಯುತ್ತಾ ಕಾಲ ಕಳೆಯಬೇಡ. ನೀನು ಅಧಿಕಪ್ರಸಂಗಿಯು. ಮೂರು ಗಂಟೆಗಳ ಕಾಲ ವ್ಯರ್ಥವಾಯಿತು. ಇನ್ನು ಹೊರಡೋಣ.

ಸೆಮುಸು—ಧಣಿಯೇ, ನೀವು ನಮ್ಮನ್ನೂ ಕುದುರೆಗಳನ್ನೂ ಕೊಲ್ಲಬೇಕೆಂದಿದ್ದೀರಾ? ಈಗಿನ ನಮ್ಮ ಸ್ಥಿತಿಯನ್ನು ನೋಡಿರಿ. ನೆಲಕ್ಕೆ ಬೀಳುವಷ್ಟು ಆಯಾಸವಾಗಿದ್ದೇವೆ. ಕುದುರೆಗಳ ಮೈಯು ಬೆವರಿಂದ ನೀರುನೀರಾಗಿದೆ. ಊಟವಾಗುವ ಮುಂಚೆ ದಯಮಾಡಿ ಹೊರಡಬೇಡಿರಿ. ಧಣಿಯವರ ಕುದುರೆಯನ್ನು ಮಾಲೀಷು ಮಾಡಬೇಕು. ಮೈಯಲ್ಲಿ ಬೆವರು ಹೇಗೆ ಸೋರುತ್ತಿದೆ, ನೋಡಿರಿ. ನಮ್ಮ ಧಣಿಯವರ ಕುದುರೆ ಜೆರ್‍ರಿಯು ಬಹಳ ಕುಂಟುತ್ತಿದೆ. ನೀವು ಈಗಲೇ ಹೊರಡುವುದಕ್ಕೆ ನಮ್ಮ ಯಜಮಾನಿಯು ಒಪ್ಪುತ್ತಾರೋ ಇಲ್ಲವೋ ತಿಳಿಯದು. ಭಗವಂತನು ಧಣಿಯವರಿಗೆ ಒಳ್ಳೇದುಮಾಡಲಿ. ನಾವು ಈ ಹೊತ್ತು ಹೇಗಾದರೂ ಎಲೈಜಳನ್ನು ಹಿಡಿದುಕೊಳ್ಳುವುದು ಖಂಡಿತ. ಆಕೆಯ ನಡಗೆಯು ಬಹಳ ನಿಧಾನ ಎಂದು ಬಹಳ ದೈನ್ಯದಿಂದ ಬೇಡಿಕೊಂಡನು.

ಸೆಮುಸು ಹೇಲೀಯೊಂದಿಗೆ ಮಾತಾಡುತ್ತಿದ್ದುದನ್ನೆಲ್ಲಾ ಶೆಲ್ಬೀ ದೊರೆಸಾನಿಯು ಒಳಗಿನಿಂದ ಕೇಳಿಸಿಕೊಂಡು ನಗುತ್ತಿದ್ದಳು. ಸೆಮುನ ಮಾತಿನಂತೆ ಹೇಲೀಯ ಪ್ರಯಾಣವನ್ನು ನಿಧಾನಿಸಬೇಕೆಂದು ನಿರ್ಧರಿಸಿಕೊಂಡಳು. ಆದುದರಿಂದ ಹೊರಗೆ ಬಂದು ಮಧ್ಯಾಹ್ನದ ಊಟಾ ಮಾಡಿ

ಕೊಂಡು ಹೋಗಲು ಹೇಲೀಯನ್ನು ಕೇಳಿಕೊಂಡು ಈ ಕ್ಷಣದಲ್ಲಿಯೇ ಊಟವನ್ನು ತರುವುದಾಗಿ ಹೇಳಿ ಒಳಗೆ ಹೊರಟುಹೋದಳು.

ಹೇಲೀಯ ಮುಂದೆ ಶೆಲ್ಬೀ ದೊರೆಸಾನಿಯು ಊಟವನ್ನು ಬೇಗನೆ ಸಿದ್ಧಮಾಡಿ ತರುವಂತೆ ಸೇವಕರಿಗೆ ಅಪ್ಪಣೆ ಮಾಡಿದಾಗ್ಯೂ ಅಡಿಗೆಯ ಮನೆಯಲ್ಲಿ ಗುಲಾಮರು ಅನೇಕ ವಿಷಯಗಳಲ್ಲಿ ಬಹಳ ನಿಧಾನಮಾಡಿದರು. ಬೇಕೆಂದು ಮಾಡಿರಬಹುದೇನೋ? ಒಬ್ಬನು ಸಾರಿನ ಪಾತ್ರೆಯನ್ನೇ ಉರುಳಿಸಿಬಿಟ್ಟನು. ಅಡಿಗೆಯನ್ನು ಮಾಡುತ್ತಿದ್ದ ಕ್ಲೋಯಿ ಅತ್ತೆಯು ತಿರುಗಿ ಸಾರನ್ನು ಮಾಡಬೇಕೆಂದು ಬಹಳ ನಿಧಾನಮಾಡಿದಳು. ಮತ್ತೊಬ್ಬನು ಅಡಿಗೆಗಾಗಿ ನೀರನ್ನು ತರುವಾಗ ಕೊಡವನ್ನು ಎತ್ತಿಹಾಕಿ ಬಿದ್ದುಬಿಟ್ಟನು. ದೂರದಲ್ಲಿದ್ದ ಬಾವಿಗೆ ಪುನಃ ಹೋಗಿ ನೀರನ್ನು ತರುವ ವರೆಗೂ ಅಡಿಗೆಯು ನಿಧಾನವಾಗಬೇಕಾಯಿತು. ಮಗದೊಬ್ಬನು ಬೆಣ್ಣೆಯ ಬಟ್ಟಲನ್ನು ಕೆಳಗೆ ಹಾಕಿಬಿಟ್ಟನು. ಬೆಣ್ಣೆಯನ್ನು ಪುನಃ ಮಾಡುವ ವರೆಗೂ ಕಾದಿರಬೇಕಾಯಿತು.

ಹಾಗೂ ಹೀಗೂ ಊಟವು ಪೂರೈಸುವುದರೊಳಗಾಗಿ ಮಧ್ಯಾಹ್ನ ಎರಡು ಗಂಟೆಯಾಯಿತು. ಸೆಮನು ಮತ್ತು ಏಂಡೀ ಕುದುರೆಗಳನ್ನು ತಂದು ಪಡಸಾಲೆಯ ಬಳಿ ನಿಲ್ಲಿಸಿದರು. ಕಾಲುದಾರಿಯಿಂದ ದೊಡ್ಡ ರಸ್ತೆಗೆ ಬಂದರು.

ಆಗ ಹೇಲೀಯು—ಎಲೋ, ಇಲ್ಲಿ ಕೇಳೋ, ಅವಳು ತಪ್ಪಿಸಿಕೊಂಡು ಎಲ್ಲಿಗೆ ಹೋಗುವಳೆಂದು ನನಗೆ ಗೊತ್ತಿದೆ. ನಾನು ಇಲ್ಲಿಂದ ನೆಟ್ಟಗೆ ನದಿಯ ಕಡೆ ಹೋಗುತ್ತೇನೆ. ತಪ್ಪಿಸಿಕೊಂಡು ಓಡಿಹೋಗುವವರೆಲ್ಲರು ಹೋಗುವುದು ಇದೇ ದಾರಿಯು ಅಂದನು.

ಸೆಮನು—ಧಣಿಯೇ, ನೀವು ಹೇಳಿದುದು ನಿಜ. ಧಣಿಯವರು ಬಹಳ ಜಾಣರು. ಯಾವ ಸಮಯದಲ್ಲಿ ಏನು ಮಾಡಬೇಕೆಂದು ತಿಳಿದಿದೆ. ಧಣಿಯೇ, ನದಿಗೆ ಹೋಗಲು ಎರಡು ಹಾದಿಗಳಿವೆ. ಒಂದು ಗಾಡೀ ಹೋಗುವ ಮಾರ್ಗ, ಮತ್ತೊಂದು ಕಾಲುದಾರಿಯು. ಧಣಿಯವರು ಯಾವ ಮಾರ್ಗದಲ್ಲಿ ಹೋಗಬೇಕೆಂದಿದ್ದಾರೆ?

ಏಂಡೀ ಸೇಮನನ್ನು ಆಶ್ಚರ್ಯದಿಂದ ನೋಡಿದನು. ಏಂಡೀಗೆ ತಿಳಿದಿದ್ದುದು ಒಂದೇ ಹಾದಿಯು. ಆದರೂ ಸೇಮನು ಹೇಳಿದ್ದು ಸುಳ್ಳಾಗಬಾರದೆಂದು—ಹೌದು ಎರಡು ಹಾದಿ ಇದೆ ಎಂದು ಹೇಳಿದನು.

ಸೇಮನು ಸ್ವಲ್ಪ ಹೊತ್ತು ಆಲೋಚಿಸುವವನಂತೆ ತೋರ್ಪಡಿಸಿಕೊಂಡು ತರುವಾಯ—ಎಲ್ಲೈಜಾ ಕಾಲುದಾರಿಯಲ್ಲಿಯೇ ಹೋಗಿರಬೇಕು. ಯಾಕೆಂದರೆ ಆ ರಸ್ತೆಯಲ್ಲಿ ಬಹಳವಾಗಿ ಜನಸಂಚಾರವಿಲ್ಲ ಎಂದು ಹೇಳಿದನು. ಇಷ್ಟರಲ್ಲಿ ಸೇಮನು ತಾನು ಹೇಳಬಾರದ ಸಂಗತಿಯನ್ನು ಹೇಳಿಬಿಟ್ಟೆನೆಂದು ಆಲೋಚಿಸಿ, ಅದನ್ನು ಮರೆಸುವುದಕ್ಕಾಗಿ—ಧಣಿಯವರೇ, ತಮಗೆ ಇಷ್ಟ ಬಂದ ದಾರಿಯಲ್ಲಿ ಹೋಗಬಹುದು. ನಮಗೆ ಯಾವುದಾದರೂ ಸರಿಯೆ. ಗಾಡಿಯ ರಸ್ತೆಯ ಮೇಲೆ ಹೋಗುವುದೇ ಒಳ್ಳೇದೆಂದು ನೆನಸುತ್ತೇನೆ ಅಂದನು.

ಆಕೆಯು ಈ ಕಾಲುದಾರಿಯಲ್ಲಿಯೇ ಹೋಗಿರಬೇಕೆಂದು ಹೇಲೀಯು ಅಂದನು.

ಸ್ವಲ್ಪದೂರ ಹೋದ ತರುವಾಯ ಕಾಲುದಾರಿಯು ಬರುತ್ತದೆಂದು ಸೇಮನು ಏಂಡೀಗೆ ಕಣ್ಣನ್ನು ಹೊಡೆದನು. ಸೇಮನು ತಿರುಗಿ ಏಂಡೀಗೆ—ಏಂಡೀ ನಾನು ಚೆನ್ನಾಗಿ ಆಲೋಚಿಸಿ ನೋಡಿದೆನು, ನಾವು ಆ ರಸ್ತೆಯಲ್ಲಿ ಹೋಗತಕ್ಕದ್ದಲ್ಲ. ನಾನು ಎಂದೂ ಆ ರಸ್ತೆಯಲ್ಲಿ ಹೋಗಲಿಲ್ಲ. ದಾರೀ ತಪ್ಪಿದರೂ ತಪ್ಪಬಹುದು ಅಂದನು.

ಆದರೂ ಚಿಂತೆಯಿಲ್ಲ. ನಾನು ಆ ರಸ್ತೆಯಲ್ಲಿಯೇ ಹೋಗುತ್ತೇನಂದನು ಹೇಲಿ.

ಈಗ ನನಗೆ ನೆನಪಾಯಿತು. ಕಾಲುದಾರಿಯು ಕೆಲವು ಮೈಲಿಗಳ ದೂರ ಮಾತ್ರವಿದ್ದು ಮುಂದಕ್ಕೆ ಹೋಗುವುದಿಲ್ಲವಂತೆ, ಏಂಡೀ ನಿಜವೇ ? ಎಂದನು ಸೇಮನು.

ಏಂಡೀ—ಸೇಮಾ, ಆ ಸಂಗತಿಯು ನನಗೆ ಚೆನ್ನಾಗಿ ತಿಳಿಯದು. ನಾನು ಆ ದಾರಿಯಲ್ಲಿ ಎಂದೂ ಹೋಗಲಿಲ್ಲ. ಕೆಲವು ಮೈಲಿಗಳಿಂದಾಚೆ ರಸ್ತೆಯಿಲ್ಲವೆಂದು ಜನರು ಮಾತಾಡಿಕೊಳ್ಳುತ್ತಾರೆ ಅಂದನು.

ಕಾಲುದಾರಿಯಲ್ಲಿ ಹೋಗದಂತೆ ಸೆಮನು ಅಡ್ಡಿಮಾಡುತ್ತಾನೆಂಬ ಸಂಗತಿಯನ್ನು ಹೇಲೀಯು ಚೆನ್ನಾಗಿ ತಿಳಿದುಕೊಂಡನು. ಸ್ವಲ್ಪ ದೂರ ಹೋದ ಮೇಲೆ ಪ್ರಯಾಣವನ್ನು ಮುಂದರಿಸುವುದು ಕಷ್ಟವಾಯಿತು. ರಸ್ತೆಯು ಬಹಳ ಒರಟಾಗಿದ್ದಿತು. ಆದುದರಿಂದ ಜೆರ್ರಿಗೆ ಕಾಲು ಕುಂಟಾಗಿರುವುದರಿಂದ ಈ ರಸ್ತೆಯಲ್ಲಿ ನಡೆಯಲು ಆಗುವುದಿಲ್ಲವೆಂದು ಏಂಡೀ ಗೊಣಗುಟ್ಟಿದನು.

ಹೇಲೀ—ಎಲೋ ಗುಲಾಮರಾ, ನಿಮ್ಮ ಯುಕ್ತಿಗಳೆಲ್ಲಾ ನನಗೆ ತಿಳಿದಿವೆ. ನೀವಿಬ್ಬರೂ ನನ್ನನ್ನು ಈ ರಸ್ತೆಯಲ್ಲಿ ಹೋಗಗೊಡಿಸುವುದಿಲ್ಲ, ಬಾಯಿಮುಚ್ಚಿರಿ, ಉಸಿರೆತ್ತಬೇಡಿರಿ ಅಂದನು.

ಸೆಮನು—ಖಿನ್ನನಾಗಿ, ಧಣೀ, ನಿಮ್ಮ ಇಷ್ಟವಿದ್ದ ಕಡೆ ಹೋಗಿರಿ. ನಾವು ಬೇಡವೆನ್ನುವುದಿಲ್ಲ ಎಂದು ಹೇಳಿ, ಏಂಡೀ ಕಡೆ ನೋಡಿ, ಕಣ್ಣು ಹೊಡೆದನು. ಇವನ ಮಾತನ್ನು ಕೇಳಿ ಏಂಡೀಗೆ ನಗು ಬರುವಂತಾಯಿತು.

ಐದು ಮೈಲಿಗಳ ದೂರ ಪ್ರಯಾಣಮಾಡಿದ ಮೇಲೆ ಹೊಲದಲ್ಲಿದ್ದ ಒಂದು ಮನೆಯ ಬಳಿಗೆ ಬಂದರು. ಅಲ್ಲಿಂದ ಮುಂದಕ್ಕೆ ದಾರಿಯೇ ಇಲ್ಲ. ಈ ಸಂಗತಿಯು ಸೆಮನಿಗೆ ಮೊದಲೇ ತಿಳಿದಿದ್ದಿತು. ಸೆಮನು ಹೇಲೀಯ ಕಡೆಗೆ ನೋಡಿ—ಧಣಿಯೇ, ನಾನು ಆಗಲೇ ಹೇಳಲಿಲ್ಲವೇ ? ನೀವು ಈ ಪ್ರಾಂತ್ಯಕ್ಕೆ ಹೊಸಬರು. ಇಲ್ಲಿನ ಸಂಗತಿಗಳು ನಿಮಗೆ ಹೇಗೆ ಗೊತ್ತಾದಾವು ? ನಾವು ಇಲ್ಲಿಯೇ ಹುಟ್ಟಿ ಬೆಳೆದವರು. ನಮಗೆ ಎಲ್ಲಾ ತಿಳಿದಿದೆ ಅಂದನು.

ಹೇಲೀ—ಥೂ, ಲುಚ್ಛಾ, ಈ ಸಂಗತಿಯು ನಿನಗೆ ತಿಳಿದಿದ್ದಾಗ್ಯೂ ನೀನು ನನಗೆ ಹೇಳಲಿಲ್ಲ ಅಂದನು.

ಸೆಮನು—ಧಣಿಯವರಿಗೆ ನಾನು ಮೊದಲೇ ಹೇಳಲಿಲ್ಲವೇ ? ನೀವು ನನ್ನ ಮಾತನ್ನು ನಂಬಲಿಲ್ಲ. ಮುಂದಕ್ಕೆ ರಸ್ತೆಯಿಲ್ಲವೆಂತಲೂ ಬೇಲಿಯನ್ನು ಹಾಕಿದ್ದಾರೆಂತಲೂ ಹೇಳಿದೆನು. ನೀವು ಕೇಳಲಿಲ್ಲ. ನಾನು ಈ ವಿಷಯ ಹೇಳಿದೆನೋ ಇಲ್ಲವೋ ಏಂಡೀನಾ ಕೇಳಿರಿ ಅಂದನು.

ಗುಲಾಮರ ವ್ಯಾಪಾರಿಯು ವಾದಮಾಡುವುದರಿಂದ ಪ್ರಯೋಜನವಿಲ್ಲವೆಂದು ತಿಳಿದು ತನ್ನ ಕೋಪವನ್ನೆಲ್ಲಾ ನುಂಗಿ, ಓಹೈಯೋ ನದಿಗೆ ಹೋಗುವುದಕ್ಕೋಸ್ಕರ ಹಿಂದಕ್ಕೆ ಐದು ಮೈಲಿಗಳ ದೂರ ಬರಬೇಕಾಯಿತು.

ಅಧ್ಯಾಯ ೪

ಎಲೈಜಾ ಮಗನೊಂದಿಗೆ ಅಪಾಯುವಾಗಿದ್ದ ನದಿಯುನ್ನು ದಾಟಿದುದು

ಎಲೈಜಾ ಮನೆಯನ್ನು ಬಿಟ್ಟದ್ದೇನೋ ಸರಿಯೆ. ಆದರೆ ತಾನು ತಪ್ಪಿಸಿಕೊಂಡು ಓಡಿಹೋಗುವುದಕ್ಕಾಗಿ ತಕ್ಕ ಏರ್ಪಾಡುಗಳನ್ನು ಮಾಡಿಕೊಂಡಿರಲಿಲ್ಲ. ಓಹೈಯೋ ನದಿಯ ಸಮೀಪದಲ್ಲಿಯೇ ಇದ್ದ ಒಂದು ಗ್ರಾಮಕ್ಕೆ ತನ್ನ ಯಜಮಾನಿಯೊಂದಿಗೆ ಈಕೆ ಆಗಾಗ್ಯೆ ಬರುತ್ತಿದ್ದಳು. ಇದರಿಂದ ನದಿಗೆ ಹೋಗುವ ದಾರಿಯು ಮಾತ್ರ ಈಕೆಗೆ ಚೆನ್ನಾಗಿ ತಿಳಿದಿದ್ದಿತು. ಈಕೆಯು ಮನೆಯಿಂದ ಹೊರಡುವಾಗ ಓಹೈಯೋ ನದಿಯ ಬಳಿಗೆ ಬಂದು ಅದನ್ನು ದಾಟಿಹೋಗಬೇಕೆಂಬ ಯೋಚನೆಯೇ ಹೊರತು ಬೇರೆಯಿಲ್ಲ. ಮುಂದಿನ ಕಾರ್ಯಭಾಗಗಳ ವಿಷಯ ದೇವರಲ್ಲಿ ನಂಬಿಕೆ ಇಟ್ಟಿದ್ದಳು.

ತನ್ನ ಮಗುವನ್ನು ಅಪ್ಪಿಕೊಂಡು ಎಲೈಜಾ ಬೆಳಗಾಗುವ ವರೆಗೂ ದೊಡ್ಡ ರಸ್ತೆಯಲ್ಲಿ ಓಡುತ್ತಿದ್ದಳು. ಬೆಳಗಾದ ಮೇಲೆ ಹೀಗೆ ಓಡಿ ಹೋಗುವುದರಿಂದ ಬಹಳ ಸಂಶಯಕ್ಕೆ ಕಾರಣವಾಗುವುದೆಂದು ತಿಳಿದು ಮಗುವನ್ನು ಇಳಿಸಿ ಅದನ್ನು ಕೈಯಲ್ಲಿ ಹಿಡಿದುಕೊಂಡು ತಕ್ಕಷ್ಟು ಬೇಗ ಬೇಗನೆ ನಡೆಯುತ್ತಿದ್ದಳು.

ದಾರಿಯಲ್ಲಿ ಒಂದು ಸಣ್ಣ ತೊರೆಯು ಹರಿಯುತ್ತಿದ್ದುದರಿಂದ ಅಲ್ಲಿ ಸ್ವಲ್ಪ ಹೊತ್ತು ಕೂತು ತಾನು ಬರುವಾಗ ತಂದಿದ್ದ ಸ್ವಲ್ಪ ರೊಟ್ಟಿಯನ್ನು ಮಗನಾದ ಹ್ಯಾರಿಗೆ ತಿನ್ನಿಸಿದಳು. ಮಧ್ಯಾಹ್ನ ಒಬ್ಬ ಒಕ್ಕಲಿಗರ

ಮನೆಯಲ್ಲಿ ಊಟವನ್ನು ಕೊಂಡುಕೊಂಡು ಊಟಮಾಡಿದರು. ಸೂರ್ಯನು ಮುಳುಗುವುದಕ್ಕೆ ಒಂದು ಗಂಟೆಯ ಹೊತ್ತಿರುವಾಗ ನದಿಯ ದಡದಲ್ಲಿದ್ದ ಒಂದು ಗ್ರಾಮಕ್ಕೆ ಬಂದು ಸೇರಿದಳು. ನದಿಯನ್ನು ನೋಡಿದಾಕ್ಷಣ ಈಕೆಯ ಎದೆಯು ಒಡೆದಂತಾಯಿತು. ನದಿಯಲ್ಲಿ ಪ್ರವಾಹವು ದಡವನ್ನು ಮೀರಿ ಹರಿಯುತ್ತಿದ್ದಿತು. ಜೋರಾದ ನೊರೆಗಳಿಂದ ಕೂಡಿದ ಅಲೆಗಳು ಒಂದರ ಮೇಲೊಂದು ಬಂದು ದಡಕ್ಕೆ ಬಡಿಯುತ್ತಿದ್ದವು. ಆ ನೀರಿನ ಮೇಲೆ ದೊಡ್ಡದೊಡ್ಡ ಹಿಮಗಡ್ಡೆಗಳು ಹಿಂದಕ್ಕೂ ಮುಂದಕ್ಕೂ ಉಯ್ಯಾಲೆಯಾಡುವಂತೆ ತೇಲಾಡುತ್ತಿದ್ದವು. ಹರಗೋಲು ನಿಂತು ಹೋಗಿದ್ದಿತು. ಎಲ್ಯೆಜಾಗೆ ಇದನ್ನೆಲ್ಲಾ ನೋಡಿ ಏನುಮಾಡುವುದಕ್ಕೂ ದಿಕ್ಕುತೋರಲಿಲ್ಲ. ಆ ನದಿಯ ದಡದ ಮೇಲೆಯೇ ಇದ್ದ ಒಂದು ಸಣ್ಣ ಛತ್ರಕ್ಕೆ ಬಂದು ಅಲ್ಲಿದ್ದವರನ್ನು ಕೆಲವು ಸಂಗತಿಗಳ ವಿಷಯ ವಿಚಾರಿಸಿದಳು. ವಿಚಾರಿಸಿದ್ದರಲ್ಲಿ ಆ ಗ್ರಾಮಸ್ಥರಲ್ಲಿ ಯಾರೋ ಒಬ್ಬನು ಆ ರಾತ್ರೆ ನದಿಯನ್ನು ದಾಟಿ ಆಚೆಯ ದಡಕ್ಕೆ ಹೋಗಬೇಕೆಂದಿರುತ್ತಾನೆಂತಲೂ ಆತನು ಅಪ್ಪಣೆಯನ್ನು ಕೊಟ್ಟರೆ ಅದು ವರೆಗೂ ಕಾದಿದ್ದು ಆತನೊಂದಿಗೆ ತಾನು ಹೋಗಬಹುದೆಂತಲೂ ತಿಳಿದುಕೊಂಡಳು.

ಆ ಛತ್ರದ ಮುಖ್ಯಸ್ಥಳು ಹ್ಯಾರಿಯೊಂದಿಗೆ ಮಾತಾಡಿ ಅವನು ಹಸಿದಿರುವನೆಂದು ತಿಳಿದು ಸ್ವಲ್ಪ ಊಟವನ್ನು ಕೊಟ್ಟಳು. ಹುಡುಗನಿಗೆ ಬಹಳ ಆಯಾಸವಾಗಿದ್ದುದರಿಂದ ಪಕ್ಕದಲ್ಲಿದ್ದ ಒಂದು ಕೊಠಡಿಗೆ ಕರೆದುಕೊಂಡುಹೋಗಿ ಹಾಸಿಗೆಯನ್ನು ಹಾಸಿ ಮಲಗಿಸಬೇಕೆಂದು ಎಲ್ಯೆಜಾಗೆ ಹೇಳಿದಳು. ಹುಡುಗನು ಮಲಗಿ ನಿದ್ರೆಮಾಡಿದನು. ಎಲ್ಯೆಜಾ ಕಿಟಕಿಯ ಬಳಿಯಲ್ಲಿ ನಿಂತು ತನಗೂ ಸ್ವತಂತ್ರಕ್ಕೂ ನಡುವೆ ಅಭ್ಯಂತರವಾಗಿ ಭೋರ್ಗರೆಯುತ್ತಿದ್ದ ನದಿಯನ್ನೇ ನೋಡುತ್ತಿದ್ದಳು.

ಮಗನನ್ನು ಛತ್ರದ ಕೊಠಡಿಯೊಂದರಲ್ಲಿ ಮಲಗಿಸಿ ಮುಕ್ಕಾಲು ಗಂಟೆಯ ಹೊತ್ತಾಯಿತು. ಹೇಲೀಯೂ ಇಬ್ಬರು ಗುಲಾಮರೂ ಕುದುರೆಗಳನ್ನು ದೌಡು ಬಿಟ್ಟುಕೊಂಡು ಗ್ರಾಮದ ಒಳಕ್ಕೆ ಬಂದರು. ಎಲ್ಯೆಜಾ ನದಿಯನ್ನು ನೋಡಿಕೊಂಡು ಕಿಟಕಿಯಲ್ಲಿಯೇ ನಿಂತಿದ್ದಳು. ನೆಮಗೆ ಕ್ಷಣಮಾತ್ರದಲ್ಲಿ

ಎಲೈಜಾಳ ಗುರುತು ಹಿಡಿದನು. ಹೇಲೀ ಮತ್ತು ಏಂಡೀ ಸೆಮನ ಹಿಂದುಗಡೆ ಎರಡು ಅಡಿಗಳ ದೂರದಲ್ಲಿದ್ದರು. ಇಷ್ಟರಲ್ಲಿ ಸೆಮನು ಒಂದು ಉಪಾಯವನ್ನು ಹುಡುಕಿದನು. ತಲೆಯ ಮೇಲಿದ್ದ ತನ್ನ ಟೋಪಿಯನ್ನು ಬೇಕೆಂದು ಹಾರಬಿಡಿದು ಫಟ್ಟಿಯಾಗಿ ಟೋಪಿ, ಟೋಪಿ ಎಂದು ಕೂಗಿ ಕೊಂಡನು. ಸೆಮನ ಧ್ವನಿಯು ಇದು ಎಂದು ಎಲೈಜಾ ತಿಳಿದುಕೊಂಡಳು. ಇವರು ಮೂವರೂ ಮುಂದಿನ ಬಾಗಿಲಿಗೆ ಬರುವಷ್ಟರಲ್ಲಿ ಎಲೈಜಾ ಕಿಟಕಿಯಿಂದ ಮರೆಯಾಗಿ ಮಲಗಿದ್ದ ತನ್ನ ಮಗುವನ್ನು ತಟ್ಟನೇ ಕೈಗಳಲ್ಲಿ ಎತ್ತಿ ಎದೆಗೆ ಅಪ್ಪಿಕೊಂಡು ಪಕ್ಕದಲ್ಲಿದ್ದ ಮತ್ತೊಂದು ಬಾಗಿಲಿನ ಮೂಲಕ ನದಿಯ ಕಡೆಗೆ ಓಡಿದಳು. ಗುಲಾಮರ ವ್ಯಾಪಾರಿಯು ಆಕೆಯು ತಪ್ಪಿಸಿಕೊಂಡು ನದಿಯ ಕಡೆಗೆ ಓಡುವುದನ್ನು ನೋಡಿದನು. ತಕ್ಷಣವೇ ಕುದುರೆಯಿಂದ ಇಳಿದು ಕ್ಷಣಹೊತ್ತಿನಲ್ಲಿ ಆಕೆಯ ಬೆನ್ಹತ್ತಿದನು. ಆಕೆಯ ಪಾದಗಳು ಭೂಮಿಗೆ ತಗಲಿದವೋ ಇಲ್ಲವೋ ಹೇಳಲಿಕ್ಕಾಗುವುದಿಲ್ಲ. ಒಂದು ಕ್ಷಣವೇನಾದರೂ ನಿಧಾನವಾಗಿದ್ದರೆ ಹೇಲೀಯು ಆಕೆಯನ್ನು ಹಿಡಿಯದೆ ಇರುತ್ತಿರಲಿಲ್ಲ. ಅಷ್ಟರಲ್ಲಿಯೇ ಆಕೆಯು ನದಿಯ ದಡವನ್ನು ಮುಟ್ಟಿದಳು. ನೀರು ರಭಸದಿಂದ ಹರಿಯುತ್ತಿದ್ದಿತು. ನೀರಿನ ಮೇಲೆ ತೇಲಿಕೊಂಡು ಹೋಗುತ್ತಿದ್ದ ಒಂದು ಹಿಮಗಡ್ಡೆಯ ಮೇಲಕ್ಕೆ ಟಣ್ಣನೆ ಹಾರಿದಳು. ಪ್ರಾಣದಮೇಲೆ ಆಶೆಯಿಲ್ಲದವರೂ ಹುಚ್ಚು ಹಿಡಿದವರೂ ಹೊರತು ಮತ್ಯಾರು ಇಂತಹ ಕಾರ್ಯಗಳನ್ನು ಮಾಡುವುದಿಲ್ಲ. ಇಂತಹ ಧೈರ್ಯವನ್ನು, ಇಂತಹ ಶಕ್ತಿಯನ್ನು ಆಪದ್ಬಂಧುವಾದ ಆ ದೇವಾಧಿದೇವನ ಹೊರತು ಮತ್ಯಾರು ಕೊಡಬಲ್ಲರು. ಆಕೆಯು ಯಾವ ಹಿಮಗಡ್ಡೆಯ ಮೇಲಕ್ಕೆ ಹಾರಿದಳೋ ಆ ಗಡ್ಡೆಯು ಪಟಪಟನೆ ಒಡೆದು ನೀರಾಗುವಷ್ಟರಲ್ಲಿ ಮತ್ತೊಂದು ಗಡ್ಡೆಯ ಮೇಲಕ್ಕೆ ಆ ಗಡ್ಡೆಯಿಂದ ಮತ್ತೊಂದು ಗಡ್ಡೆಗೆ ಹೀಗೆ ಗಡ್ಡೆಯಿಂದ ಗಡ್ಡೆಗೆ ಹಾರುತ್ತ, ಜಾರುತ್ತ, ಏಳುತ್ತ, ಜಾರುತ್ತ ಮತ್ತೊಂದು ದಡವನ್ನು ಸಮೀಪಿಸುತ್ತಿದ್ದಳು. ಹಾರುವ ಅವಸರದಲ್ಲಿ ಕಾಲಿನಲ್ಲಿದ್ದ ಜೋಡುಗಳು ಏನಾದವೆಂದು ತಿಳಿಯಲಿಲ್ಲ. ಕಾಲುಚೀಲಗಳಂತೂ ಹರಿದು ಚಿಂದಿಚಿಂದಿ ಯಾದವು. ಪ್ರತಿಯೊಂದು ಹೆಜ್ಜೆಗೂ ರಕ್ತದ ಗುರುತು. ಇದು ಯಾವುದರ

ಮೇಲೂ ಆಕೆಯ ಲಕ್ಷ್ಯವೇ ಇಲ್ಲ. ಆ ಸಮಯದಲ್ಲಿ ನೋವು ಸಹ ತಿಳಿದು ಬಂದಿಲ್ಲ. ಕಟ್ಟ ಕಡೆಗೆ ಇಂತಹ ಪ್ರಾಣಗಂಡಾಂತರವನ್ನು ಗಣನೆಗೆ ತಾರದೆ ಓಹೈಯೋ ನದಿಯನ್ನು ದಾಟಿದಳು. ಈ ಸಂಗತಿಗಳೆಲ್ಲಾ ಈಕೆಗೆ ಸ್ವಪ್ನ ದಂತೆಯೇ ಇದ್ದವು.

ಈಕೆಯು ನದಿಯ ಅಂಚಿನಲ್ಲಿ ಬಿದ್ದು ದಡದ ಮೇಲಕ್ಕೆ ಬರಲು ಶಕ್ತಿ ಯಿಲ್ಲದೆ ತಟ್ಟಾಡುತ್ತಿರುವಾಗ ಒಬ್ಬ ಬಿಳೀ ಮನುಷ್ಯನು ಈಕೆಗೆ ಕೈಕೊಟ್ಟು ಮೇಲಕ್ಕೆತ್ತಿ ದಡದ ಮೇಲೆ ಬಿಟ್ಟು—ನೀನು ಯಾರಾದರೂ ಆಗಲಿ ನೀನು ಮಹಾ ಧೈರ್ಯಶಾಲಿಯು ಅಂದನು.

ಎಲೈಜಾ—ಅಯ್ಯಾ, ದಯಮಾಡಿ ನನ್ನನ್ನು ಕಾಪಾಡಿರಿ. ನನ್ನನ್ನು ಎಲ್ಲಿಯಾದರೂ ಬಚ್ಚಿಡಿರಿ ಎಂದು ಬೇಡಿಕೊಂಡಳು.

ಬಿಳೀ ಮನುಷ್ಯನು—ಗ್ರಾಮದ ದೊಡ್ಡ ಬೀದಿಯಲ್ಲಿ ಪ್ರತ್ಯೇಕವಾಗಿ ಕಾಣಿಸುತ್ತಿರುವ ಒಂದು ದೊಡ್ಡ ಮನೆಯನ್ನು ತೋರಿಸಿ—ಹುಡುಗೀ, ನಿನಗೆ ಸಹಾಯಮಾಡಲು ನನಗೆ ಬಹಳ ಸಂತೋಷ. ಆದರೆ ನಾನು ಮಾಡುವ ಸಹಾಯಕ್ಕಿಂತಲೂ ಅಗೋ ಅಲ್ಲಿ ಕಾಣಿಸುವ ಆ ಬಿಳೀ ಮನೆಗೆ ಹೋಗು. ಆ ಮನೆಯವರು ಬಹಳ ದಯವುಳ್ಳವರು. ನೀನು ಎಂತಹ ಗಂಡಾಂತರದಲ್ಲಿದ್ದಾಗ್ಯೂ ಅವರು ನಿನಗೆ ಸಹಾಯಮಾಡುತ್ತಾರೆ. ಭಯ ಪಡಬೇಡ, ಹೋಗು ಅಂದನು.

ಎಲೈಜಾ (ಸಂತೋಷದಿಂದ)—ಅಯ್ಯಾ, ದೇವರು ನಿಮಗೆ ಒಳ್ಳೇದನ್ನು ಮಾಡಲಿ ಎಂದು ತನ್ನ ಮಗುವನ್ನು ಎದೆಗೆ ಅಪ್ಪಿಕೊಂಡು ತನ್ನಿಂದಾದಷ್ಟು ಬೇಗನೆ ಆ ಬಿಳೀ ಮನುಷ್ಯನು ತೋರಿಸಿದ ಮನೆಯ ಕಡೆಗೆ ಹೋದಳು.

ಹೇಲೀಯು ಎಲೈಜಾಳ ಸಾಹಸ ಕಾರ್ಯಕ್ಕೆ ಬೆರಗಾಗಿ ಆಕೆಯು ಕಣ್ಣಿಗೆ ಮರೆಯಾಗುವ ವರೆಗೂ ನಿಂತು ನೋಡುತ್ತಿದ್ದನು. ಸಮೀಪ ದಲ್ಲಿಯೇ ನಿಂತಿದ್ದ ಪಂಡೀ ಮತ್ತು ಸೆಮನನ್ನು ನೋಡಿ—ಆಕೆಯಲ್ಲಿ ಏಳು ದೆವ್ವಗಳಿರಬಹುದೆಂದು ನಂಬುತ್ತೇನೆ. ಒಂದು ಗಡ್ಡೆಯಿಂದ ಮತ್ತೊಂದು ಗಡ್ಡೆಗೆ ಕಾಡುಬೆಕ್ಕಿನಂತೆ ಹೇಗೆ ಹಾರುತ್ತಿದ್ದಳು, ನೋಡಿದಿರಾ? ಅನ್ನಲು ಸೆಮನು ಫಕಫಕನೆ ನಕ್ಕನು.

ಹೇಲೀ (ಕೋಪದಿಂದ)—ಎಲೋ, ನಗುತ್ತೀಯಾ?

ಸೆಮನು—ಧಣೀಯೆ, ದೇವರು ನಿಮಗೆ ಒಳ್ಳೇದು ಮಾಡಲಿ. ನಗಬಾರದೆಂದು ನಾನು ಎಷ್ಟು ಪ್ರಯತ್ನಮಾಡಿದಾಗ್ಯೂ ಸುಮ್ಮನೆ ಇರಲು ಆಗುವುದಿಲ್ಲ. ನಗು ಬಂದೇ ಬರುತ್ತದೆ. ಏನು ಮಾಡಲಿ? ಆಕೆಯನ್ನು ನೋಡಿದರೆ ನಮಗೆ ತಮಾಷೆಯಾಗಿ ಕಾಣಿಸುತ್ತಿದ್ದಿತು. ಆಕೆಯು ಹಾರುವುದೇನು? ಕುಪ್ಪಳಿಸುವುದೇನು? ಹಿಮದಗಡ್ಡೆಗಳು ಪಟಪಟನೆ ಒಡೆದು ಚೂರುಚೂರಾಗುವುದೇನು? ಅಬ್ಬಾ ಎಂತಹ ಓಟ ಓಡಿದಳು? ಎಂದು ಸಂತೋಷದಿಂದ ಕಣ್ಣುಗಳಿಂದ ನೀರು ಕೆನ್ನೆಗಳ ಮೇಲೆ ಹರಿದುಹೋಗುವವರೆಗೂ ಇಬ್ಬರೂ ಕೇಕೆಹಾಕಿಕೊಂಡು ನಕ್ಕರು.

ಇವರು ನಗುವುದು ಹೇಲೀಯ ಹೊಟ್ಟೆಯಲ್ಲಿ ಬೆಂಕಿಬಿದ್ದಂತಾಗಿ—ಓಹೋ ಇಷ್ಟು ನಗುತ್ತೀರಾ? ಮತ್ತಷ್ಟು ನಗಬಾರದೇಕೆ? ಎಂದು ಕೈಯಲಿದ್ದ ಕೊರಡೆಯನ್ನು ತಿರುಗಿಸಿಕೊಂಡು ಇಬ್ಬರ ತಲೆಯ ಮೇಲೆ ಹೊಡೆದನು.

ಆ ಇಬ್ಬರು ಗುಲಾಮರು ಏಟುಗಳಿಗೆ ತಪ್ಪಿಸಿಕೊಂಡು ಕೇಕೆಹಾಕಿಕೊಂಡು ನಗುತ್ತಾ ನದಿಯ ಅಂಚಿನ ಕಡೆಗೆ ಹೊರಟರು.

ಸೆಮನು—ಧಣಿಯವರೇ, ನಮಸ್ಕಾರ. ನಾವು ಹೋಗಿಬರುತ್ತೇವೆ. ನಮ್ಮ ಯಜಮಾನಿಯು ಜೆರ್ರಿಯ ವಿಷಯ ಬಹಳ ಚಿಂತಿಸುತ್ತಿರಬಹುದು. ಧಣಿಯವರಿಗೆ ನಮ್ಮಿಂದ ಯಾವ ಸಹಾಯವು ಇನ್ನು ಬೇಕಾಗಿಲ್ಲವೆಂದು ನೆನಸುತ್ತೇವೆ. ಎಲೈಜಾಳನ್ನು ಹುಡುಕುತ್ತಾ ಈ ರಾತ್ರೆ ಹಿಮಗಡ್ಡೆಗಳ ಮೇಲೆ ಕುದುರೆಗಳನ್ನು ನಡೆಯಿಸಿಕೊಂಡು ಹೋದರೆ ನಮ್ಮ ಯಜಮಾನಿಯು ನಮ್ಮನ್ನು ಸುಮ್ಮನೆ ಬಿಟ್ಟಾರೇ? ಎಂದು ಹೇಳಿ ಕೇಕೆಹಾಕುತ್ತಾ ಕುದುರೆಗಳನ್ನು ದೌಡುಬಿಟ್ಟುಕೊಂಡು ತಮ್ಮ ಸ್ಥಳಕ್ಕೆ ಹೊರಟುಹೋದರು.

ಅಧ್ಯಾಯ ೫

ಬಿಳೀ ಮನೆಯು

ಓಹೈಯೋ ನದಿಯ ಸಮೀಪದಲ್ಲಿದ್ದ ದೊಡ್ಡ ಬಿಳೀ ಮನೆಯು ಬರ್ಡ್ ದೊರೆಯದು. ಈತನು ಆ ದೇಶದ ಸರ್ಕಾರದ ಒಬ್ಬ ಅಧಿಕಾರಿಯು. ಈತನು ಮನೆಯ ಒಂದು ದೊಡ್ಡ ಕೊಠಡಿಯಲ್ಲಿ ಕೂತು ಚಾ ಕುಡಿಯುತ್ತಾ ಹೆಂಡತಿಯೊಂದಿಗೆ ಮಾತಾಡುತ್ತಿದ್ದನು.

ಬರ್ಡ್ ದೊರೆಸಾನಿಯು—ಓಹೈಯೋ ಸಂಸ್ಥಾನದ ಸರ್ಕಾರದವರು ಓಹೈಯೋ ಸಂಸ್ಥಾನವನ್ನು ಹಾದು ಕೆನಡಾ ರಾಜ್ಯಕ್ಕೆ ಓಡಿ ಹೋಗುವ ನೀಗ್ರೋ ಗುಲಾಮರಿಗೆ ಸಹಾಯಮಾಡುವುದು ನ್ಯಾಯ ವಿರುದ್ಧವೆಂದು ಒಂದು ನ್ಯಾಯಶಾಸನವನ್ನು ಹೊಸದಾಗಿ ಮಾಡಿದ್ದಾರಂತೆ ನಿಜವೇ?

ಬರ್ಡ್ ದೊರೆಯು—ಹೌದು. ಗುಲಾಮರ ಕ್ರಯವಿಕ್ರಯದ ವಿಷಯದಲ್ಲಿ ವಿರೋಧಾಭಿಪ್ರಾಯವುಳ್ಳ ಇಲ್ಲಿನ ಕೆಲವರು ಗುಲಾಮರು ತಪ್ಪಿಸಿಕೊಂಡುಹೋಗಲು ಸಹಾಯಮಾಡುತ್ತಿದ್ದಾರೆ. ಕೆಂಟಕೀಯಲ್ಲಿರುವ ಗುಲಾಮರ ಯಜಮಾನರು ಈ ವಿಷಯದಲ್ಲಿ ಬಹಳ ಕೋಪವುಳ್ಳವರಾಗಿದ್ದಾರೆ. ಇವರನ್ನು ಸಮಾಧಾನಪಡಿಸುವುದಕ್ಕಾಗಿ ಸರ್ಕಾರದವರು ಇಂತಹ ನ್ಯಾಯಶಾಸನವನ್ನು ಮಾಡಬೇಕಾಯಿತು.

ದೊರೆಸಾನಿ—ಇದು ಬಹಳ ಕ್ರೂರಕೃತ್ಯವೆಂದು ನೆನಸುತ್ತೇನೆ. ನ್ಯಾಯಶಾಸನವೇನು? ಸ್ವತಂತ್ರರಾಗಿ ಜೀವಿಸಲು ಅಪೇಕ್ಷಿಸಿ ಓಡಿಹೋಗುವ ಆ ಬಡ ಮನುಷ್ಯರಿಗೆ ಒಂದು ರಾತ್ರಿಯ ಪೂರ್ತಿ ಮಲಗಲು ಸ್ಥಳವನ್ನೂ ಸ್ವಲ್ಪ ಊಟವನ್ನೂ ಕೊಟ್ಟು ಕಳುಹಿಸಬಾರದೆಂದು ನ್ಯಾಯಶಾಸನವಿದೆಯೇ?

ದೊರೆಯು—ಹೌದು. ಅಂತಹವರಿಗೆ ಸಹಾಯಮಾಡುವುದು ಮೋಸ ಕೃತ್ಯಕ್ಕೆ ಸಹಾಯಮಾಡಿದಂತಾಗುವುದರಿಂದ ಅದು ನ್ಯಾಯಶಾಸನಕ್ಕೆ ವಿರೋಧವೆಂದೇ ಹೇಳಬೇಕಾಗಿದೆ ಎಂದು ಹೇಳುತ್ತಿರುವಾಗಲೇ ಕಡ್ಜೋ ಎಂಬ ಒಬ್ಬ ಮುದುಕ ಗುಲಾಮನು ಕೊಠಡಿಯ ಬಾಗಿಲನ್ನು ದಢಾರನೆ

ತೆಗೆದು ಒಳಗೆ ಬಂದು ದೊರೆಸಾನಿಗೆ—ಅಮ್ಮಾ, ದಯಮಾಡಿ ಅಡಿಗೆಯ ಮನೆಯ ವರೆಗೆ ಸ್ವಲ್ಪ ಬನ್ನಿರಿ ಎಂದು ಬೇಡಿಕೊಂಡನು.

ದೊರೆಸಾನಿಯು ಅಡಿಗೆಯ ಮನೆಗೆ ಹೋದ ಒಂದು ನಿಮಿಷದೊಳಗಾಗಿ—ಜಾನ್, ಜಾನ್, ಬೇಗ ಸ್ವಲ್ಪ ಇಲ್ಲಿಗೆ ಬಂದು ಹೋಗು ಎಂದು ಗಂಡನನ್ನು ಕೂಗಿಕೊಂಡಳು.

ಬರ್ಡ್ ದೊರೆಯು ಓದುತ್ತಿದ್ದ ವರ್ತಮಾನ ಪತ್ರವನ್ನು ಕೆಳಗೆ ಬಿಸಾಡಿ ಅಡಿಗೆಯ ಮನೆಗೆ ಓಡಿಬಂದನು. ಅಲ್ಲಿನ ಸಂಗತಿಗಾಗಿ ಬಹಳ ವಿಸ್ಮಯಪಟ್ಟನು. ಒಬ್ಬ ನೀಗ್ರೋ ಯುವತಿಯು ಮೂರ್ಛಿತಳಾಗಿ ಬೆಂಕಿಯ ಸಮೀಪದಲ್ಲಿ ಬಿದ್ದಿದ್ದಳು. ಈಕೆಯ ಬಟ್ಟೆಗಳೆಲ್ಲಾ ಹರಿದುಹೋಗಿ ಶರೀರವು ತಣ್ಣಗೆ ಕೊರೆಯುತ್ತಿದ್ದಿತು. ಕಾಲಿನಲ್ಲಿ ಜೋಡು ಇರಲಿಲ್ಲ. ರಕ್ತವು ಸುರಿಯುತ್ತಿದ್ದಿತು. ಬರ್ಡ್ ದೊರೆಸಾನಿಯು ಮತ್ತು ಈಕೆಯ ಸೇವಕಿಯಾದ ದೈನಾ ಅತ್ತೆಯು ಈ ಯುವತಿಯನ್ನು ಎಚ್ಚರಗೊಳಿಸಲು ಮಾಡಬೇಕಾದ ಉಪಚಾರಗಳನ್ನು ಮಾಡುತ್ತಿದ್ದರು. ಮುದುಕನಾದ ಕಡ್ಜೋ ಮಗುವನ್ನು ತೊಡೆಯ ಮೇಲೆ ಹಾಕಿಕೊಂಡು ಮಗುವಿನ ಕಾಲಿನಲ್ಲಿದ್ದ ಜೋಡನ್ನೂ ಕಾಲುಚೀಲವನ್ನೂ ಕಿತ್ತುಹಾಕಿ, ತಣ್ಣಗೆ ಕೊರೆಯುತ್ತಿದ್ದ ಪಾದಗಳನ್ನು ಶಾಖ ಹುಟ್ಟುವಂತೆ ತಿಕ್ಕುತ್ತಿದ್ದನು.

ದೈನಾ ಅತ್ತೆಯು ದೊರೆಸಾನಿಗೆ—ಅಮ್ಮಾ, ಈ ಹುಡುಗಿಯು ಸ್ವಲ್ಪ ಹೊತ್ತಿಗೆ ಮುಂಚೆ ಇಲ್ಲಿಗೆ ಬಂದಳು. ಬಂದಾಗ ಚೆನ್ನಾಗಿ ಮಾತಾಡುತ್ತಲೆ ಇದ್ದಳು. ಬೆಂಕೀ ಕಾಯಿಸಿಕೊಳ್ಳಲು ಅಪ್ಪಣೆಯನ್ನು ಕೇಳಿ ಕೂತುಕೊಂಡ ಕೂಡಲೇ ಹೀಗೆ ಮೂರ್ಛೆಯಾದಳು ಅಂದಳು.

ಮೂರ್ಛೆ ಹೋಗಿದ್ದ ಎಲೈಜಾಗೆ ಎಚ್ಚರವಾಯಿತು. ಸುತ್ತಲೂ ತನ್ನ ಮಗುವಿಗಾಗಿ ನೋಡಿದಳು. ತನ್ನನ್ನೂ ತನ್ನ ಮಗುವನ್ನೂ ಕಾಪಾಡಬೇಕೆಂದು ಬರ್ಡ್ ದೊರೆಸಾನಿಯನ್ನು ಬಹು ವಿನಯದಿಂದ ಬೇಡಿಕೊಂಡಳು.

ದೊರೆಸಾನಿಯು (ಪ್ರೀತಿಯಿಂದ)—ಇಲ್ಲಿ ಯಾರೂ ನಿನ್ನನ್ನು ತೊಂದರೆಪಡಿಸುವುದಿಲ್ಲ, ಭಯಪಡಬೇಡ, ಇಲ್ಲಿ ನೀನು ಸುರಕ್ಷಿತವಾಗಿದ್ದೀ. ಅಯ್ಯೋ ಪಾಪ! ಅಂದಳು.

ಎಲೈಜಾ—ಅಮ್ಮಾ, ದೇವರು ನಿಮಗೆ ಒಳ್ಳೇದನ್ನು ಮಾಡಲಿ ಎಂದು ಹೇಳಿ ಇದ್ದಕ್ಕಿದ್ದ ಹಾಗೆ ದುಃಖಬಂದುದರಿಂದ ಅತ್ತಳು. ತಾಯಿಯು ಅಳುವು ದನ್ನು ಹ್ಯಾರಿಯು ನೋಡಿ ಹತ್ತಿರಬಂದು ಆಕೆಗೆ ಒರಗಿಕೊಂಡು ಕೂತನು.

ತಪ್ಪಿಸಿಕೊಂಡು ಬಂದಿದ್ದ ತಾಯಿಗೂ ಮಗುವಿಗೂ ಬರ್ಡ್ ದೊರೆ ಸಾನಿಯು ಸೇವಕರಿಂದ ಬೆಂಕಿಯ ಸಮೀಪದಲ್ಲಿಯೇ ಹಾಸಿಗೆಯನ್ನು ಮಾಡಿಸಿದಳು. ಅವರಿಬ್ಬರಿಗೂ ನಿದ್ರೆಯು ಹತ್ತುವ ವರೆಗೂ ದೊರೆಸಾನಿಯು ಅತ್ತಿತ್ತ ತಿರುಗಾಡಿಕೊಂಡಿದ್ದಳು. ತರುವಾಯ ದೊರೆಯೂ ದೊರೆ ಸಾನಿಯೂ ತಾವು ಮೊದಲು ಕೂತಿದ್ದ ಕೊಠಡಿಯೊಳಕ್ಕೆ ಹೋದರು. ದೊರೆಸಾನಿಯು ಹೊಲಿಯುತ್ತಾ ಕೂತಳು. ದೊರೆಯು ನೆಪಮಾತ್ರಕ್ಕೆ ಕೈಯಲ್ಲಿ ವರ್ತಮಾನ ಪತ್ರವನ್ನು ಹಿಡಿದುಕೊಂಡು ಕೂತಿದ್ದನು. ಸ್ವಲ್ಪ ಹೊತ್ತಿನೊಳಗಾಗಿ ದೈನಾ ಅತ್ತೆಯು ಬಂದು—ಅಮ್ಮಾ, ಎಲೈಜಾ ಎದ್ದಿ ದ್ದಾಳೆ. ನಿಮ್ಮ ಸಂಗಡ ಮಾತಾಡಬೇಕಂತೆ ಎಂದಳು. ದೊರೆಯೂ ದೊರೆಸಾನಿಯೂ ಅಡಿಗೆಯ ಮನೆಗೆ ಬಂದರು. ಎಲೈಜಾ ತನ್ನ ಸಂಗತಿ ಯನ್ನೂ ತಾನು ಮನೆಯನ್ನು ಬಿಟ್ಟ ಗಳಿಗೆಯಿಂದ ಅದು ವರೆಗೂ ಅನು ಭವಿಸಿದ ಕಷ್ಟಗಳನ್ನೂ ಹೇಳಿದಳು. ಆಕೆಯು ತಾನು ನೀರಿನ ಮೇಲಣ ಹಿಮಗಡ್ಡೆಗಳ ಮೇಲೆ ನಡೆದು ಹೇಗೆ ನದಿಯನ್ನು ದಾಟಿದಳೋ ಅದನ್ನು ಹೇಳಿದಾಗ ದೊರೆಗೂ ದೊರೆಸಾನಿಗೂ ನಂಬುವುದಕ್ಕೆ ಕಷ್ಟವಾಯಿತು.

ಕಡ್ಜೋ ತಾತನು ಅಲ್ಲಿಯೇ ಇದ್ದನು. ಇದನ್ನು ಕೇಳಿ ಅವನಿಗೆ ಬಹಳ ಆಶ್ಚರ್ಯವಾಗಿ—ಎಲೈಜಾ, ನೀನು ದಾಟಿದ್ದು ಹೇಗೆ? ಹಿಮಗಡ್ಡೆಗಳು ನೀರಿನಲ್ಲಿ ಮುಳುಗುತ್ತಾ, ತೇಲುತ್ತಾ, ಅಲ್ಲಾಡುತ್ತಾ, ಪಟಪಟನೆಂದು ಒಡೆದುಹೋಗುತ್ತಾ ಇರಲಿಲ್ಲವೇ? ಎಂದು ಕೇಳಿದನು.

ಎಲೈಜಾ—ಹೌದು, ಹೌದು. ನೀನು ಹೇಳಿದ್ದೆಲ್ಲಾ ನಿಜವೆ. ಆದರೂ ನಾನು ದಾಟಿದೆನು. ದಾಟುತ್ತೇನೆಂದು ನಾನು ನೆನಸಿರಲಿಲ್ಲ. ಅದು ಯಾವುದನ್ನೂ ನಾನು ಲಕ್ಷ್ಯಮಾಡಲಿಲ್ಲ. ನಾನು ಮುಳುಗಿ ಸಾಯು ವುದಕ್ಕೆ ಸಹ ಸಿದ್ಧಳಾಗಿದ್ದೆನು. ದೇವರು . . . ನನ್ನ ದೇವರು . . . ನನಗೆ ಸಹಾಯಮಾಡಿದನು.

ಬರ್ಡ್ ದೊರೆ ದೊರೆಸಾನಿಯವರ ಮಗುವು ಸತ್ತು ಅಂದಿಗೆ ಒಂದು ತಿಂಗಳಾಗಿದ್ದಿತು. ಮರಣಕ್ಕಿಂತಲೂ ಕಷ್ಟತರವಾದ ಗಂಡಾಂತರದಿಂದ ಎಲೈಜಾ ತನ್ನ ಮಗುವನ್ನು ಕಾಪಾಡುವುದಕ್ಕಾಗಿ ತೋರಿಸಿದ ತನ್ನ ಮನೋಭಿಲಾಷೆಯನ್ನೂ ಅದಕ್ಕಾಗಿ ತಾನು ಪಟ್ಟ ಕಷ್ಟಗಳನ್ನೂ ಹೇಳಿದಾಗ ಗಂಡ ಹೆಂಡಿತಿಯರಿಬ್ಬರಿಗೂ ಬಹಳ ಸಂಕಟವಾಯಿತು. ದೊರೆಸಾನಿಯ ಕಣ್ಣುಗಳಿಂದ ನೀರು ತೊಟ್ಟಿಕ್ಕುತ್ತಿದ್ದಿತು. ದೊರೆಯಾದರೋ ತಟಕ್ಕನೆ ಕಿಟಕಿಯ ಬಳಿಗೆ ಬಂದು ತನ್ನ ಮುಖವನ್ನು ಮರೆಮಾಡಿ, ಕಣ್ಣೀರನ್ನು ಒರಸಿಕೊಂಡನು.

ಬರ್ಡ್ ದೊರೆಸಾನಿ—ಅಯ್ಯೋ, ಬಡಹೆಂಗಸೇ, ನೀನು ಎಲ್ಲಿಗೆ ಹೋಗಬೇಕೆಂದಿದ್ದೀ ?

ಎಲೈಜಾ—ತಾಯಿ, ಕೆನಡಾ ದೇಶಕ್ಕೆ ಹೋಗಬೇಕೆಂದಿದ್ದೇನೆ. ಆದರೆ ಅದು ಎಲ್ಲಿದೆಯೋ ನನಗೆ ತಿಳಿಯದು. ಕೆನಡಾ ದೇಶವು ಬಹಳ ದೂರವಿದೆಯೇ ? ಎಂದು ಬಹು ಕಾಂಕ್ಷೆಯಿಂದ ಕೇಳಿದಳು.

ದೊರೆಸಾನಿ—ನೀನು ನೆನಸುವುದಕ್ಕಿಂತಲೂ ದೂರವಿದೆಯಮ್ಮ. ಆದಾಗ್ಯೂ ನಿನಗಾಗಿ ನಾವು ಏನು ಮಾಡಬೇಕೆಂದು ಯೋಚಿಸುತ್ತೇವೆ. ಈಗ ಮಲಗು, ಯಾವುದಕ್ಕೂ ಭಯಪಡಬೇಡ. ದೇವರಲ್ಲಿ ಭರವಸವಿಡು, ಆತನು ನಿನ್ನನ್ನು ಕಾಪಾಡುತ್ತಾನೆ.

ಬರ್ಡ್ ದೊರೆಯೂ ದೊರೆಸಾನಿಯೂ ತಮ್ಮ ಕೊಠಡಿಗೆ ಹೋದರು. ದೊರೆಸಾನಿಯು ಕುರ್ಚಿಯ ಮೇಲೆ ಮೌನವಾಗಿ ಕೂತುಬಿಟ್ಟಳು. ದೊರೆಯಾದರೋ ಸುಮ್ಮನೆ ಕೊಠಡಿಯಲ್ಲಿಯೇ ತನಗೆ ತಾನೇ ಮೆಲ್ಲಗೆ ಮಾತಾಡಿಕೊಳ್ಳುತ್ತಾ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ತಿರುಗಾಡಿಕೊಂಡು ಎಂತಹ ವಿಪರೀತಕ್ಕೆ ಬಂದಿತು? ನಾನು ಸರ್ಕಾರದ ಅಧಿಕಾರಿಯು. ಈ ಶಾಸನವನ್ನು ಜಾರಿಗೆ ತರಲು ನಾನೇ ಮುಂದಾಳಾಗಿ ನಿಂತು ಮಾತಾಡಿದೆನು. ಈಗ ನಾನೇ ಅದಕ್ಕೆ ವಿರೋಧವಾಗಿ ನಡೆಯುವಂತಾಯಿತಲ್ಲಾ, ಏನು ಮಾಡಲಿ? ಎಂದು ತನ್ನ ಹೆಂಡತಿಗೆ—ಆಕೆಯನ್ನು ಏನಾದರೂ ಮಾಡಿ ಈ ರಾತ್ರಿಯೇ ಇಲ್ಲಿಂದ ಕಳುಹಿಸಿಬಿಡಬೇಕು. ನಾಳೆ ಬೆಳಕು

ಹರಿಯುವುದರೊಳಗಾಗಿ ಗುಲಾಮರ ವ್ಯಾಪಾರಿಯು ಇಲ್ಲಿಗೆ ಬರುತ್ತಾನೆ. ನಾವು ಹೆಂಗಸನ್ನು ಹೇಗಾದರೂ ಬಚ್ಚಿಡಬಹುದು. ಆದರೆ ಆ ಮಗುವನ್ನು ಬಚ್ಚಿಡುವುದು ಹೇಗಾದೀತು? ಏನೂ ತಿಳಿಯದ ಮಗು. ಅದು ಕಿಟಕಿಯಲ್ಲಿಯೋ ಬಾಗಿಲಲ್ಲಿಯೋ ಇಣಕಿನೋಡಿಕೊಂಡಿರುವಾಗಲೋ ಅಥವಾ ಹೊರಗಡೆ ಆಡಿಕೊಂಡಿರುವಾಗಲೋ ಯಾರಾದರೂ ನೋಡಿದರೆ ಏನು ಮಾಡೋಣ? ಓಡಿಹೋಗುತ್ತಿರುವ ಗುಲಾಮರಿಗೆ ನಾವು ಆಶ್ರಯ ಕೊಟ್ಟಿರುವುದು ಯಾರಿಗಾದರೂ ತಿಳಿದರೆ ನನ್ನ ಗತಿಯೇನು? ನಾನು ತೊಂದರೆಯಲ್ಲಿ ಸಿಕ್ಕಿ ಬೀಳುತ್ತೇನಲ್ಲಾ? ಹೇಗಾದರೂ ಮಾಡಿ ಅವರನ್ನು ಈ ರಾತ್ರೆಯೇ ಖಂಡಿತವಾಗಿ ಕಳುಹಿಸಿಬಿಡಬೇಕು. ಅವರು ಇಲ್ಲಿರಬಾರದು ಅಂದನು.

ದೊರೆಸಾನಿ (ಘಾಬರಿಯಿಂದ)—ಹೇಗೆ ಕಳುಹಿಸಬೇಕು? ಅಯ್ಯೋ ಪಾಪ! ಅವರು ಇಂತಹ ಅಪರಾತ್ರೆಯಲ್ಲಿ ಎಲ್ಲಿಗೆ ಹೋದಾರು?

ದೊರೆಯು—ಒಂದು ಒಳ್ಳೇ ಸ್ಥಳವಿದೆ. ನನ್ನ ಹಳೆಯ ಸ್ನೇಹಿತರಲ್ಲಿ ಒಬ್ಬನು ಕೆಂಟಕೀಯಿಂದ ಬಂದಿದ್ದಾನೆ. ಆತನು ಒಂದು ಸಣ್ಣ ನದಿಯ ಆಚೆ ಏಳು ಮೈಲಿ ದೂರದಲ್ಲಿರುವ ಕಾಡುಪ್ರದೇಶದಲ್ಲಿ ವಾಸವಾಗಿದ್ದಾನೆ. ಆತನು ತನ್ನ ಗುಲಾಮರೆಲ್ಲರನ್ನು ಸ್ವತಂತ್ರರನ್ನಾಗಿ ಮಾಡಿ, ಅವರ ಜೀವನಕ್ಕಾಗಿ ಭೂಮಿಯನ್ನು ಕೊಂಡುಕೊಟ್ಟಿದ್ದಾನೆ. ಆತನನ್ನು ನೋಡಬೇಕೆಂದು ಅಪೇಕ್ಷಿಸುವವರು ಮಾತ್ರವೇ ಅಲ್ಲಿಗೆ ಹೋಗುವುದು. ಇತರರು ಎಂದಿಗೂ ಅಲ್ಲಿಗೆ ಹೋಗುವುದಿಲ್ಲ. ಈಕೆಯು ಅಲ್ಲಿಗೆ ಹೋದರೆ ಸುರಕ್ಷಿತಳಾಗಿರುತ್ತಾಳೆ. ಆದರೆ ಗಾಡೀ ಹೊಡೆಯಲು ಯಾರೂ ಇಲ್ಲ. ನಾನೇ ಹೊಡೆದುಕೊಂಡುಹೋಗಬೇಕು. ಈಗ ಇದೇ ಕಷ್ಟಕ್ಕೆ ಬಂದಿರುವುದು. ಏನು ಮಾಡಲಿ?

ದೊರೆಸಾನಿ—ಯಾಕೆ? ಕಡ್ಜೋ ಇದ್ದಾನಲ್ಲಾ? ಅವನಿಗಿಂತ ಗಾಡಿ ಹೊಡೆಯುವವರು ಬೇಕೇ?

ದೊರೆ—ಹೌದು, ಅವನು ಗಟ್ಟಿಗನೇ. ಆ ನದಿಯನ್ನು ಎರಡು ಸ್ಥಳಗಳಲ್ಲಿ ದಾಟಬೇಕಾಗಿದೆ. ಮೊದಲನೆಯ ಸ್ಥಳದಲ್ಲಿ ಸುಲಭವಾಗಿ ದಾಟಬಹುದು.

ಎರಡನೆಯ ಸ್ಥಳದಲ್ಲಿ ದಾಟುವುದು ಬಹಳ ಗಂಡಾಂತರ. ನದಿಯಲ್ಲಿ ದಾರಿಯನ್ನು ಚೆನ್ನಾಗಿ ತಿಳಿದವರೇ ಇರಬೇಕು. ನಾನು ಕುದುರೆಯ ಮೇಲೆ ನೂರಾರು ಸಾರಿ ಆ ಸ್ಥಳವನ್ನು ದಾಟಿದ್ದೇನೆ. ಹೇಗೂ ರಾತ್ರಿ ಹನ್ನೆರಡು ಗಂಟೆಗೆ ಗಾಡಿಗೆ ಕುದುರೆಯು ಕಟ್ಟಿ ಸಿದ್ಧವಾಗಿರಲಿ. ಆದರೆ ಶಬ್ದ ಮಾಡಬಾರದು. ನನ್ನ ಸ್ನೇಹಿತನ ಸ್ಥಳಕ್ಕೆ ನಾನೇ ಕುದುರೆ ಗಾಡಿಯನ್ನು ಹೊಡೆದುಕೊಂಡು ಹೋಗುತ್ತೇನೆ. ನಾನು ಹೋದ ಸಂಗತಿಯು ಯಾರಿಗೂ ತಿಳಿಯದಂತೆ ಪಟ್ಟಣಕ್ಕೆ ಹೋಗುವ ಟಪ್ಪಾಲು ಗಾಡಿಯು ಸಿಕ್ಕುವಂತೆ ಕಡ್ಜೋ ನನ್ನನ್ನು ಛತ್ರಕ್ಕೆ ತೆಗೆದುಕೊಂಡುಹೋಗಲಿ. ಅಷ್ಟರಲ್ಲಿ ಬೆಳಗಿನ ನಾಲ್ಕು ಗಂಟೆಯಾಗುತ್ತದೆ. ಬೆಳಗಾದ ಮೇಲೆ ನಾನು ಶಾಸನ ಸಭೆಗೆ ಹೋಗಲು ಅನುಕೂಲವಾಗುತ್ತದೆ. ಒಂದು ನ್ಯಾಯಶಾಸನವನ್ನು ಜಾರಿಗೆ ತರುವಂತೆ ನಾನೇ ಪ್ರೋತ್ಸಾಹಿಸಿ, ತರುವಾಯ ಅದಕ್ಕೆ ವಿರೋಧವಾಗಿ ನಡೆದುಕೊಳ್ಳುವುದು ಬಹಳ ಬುದ್ಧಿಯಿಲ್ಲದ ಕೆಲಸವಾಗಿದೆ ಅಂದನು.

ದೊರೆಯು ಈ ರೀತಿ ಮಾತಾಡಿ ತಾನು ಹೇಳಿದಂತೆ ತಕ್ಕ ಏರ್ಪಾಡುಗಳನ್ನು ಮಾಡಲು ಕೊಠಡಿಯಿಂದ ಹೊರಗೆ ಬಂದು ತಿರುಗಿ ಒಳಕ್ಕೆ ಹೋಗಿ ಹೆಂಡತಿಗೆ—ಮೇರೀ, . . . ನಿನ್ನ ಯೋಚನೆ ಏನೋ ನನಗೆ ತಿಳಿಯದು. ಪೆಟ್ಟಿಗೆಯ ತುಂಬಾ ಒಂದು ತಿಂಗಳ ಹಿಂದೆ ತೀರಿಕೊಂಡ ನಮ್ಮ ಮಗುವಿನ ಬಟ್ಟೆ ಮತ್ತು ಸಾಮಾನುಗಳಿವೆ. ಇಷ್ಟರಲ್ಲಿ ಮಗುವಿನ ನೆನಪಿನಿಂದ ದುಃಖ ಬಂದು ಮಾತಾಡಲು ಆಗದೆ ಕೊಠಡಿಯಿಂದ ಹೊರಗೆ ಹೋದನು.

ಗಂಡನು ಏನು ಹೇಳಬೇಕೆಂದಿದ್ದನೋ ಅದನ್ನು ಹೆಂಡತಿಯು ತಿಳಿದುಕೊಂಡಳು. ತೀರಿಕೊಂಡಿದ್ದ ಮಗುವಿನ ಕೊಠಡಿಯೊಳಕ್ಕೆ ಹೋದಳು. ಪೆಟ್ಟಿಗೆಯನ್ನು ತೆರೆದು ಮಗುವಿನ ಬಟ್ಟೆಗಳಲ್ಲಿ ಸಾಧಾರಣವಾದ ಕೆಲವು ಬಟ್ಟೆಗಳನ್ನೂ ಕೆಲವು ಇತರ ಸಾಮಾನುಗಳನ್ನೂ ತೆಗೆದುಕೊಂಡು ಗಂಟು ಕಟ್ಟಿದಳು. ತರುವಾಯ ತನ್ನ ಬಟ್ಟೆಗಳಲ್ಲಿ ಕೆಲವನ್ನು ಆರಿಸಿ, ಅದನ್ನೂ ಆ ಮತ್ತೊಂದು ಗಂಟನ್ನೂ ಒಂದು ತಗಡಿನ ಪೆಟ್ಟಿಗೆಯಲ್ಲಿಟ್ಟು ಪ್ರಯಾಣಕ್ಕೆ ಸಿದ್ಧವಾಗಿದ್ದ ಬಂಡಿಯಲ್ಲಿಟ್ಟಳು.

ರಾತ್ರೆ ಹನ್ನೆರಡು ಗಂಟೆಯಾಯಿತು. ಬರ್ಡ್ ದೊರೆಯು, ಕಡ್ಜೋ, ಮತ್ತು ಎಲೈಜಾ, ಈಕೆಯ ಮಗುವು ಬಂಡಿಯಲ್ಲಿ ಕೂತು ಹೊರಟು ಹೋದರು. ಅನೇಕ ಅಪಾಯಗಳಿಂದ ತಪ್ಪಿಸಿಕೊಂಡು ಕೆಲವು ಗಂಟೆಗಳ ತರುವಾಯ ತಾವು ಯಾವ ಸ್ಥಳಕ್ಕೆಂದು ಹೊರಟರೋ ಆ ಸ್ಥಳಕ್ಕೆ ಸೇರಿದರು. ಬಂದು ಸ್ನೇಹಿತನನ್ನು ಎಬ್ಬಿಸಿದರು. ಬಹಳ ಹೊತ್ತಿನ ತರುವಾಯ ಆತನು ಎದ್ದು ಬಾಗಿಲು ತೆರೆದನು.

ದೊರೆಯು—ದಯಮಾಡಿ ಈ ಬಡಹೆಂಗಸನ್ನೂ ಈಕೆಯ ಚಿಕ್ಕ ಮಗುವನ್ನೂ ಗುಲಾಮರನ್ನೂ ಹಿಡಿಯುವುದಕ್ಕೆ ಬಂದವರಿಂದ ತಪ್ಪಿಸಿ ಸುರಕ್ಷಿತವಾಗಿ ನೋಡಿಕೊಳ್ಳುತ್ತೀರಾ?

ಸ್ನೇಹಿತನು—ಖಂಡಿತವಾಗಿ ನೋಡಿಕೊಳ್ಳುತ್ತೇನೆ. ಸಂಶಯವೇನು?

ದೊರೆಯು—ನೀವು ನೋಡಿಕೊಳ್ಳುತ್ತೀರೆಂದು ನನಗೆ ತಿಳಿದೇ ಇದ್ದಿತು.

ಸ್ನೇಹಿತನು—ತನ್ನ ಪುಷ್ಟಿಯುಳ್ಳ ಶರೀರವನ್ನು ತೋರಿಸುತ್ತಾ, ಹಿಡಿಯುವುದಕ್ಕೆ ಬಂದವರು ಇವರನ್ನು ಹೇಗೆ ಹಿಡಿದುಕೊಂಡುಹೋಗು ವರೆಂದು ನಾನು ನೋಡಿಕೊಳ್ಳುತ್ತೇನೆ. ನನಗೆ ಬಲಕಾಯರಾದ ಏಳು ಮಂದಿ ಗಂಡು ಮಕ್ಕಳಿದ್ದಾರೆ. ಪ್ರತಿಯೊಬ್ಬರು ಆರು ಅಡಿಗಳು ಉದ್ದ ವಾಗಿದ್ದಾರೆ. ಬಂದವರನ್ನು ಚೆನ್ನಾಗಿ ಮರ್ದನಮಾಡಿ ಕಳುಹಿಸುತ್ತಾರೆ. ಬೇಕಾದರೆ ಈಗಲೇ ಬರಲಿ ಅವರು ಅಂದನು.

ಎಲೈಜಾ ಭಯದಿಂದಲೂ ಆಯಾಸದಿಂದಲೂ ತನ್ನ ಮಗುವಿನೊಂದಿಗೆ ಮನೆಯೊಳಕ್ಕೆ ಹೋದಳು.

ಬರ್ಡ್ ದೊರೆಯ ಸ್ನೇಹಿತನು—ಹುಡುಗೀ, ನೀನು ಸ್ವಲ್ಪ ವಾದರೂ ಭಯಪಡಬೇಡ. ಬೇಕಾದವರು ಬರಲಿ ನಾನಿದ್ದೇನೆ. ನನ್ನ ವಿಷಯ ತಿಳಿದಂತಹವರು ನನ್ನ ಒಪ್ಪಿಗೆಯಿಲ್ಲದೆ ನನ್ನ ಮನೆಯೊಳಗೆ ಇರುವ ಯಾರನ್ನಾದರೂ ಮುಟ್ಟಿದರೆ ಅವರ ಗತಿಯು ಏನಾಗುತ್ತದೆಂದು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದುದರಿಂದ ನೀನು ಹೋಗಿ ಸುಖವಾಗಿ ಮಲಗಿಕೊ. ಇದು ನಿನ್ನ ತಾಯಿತಂದೆಗಳ ಮನೆಯಂತಲೇ ತಿಳಿದುಕೋ ಎಂದು ಹೇಳಿ ಬರ್ಡ್ ದೊರೆಯ ಕಡೆಗೆ ನೋಡಿ—ಬೆಳಗಾಗುವ ವರೆಗೂ ನೀವು

ಇಲ್ಲಿಯೇ ಇರ್ರಿ. ಮಲಗುವುದಕ್ಕೆ ಹಾಸಿಗೆಯನ್ನು ಸಿದ್ಧಮಾಡಿಸುತ್ತೇನೆ ಅಂದನು.

ದೊರೆಯು—ನನ್ನ ವಿಷಯದಲ್ಲಿ ನೀವು ದಯಮಾಡಿ ತೊಂದರೆ ತೆಗೆದು ಕೊಳ್ಳಬೇಡಿರಿ. ಪಟ್ಟಣಕ್ಕೆ ಹೋಗುವ ರಾತ್ರೆಟಪ್ಪಾಲು ಗಾಡಿಯಲ್ಲಿ ನಾನು ಹೋಗಬೇಕು. ಬಹಳ ಅವಸರವಾದ ಕೆಲಸವಿದೆ, ದಯಮಾಡಿ ಕ್ಷಮಿಸಿರಿ.

ಸ್ನೇಹಿತನು—ಅಂತಹ ಅವಸರವಾದ ಕೆಲಸವಿದ್ದರೆ ಹೋಗಬಹುದು. ನಾನು ನಿಮ್ಮೊಂದಿಗೆ ಸ್ವಲ್ಪದೂರದ ವರೆಗೂ ಬಂದು ನಿಮಗೆ ಒಂದು ಸಮೀಪ ವಾದ ದಾರಿಯನ್ನು ತೋರಿಸುವೆನೆಂದು ಒಂದು ಕೈದೀಪವನ್ನು ಹಿಡಿದು ಕೊಂಡು ತನ್ನ ಮನೆಯ ಸಮೀಪದಲ್ಲಿಯೇ ಇದ್ದ ಮಾರ್ಗದಲ್ಲಿಯೇ ಕರೆದು ಕೊಂಡುಹೋದನು. ಈತನು ಹಿಂದಕ್ಕೆ ಬರುವಾಗ ಬರ್ಡ್ ದೊರೆಯು ಮೂವತ್ತು ರೂಪಾಯಿಗಳನ್ನು ಸ್ನೇಹಿತನ ಕೈಯಲ್ಲಿಟ್ಟು ಇದು ಆ ಹೆಂಗಸಿನ ಖರ್ಚಿಗಾಗಿ ಎಂದು ಹೇಳಿದನು.

ಸ್ನೇಹಿತನು—ಒಳ್ಳೇದು ಎಂದು ಹೇಳಿ, ಬರ್ಡ್ ದೊರೆಯಿಂದ ಅಪ್ಪಣೆ ಯನ್ನು ತೆಗೆದುಕೊಂಡು ತನ್ನ ಮನೆಗೆ ಹಿಂದಿರುಗಿದನು.

ಅಧ್ಯಾಯ ೬

ಎಲೈಜಾ ತನ್ನ ಗಂಡನನ್ನು ಶಿರುಗಿ ನೋಡಿದುದು

ಎಲೈಜಾ ಮತ್ತು ಈಕೆಯ ಮಗು ಹ್ಯಾರಿ ಆ ರಾತ್ರೆ ಸುಖವಾಗಿ ಮಲಗಿ ವಿಶ್ರಾಂತಿಪಡೆದರು. ಮಾರಣೆಯದಿನ ಆ ಮುದುಕನೂ ಈ ಬಲಿಷ್ಠರಾದ ಆತನ ಏಳು ಮಂದಿ ಗಂಡು ಮಕ್ಕಳೂ ಗುಲಾಮವ್ಯಾಪಾರಕ್ಕೆ ವಿರೋಧ ಪಕ್ಷದವರಾದ ಕ್ರೈಸ್ತರಿರುವ ಮುಂದಿನ ಊರಿಗೆ ತಾಯಿ ಮಗನನ್ನು ಸುರ ಕ್ಷಿತವಾಗಿ ಕರೆದುಕೊಂಡುಹೋಗಿಬಿಟ್ಟರು.

ತಾಯಿಯೂ ಮಗುವೂ ಆ ಊರಿನಲ್ಲಿ ಬಹಳ ದಿನಗಳು ಸುಖವಾಗಿದ್ದರು. ಇವರಿಬ್ಬರು ಯಾರ ಮನೆಯಲ್ಲಿದ್ದರೋ ಆ ಮನೆಯ ಯಜಮಾನನಾದ

ಹಾಲಿಡೆ ದೊರೆಯು ಇವರನ್ನು ಮುಂದಕ್ಕೆ ಕಳುಹಿಸಲು ಸಮಯ ಸಂದರ್ಭಗಳಿಗಾಗಿ ನಿರೀಕ್ಷಿಸುತ್ತಿದ್ದನು. ಒಂದು ದಿನ ಸಾಯಂಕಾಲ ಹಾಲಿಡೆ ದೊರೆಸಾನಿಯು ಅಡಿಗೆಯ ಮನೆಯಲ್ಲಿ ರಾತ್ರೆ ಊಟವನ್ನು ಸಿದ್ಧಮಾಡುತ್ತಿದ್ದಳು. ಎಲೈಜಾ ಅಲ್ಲಿಯೇ ಕೂತು ಹೊಲಿಯುತ್ತಿದ್ದಳು.

ಹಾಲಿಡೆ ದೊರೆಸಾನಿಯು—ಎಲೈಜಾ, ಕೆನಡಾ ದೇಶಕ್ಕೆ ಹೋಗುವುದಕ್ಕೆ ಇನ್ನೂ ನಿನಗೆ ಮನಸ್ಸಿದೆಯೇ ?

ಎಲೈಜಾ—ಹೌದಮ್ಮಾ, ನಾನು ಹೋಗಲೇ ಬೇಕು. ಇಲ್ಲಿರಲು ನನಗೆ ಧೈರ್ಯವಿಲ್ಲ.

ಹಾಲಿಡೆ ದೊರೆಸಾನಿ—ನಿನಗೆ ಮನಸ್ಸು ಬಂದಷ್ಟು ದಿನಗಳು ಇಲ್ಲಿರಲು ಯಾವ ಅಭ್ಯಂತರವೂ ಇಲ್ಲ.

ಎಲೈಜಾ—ನೀವು ಮಾಡಿರುವ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆನು. ನಿಮಗೆ ನನ್ನ ವಂದನೆಗಳು. ಆದರೆ ಇಲ್ಲಿ ನನ್ನ ಮನಸ್ಸಿಗೆ ವಿಶ್ರಾಂತಿಯಿಲ್ಲ. ರಾತ್ರೆಯಲ್ಲಿ ನಿದ್ದೆಯೂ ಬರುವುದಿಲ್ಲ. ನನ್ನ ಮುದ್ದು ಕಂದನನ್ನು ಯಾವ ಘಳಿಗೆಯಲ್ಲಿ ಯಾರು ಹಿಡಿದುಕೊಂಡುಹೋಗುತ್ತಾರೋ ಎಂಬ ಚಿಂತೆಯಿಂದ ಯಾವಾಗಲೂ ಕೊರಗುತ್ತಿದ್ದೇನೆ. ನನ್ನ ನೆನಪಿನಿಂದ ಅದು ಹೋಗುವುದೇ ಇಲ್ಲ. ಏನು ಮಾಡಲಿ ? ನಾನು ಕೆನಡಾ ದೇಶಕ್ಕೆ ಹೋಗಲೇ ಬೇಕು. ಆಗ ನನ್ನ ಮಗುವನ್ನು ಯಾರೂ ತೆಗೆದುಕೊಂಡು ಹೋಗುವುದಿಲ್ಲ.

ಹಾಲಿಡೆ ದೊರೆಸಾನಿ—ಅಯ್ಯೋ, ಬಡ ಮಗಳೇ, ನೀನು ಯಾವುದಕ್ಕೂ ಭಯಪಡಬೇಡ. ಈ ನಮ್ಮ ಊರಿನಿಂದ ತಪ್ಪಿಸಿಕೊಂಡು ಓಡಿಬಂದ ಯಾರನ್ನಾದರೂ ಇದು ವರೆಗೂ ಹಿಡಿದುಕೊಂಡುಹೋಗಲಿಲ್ಲ. ನಿನ್ನಂತೆ ಎಷ್ಟೋ ಮಂದಿ ಇಲ್ಲಿದ್ದರು. ಅವರಿಗೆ ಯಾರ ತೊಂದರೆಯೂ ಇರಲಿಲ್ಲ ಅಂದಳು.

ಇವರಿಬ್ಬರೂ ಮಾತಾಡುತ್ತಿರುವಾಗ ಹಾಲಿಡೆ ದೊರೆಯು ಒಳಕ್ಕೆ ಬಂದನು. ದೊರೆಸಾನಿಯು ಆತನನ್ನು ನೋಡಿ ಏನಾದರೂ ಹೇಳುವುದಕ್ಕೆ ಸಮಾಚಾರವಿದೆಯೇ ? ಎಂದು ಕೇಳಿದಳು.

ಹಾಲಿಡೆ ದೊರೆಯು—ಸಮಾಚಾರವಿದೆ. ಈ ಹೊತ್ತು ರಾತ್ರೆ ಇಲ್ಲಿಗೆ ಇನ್ನೂ ಕೆಲವರು ನೀಗ್ರೋ ಸ್ನೇಹಿತರು ಬರುತ್ತಾರೆಂದು ಪೀಟರ್ ಹೇಳಿದನು. ಎಲೈಜಾ ಕಡೆಗೆ ನೋಡಿ ನಿನ್ನ ಹೆಸರು ಹ್ಯಾರಿಸ್ ಎಂದು ಹೇಳಿದಿಯಾ?

ಎಲೈಜಾ (ಒಂದು ತರವಾದ ವಿಚಾರ ಮನಸ್ಸಿನಿಂದ)—ಹೌದು, ಹ್ಯಾರಿಸ್ ಎಂದು ಹೇಳಿದೆನು. ಎಲೈಜಾ ತನ್ನ ಹೆಸರನ್ನು ಒಪ್ಪಿಕೊಂಡಾಗ್ಯೂ ತನ್ನ ವಿಷಯ ವರ್ತಮಾನ ಪತ್ರದಲ್ಲಿ ಏನಾದರೂ ಪ್ರಕಟವಾಗಿದೆಯೇನೋ ಅದಕ್ಕಾಗಿಯೇ ನನ್ನ ಹೆಸರನ್ನು ಕೇಳುತ್ತಾರೆ ಅಂದುಕೊಂಡಳು.

ಹಾಲಿಡೆ ದೊರೆಯು ತಕ್ಷಣವೇ ಕೊಠಡಿಯನ್ನು ಬಿಟ್ಟು ಹೊರಡುವಾಗ ತನ್ನ ಹೆಂಡತಿಯನ್ನು ಜೊತೆಯಲ್ಲಿಯೇ ಕರೆದುಕೊಂಡುಹೋದನು.

ಹಾಲಿಡೆ ದೊರೆಸಾನಿ—ಯಾಕೆ? ಕರೆದುಕೊಂಡು ಬಂದಿರಲ್ಲಾ ?

ಹಾಲಿಡೆ ದೊರೆ—ಎಲೈಜಾ ಗಂಡನು ಸಮೀಪದ ಒಂದು ಊರಿನಲ್ಲಿದ್ದಾನೆ. ಈ ಹೊತ್ತು ರಾತ್ರೆ ಇಲ್ಲಿಗೆ ಬರುತ್ತಾನೆ.

ಹಾಲಿಡೆ ದೊರೆಸಾನಿಯ ಮುಖದಲ್ಲಿ ಕಳೆ ಏರಿತು. (ಸಂತೋಷದಿಂದ) ಬರುವುದು ನಿಜವೋ ?

ಹಾಲಿಡೆ ದೊರೆ—ನಿಜ. ನಿನ್ನೆ ಪೀಟರ್ ಆ ಊರಿಗೆ ಹೋಗಿದ್ದನು. ಅಲ್ಲಿ ಒಬ್ಬ ಮುದುಕಿಯೂ ಇಬ್ಬರು ಗಂಡಸರೂ ಇದ್ದರಂತೆ. ಒಬ್ಬನ ಹೆಸರು ಜೋರ್ಜ್ ಹ್ಯಾರಿಸ್ ಅಂತೆ. ಪೀಟರನು ಹೇಳುವ ಸಂಗತಿಗಳನ್ನೆಲ್ಲಾ ಕೇಳಿದರೆ ಆವನು ಎಲೈಜಾಳ ಗಂಡನೇ ಆಗಿರಬೇಕು.

ಆ ರಾತ್ರೆ ಎಲೈಜಾ ಗಂಡ ಜೋರ್ಜ್ ಹ್ಯಾರಿಸನು ಬಂದೇ ಬಂದನು. ಎಲೈಜಳ ಸಂತೋಷವನ್ನಂತೂ ಹೇಳತೀರದು.

ಮಾರಣೆಯ ಬೆಳಿಗ್ಗೆ ಜೋರ್ಜ್, ಎಲೈಜಾ, ಸಣ್ಣವನಾದ ಹ್ಯಾರಿಸ್ ಅಡಿಗೆಯ ಮನೆಯೊಳಕ್ಕೆ ಬಂದರು. ದೊರೆಸಾನಿಯೂ ದೊರೆಯೂ ಇವರ ಮಕ್ಕಳೂ ಈ ಮೂವರನ್ನು ಬಹು ಪ್ರೀತಿಯಿಂದ ಅಂಗೀಕರಿಸಿದರು.

ಊಟವು ಸಿದ್ಧವಾದ ತರುವಾಯ ಜೋರ್ಜ್ ಮತ್ತು ಎಲೈಜಾ ತಮ್ಮ ಸಂಗಡ ಮೇಜಿನ ಮೇಲೆಯೇ ಊಟಮಾಡಬೇಕೆಂದು ಹಾಲಿಡೆ

ದೊರೆ, ದೊರೆಸಾನಿಯು ಹೇಳಿದರು. ಬಿಳೀ ಜನರೊಂದಿಗೆ ಅವರ ಸರಿಸಮಾನವಾಗಿ ಕೂತು ಜೋರ್ಜ್ ಊಟಮಾಡಿದುದು ಇದೇ ಮೊದಲನೆಯ ಸಾರಿ. ಮೊದಲು ಸ್ವಲ್ಪ ಸಂಕೋಚಪಟ್ಟನು. ದಯಾರ್ದ್ರಹೃದಯರಾದ ಆ ಭಕ್ತಿಯುಳ್ಳ ಕ್ರೈಸ್ತ ಕುಟುಂಬದವರು ಒತ್ತಾಯಮಾಡಿದುದರಿಂದ ತಮ್ಮ ಸ್ವಂತ ಮನೆಯಲ್ಲಿ ಊಟಮಾಡುವಂತೆಯೇ ನಿರ್ಭಯವಾಗಿಯೂ ಸಂತೋಷವಾಗಿಯೂ ಗಂಡಹೆಂಡರಿಬ್ಬರೂ ತಮ್ಮ ಮಗುವಿನೊಂದಿಗೆ ಊಟಮಾಡಿದರು.

ಊಟವನ್ನು ಮಾಡುವಾಗ ಒಬ್ಬರಿಗೊಬ್ಬರು ಸಂಭಾಷಣೆಯನ್ನು ಮಾಡುತ್ತಿದ್ದರು. ಕಡೆಗೆ ಹಾಲಿಡೆ ದೊರೆಯ ದೊಡ್ಡ ಮಗನು—

ಅಪ್ಪಾ, ಓಡಿಹೋಗುವ ಗುಲಾಮರಿಗೆ ನೀನು ಸಹಾಯಮಾಡುವುದರಲ್ಲಿ ತಿರುಗಿ ಸಿಕ್ಕಿಬಿದ್ದರೆ ಏನು ಮಾಡುವಿ?

ಹಾಲಿಡೆ ದೊರೆ—ಮಗನೇ, ಅವರು ನನಗೆ ಹಾಕುವ ಜುಲ್ಮಾನೆಯನ್ನು ಕೊಡುವೆನು.

ಮಗನು—ಜುಲ್ಮಾನೆಯನ್ನು ಹಾಕದೆ ಬಂದಿಖಾನೆಗೆ ಹಾಕಿದರೆ ಏನು ಮಾಡುವಿ?

ಹಾಲಿಡೆ ದೊರೆ—ನನ್ನನ್ನು ಬಂದಿಖಾನೆಗೆ ಹಾಕಿದರೆ ನೀನೂ ನಿಮ್ಮ ತಾಯಿಯೂ ಹೊಲ ಮನೆಗಳನ್ನು ನೋಡಿಕೊಳ್ಳಲಾರಿರಾ?

ಜೋರ್ಜ್—ಅಯ್ಯಾ, ನಮಗಾಗಿ ನೀವು ಯಾವ ತರವಾದ ಕಷ್ಟಕ್ಕಾಗಲೀ ಗುರಿಯಾಗಬೇಡಿರಿ.

ಹಾಲಿಡೆ ದೊರೆ—ಈ ವಿಷಯದಲ್ಲಿ ನೀನು ಚಿಂತೆಮಾಡಬೇಡ. ಜೋರ್ಜ್, ಒಬ್ಬರಿಗೊಬ್ಬರು ಸಹಾಯಮಾಡುವುದಕ್ಕಾಗಿಯೇ ದೇವರು ನಮ್ಮನ್ನು ಈ ಲೋಕದಲ್ಲಿಟ್ಟಿರುವುದು. ಒಳ್ಳೆಯ ಕಾರ್ಯಕ್ಕಾಗಿ ನಾವು ಕಷ್ಟತೊಂದರೆಗಳನ್ನು ಅನುಭವಿಸಲು ಸಿದ್ಧಮನಸ್ಕರಾಗಿರದಿದ್ದರೆ ನಾವು ಅಯೋಗ್ಯರೆಂದೇ ತಿಳಿದುಕೊಳ್ಳತಕ್ಕದ್ದು.

ಜೋರ್ಜ್—ಆದರೆ, ನನಗಾಗಿ ಅಯ್ಯಾ, ನೀವು ಕಷ್ಟವನ್ನು ಅನುಭವಿಸುವುದನ್ನು ನೋಡಿಕೊಂಡಿರಲು ನನ್ನಿಂದ ಸಾಧ್ಯವಿಲ್ಲ.

ಹಾಲಿಡೆ ದೊರೆ—ಸ್ನೇಹಿತನೇ, ಆ ವಿಷಯವಾದ ನಿನ್ನ ಚಿಂತೆಯನ್ನು ಬಿಡು. ನಿನಗೋಸ್ಕರವೇ ಅಲ್ಲ. ನಾವು ಮಾಡುವುದೆಲ್ಲಾ ದೇವರಿಗಾಗಿಯೂ ಮನುಷ್ಯನಿಗಾಗಿಯೂ ಮಾಡುತ್ತೇವೆ. ಈ ದಿನ ನೀನು ಹೊರಗೆ ಹೋಗ ಬೇಡ. ರಾತ್ರೆ ಹತ್ತು ಗಂಟೆಗೆ ಫಿನಿಯಾಸ್ ಫ್ಲೆಚರ್ ನಿಮ್ಮನ್ನೂ ಇತರ ಗುಲಾಮರನ್ನೂ ಮುಂದಿನ ಊರಿಗೆ ಕರೆದುಕೊಂಡುಹೋಗುತ್ತಾನೆ. ನಿಮ್ಮನ್ನು ಹಿಡಿಯುವುದಕ್ಕೆ ಬಹಳ ಪ್ರಯತ್ನ ನಡೆಯುತ್ತಿದೆ. ನಾವು ನಿಧಾನಿಸಬಾರದು.

ಜೋರ್ಜ್—ಹಾಗಾದರೆ, ನಾವು ರಾತ್ರೆಯ ವರೆಗೂ ಏಕೆ ಕಾದಿರ ಬೇಕು ?

ಹಾಲಿಡೆ ದೊರೆ—ಹಗಲಿನಲ್ಲಿ ನೀವು ಸುರಕ್ಷಿತವಾಗಿ ಇಲ್ಲಿರಬಹುದು. ಯಾಕೆಂದರೆ ಈ ಊರಿನಲ್ಲಿರುವ ಪ್ರತಿಯೊಬ್ಬರನ್ನು ಸ್ನೇಹಿತರೆಂದೇ ತಿಳಿಯ ಬೇಕು. ಎಲ್ಲರೂ ನಿಮಗೆ ಯಾವ ತೊಂದರೆಯೂ ಆಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದಾರೆ. ಹೇಗೂ ರಾತ್ರೆಯ ಹೊತ್ತು ಪ್ರಯಾಣಮಾಡು ವುದು ಒಳ್ಳೆಯದು. ಅಷ್ಟು ಗಂಡಾಂತರವಾದುದಲ್ಲ ಅಂದನು.

ಆ ದಿನ ಮಧ್ಯಾಹ್ನ ಜೋರ್ಜ್ ತನ್ನ ಹೆಂಡತಿ ಮತ್ತು ಮಗ ನೊಂದಿಗೆ ಅವರು ಮಲಗುವುದಕ್ಕೆ ಕೊಟ್ಟಿದ್ದ ಕೊಠಡಿಯಲ್ಲಿ ಕೂತಿರುವಾಗ ಬಾಗಿಲು ತಟ್ಟಿದಂತಾಯಿತು. ಎಲ್ಯೆಜಾ ಹೋಗಿ ಬಾಗಿಲು ತೆರೆದಳು. ಹಾಲಿಡೆ ದೊರೆಯು ಮತ್ತೊಬ್ಬ ಕ್ರೈಸ್ತನನ್ನು ಒಳಕ್ಕೆ ಕರೆದುಕೊಂಡು ಬಂದು ಈತನೇ ಫಿನಿಯಾಸ್ ಫ್ಲೆಚರ್ ಎಂದು ಜೋರ್ಜಿಗೆ ಪರಿಚಯ ಮಾಡಿಸಿದನು.

ಹಾಲಿಡೆ ದೊರೆ—ಜೋರ್ಜ್, ಈ ನಮ್ಮ ಸ್ನೇಹಿತನು ನಿಮಗೆ ಉಪ ಯೋಗವಾಗಿರುವಂತಹ ಒಂದು ಗುಟ್ಟು ಸಂಗತಿಯನ್ನು ತಿಳಿದುಕೊಂಡು ಬಂದಿದ್ದಾನೆ. ಆ ಸಂಗತಿಯನ್ನು ನೀನು ಕೇಳಿದರೆ ಒಳ್ಳೇದೆಂದು ನೆನಸುತ್ತೇನೆ ಅಂದನು.

ಅಧ್ಯಾಯ ೭

ಎಲ್ಶೈಜಾಳನ್ನು ಹಿಡಿಯುವ ಏರ್ಪಾಡು

ಫಿನಿಯಸನು—ನೆನ್ನೆ ರಾತ್ರೆ ನಾನು ಒಂದು ಛತ್ರದಲ್ಲಿ ಇಳಿದು ಕೊಂಡಿದ್ದೆನು. ಬೆಳಗಿನಿಂದ ಸಾಯಂಕಾಲದ ವರೆಗೂ ಬಂಡಿ ಹೊಡೆದು ಆಯಾಸವಾಗಿದ್ದಿತು. ಊಟಮಾಡಿ ನನ್ನ ಹಾಸಿಗೆಯು ಇನ್ನೂ ಹಾಸಿರ ಲಿಲ್ಲವಾದುದರಿಂದ, ಹಾಸಿಗೆ ಸಿದ್ಧವಾಗುವ ವರೆಗೂ ಒಂದು ಮೂಲೆಯಲ್ಲಿದ್ದ ಚೀಲಗಳ ಮೇಲೆ ಕಾಲುಚಾಚಿಕೊಂಡು ಮಲಗಿದ್ದೆನು. ತಕ್ಷಣವೇ ನಿದ್ರೆ ಹತ್ತಿತು. ಬಹಳ ಹೊತ್ತು ನಿದ್ರೆ ಮಾಡಿದ ಮೇಲೆ ನಾನು ಮಲಗಿದ್ದ ಕೊಠಡಿ ಯೊಳಗೆ ಜನರು ಗಟ್ಟಿಯಾಗಿ ಮಾತಾಡುತ್ತಿದ್ದುದರಿಂದ ನನಗೆ ಎಚ್ಚರಿಕೆ ಯಾಯಿತು. ಅಲ್ಲಿ ಒಂದು ಮೇಜಿಯು ಇದ್ದಿತು. ಅದರ ಸುತ್ತಲೂ ಕೆಲವರು ಕೂತು ಸಾರಾಯಿಯನ್ನು ಕುಡಿಯುತ್ತಾ ಮುಂದಿನ ಏರ್ಪಾಡುಗಳ ವಿಷಯದಲ್ಲಿ ಮಾತಾಡುತ್ತಿದ್ದರು. ಕ್ವೇಕರ ವಿಷಯದಲ್ಲಿ ಏನೋ ಪ್ರಸ್ತಾಪ ಮಾಡುತ್ತಿದ್ದರು. ಇವರು ಏನು ಮಾತಾಡಿಕೊಳ್ಳುತ್ತಾರೋ ಕೇಳಿಸಿ ಕೊಳ್ಳೋಣವೆಂದು ಕಣ್ಣುಮುಚ್ಚಿಕೊಂಡು ನಿದ್ರೆಮಾಡುವವನಂತೆ ಇದ್ದೆನು. ಅವರು ತಪ್ಪಿಸಿಕೊಂಡು ಓಡಿಬಂದಿರುವ ನಿಮ್ಮ ವಿಷಯದಲ್ಲಿಯೇ ಮಾತಾಡುತ್ತಿದ್ದರು. ಮುಂದೆ ಅವರು ಮಾಡಬೇಕೆಂದು ಆಲೋಚಿಸಿದ ಕೆಲಸಕಾರ್ಯಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡೆನು. ಇಲ್ಲಿರುವ ಈ ಹ್ಯಾರಿಸನನ್ನು ಹಿಡಿದು ಕೆಂಟಕೀಯಲ್ಲಿರುವ ಅವನ ಹಿಂದಿನ ಯಜಮಾನನ ಬಳಿಗೆ ಕಳುಹಿಸುತ್ತಾರಂತೆ. ಇದರಿಂದ ಇತರ ಗುಲಾಮರು ಓಡಿಹೋಗ ದಂತೆ ಎಚ್ಚರಿಕೆ ಕೊಟ್ಟಂತಾಗುತ್ತದಂತೆ. ಅವರಲ್ಲಿ ಇಬ್ಬರು ಎಲ್ಶೈಜಾ ವಿಷಯದಲ್ಲಿ ಮಾತಾಡುತ್ತಾ ಆಕೆಯನ್ನು ದೂರದೇಶಕ್ಕೆ ಮಾರುತ್ತಾರೆ. ಆಕೆಯನ್ನು ಐವತ್ತುನಾಲ್ಕು ಸಾವಿರರೂಪಾಯಿಗೆ ಮಾರಿ, ಆ ಹಣವನ್ನು ತಮ್ಮಲ್ಲಿ ಹಂಚಿಕೊಳ್ಳುವಂತೆ ಮಾತಾಡಿಕೊಂಡರು. ಈ ಮಗುವನ್ನು ಮೊದಲು ಯಾರು ಕೊಂಡುಕೊಂಡರೋ ಆತನ ಬಳಿಗೆ ಕಳುಹಿಸುತ್ತಾರೆ. ಜಿಮ್ ಮತ್ತು ಮುದುಕಿಯಾದ ಅವನ ತಾಯಿಯನ್ನು ಕೆಂಟಕೀಯಲ್ಲಿರುವ

ಅವರ ಯಜಮಾನರ ಬಳಿಗೆ ಕಳುಹಿಸುತ್ತಾರೆ. ಯಾವುದೋ ಒಂದು ಊರಿನಲ್ಲಿ ಇಬ್ಬರು ಪೊಲೀಸ್ ಜವಾನರು ಇವರಿಗೆ ಸಹಾಯಮಾಡುವುದಾಗಿ ಮಾತು ಕೊಟ್ಟಿದ್ದಾರೆಂದು ತಿಳಿದುಬರುವುದು. ಎಲೈಜಾಳನ್ನು ನ್ಯಾಯಾಧಿಪತಿಯ ಬಳಿಗೆ ಕರೆದುಕೊಂಡುಹೋಗುತ್ತಾರೆ. ನ್ಯಾಯಾಧಿಪತಿಯ ಮುಂದೆ ಅವರಲ್ಲಿ ಒಬ್ಬನು ಎಲೈಜಾಳು ತನ್ನ ಸೊತ್ತೆಂದು ಪ್ರಮಾಣ ಮಾಡಿ, ನ್ಯಾಯಾಧಿಪತಿಯ ಅಪ್ಪಣೆಯಿಂದ ದೂರದೇಶಕ್ಕೆ ಕರೆದುಕೊಂಡು ಹೋಗುತ್ತಾನಂತೆ ಎಂದು ಹೇಳಿದನು.

ಈತನ ಮಾತುಗಳನ್ನು ಕೇಳಿ ಎಲೈಜಾಗೆ ಬಹಳ ಭಯವಾಗಿ—ಈಗ ಏನು ಮಾಡೋಣ, ಜೋರ್ಜ್. ಇಂತಹ ಗಂಡಾಂತರದಲ್ಲಿ ಸಿಕ್ಕಿಬಿದ್ದೆವಲ್ಲಾ ! ಅಂದಳು.

ಜೋರ್ಜ್ ತನ್ನ ಪಿಸ್ಟೋಲ್‌ಗಳನ್ನು (ಸಣ್ಣ ತುಬಾಕಿ) ಕೈಯಲ್ಲಿ ಹಿಡಿದುಕೊಂಡು ಅವು ಸರಿಯಾಗಿವೆಯೋ ಇಲ್ಲವೋ ಎಂದು ಪರೀಕ್ಷಿಸುತ್ತಾ ಹೆಂಡತಿಯ ಕಡೆಗೆ ನೋಡಿ—ಏನು ಮಾಡಬೇಕೆಂದು ನನಗೆ ಗೊತ್ತೇ ಇದೆ. ಭಯಪಡುವುದೇಕೆ? ಅಂದನು.

ಫಿನಿಯಾಸನು (ತಲೆದೂಗುತ್ತಾ)—ಹಾಲಿಡೆ ದೊರೆಯನ್ನು ನೋಡಿ ತಿಳಿದುಕೊಂಡಿರಾ ಮುಂದೆ ಏನಾಗುವುದೆಂದು? ಅಂದನು. ಶಾಂತ ಸ್ವಭಾವದವನಾದ ಹಾಲಿಡೆ ದೊರೆಯು ನಿಟ್ಟುಸಿರಿಡುತ್ತಾ—ತಿಳಿದು ಕೊಂಡೆನು ಏನಾಗುವುದೆಂದು. ಆದರೆ ಅಂತಹ ಸಂಗತಿಯು ಸಂಭವಿಸ ಬಾರದೆಂದು ನಾನು ದೇವರಿಗೆ ಪ್ರಾರ್ಥಿಸುತ್ತೇನೆ.

ಜೋರ್ಜ್—ಯಾರಾದರೂ ನರಿಯೆ ನನ್ನೊಂದಿಗೆ ಅಥವಾ ನನಗಾಗಿ ತೊಂದರೆಯನ್ನನುಭವಿಸುವುದು ನನಗೆ ಇಷ್ಟವಿಲ್ಲ. ನೀವು ನಿಮ್ಮ ಬಂಡಿಯನ್ನೂ ಕುದುರೆಗಳನ್ನೂ ದಯಮಾಡಿ ಕೊಟ್ಟು, ಯಾವ ದಾರಿಯಲ್ಲಿ ಹೋಗಬೇಕೆಂದು ಹೇಳಿದರೆ ಮುಂದಿನ ಊರಿಗೆ ನಾನು ಇವರೆಲ್ಲರನ್ನು ಕರೆದುಕೊಂಡುಹೋಗುತ್ತೇನೆ. ಜಿಮ್ ಬಲದಲ್ಲಿಯೂ ಧೈರ್ಯದಲ್ಲಿಯೂ ರಾಕ್ಷಸನಿಗೆ ಸಮಾನನು. ನಾನು ಸಹ ಅವನಂತಹವನೇ.

ಫಿನಿಯಾಸನು—ಜೋರ್ಜ್, ನೀನು ಹೇಳುವುದೆಲ್ಲಾ ನಿಜವೆ. ಆದರೆ ಗಾಡಿಯನ್ನು ನಡೆಸುವವನೊಬ್ಬನು ನಿನಗೆ ಬೇಕು. ನಿನ್ನ ಮನಸ್ಸಿಗೆ

ಬಂದಂತೆ ಹೊಡೆದಾಡು, ನಾನು ಬೇಡವೆನ್ನುವುದಿಲ್ಲ. ದಾರಿಯು ಮಾತ್ರ ನಿನಗೆ ಗೊತ್ತಿಲ್ಲ. ನನಗೆ ಚೆನ್ನಾಗಿ ಗೊತ್ತಿದೆ.

ಹಾಲಿಡೆ ದೊರೆಯು—ಫಿನಿಯಾಸನು ಬುದ್ಧಿವಂತನು, ಬಲಿಷ್ಠನು. ಜೋರ್ಜನ ಭುಜದ ಮೇಲೆ ಕೈಯನ್ನು ಇಟ್ಟುಕೊಂಡು—ನೀನು ಅವನು ಹೇಳಿದಂತೆ ಮಾಡಿದರೆ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ. ನೀನು ಇನ್ನೂ ಪ್ರಾಯದವನು. ನಿನ್ನ ಶರೀರದಲ್ಲಿರುವ ರಕ್ತವು ಉಕ್ಕುತ್ತಾ ಇದೆ. ಇಂತಹ ಸಂಗತಿಗಳಲ್ಲಿ ಆತುರಪಡುವುದರಿಂದ ಕೇಡು ಉಂಟಾಗುವುದು ಅಂದನು.

ಜೋರ್ಜ್—ನಾನು ಕಾರಣವಿಲ್ಲದೆ ಒಬ್ಬರ ಮೇಲಾದರೂ ಕೈಮಾಡುವುದಿಲ್ಲ. ನನ್ನನ್ನು ಮಾತ್ರ ಒಬ್ಬರೂ ಕೆಣಕಬಾರದು. ಇದೇ ನನಗೆ ಬೇಕಾಗಿರುವುದು. ಸಮಾಧಾನದಿಂದ ಕೆನಡಾ ದೇಶಕ್ಕೆ ಹೋಗಬೇಕೆಂಬುವುದೇ ನನ್ನ ಅಪೇಕ್ಷೆಯು. ನನಗೆ ಒಬ್ಬ ತಂಗಿಯು ಇದ್ದಳು. ಆಕೆಯನ್ನು ದೂರದೇಶದಲ್ಲಿ ಮಾರಿದರು. ಆಕೆಯನ್ನು ಯಾಕೆ ಮಾರಿದರೆಂದು ನನಗೆ ಗೊತ್ತಿದೆ. ಬಲವಾಗಿರುವ ಎರಡು ಕೈಗಳನ್ನು ದೇವರು ನನಗೆ ಕೊಟ್ಟಿರುವಾಗ ನನ್ನ ಕಣ್ಣಿನ ಮುಂದೆ ನನ್ನ ಪ್ರಿಯ ಹೆಂಡತಿಯನ್ನೂ ಮಗುವನ್ನೂ ಮಾರುವಾಗ ನೋಡಿಕೊಂಡು ಸುಮ್ಮನಿರಲೇ ? ಇಲ್ಲ, ಎಂದಿಗೂ ಸುಮ್ಮನಿರುವುದಕ್ಕಾಗುವುದಿಲ್ಲ. ದೇವರು ನನಗೆ ಸಹಾಯಮಾಡುತ್ತಾನೆಂದು ನನಗೆ ಪೂರ್ಣ ನಂಬಿಕೆಯು ಇದೆ. ನನ್ನ ಮೂಗಿನಲ್ಲಿ ಉಸಿರಾಡುವವರೆಗೂ ನನ್ನ ಪ್ರಿಯ ಹೆಂಡತಿಯನ್ನೂ ಮಗುವನ್ನೂ ಅವರು ಹಿಡಿದುಕೊಂಡುಹೋಗದಂತೆ ನನ್ನ ಜೀವಾಂತ್ಯದ ವರೆಗೂ ಹೊಡೆದಾಡುವೆನು. ಇದರಲ್ಲಿ ನನ್ನ ತಪ್ಪೇನಿದೆ?

ಹಾಲಿಡೆ ದೊರೆ—ಮನುಷ್ಯ ಮಾತ್ರದವನು ಇಂತಹ ಸಂದರ್ಭದಲ್ಲಿ ನಿನ್ನಲ್ಲಿ ತಪ್ಪಿದೆಯೆಂದು ಎಂದಿಗೂ ಹೇಳುವುದಿಲ್ಲ. ನೀನು ಹೇಳಿದಂತೆ ಮಾಡಲೇ ಬೇಕಾಗಿದೆ. ಫಿನಿಯಾಸನು ತನ್ನ ಉದ್ದವಾದ ಕೈಗಳನ್ನು ಚಾಚಿ ತೋರಿಸುತ್ತಾ—ಜೋರ್ಜ್, ನನ್ನ ಸ್ನೇಹಿತನೇ, ನೀನು ಮಾಡಬೇಕೆಂದು ಕೋರುವ ಕೆಲಸವನ್ನು ಮಾಡಿ ಪೂರೈಸುವ ವರೆಗೂ ಆ ದುಷ್ಟರಲ್ಲಿ ಒಬ್ಬ

ನನ್ನು ನಾನು ಈ ನನ್ನ ಬಲವಾದ ತೋಳಿನಿಂದ ಬಿಗಿದು ಹಿಡಿದುಕೊಂಡಿರುತ್ತೇನೆ ಅಂದನು.

ಹಾಲಿಡೆ ದೊರೆಸಾನಿಯು (ನಗುಮುಖವನ್ನು ಮಾಡಿಕೊಂಡು)—ಸ್ನೇಹಿತನಾದ ಫಿನಿಯಾಸನು ತನ್ನ ಮನಸ್ಸಿಗೆ ತೋರಿದಂತೆ ಮಾಡುವುದೇ ಆತನಿಗೆ ಇಷ್ಟ. ಆದರೂ ಆತನು ಗುಣಶಾಲಿಯೆಂದು ನಮ್ಮೆಲ್ಲರಿಗೂ ತಿಳಿದೇ ಇದೆ.

ಜೋರ್ಜ್—ನಾವು ಬೇಗನೆ ಇಲ್ಲಿಂದ ಹೊರಟರೆ ಒಳ್ಳೇದಲ್ಲವೇ ?

ಫಿನಿಯಾಸನು (ತಲೆದೂಗುತ್ತಾ)—ನಾನು ನಾಲ್ಕು ಗಂಟೆಗೆ ಎದ್ದು ಅವರು ಹೊರಡಬೇಕೆಂದು ಮಾತಾಡಿಕೊಂಡಿದ್ದ ಸಮಯಕ್ಕೆ ಎರಡು-ಮೂರು ಗಂಟೆ ಹೊತ್ತಿಗೆ ಮುಂಚೆಯೇ ಹೊರಟು, ಅವರಿಗಿಂತ ಮುಂಚಿತವಾಗಿ ನನ್ನ ಕೈಲಾದಷ್ಟು ಬೇಗ ಬಂದೆನು. ಅದು ಹೇಗಾದರೂ ಇರಲಿ ಕತ್ತಲಾಗುವುದಕ್ಕೆ ಮುಂಚೆ ಹೊರಡುವುದು ಒಳ್ಳೇದಲ್ಲ. ಆದರೂ ಇನ್ನು ಎರಡು-ಮೂರು ಗಂಟೆಗಳ ಕಾಲದಲ್ಲಿ ನಾವು ಹೊರಡಲು ಪ್ರಯತ್ನಿಸಬಹುದು. ನಾನು ಈಗಲೇ ನನ್ನ ಒಬ್ಬ ಸ್ನೇಹಿತನ ಬಳಿಗೆ ಹೋಗಿ ನಮ್ಮ ಬಂಡಿಯ ಹಿಂದುಗಡೆ ವೇಗವಾಗಿ ಓಡುವ ತನ್ನ ಕುದುರೆಯ ಮೇಲೆ ಬರುವಂತೆಯೂ ನಮ್ಮ ಶತ್ರುಗಳೇನಾದರೂ ಸಮೀಪವಾಗಿ ಬರುತ್ತಿದ್ದರೆ ನಮಗೆ ಎಚ್ಚರಕೊಡುವಂತೆಯೂ ಹೇಳಿ ಬರುತ್ತೇನೆ. ಆತನ ಕುದುರೆಯು ಬಹಳ ವೇಗವುಳ್ಳದ್ದು. ಸಮಯಕ್ಕೆ ಸರಿಯಾಗಿ ಆತನು ನಮ್ಮ ಸಮೀಪ ಬಂದು ಎಚ್ಚರಕೊಡಲು ಆಗದಿದ್ದರೆ ತನ್ನ ತುಪಾಕಿಯನ್ನ ಹಾರಿಸಲಿ. ಆ ಶಬ್ದದಿಂದ ಅಪಾಯವುಂಟೆಂದು ನಾವು ತಿಳಿದು ಎಚ್ಚರಿಕೆ ತೆಗೆದುಕೊಳ್ಳಬಹುದು. ನಾನು ಈಗ ಹೋಗಿ ಜಿಮ್ ಮತ್ತು ಅವನ ತಾಯಿಯು ಸಿದ್ಧವಾಗಿರುವಂತೆ ಹೇಳಿ ಕುದುರೆಗಳಿಗೆ ಸ್ವಲ್ಪ ಮೇವನ್ನು ಹಾಕಿ ಅವುಗಳ ಮೈ ಒರಸುತ್ತೇನೆ. ನಾವು ತಕ್ಕ ಸಮಯದಲ್ಲಿಯೇ ಹೊರಡುತ್ತೇವೆ. ಅವರು ನಮ್ಮನ್ನು ಕೂಡಿಕೊಳ್ಳುವುದಕ್ಕಿಂತ ಮುಂಚೆಯೇ ನಾವು ಮುಂದಿನ ಊರಿಗೆ ಹೋಗಿ ಸೇರಿಕೊಳ್ಳುತ್ತೇವೆ. ಆದುದರಿಂದ ಸ್ನೇಹಿತನಾದ ಜೋರ್ಜ್, ಧೈರ್ಯವಾಗಿರು. ನಿಮ್ಮಂತಹವರಿಗೆ ಸಹಾಯಮಾಡು

ವುದು ಇದೇ ಮೊದಲನೆಯ ಸಾರಿಯಲ್ಲ ಎಂದು ಹೇಳಿ, ಬಾಗಿಲು ಮುಚ್ಚಿಕೊಂಡು ಹೊರಟುಹೋದನು.

ಇಷ್ಟರಲ್ಲಿ ಹಾಲಿಡೆ ದೊರೆಸಾನಿಯು ಊಟವನ್ನು ಸಿದ್ಧಮಾಡಿದ್ದಳು. ಜೋರ್ಜ್ ಮತ್ತು ಎಲೈಜಾ ಅವಸರವಸರವಾಗಿ ಊಟಾ ತೀರಿಸಿಕೊಂಡರು. ಸ್ವಲ್ಪ ಕತ್ತಲಾದ ಕೂಡಲೆ ನಾಲ್ಕು ಚಕ್ರದ ಒಂದು ದೊಡ್ಡ ಕುದುರೆಯ ಗಾಡಿಯು ಬಾಗಿಲಿನ ಬಳಿಗೆ ಬಂದು ನಿಂತಿತು.

ಗಾಡಿಯನ್ನು ಹತ್ತುವುದಕ್ಕೆ ಮುಂಚೆ—ನಿನ್ನ ತುಪಾಕಿಗಳನ್ನು ಸಿದ್ಧಮಾಡಿಟ್ಟುಕೊಂಡಿದ್ದೀಯಾ ಎಂದು ಜೋರ್ಜನು ಜಿಮ್‌ನನ್ನು ಕೇಳಲು ಸಿದ್ಧವಾಗಿವೆ ಎಂದು ಹೇಳಿದನು.

ಅವರು ಬಂದಾಗ ಏನು ಮಾಡಬೇಕೆಂದು ನಿನಗೆ ಗೊತ್ತಿದೆಯೋ? ಗೊತ್ತಿಲ್ಲದೇನು? ನನ್ನ ತಾಯಿಯನ್ನು ತಿರುಗಿ ಹಿಡಿದುಕೊಂಡುಹೋಗುವವರನ್ನು ಸುಮ್ಮನೆ ಬಿಡುತ್ತೇನೆಂದು ನೆನಸಿದೆಯಾ?

ಇಷ್ಟರಲ್ಲಿ ಎಲ್ಲಾ ಸಿದ್ಧವಾಯಿತು. ಜೋರ್ಜ್, ಎಲೈಜಾ ಮೊದಲಾದವರು ಹಾಲಿಡೆ ದೊರೆ ದೊರಸಾನಿಯವರ ಅಪ್ಪಣೆಯನ್ನು ಪಡೆದು ಗಾಡಿಯಲ್ಲಿ ಕೂತು ಹೊರಟುಹೋದರು.

ಅಧ್ಯಾಯ ೮

ಜೋರ್ಜನು ಗಂಡಾಂತರದಿಂದ ತಪ್ಪಿಸಿಕೊಂಡದ್ದು

ರಸ್ತೆಯು ಒಳ್ಳೆಯ ರಸ್ತೆಯಲ್ಲ. ಫಿನಿಯಾಸನೂ ಆ ರಸ್ತೆಯ ಮೇಲೆಯೇ ಗಾಡಿಯನ್ನು ಉಪಾಯದಿಂದ ನಡೆಸಿಕೊಂಡುಹೋದನು. ಚಿಕ್ಕ ಹ್ಯಾರಿಗೆ ನಿದ್ರೆಬಂದು ತಾಯಿ ತೊಡೆಯ ಮೇಲೆ ಮಲಗಿಬಿಟ್ಟನು. ಭಯಪೀಡಿತಳಾಗಿದ್ದ ಜಿಮ್ಮನ ತಾಯಿಯು ನಿದ್ರಾಭಾರದಿಂದ ತನ್ನ ಭಯವನ್ನು ಮರೆತು ಮಲಗಿಬಿಟ್ಟಳು. ಚಿಂತೆಯಿಂದಲೂ ಭಯದಿಂದಲೂ ಪೀಡಿತಳಾಗಿದ್ದ ಎಲೈಜಾ ಸಹ ತೂಕಡಿಸುವುದಕ್ಕೆ ಆರಂಭಿಸಿದಳು. ಆದರೆ ಗಂಡಸರೆಲ್ಲರೂ ಎಚ್ಚರವಾಗಿಯೇ ಇದ್ದರು.

ಸುಮಾರು ರಾತ್ರಿ ಮೂರು ಗಂಟೆಯ ಸಮಯದಲ್ಲಿ ಹಿಂದೆ ಸ್ವಲ್ಪ ದೂರದಲ್ಲಿ ಕುದುರೆಯು ವೇಗವಾಗಿ ನಡೆಯುವ ಪಾದಗಳ ಶಬ್ದವು ಜೋರ್ಜನ ಕಿವಿಗೆ ಬಿದ್ದಿತು. ಫಿನಿಯಾಸನ ಮೊಣಕೈಯನ್ನು ಮುಟ್ಟಿ ಅವನಿಗೆ ಸೂಚನೆ ಕೊಟ್ಟನು. ಫಿನಿಯಾಸನು ಓಡುತ್ತಿದ್ದ ಕುದುರೆಗಳನ್ನು ನಿಲ್ಲಿಸಿ ಕಿವಿಗೊಟ್ಟು ಶಬ್ದವನ್ನು ಕೇಳಿಸಿಕೊಂಡು ನನ್ನ ಸ್ನೇಹಿತನು ಬರುತ್ತಿರಬೇಕು ಎಂದು ಹೇಳಿ ಎದ್ದು ನಿಂತು ಹಿಂದಿರುಗಿ ರಸ್ತೆಯ ಕಡೆಗೆ ನೋಡಿದನು.

ದೂರದಲ್ಲಿದ್ದ ಒಂದು ದಿನ್ನೆಯ ಮೇಲೆ ಒಬ್ಬ ಮನುಷ್ಯನು ಕುದುರೆಯನ್ನು ಬಹು ವೇಗವಾಗಿ ಓಡಿಸಿಕೊಂಡು ಬರುತ್ತಿರುವಂತೆ ಮಂಜಾಗಿ ಕಾಣಿಸಿತು.

ಫಿನಿಯಾಸನು—ಅಗೋ, ಅವನೇ ಎಂದು ನಂಬುತ್ತೇನೆ ಎಂದು ಕೂಗಿಕೊಂಡನು.

ಜೋರ್ಜನೂ ಜಿಮ್ಮನೂ ತಾವು ಏನು ಮಾಡಬೇಕೆಂದು ತಿಳಿದುಕೊಳ್ಳುವುದಕ್ಕೆ ಮುಂಚಿತವಾಗಿ ಟಣ್ಣನೆ ಗಾಡಿಯಿಂದ ದುಮುಕಿದರು. ದೂರದಲ್ಲಿ ಬರುತ್ತಿರುವವನ ಕಡೆಯೇ ನೋಡುತ್ತಾ ಎಲ್ಲರೂ ನಿಶ್ಶಬ್ದವಾಗಿ ನಿಂತುಕೊಂಡರು. ಕಡೆಗೆ ಅವನು ಸಮೀಪಕ್ಕೇ ಬಂದನು.

ಫಿನಿಯಾಸನು—ಹೌದು. ಅವನು ನನ್ನ ಸ್ನೇಹಿತನೇ ಅಂದು, ಹೋ . . . ನೀನೇನೋ ಎಂದು ಶಬ್ದವೆತ್ತಿ ಕೂಗಿದನು.

ಸ್ನೇಹಿತನು—ಫಿನಿಯಾಸ್, ನೀನೋ ಕರೆದದ್ದು ?

ಫಿನಿಯಾಸನು—ಹೌದು, ಏನು ಸಮಾಚಾರ? ಅವರು ಬರುತ್ತಿದ್ದಾರೋ ?

ಸ್ನೇಹಿತನು—ಹೌದು, ಸ್ವಲ್ಪ ದೂರದಲ್ಲಿಯೇ ಬರುತ್ತಿದ್ದಾರೆ. ಎಂಟು-ಹತ್ತು ಮಂದಿ ಇದ್ದಾರೆ. ಎಲ್ಲರೂ ಕುಡಿದು ನಿಶಾ ಆಗಿ ಬೈದಾಡಿಕೊಂಡು ತೋಳಗಳಂತೆ ಬಾಯಿಯಲ್ಲಿ ನೊರೆ ಸುರಿಸುತ್ತಾ ಬರುತ್ತಿದ್ದಾರೆ ಎಂದು ಹೇಳುತ್ತಿರುವಾಗ ಅವರು ಬರುತ್ತಿರುವ ಕಡೆಯಿಂದ ಘಾಳಿಯು ನಿಧಾನವಾಗಿ ಬೀಸಿತು. ಕುದುರೆಗಳ ಪಾದಧ್ವನಿಯು ಸ್ವಲ್ಪ ಸ್ವಲ್ಪವಾಗಿ ಕೇಳಿಬಂದಿತು.

ಫಿನಿಯಾಸನು—ಜೇಗನೆ ಗಾಡಿಯನ್ನು ಹತ್ತಿ ಕೂತುಕೊಳ್ಳಿರಿ. ನೀವು ಅವರೊಂದಿಗೆ ಹೊಡದಾಡಬೇಕಾದರೆ, ನಾನು ನಿಮಗೆ ಅನುಕೂಲವಾದ ಒಂದು ಸ್ಥಳವನ್ನು ತೋರಿಸುತ್ತೇನೆ. ಅದು ಇಲ್ಲಿಗೆ ಕೇವಲ ಸಮೀಪ ದಲ್ಲಿಯೇ ಇದೆ.

ಜೋರ್ಜನೂ ಜಿಮ್ಮನೂ ಗಾಡಿಯೊಳಗೆ ಕೂತುಕೊಂಡರು. ಫಿನಿಯಾಸನು ಕೊರಡೆಯಿಂದ ಕುದುರೆಗಳಿಗೆ ಒಂದು ಪೆಟ್ಟು ಕೊಟ್ಟ ಕೂಡಲೇ ಅವು ಬಹು ವೇಗವಾಗಿ ಓಡುವುದಕ್ಕೆ ಪ್ರಾರಂಭಿಸಿದುವು. ಕುದುರೆಯ ಮೇಲೆ ಬರುತ್ತಿದ್ದ ಸ್ನೇಹಿತನು ಗಾಡಿಯ ಹಿಂದೆ ತನ್ನ ಕುದುರೆಯನ್ನು ಓಡಿಸಿಕೊಂಡು ಬಂದನು. ಗಾಡಿಯು ಆ ರಸ್ತೆಯ ಮೇಲೆ ಹೋಗುವದನ್ನು ನೋಡಿದರೆ ಪಕ್ಷಿಯು ಹಾರುತ್ತಿದೆಯೋ ಎನ್ನುವಂತಿದ್ದಿತು. ಬರಬರುತ್ತಾ ಹಿಂದಟ್ಟಿಕೊಂಡು ಬರುವವರ ಕುದುರೆಗಳು ಓಡುವ ಶಬ್ದವು ಸ್ಪಷ್ಟವಾಗಿ ಕೇಳಿ ಬರುತ್ತಿದ್ದಿತು. ಇಷ್ಟರಲ್ಲಿ ಬಾಲಸೂರ್ಯನ ಕಿರಣಗಳೂ ಪ್ರಕಾಶಿಸುವುದಕ್ಕೆ ಪ್ರಾರಂಭಿಸಲು ದೂರದಲ್ಲಿ ಬರುತ್ತಿದ್ದ ಜನರ ಒಂದು ಗುಂಪು ಕಾಣಿಸಿತು. ಹಿಂದಟ್ಟಿಕೊಂಡು ಬರುವವರ ದೃಷ್ಟಿಗೆ ಗಾಡಿಯು ಬಿದ್ದಾಕ್ಷಣ "ಕಡೆಗೆ ಸಿಕ್ಕಿದಿರಾ" ಎಂದು ಸಂತೋಷದಿಂದ ಕೂಗಿದ ಜಯಘೋಷವು ಗಾಡಿಯಲ್ಲಿರುವವರಿಗೆ ಕೇಳಿಸಿತು.

ಎಲೈಜಾ ತನ್ನ ಮಗುವನ್ನು ಎದೆಗೆ ಒತ್ತಿ ಹಿಡಿದುಕೊಂಡಳು. ಮುದುಕಿಯು ಪ್ರಾರ್ಥಿಸಿದಳು, ನಿಟ್ಟುಸಿರುಬಿಡುತ್ತಿದ್ದಳು. ಜೋರ್ಜ್ ಮತ್ತು ಜಿಮ್ ಇಬ್ಬರೂ ನಿರಾಶೆಯುಳ್ಳವರಾಗಿ ತಮ್ಮ ತುಪಾಕಿಗಳನ್ನು ಕೈಗಳಲ್ಲಿ ಬಲವಾಗಿ ಹಿಡಿದುಕೊಂಡರು.

ಗಾಡಿಯು ಒಂದು ಮೂಲೆಗೆ ತಿರುಗಿತು. ಹಿಮ್ಮೆಟ್ಟುತ್ತಿದ್ದವರು ಬರಬರುತ್ತಾ ಬಹಳ ಸಮೀಪಕ್ಕೇ ಬರುತ್ತಿದ್ದರು. ಗಾಡಿಯಲ್ಲಿದ್ದವರಿಗೆ ಒಂದು ಕಡಿದಾದ ಗುಡ್ಡವು ಕಣ್ಣಿಗೆ ಬತ್ತು. ಈ ಗುಡ್ಡಕ್ಕೆ ಬಂದು ಮುಟ್ಟಬೇಕೆಂಬ ಉದ್ದೇಶದಿಂದಲೇ ಫಿನಿಯಾಸನು ಕುದುರೆಗಳನ್ನು ಅಷ್ಟು ವೇಗವಾಗಿ ಓಡಿಸಿದ್ದು.

ಈ ಗುಡ್ಡದ ಹತ್ತಿರಕ್ಕೆ ಬಂದ ಕೂಡಲೇ ಕುದುರೆಗಳನ್ನು ನಿಲ್ಲಿಸಿ

ಫಿನಿಯಾಸನು ಗಾಡಿಯಿಂದ ಕೆಳಕ್ಕೆ ದುಮುಕಿ—ಓಡಿ ಬನ್ನಿರಿ, ಪ್ರತಿಯೊಬ್ಬರು ನನ್ನ ಸಂಗಡಲೇ ಈ ಬಂಡೆಗಳ ಮೇಲೆ ಹತ್ತಿಬನ್ನಿರಿ. ಸ್ನೇಹಿತನೇ, ನೀನು ನಿನ್ನ ಕುದುರೆಯನ್ನು ಗಾಡಿಯ ಹಿಂದೆ ಕಟ್ಟಿ ಗಾಡಿಯನ್ನು ಓಡಿಸಿಕೊಂಡು ಮುಂದಿನ ಊರಿಗೆ ಹೋಗಿ ನಮ್ಮ ಸಹಾಯಕ್ಕಾಗಿ ಕೆಲವರನ್ನು ಬೇಗ ಕರೆದುಕೊಂಡು ಬಾ, ಈ ದುಷ್ಟರಿಗೆ ಸ್ವಲ್ಪ ಬುದ್ಧಿಯನ್ನು ಕಲಿಸೋಣ ಅಂದನು.

ಕಣ್ಣು ಮುಚ್ಚಿ ತೆರೆಯುವಷ್ಟು ಸಮಯದಲ್ಲಿ ಎಲ್ಲರೂ ಗಾಡಿಯಿಂದ ಕೆಳಕ್ಕಿಳಿದರು.

ಫಿನಿಯಾಸನು ಹ್ಯಾರಿಯನ್ನು ಎತ್ತಿಕೊಂಡು—ಜೋರ್ಜ್, . . . ಜಿಮ್, ಹೆಂಗಸರನ್ನು ಕರೆದುಕೊಂಡು ನಿಮ್ಮಿಂದಾದಷ್ಟು ಬೇಗನೆ ಓಡಿ ಬನ್ನಿರಿ ಅಂದನು.

ಕ್ಷಣ ಮಾತ್ರದಲ್ಲಿ ಎಲ್ಲರೂ ಗುಡ್ಡದಲ್ಲಿದ್ದ ಬುರುಜು ಗೋಡೆಯನ್ನು ಹಾರಿ, ಅವರು ಹೋಗಿ ನಿಲ್ಲಬೇಕಾದ ಬಂಡೆಗಳನ್ನು ಸೇರುವ ವರೆಗೂ ಉಸಿರು ಬಿಗಿ ಹಿಡಿದುಕೊಂಡು ಓಡುತ್ತಿದ್ದರು. ಫಿನಿಯಾಸನ ಸ್ನೇಹಿತನಾದರೋ ತನ್ನ ಕುದುರೆಯನ್ನು ಗಾಡಿಯ ಹಿಂದುಗಡೆ ಕಟ್ಟಿ ಗಾಡಿಯನ್ನು ಆದಷ್ಟು ಬೇಗ ಓಡಿಸಿಕೊಂಡು ಹೊರಟುಹೋದನು.

ಫಿನಿಯಾಸನು ಎಲ್ಲರನ್ನು ಒಂದು ಕಾಲುದಾರಿಯಲ್ಲಿ ಕರೆದುಕೊಂಡು ಹೋಗುತ್ತಾ—ಬನ್ನಿರಿ, ಬೇಗ ಬನ್ನಿರಿ. ಇದು ನಾವು ಬೇಟೆಗೆ ಬಂದಾಗ ಅಡಗಿಕೊಳ್ಳುತ್ತಿದ್ದ ಒಂದು ಹಳೇ ಗವಿಯು. ಬನ್ನಿರಿ, ಹೂಂ . . . ಬಂದಿರಾ? ಎಂದು ಕರೆಯುತ್ತಿದ್ದನು.

ಫಿನಿಯಾಸನ ಕಡೆಯವರು ದೇಕಿಕೊಂಡು ಬಂಡೆಗಳನ್ನು ಹತ್ತುತ್ತಿರುವಾಗ ಹಿಂದಟ್ಟಿಕೊಂಡು ಬರುತ್ತಿದ್ದವರು ಕುದುರೆಗಳನ್ನು ಓಡಿಸಿಕೊಂಡು ಬುರುಜು ಗೋಡೆಯ ವರೆಗೂ ಬಂದು ಆಣೆ ಇಟ್ಟುಕೊಳ್ಳುತ್ತಾ ಬೈಯ್ಯುತ್ತಾ ಅವರನ್ನು ಅಟ್ಟಿಕೊಂಡು ಹೋದರು. ಫಿನಿಯಾಸನ ಕಡೆಯವರು ಅಂದರೆ ಜೋರ್ಜ್, ಎಲೈಜಾ ಮೊದಲಾದವರು ಬೇಗ ಬೇಗ ನಡೆಯುತ್ತಾ ಬಂಡೆಗಳ ನಡುವೆ ಇದ್ದ ಒಂದು ಇಕ್ಕಟ್ಟಾದ ಸ್ಥಳಕ್ಕೆ ಬಂದರು.

ಈ ಸ್ಥಳದಲ್ಲಿ ಒಬ್ಬರು ಮಾತ್ರ ಹೋಗುವಷ್ಟು ದಾರಿ ಇದ್ದಿತು. ಇದ್ದಕ್ಕಿದ್ದ ಹಾಗೆ ಒಂದು ಕೊರಕಲಿನ ಬಳಿಗೆ ಬಂದರು. ಈ ಕೊರಕಲು ಮೂರು ಅಡಿ ಅಗಲವೂ ಮೂವತ್ತು ಅಡಿ ಆಳವೂ ಇದ್ದಿತು. ಈ ಕೊರಕಲಿನ ಹಿಂಭಾಗದಲ್ಲಿ ಬಂಡೆಗಳ ಒಂದು ರಾಸಿಯು. ಇದು ಕೊರಕಲಿನ ಒಳಗಿನಿಂದ ಬಂದಿದ್ದಿತು. ಇದನ್ನು ನೋಡಿದರೆ ಕೋಟೆಯ ಗೋಡೆಯಂತೆ ಕಾಣಿಸುತ್ತಿದ್ದಿತು.

ಆ ಕೊರಕಲನ್ನು ಫಿನಿಯಾಸನು ಸುಲಭವಾಗಿ ದಾಟಿದನು. ಎತ್ತಿಕೊಂಡಿದ್ದ ಹ್ಯಾರಿಯನ್ನು ಕೆಲವು ಬಂಡೆಗಳ ಹಿಂದೆ ಕೂಡ್ರಿಸಿ, ಉಳಿದವರಿಗೆ—ನಿಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಬೇಕೆಂದಿದ್ದರೆ ಈ ಕೊರಕಲನ್ನು ಹಾರಿಬನ್ನಿರಿ ಎಂದನು. ಕೂಡಲೇ ಒಬ್ಬರ ಹಿಂದೆ ಒಬ್ಬರು ಹಾರಿ ಬಂಡೆಗಳ ಮರೆಯಲ್ಲಿ ಅವಿತುಕೊಳ್ಳುವುದಕ್ಕಾಗಿ ಓಡಿದರು.

ತಮ್ಮ ಹಿಂದೆ ಬರುತ್ತಿದ್ದ ಎದುರು ಪಕ್ಷದವರು ಎಲ್ಲಿ ಬರುತ್ತಿದ್ದಾರೆಂದು ತಿಳಿಯಲು ಫಿನಿಯಾಸನು ಬಂಡೆಗಳ ಮೇಲಿನಿಂದ ಇಣಿಕಿನೋಡಿ—ಜೋರ್ಜ್, . . . ಜಿಮ್, . . . ಈಗ ನಾವೆಲ್ಲರೂ ಸುರಕ್ಷಿತವಾಗಿದ್ದೇವೆ. ಅವರಿಂದಾದರೆ ಈಗ ನಮ್ಮನ್ನು ಹಿಡಿದುಕೊಳ್ಳಲಿ ನೋಡೋಣ. ಈ ಬಂಡೆಗಳ ನಡುವೆ ಬರಬೇಕಾದರೆ ಒಬ್ಬೊಬ್ಬರಾಗಿ ಬರಬೇಕೇ ವಿನಃ ಎಲ್ಲರೂ ಒಟ್ಟಾಗಿ ಬರಲಾಗುವುದಿಲ್ಲ. ನಮ್ಮ ತುಪಾಕಿಗಳ ಹೊಡತಕ್ಕೆ ಸಿಕ್ಕಿ ಸಾಯಬೇಕಾದರೇನೇ ಅವರು ಇಲ್ಲಿಗೆ ಬರಬೇಕಾಗಿದೆ. ಜೋರ್ಜ್, . . . ಜಿಮ್, . . . ನಾನು ಹೇಳಿದುದು ನಿಮಗೆ ಗೊತ್ತಾಯಿತೇ ?

ಜೋರ್ಜ್—ಗೊತ್ತಾಯಿತು, ಗೊತ್ತಾಯಿತು. ಇನ್ನು ಮುಂದೆ ಮಾಡಬೇಕಾದ ಕೆಲಸದ ಭಾರವು ನಮ್ಮ ಮೇಲೆ ಬಿದ್ದಿದೆ. ನಮ್ಮ ಪ್ರಾಣಗಳು ಹೋದರೂ ಚಿಂತೆಯಿಲ್ಲ. ನಾವು ಹೊಡದಾಡುವುದು ಖಂಡಿತ!

ಫಿನಿಯಾಸನು—ನಿಮ್ಮ ಮನಸ್ಸಿಗೆ ಬಂದಂತೆ ಹೊಡೆದಾಡಿರಿ. ನಾನು ನಿಮಗೆ ಅಡ್ಡಿಯನ್ನು ಮಾಡುವುದಿಲ್ಲ ಜೋರ್ಜ್. ನಾನಾದರೋ ನೀವು ಹೊಡೆದಾಡುವಾಗ ತಮಾಷೆಯನ್ನು ನೋಡಿಕೊಂಡಿರಬಹುದಷ್ಟೆ. ಅಲ್ಲಿ ನೋಡಿರಿ. ಅವರು ಏನೇನೋ ಮಾತಾಡಿಕೊಂಡು ಕೋಳಿಗಳು ತಾವು

ವಿಶ್ರಾಂತಿ ಪಡೆಯುವ ಸ್ಥಳಕ್ಕೆ ಹಾರುವುದಕ್ಕಾಗಿ ತಲೆ ಎತ್ತಿ ಹೇಗೆ ನೋಡುತ್ತಿರುವುವೋ ಅದರಂತೆ ಅವರೂ ನಮ್ಮನ್ನು ನೋಡುತ್ತಿದ್ದಾರೆ. ಅವರು ಮೇಲೆ ಬರುವುದಕ್ಕೆ ಮುಂಚಿತವಾಗಿ ನೀನು ಅವರಿಗೆ ಸ್ವಲ್ಪ ಬುದ್ಧಿ ಹೇಳಬಾರದೇ? ತಮ್ಮ ಪ್ರಾಣಗಳನ್ನು ಯಾಕೆ ವ್ಯರ್ಥವಾಗಿ ಕಳೆದು ಕೊಳ್ಳುತ್ತಾರೆಂದು ಬುದ್ಧಿ ಹೇಳು.

ಚೆನ್ನಾಗಿ ಬೆಳಗಾಯಿತು. ಎದುರು ಪಕ್ಷದ ಗುಂಪಿನಲ್ಲಿದ್ದವರು ಯಾರ್ಯಾರೆಂದು ಪರಿಷ್ಕಾರವಾಗಿ ತಿಳಿಯಬಂದಿತು. ಆ ಗುಂಪಿನಲ್ಲಿ ಟಾಮ್, ಮಾರ್ಕ್ಸ್, ಇಬ್ಬರು ಪೊಲೀಸ್ ಜವಾನರು. ಈ ಗುಲಾಮರನ್ನು ಹಿಡಿಯಲು ಸಹಾಯಮಾಡುವುದಕ್ಕೆ ಹೆಂಡವನ್ನು ಕುಡಿಸಿ ಕರೆದುಕೊಂಡು ಬಂದಿದ್ದ ಕೆಲವು ಪೋಕರೀ ಜನರು ಇದ್ದರು.

ಎದುರು ಪಕ್ಷದ ಗುಂಪಿನವರಲ್ಲಿ ಒಬ್ಬನು—ಟಾಮ್, ಅಲ್ಲಿ ನೋಡು, ನಿನ್ನ ಗುಲಾಮರು ಮರದ ಮೇಲೆ ಕೂತಿರುವಂತೆ ಕೂತಿದ್ದಾರೆ.

ಟಾಮ್—ಹೌದು, ನನಗೂ ಕಾಣಿಸುತ್ತಾರೆ. ದಾರಿ ಇಲ್ಲಿದೆ ನೋಡು. ಅವರನ್ನು ಹಿಡಿಯಲು ಕ್ಷಣಹೊತ್ತು ಸಹ ಹಿಡಿಯುವುದಿಲ್ಲ ಅಂದನು.

ಮಾರ್ಕ್ಸ್—ಆದರೆ ಟಾಮ್, ಇಲ್ಲಿ ಕೇಳು. ಅವರು ಬಂಡೆಗಳ ಹಿಂದಿನಿಂದ ನಮ್ಮನ್ನು ತುಪಾಕಿಯಿಂದ ಸುಡಬಹುದು. ಹಾಗೆ ಮಾಡುವುದು ಒಳ್ಳೆಯದಲ್ಲವೆಂದು ನಿನಗೆ ತಿಳಿದೇ ಇದೆ.

ಟಾಮ್—ಹುಂ . . . . . ಹೊಡೆತಕ್ಕೆ ನೀನು ಬಹಳ ಭಯಪಡುತ್ತೀ ಎಂದು ನೆನಸುತ್ತೇನೆ ಮಾರ್ಕ್ಸ್. ಅಂತಹ ಗಂಡಾಂತರವೇನೂ ಇಲ್ಲ. ಆ ಕಪ್ಪುಗುಲಾಮರು ಬರೀ ಹೇಡಿಗಳೆಂದು ನಿನಗೆ ತಿಳಿಯದೇ?

ಮಾರ್ಕ್ಸ್—ನಾನು ನನ್ನ ಶರೀರವನ್ನು ಕಾಪಾಡಿಕೊಳ್ಳಬಾರದೇಕೆ? ಅದು ನನಗೆ ಅಮೂಲ್ಯವಾದುದಲ್ಲವೇ? ಕಪ್ಪು ಜನರನ್ನು ನಾವು ಹೇಡಿಗಳೆಂದು ತಿಳಿಯುತ್ತೇವೆ. ಹಾಗೆ ತಿಳಿಯಬಾರದು. ಕೆಲವು ಸಮಯಗಳಲ್ಲಿ ಅವರು ಕಾಡು ಬೆಕ್ಕುಗಳಂತೆ ಹೊಡೆದಾಡುತ್ತಾರೆ, ನಿನಗೆ ಗೊತ್ತಿದೆಯೇ? ಎಂದು ಇಬ್ಬರೂ ಮಾತಾಡಿಕೊಂಡಿರುವಾಗ—

ಜೋರ್ಜನು ಅವರ ಮೇಲುಗಡೆ ಇದ್ದ ಒಂದು ಬಂಡೆಯ ಮೇಲೆ ಕಾಣಿಸಿಕೊಂಡು, ಶಾಂತವಾಗಿಯೂ ಸ್ಪಷ್ಟವಾಗಿಯೂ—ಅಯ್ಯಾ, ಕೆಳಗಿರುವವರಾದ ನೀವು ಯಾರು ? ನಿಮಗೆ ಏನು ಬೇಕು ? ಎಂದು ಕೇಳಿದನು.

ಟಾಮ್—ನಮ್ಮಲ್ಲಿಂದ ಕೆಲವರು ಗುಲಾಮರು ತಪ್ಪಿಸಿಕೊಂಡು ಓಡಿ ಹೋಗಿದ್ದಾರೆ. ಅವರನ್ನು ನಾವು ಹಿಡಿದು ಕರೆದುಕೊಂಡು ಹೋಗಬೇಕು.

ಜೋರ್ಜ್—ಅವರು ಯಾರು ?

ಟಾಮ್—ಜೋರ್ಜ್, ಎಲೈಜಾ, ಅವರ ಮಗನು ಹ್ಯಾರಿ, ಜಿಮ್, ಮತ್ತೊಬ್ಬ ಮುದುಕಿಯು. ಅವರನ್ನು ಹಿಡಿದು ತೆಗೆದುಕೊಂಡುಹೋಗುವುದಕ್ಕೆ ಪೋಲೀಸ್ ಅಧಿಕಾರಿಗಳನ್ನು ಕರೆತಂದಿದ್ದೇವೆ. ಅವರು ಎಲ್ಲಿಗೆ ಹೋದಾಗ್ಯೂ ಅವರನ್ನು ನಾವಂತೂ ಬಿಡುವುದಿಲ್ಲ. ನಾನು ಹೇಳಿದ್ದು ನಿನಗೆ ಕೇಳಿಸಿತೋ ? ನಿನ್ನ ಹೆಸರು ಜೋರ್ಜ್ ಹ್ಯಾರಿಸ್ ಅಲ್ಲವೇ ? ನೀನು ಕೆಂಟಕೀಯಲ್ಲಿರುವ ಹ್ಯಾರಿಸ್ ದೊರೆಯ ಗುಲಾಮನಲ್ಲವೇ ? ಅಂದನು.

ಜೋರ್ಜ್—ನೀವು ಹೇಳುವ ಜೋರ್ಜ್ ಹ್ಯಾರಿಸ್ ನಾನೇ. ಕೆಂಟಕೀಯಲ್ಲಿರುವ ಹ್ಯಾರಿಸ್ ದೊರೆಯು ನನ್ನನ್ನು ತನ್ನ ಸೊತ್ತೆಂದೂ ಗುಲಾಮನೆಂದೂ ಹೇಳುತ್ತಿದ್ದನು. ಈಗ ನಾನು ಗುಲಾಮನಲ್ಲ, ಸ್ವತಂತ್ರನು. ದೇವರು ಎಲ್ಲರಿಗೂ ಹದುವಾಗಿ ಕೊಟ್ಟಿರುವ ಭೂಮಿಯ ಮೇಲೆ ನಿಂತಿದ್ದೇನೆ. ನನ್ನ ಹೆಂಡತಿಯೂ ಮಗನೂ ನನ್ನವರೇ ಹೊರತು ಮತ್ತೊಬ್ಬರಿಗೆ ಸೇರಿದವರಲ್ಲ. ಜಿಮ್ ಮತ್ತು ಅವನ ತಾಯಿಯು ಸಹ ಇಲ್ಲಿಯೇ ಇದ್ದಾರೆ. ನಮ್ಮನ್ನು ಕಾಪಾಡಿಕೊಳ್ಳುವುದಕ್ಕಾಗಿ ನಮ್ಮಲ್ಲಿ ಆಯುಧಗಳಿವೆ. ಆ ಆಯುಧಗಳನ್ನು ನಾವು ಉಪಯೋಗಿಸಲೇ ಬೇಕಾಗಿದೆ. ನಿಮಗೆ ಇಷ್ಟವಿದ್ದರೆ ಮೇಲಕ್ಕೆ ಹತ್ತಿಬನ್ನಿರಿ. ಆದರೆ ನಮ್ಮಲ್ಲಿರುವ ತುಪಾಕಿಯ ಏಟಿಗೆ ತಗಲುವಷ್ಟು ಸಮೀಪ ಬರುವ ಮೊದಲನೆಯವನು ಸತ್ತನೆಂದೇ ತಿಳಿದುಕೊಳ್ಳಿರಿ. ಅವನ ಹಿಂದೆ ಬರುವ ಪ್ರತಿಯೊಬ್ಬನಿಗೂ ಅದೇ ಗತಿಯು ಎಂದು ಹೇಳಿದನು.

ಜೋರ್ಜನು ಮಾತಾಡುತ್ತಿರುವಾಗ ಕೆಳಗೆ ನಿಂತಿದ್ದವರಿಗೆ ಚೆನ್ನಾಗಿ ಕಾಣಿಸುತ್ತಿದ್ದನು. ಕೂಡಲೇ ಮಾರ್ಕ್ಸನು ತನ್ನ ತುಪಾಕಿಯನ್ನು ಬಾರು

ಮಾಡಿ ಜೋರ್ಜಿಗೆ ಗುರಿಯಿಟ್ಟು ಹಾರಿಸಿ–ಟಾಮ್, ಇವನು ಬದುಕಿದ್ದರೆ ನಿನಗೆ ಎಷ್ಟು ಹಣವು ದೊರೆಯುತ್ತಿದ್ದಿತೋ ಇವನು ಸತ್ತರೂ ಅಷ್ಟೇ ಹಣವು ನಿನಗೆ ಕೆಾಟಕೀಯಲ್ಲಿ ದೊರೆಯುವುದು ಎಂದು ಹೇಳಿದನು.

ಜೋರ್ಜ್ ಗುರಿಗೆ ತಪ್ಪಿಸಿಕೊಂಡು ಹಿಂದಕ್ಕೆ ಸರಿದು ನಿಂತನು. ತುಪಾಕಿಯ ಗುಂಡು ಇನನ ತಲೆಗೆ ಸ್ವಲ್ಪ ಮೇಲುಗಡೆ ಹಾರಿಹೋಯಿತು. ಇದನ್ನು ನೋಡಿ ಇವನ ಹೆಂಡತಿಯು ತನ್ನ ಗಂಡನು ಸತ್ತನೆಂದು ಗಟ್ಟಿಯಾಗಿ ಅರಚಿಕೊಂಡಳು.

ಜೋರ್ಜ್—ತಕ್ಷಣವೇ ನನಗೆ ಘಾಯವೇನೂ ಆಗಲಿಲ್ಲ, ಎಲೈಜಾ ಎಂದು ಹೇಳಿದನು.

ಫಿನಿಯಾಸ್—ಜೋರ್ಜ್, ನೀನು ಮಾತಾಡಬೇಕಾದರೆ ಮರೆಯಲ್ಲಿ ನಿಂತು ಮಾತಾಡು. ಅವರು ಬಹಳ ನೀಚರು.

ಜೋರ್ಜ್—ಜಿಮ್, ನೋಡಿಲ್ಲಿ. ನಿನ್ನ ತುಪಾಕಿಯು ಸರಿಯಾಗಿದೆಯೇನೋ ನೋಡಿಕೊ. ನನ್ನೊಂದಿಗೆ ದಾರಿಯನ್ನು ನೋಡಿಕೊಂಡಿರು. ಯಾರು ನನಗೆ ಮೊದಲು ಕಾಣಿಸುತ್ತಾರೋ ಅವರಿಗೆ ಗುರಿಯಿಟ್ಟು ಹೊಡೆಯುತ್ತೇನೆ. ಎರಡನೆಯವನು ಬಂದರೆ ನೀನು ನೋಡಿಕೊ. ಮೂರನೆಯವನನ್ನು ನಾನು ನೋಡಿಕೊಳ್ಳುತ್ತೇನೆ. ಹಾಗೆ ಪ್ರತಿಯೊಬ್ಬರನ್ನೂ ಕೊಲ್ಲೋಣ. ಒಬ್ಬನ ಮೇಲೆ ಎರಡು ಗುಂಡುಗಳನ್ನು ವೃಥಾ ಯಾಕೆ ಉಪಯೋಗಿಸಬೇಕು?

ಜಿಮ್—ನಿನ್ನ ಗುರಿಯು ತಪ್ಪಿದರೆ ಏನು ಮಾಡಬೇಕು?

ಜೋರ್ಜ್—ನಾನು ಎಂದಿಗೂ ಗುರಿತಪ್ಪುವುದಿಲ್ಲ ಎಂದು ಸ್ವಲ್ಪವೂ ಗಾಬರಿ ಪಡದೆ ಹೇಳಿದನು.

ಕೆಳಗೆ ಇದ್ದ ಎದುರು ಪಕ್ಷದವರು ಮಾರ್ಕ್ಸನು ತುಪಾಕಿಯನ್ನು ಹಾರಿಸಿದ ಮೇಲೆ ಏನು ಮಾಡಬೇಕೆಂದು ದಿಕ್ಕು ತೋರದವರಾಗಿ ಸ್ವಲ್ಪ ಹೊತ್ತು ಸುಮ್ಮನೆ ನಿಂತರು.

ಅವರಲ್ಲಿ ಒಬ್ಬನು—ನಿನ್ನ ತುಪಾಕಿಯ ಗುಂಡು ಯಾರನ್ನಾದರೂ ಕೊಂದಿರಬೇಕಲ್ಲವೇ? ಯಾರೋ ಅರಚಿಕೊಂಡದ್ದು ಕೇಳಿಸಿತು.

ಟಾಮ್—ನಾನಂತೂ ಈಗ ಮೇಲಕ್ಕೆ ಹತ್ತಿ ಹೋಗುತ್ತೇನೆ. ಈ ಕಪ್ಪು ಜನರಿಗೆ ನಾನು ಎಂದೂ ಹೆದರಿದವನಲ್ಲ. ಈಗಲೂ ಹೆದರುವುದಿಲ್ಲ. ನನ್ನ ಹಿಂದೆ ಯಾರು ಬರುತ್ತೀರಿ? ಎಂದು ಬಂಡೆಯನ್ನು ಹತ್ತಿದನು.

ಇವನ ಮಾತುಗಳನ್ನು ಜೋರ್ಜನು ಪರಿಷ್ಕಾರವಾಗಿ ಕೇಳಿಸಿಕೊಂಡನು. ತನ್ನ ತುಪಾಕಿಯನ್ನು ಕೈಗೆ ತೆಗೆದುಕೊಂಡು ಚೆನ್ನಾಗಿ ಪರೀಕ್ಷಿಸಿದನು. ಮೊದಲನೆಯವನು ಮೇಲಕ್ಕೆ ಬರುವ ದಾರಿಗೆ ಸರಿಯಾಗಿ ತುಪಾಕಿಯನ್ನು ಹಿಡಿದುಕೊಂಡು ನಿಂತನು.

ಟಾಮನ ಹಿಂದೆ ಒಬ್ಬನು ಹತ್ತಿದನು. ಅವನ ಹಿಂದೆ ಹತ್ತಿದವರು ಮುಂದೆ ಹೋಗುತ್ತಿರುವವರನ್ನು ನೂಕುತ್ತಾ ಇದ್ದರು. ಆದರೆ ತಾವು ಮಾತ್ರ ಮುಂದೆ ಹೋಗುತ್ತಿರಲಿಲ್ಲ. ಇವರು ಬರಬರುತ್ತಾ ಮುಂದರಿಸುತ್ತಾ ಇದ್ದರು. ಸ್ವಲ್ಪ ಹೊತ್ತಿನೊಳಗಾಗಿ ಟಾಮನು ಕೊರಕಲಿನ ಅಂಚಿನಲ್ಲಿ ಜೋರ್ಜನ ಕಣ್ಣಿಗೆ ಬಿದ್ದನು.

ಜೋರ್ಜನು ತುಪಾಕಿಯನ್ನು ಹಾರಿಸಿದನು. ಗುಂಡು ಟಾಮನ ಪಕ್ಕೆಗೆ ತಗುಲಿತು. ಟಾಮನಿಗೆ ಘಾಯವಾದಾಗ್ಯೂ ಮುಂದರಿಸುವುದನ್ನು ನಿಲ್ಲಿಸಲಿಲ್ಲ. ಶಿಟ್ಟಿನಿಂದ ಕೂಗಿಕೊಳ್ಳುತ್ತಾ ಕೊರಕಲನ್ನು ದಾಟಿ ಇವರಿದ್ದ ಕಡೆಗೆ ಬರಲು ಅವಣಿಸಿಕೊಳ್ಳುತ್ತಿದ್ದನು.

ಇಷ್ಟರಲ್ಲಿ ಫಿನಿಯಾಸನು ಮುಂದೆ ಬಂದು—ಸ್ನೇಹಿತನೇ, ಇಲ್ಲಿ ನಿನಗೇನು ಕೆಲಸವಿದೆ? ಎಂದು ತನ್ನ ಉದ್ದವಾದ ಕೈಗಳಿಂದ ನೂಕಿದನು.

ಟಾಮನು ಧಡಮ್ಮನೆ ಕೊರಕಲಿನಲ್ಲಿ ಬಿದ್ದನು. ಇವನು ಬೀಳುವಾಗ ಕೊರಕಲಲ್ಲಿ ಬೆಳೆದಿದ್ದ ಗಿಡಗೆಂಟೆಗಳಿಂದಲೂ ಕಲ್ಲುಮುಳ್ಳುಗಳಿಂದಲೂ ಮೈಯೆಲ್ಲಾ ನುಗ್ಗು ನುಗ್ಗಾಗಿ ರಕ್ತವನ್ನು ಸುರಿಸಿಕೊಂಡು ಮೂವತ್ತು ಅಡಿ ಆಳದಲ್ಲಿ ಮೂಲಗುತ್ತಿದ್ದನು. ಕೊರಕಲಿನಲ್ಲಿದ್ದ ಮರದ ಕೊಂಬೆಗಳಿಗೆ ಇವನ ಬಟ್ಟೆಗಳು ಸಿಕ್ಕಿಕೊಳ್ಳದಿದ್ದರೆ ಇವನು ಸಾಯಲೇ ಬೇಕಾಗಿತ್ತು.

ಈ ಟಾಮನಿಗುಂಟಾದ ಸ್ಥಿತಿಯನ್ನು ನೋಡಿ ಮಾರ್ಕ್ಸನಿಗೆ ಮೈಯಲ್ಲಿ ನಡುಕಹುಟ್ಟಿ—ಅಬ್ಬಾ! ಇವರು ದೆವ್ವಗಳೇ ಸರಿ. ದೇವರೇ, ಈ ದೆವ್ವಗಳ ಕೈಯಿಂದ ನಮ್ಮನ್ನು ತಪ್ಪಿಸು ಎಂದು ಕೂಗಿಕೊಳ್ಳುತ್ತಾ ಎಲ್ಲರಿಗಿಂತಲೂ

ಮುಂದಾಗಿಯೇ ಹಿಂದಕ್ಕೆ ಓಡಿಹೋದನು. ಇವನ ಹಿಂದೆಯೇ ಎಲ್ಲರೂ ಕೆಳಕ್ಕೆ ಬಂದುಬಿಟ್ಟರು.

ಮಾರ್ಕ್ಸ್‌ನು ತನ್ನೊಂದಿಗೆ ಇದ್ದವರನ್ನು ನೋಡಿ—ನೀವು ಬೇಗ ಹೋಗಿ ಆ ಕೊರಕಲಿನಿಂದ ಟಾಮನನ್ನು ಮೇಲಕ್ಕೆತ್ತಿರಿ. ನಾನು ಹೋಗಿ ಕೆಲವರನ್ನು ನಮ್ಮ ಸಹಾಯಕ್ಕೆ ಕರೆದುಕೊಂಡು ಬರುತ್ತೇನೆ ಎಂದು ಹೇಳಿ, ತನ್ನ ಕುದುರೆಯ ಮೇಲೆ ಕೂತು ಅದನ್ನು ನಾಗಾಲು ಓಟದಿಂದ ಓಡಿಸಿಕೊಂಡು ಹೊರಟುಹೋದನು. ಅಲ್ಲಿದ್ದವರು ಇವನನ್ನು ಗೇಲಿಮಾಡಿ ಕೈಚಪ್ಪಾಳೆ ಹೊಡೆಯುತ್ತಿದ್ದಾಗ್ಯೂ ಇದು ಯಾವದೂ ಇವನ ಲಕ್ಷ್ಯಕ್ಕೆ ಬರಲಿಲ್ಲ.

ಅವರಲ್ಲೊಬ್ಬನು—ಇಂತಹ ಅಂಜುಬುರುಕನನ್ನೂ ಹೇಡಿಯನ್ನೂ ಎಂದಾದರೂ ನೋಡಿದ್ದೀರಾ? ತನ್ನ ಸ್ವಂತ ಕೆಲಸಕ್ಕಾಗಿ ನಮ್ಮನ್ನೇ ಕರೆದುಕೊಂಡುಬಂದು ಈಗ ಅಂಜಿ ನಮ್ಮೆಲ್ಲರನ್ನು ಬಿಟ್ಟು ಓಡಿಹೋಗುತ್ತಿದ್ದಾನೆ, ಎಂತಹ ಶೂರನಿರಬಹುದು ಇವನು ಅಂದನು.

ಇವನ ಮಾತಿಗೆ ಎಲ್ಲರೂ ಒಪ್ಪಿಕೊಂಡು—ನಿಜವಾಗಿ ಇವನಂತಹ ಹೇಡಿಯನ್ನು ನಾವು ಎಂದೂ ನೋಡಲಿಲ್ಲವೆಂದರು.

ಮತ್ತೊಬ್ಬನು—ಟಾಮನು ಸತ್ತಿರಲೀ ಬದುಕಿರಲೀ ಹೇಗಾದರೂ ಅವನನ್ನು ಕೊರಕಲಿನಿಂದ ಮೇಲಕ್ಕೆ ಎತ್ತಲೇ ಬೇಕು ಅಂದನು. ಇವನ ಮಾತಿಗೆ ಎಲ್ಲರೂ ಸಮ್ಮತಿಸಿ, ಟಾಮನ ಮೂಲುಗುವ ಧ್ವನಿಯಿಂದ ಅವನು ಬಿದ್ದಿರುವ ಸ್ಥಳವನ್ನು ಗೊತ್ತುಮಾಡಿಕೊಂಡು ಕಲ್ಲುಮುಳ್ಳುಗಳನ್ನೂ ಗಿಡಗೆಂಟೆಗಳನ್ನೂ ತುಳಿದುಕೊಂಡು ಬೀಳುತ್ತಾ ಏಳುತ್ತಾ ಕಡೆಗೆ ಅವನಿದ್ದ ಸ್ಥಳಕ್ಕೆ ಬಂದರು.

ಒಬ್ಬನು—ಟಾಮ್, ಏನು? ಬಹಳ ಮೂಲುಗುತ್ತಿದ್ದೀಯಲ್ಲಾ? ಬಹಳ ಘಾಯವಾಗಿದೆಯೋ? ಅಂದನು.

ಟಾಮ್—ಏನೋ ನನಗೆ ತಿಳಿಯದು. ನನ್ನನ್ನು ಮೇಲಕ್ಕೆ ಎತ್ತು. ಆಗುವುದಿಲ್ಲವೇ? ಆ ಫಿನಿಯಾಸನಿಂದ ಇಷ್ಟಾಯಿತು. ಅವನಿಲ್ಲದಿದ್ದರೆ ಈಗ ನಾನು ಬಿದ್ದಿರುವ ಸ್ಥಳವು ಎಂತಹದ್ದೆಂದು ಅವರಲ್ಲಿ ಕೆಲವರಿಗಾ

ದರೂ ತೋರಿಸುತ್ತಿದ್ದೆನು ಎಂದು ಅಸಹ್ಯವಾದ ಮಾತುಗಳಿಂದ ಬೈಯ ಲಾರಂಭಿಸಿದನು.

ಬಹಳ ಕಷ್ಟದಿಂದ ಟಾಮನನ್ನು ಮೇಲಕ್ಕೆ ಎತ್ತಿ ಅವನ ಕುದುರೆಯು ಇದ್ದ ಸ್ಥಳಕ್ಕೆ ಹೊತ್ತುಕೊಂಡು ಬಂದರು.

ಟಾಮ್—ಇಲ್ಲಿಂದ ಸುಮಾರು ಒಂದು ಮೈಲಿ ದೂರದಲ್ಲಿ ಒಂದು ಛತ್ರವಿದೆ. ಅಲ್ಲಿಗೆ ನನ್ನನ್ನು ತೆಗೆದುಕೊಂಡುಹೋಗಿ ಬಿಡಿರಿ. ನಿಮ್ಮ ಉಪಕಾರ ಅಷ್ಟೇ ಸಾಕು. ಘಾಯದಿಂದ ರಕ್ತವು ಬಹಳ ಹರಿಯುತ್ತಿದೆ. ಒಂದು ಬಟ್ಟೆಯನ್ನು ಕೊಡಿರಿ. ಘಾಯದಲ್ಲಿಟ್ಟು ಕಟ್ಟಿದರೆ ರಕ್ತ ಸುರಿಯು ವುದು ನಿಲ್ಲುವುದು ಎಂದು ಕೇಳಿಕೊಂಡನು.

ಟಾಮನು ಭಾರೀ ಆಳು. ಇವನನ್ನು ಎತ್ತಿ ಕುದುರೆಯ ಮೇಲೆ ಕೂಡ್ರಿ ಸಲು ಪ್ರಯತ್ನಮಾಡಿದರು. ಎಷ್ಟು ಪ್ರಯತ್ನ ಪಟ್ಟರೂ ಇವನನ್ನು ಕೂಡ್ರಿ ಸಲು ಆಗಲಿಲ್ಲ. ಕೂತುಕೊಳ್ಳಲು ಬಲವಿಲ್ಲದೆ ಕೆಳಗೆ ಬಿದ್ದು ಹೋಗುತ್ತಿದ್ದನು. ಇವರು ಇನ್ನೇನು ಮಾಡಬಹುದು? ಎಲ್ಲರೂ ಗುಂಪುಕೂಡಿ ಸ್ವಲ್ಪ ಹೊತ್ತು ಆಲೋಚಿಸಿ ಅವನನ್ನು ಬದ್ದಲ್ಲಿಯೇ ಬಿಟ್ಟು ಕುದುರೆಗಳನ್ನು ಹತ್ತಿ ದೌಡುಬಿಟ್ಟುಕೊಂಡು ಹೊರಟುಹೋದರು.

ಅಧ್ಯಾಯ ೯

ಪರೋಪಕಾರವು

ಟಾಮನ ಸಂಗಡಿಗರೆಲ್ಲರೂ ಕಣ್ಣಿಗೆ ಮರೆಯಾದ ತರುವಾಯ ಫಿನಿ ಯಾಸನು ಮರೆಯಾಗಿದ್ದ ಸ್ಥಳದಿಂದ ಹೊರಗೆ ಬಂದು—ನಾವು ರಸ್ತೆಗೆ ಹೋಗಿ ಸ್ವಲ್ಪದೂರದ ವರೆಗೂ ನಡೆಯೋಣ. ಮುಂದಕ್ಕೆ ಹೋಗಿ ನಮ್ಮ ಸಹಾಯಕ್ಕಾಗಿ ಕೆಲವರನ್ನು ಕರೆದುಕೊಂಡು ಗಾಡಿಯನ್ನು ಬೇಗ ತರು ವಂತೆ ನನ್ನ ಸ್ನೇಹಿತನಿಗೆ ಹೇಳಿಕಳುಹಿಸಿದ್ದೇನೆ. ನಾವು ಸ್ವಲ್ಪದೂರ ನಡೆದು ಹೋಗುವಷ್ಟರಲ್ಲಿ ಅವರೂ ಬರುತ್ತಾರೆ. ಇನ್ನೂ ಬಿಸಿಲು ಏರಲಿಲ್ಲ. ಜನರ ತಿರುಗಾಟವು ಸಹ ಕಡಿಮೆ. ಇನ್ನು ಎರಡು ಮೈಲಿಗಳು ಹೋದರೆ ನಾವು

ಹೋಗಬೇಕಾಗಿರುವ ಸ್ಥಳಕ್ಕೆ ಮುಟ್ಟುತ್ತೇವೆ. ರಸ್ತೆ ಸಲೀಸಾಗಿದ್ದಿದ್ದರೆ ನಾವು ಅವರ ಕೈಗೆ ಸಿಕ್ಕದಂತೆ ಆಗಲೇ ಹೋಗಿ ನಮ್ಮ ಸ್ಥಳವನ್ನು ಸೇರಿ ಕೊಳ್ಳುತ್ತಿದ್ದೆವು ಅಂದನು.

ಇವರು ಬಂಡೆಗಳನ್ನು ಇಳಿದು ಗೋಡೆಯ ಸಮೀಪಕ್ಕೆ ಬರುವಷ್ಟರಲ್ಲಿ ಇವರ ಗಾಡಿಯೂ ಇವರ ಸಹಾಯಕ್ಕಾಗಿ ಬರುತ್ತಿದ್ದ ಜನರೂ ಇವರ ದೃಷ್ಟಿಗೆ ಬಿದ್ದರು.

ಫಿನಿಯಾಸನು (ಸಂತೋಷದಿಂದ)—ಅಗೋ, ಸೋಡಿರಿ. ನಮ್ಮ ಸ್ನೇಹಿತರು ಬರುತ್ತಿದ್ದಾರೆ. ಈಗ ನಮಗೆ ಭಯವಿಲ್ಲ. ಮನೆಯಲ್ಲಿದ್ದೇ ವೆಂದೇ ತಿಳಿಯಬೇಕು ಅಂದನು.

ಎಲೈಜಾ—ದಯಮಾಡಿ ಸ್ವಲ್ಪ ಸಿಧಾನಿಸಿರಿ. ಆ ಬಡಪ್ರಾಣಿಯನ್ನು ಸ್ವಲ್ಪ ಸೋಡಿ ಸಹಾಯಮಾಡೋಣ. ಬಹಳ ಭಯಂಕರವಾಗಿ ಮೂಲುಗು ತ್ತಿದ್ದಾನೆ ಅಂದಳು.

ಜೋರ್ಜ್—ಕಷ್ಟಪಡುತ್ತಿರುವವರನ್ನು ಸೋಡಿ ಅವರಿಗೆ ಸಹಾಯ ಮಾಡದಿರುವುದು ಕ್ರೈಸ್ತಧರ್ಮವಲ್ಲ, ಬನ್ನಿರಿ. ಅವನನ್ನು ಎತ್ತಿ ಗಾಡಿ ಯಲ್ಲಿ ಮಲಗಿಸಿಕೊಂಡು ಹೋಗೋಣ ಅಂದನು.

ಫಿನಿಯಾಸನು (ನಗುತ್ತಾ)—ಓಹೋ, ಕ್ರೈಸ್ತರ ಬಳಿಗೆ ಇವನನ್ನು ಕರೆದುಕೊಂಡು ಹೋಗಿ ಔಷಧೋಪಚಾರಗಳನ್ನು ಮಾಡಿಸುವುದಕ್ಕೋ ? ಇದು ತಮಾಷೆಯೇ ಸರಿ. ಆಗಲಿ, ನನಗೂ ಇಷ್ಟವೇ. ಬನ್ನಿರಿ ಅವನನ್ನು ಸ್ವಲ್ಪ ಸೋಡಿಕೊಂಡು ಬರೋಣ ಎಂದು ಹೇಳಿ ಅವನಿದ್ದ ಸ್ಥಳಕ್ಕೆ ಬಂದು ನೆಲದ ಮೇಲೆ ಮೊಣಕಾಲುಗಳನ್ನೂರಿ ಬೊಗ್ಗಿಕೊಂಡು ಅವನ ಘಾಯುಗಳನ್ನು ಪರೀಕ್ಷಿಸಿದನು.

ಹೀಗೆ ಬೊಗ್ಗಿಸೋಡುವವನು ಮಾರ್ಕ್ಸನೆಂದು ಟಾಮನು ನೆನಸಿ—ನೀನೋ ಮಾರ್ಕ್ಸ್? ಎಂದು ಕುಗ್ಗಿದ ಸ್ವರದಿಂದ ಕೇಳಿದನು.

ಫಿನಿಯಾಸನು—ಸ್ನೇಹಿತನೇ, ನಾನು ಮಾರ್ಕ್ಸನಲ್ಲ. ನಾನು ಫಿನಿ ಯಾಸನು. ಮಾರ್ಕ್ಸನು ತನ್ನ ಪ್ರಾಣದ ಮೇಲಣ ಆಶೆಯಿಂದ ನಿನ್ನನ್ನು ಇಲ್ಲಿ ಬಿಟ್ಟು ಓಡಿಹೋಗಿ ಬಹಳ ಹೊತ್ತಾಯಿತು ಅಂದನು.

ಟಾಮ್—ನಾನು ಸಾಯುವೆನೆಂದು ನೆನಸುತ್ತೇನೆ. ನಾನು ಸಾಯುವಂತೆ ಆ . . . ಹೇಡಿಯು ನನ್ನನ್ನು ಇಲ್ಲಿ ಬಿಟ್ಟು ಓಡಿಹೋದನೇ? ಇಂತಹವರ ಸ್ನೇಹವನ್ನು ಮಾಡಬೇಡವೆಂದು ಮುದುಕಿಯಾದ ನನ್ನ ತಾಯಿಯು ಯಾವಾಗಲೂ ಹೇಳುತ್ತಿದ್ದಳು. ನನ್ನ ತಾಯಿಯ ಬುದ್ಧಿಮಾತನ್ನು ಕೇಳಿದ್ದರೆ ನಾನೇಕೆ ಇಂತಹ ಕಷ್ಟಕ್ಕೆ ಗುರಿಯಾಗುತ್ತಿದ್ದೆನು ಎಂದು ಅಂಗಲಾಚಿದನು.

ಜಿಮ್ಮಿಯ ಮುದಿತಾಯಿ—ಅಯ್ಯೋ, ಅವನು ಹೇಳುವುದನ್ನು ಕೇಳಿರಿ! ನನ್ನಂತಹ ಮುದುಕಿಯಾದ ತಾಯಿಯು ಇದ್ದಾಳಂತೆ. ಅವನು ಪಡುವ ಕಷ್ಟವನ್ನು ನೋಡಿಕೊಂಡು ಸುಮ್ಮನೆ ಹೇಗಿರಲಿ? ಅಂದಳು.

ಟಾಮ್ ತನ್ನ ಘಾಯಗಳನ್ನು ಪರೀಕ್ಷಿಸುತ್ತಿದ್ದ ಫಿನಿಯಾಸನ ಕೈಯಿಂದ ಕೊಸರಿಕೊಂಡುಹೋಗಲು ಪ್ರಯತ್ನಿಸಿದನು. ಆಗ—

ಫಿನಿಯಾಸನು—ಸ್ನೇಹಿತನೇ, ಹಾಗೆ ಮಾಡಬೇಡ. ನಿನ್ನ ಘಾಯಗಳಿಂದ ಸುರಿಯುತ್ತಿರುವ ರಕ್ತವನ್ನು ನಿಲ್ಲಿಸದಿದ್ದರೆ ನೀನು ಜೀವಿಸುವುದು ಕಷ್ಟ.

ಟಾಮ್ (ತನ್ನ ಮುಖವನ್ನು ಗಂಟಿಕ್ಕಿಕೊಂಡು)—ನೀನು ನನ್ನನ್ನು ಆ ಕೊರಕಲಿನೊಳಕ್ಕೆ ತಳ್ಳಿದಿ.

ಫಿನಿಯಾಸನು (ನಗುನಗುತ್ತಾ)—ಸ್ನೇಹಿತನೇ, ನಾನು ನಿನ್ನನ್ನು ತಳ್ಳದಿದ್ದರೆ ನಮ್ಮೆಲ್ಲರನ್ನು ನೀನು ತಳ್ಳುತ್ತಿದ್ದಿಯಲ್ಲಾ? ಅದಿರಲಿ, ಸ್ವಲ್ಪ ತಾಳಿಕೊ. ಈ ಬಟ್ಟೆಯನ್ನು ಕಟ್ಟುತ್ತೇನೆ. ನಾವು ನಿನಗೆ ಕೆಟ್ಟದ್ದನ್ನೇನೂ ಮಾಡುವುದಿಲ್ಲ. ನಮಗೆ ನಿನ್ನ ಮೇಲೆ ದ್ವೇಷವಿಲ್ಲ. ನಾವು ನಿನ್ನನ್ನು ಒಂದು ಸ್ಥಳಕ್ಕೆ ಕರೆದುಕೊಂಡುಹೋಗುತ್ತೇವೆ. ನಿನ್ನ ತಾಯಿಯಂತೆ ಆ ಸ್ಥಳದಲ್ಲಿ ಅವರು ನಿನ್ನನ್ನು ಆರೈಕೆಮಾಡುತ್ತಾರೆ. ಭಯಪಡಬೇಡ ಅಂದನು.

ಇಷ್ಟರಲ್ಲಿ ಗಾಡಿಯು ಬಂದಿತು. ಘಾಯಗೊಂಡಿದ್ದ ಟಾಮನನ್ನು ಎಚ್ಚರಿಕೆಯಿಂದ ಎತ್ತಿ ಅವನಿಗಾಗಿ ಹಾಸಿದ್ದ ಕಂಬಳಿಗಳ ಮೇಲೆ ಮಲಗಿಸಿದರು. ಜಿಮ್ಮಿಯ ತಾಯಿ ಮುದುಕಿಯು ಪ್ರೀತಿಯಿಂದ ಅವನ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಕೆಳಗೆ ಕೂತುಕೊಂಡಳು.

ಗಾಡಿಯ ಮುಂಭಾಗದಲ್ಲಿ ಫಿನಿಯಾಸನೂ ಜೋರ್ಜ್ ಇಬ್ಬರೂ ಕೂತಿದ್ದರು. ಜೋರ್ಜ್ ಫಿನಿಯಾಸನಿಗೆ—ಫಿನಿಯಾಸ್, ಇವನ ವಿಷಯ ನಿನ್ನ ಅಭಿಪ್ರಾಯವೇನು ? ಅಂದನು.

ಫಿನಿಯಾಸನು—ಘಾಯವು ಅಷ್ಟೇನು ಅಪಾಯವಾಗಿಲ್ಲ. ಚರ್ಮಕ್ಕೆ ತಾಗಿದೆ. ಆ ಕೊರಕಲಿನಲ್ಲಿ ಬೀಳುವಾಗ ಅಲ್ಲಿದ್ದ ಕಲ್ಲುಮುಳ್ಳುಗಳು ಘಾಯಕ್ಕೆ ತಗಲಿ ಅವನಿಗೆ ಇಷ್ಟು ನೋವಾಗಿದೆ. ರಕ್ತವು ಧಾರಾಳವಾಗಿ ಹೋಗಿರುವುದರಿಂದ ಕೇವಲ ಬಲಹೀನನಾಗಿ ತಾನು ಸಾಯುವೆನಲ್ಲಾ ಎಂದು ಅಧೈರ್ಯಪಟ್ಟಿದ್ದಾನೆ. ಅಷ್ಟೇ ಹೊರತು ಮತ್ತೇನೂ ಇಲ್ಲ. ಘಾಯವು ಮಾದು ಬೇಗನೆ ಸ್ವಸ್ಥವಾಗುತ್ತಾನೆ. ಅವನ ಪ್ರಾಣಕ್ಕೆ ಅಪಾಯವೇನೂ ಇಲ್ಲ. ಇದರಿಂದ ಅವನು ಒಂದೆರಡು ವಿಷಯಗಳನ್ನು ಕಲಿತುಕೊಳ್ಳಬಹುದು.

ಜೋರ್ಜ್—ನಾವು ಇವನನ್ನು ಎಲ್ಲಿ ಮತ್ತು ಹೇಗೆ ಆರೈಕೆಮಾಡಬೇಕು ?

ಫಿನಿಯಾಸನು—ನಾವು ಇವನನ್ನು ನಾವು ಹೋಗುವ ಸ್ಥಳಕ್ಕೆ ಕರೆದುಕೊಂಡು ಹೋಗೋಣ. ಅಲ್ಲಿ ಒಬ್ಬ ಮುದುಕಿಯು ಇದ್ದಾಳೆ. ಆಕೆಯು ಘಾಯಗಳನ್ನು ವಾಸಿಮಾಡುವುದರಲ್ಲಿಯೂ ರೋಗಿಗಳನ್ನು ಉಪಚರಿಸುವುದರಲ್ಲಿಯೂ ಬಹಳ ಘಟ್ಟಿಗಳು. ಇವನನ್ನು ಒಂದೆರಡು ವಾರಗಳು ಅವರ ಮನೆಯಲ್ಲಿ ಇಡೋಣ ಅಂದನು.

ಸ್ವಲ್ಪಹೊತ್ತು ಪ್ರಯಾಣಮಾಡುವಷ್ಟರಲ್ಲಿ ಗಾಡಿಯು ಒಬ್ಬ ಒಕ್ಕಲಿಗರವನ ಮನೆಯ ಬಳಿಗೆ ಬಂದು ನಿಂತಿತು. ಆ ಮನೆಯು ಬಹಳ ಶುಚಿಯಾಗಿಯೂ ನೋಡುವುದಕ್ಕೆ ಸೊಗಸಾಗಿಯೂ ಇದ್ದಿತು. ಎಲ್ಲರೂ ಗಾಡಿಯಿಂದ ಇಳಿದರು. ಆಯಾಸಗೊಂಡಿದ್ದ ಎಲ್ಲರಿಗೂ ಊಟೋಪಚಾರಗಳಾದವು. ಆ ಮುದುಕಿಯು ಟಾಮನ ಘಾಯಗಳನ್ನು ಎಚ್ಚರಿಕೆಯಿಂದ ತೊಳೆದು ಬಟ್ಟೆಯನ್ನು ಕಟ್ಟಿ ಶುಚಿಯಾದ ಒಂದು ಮಲಗುವ ಕೊಠಡಿಯಲ್ಲಿ ಅವನನ್ನು ಮಲಗಿಸಿದಳು. ಆ ಕೊಠಡಿಯಲ್ಲಿದ್ದ ಕಿಟಕಿಗೆ ಬಿಳೀ ಫರದೆಯು ಕಟ್ಟಿದ್ದಿತು. ಟಾಮನು ತಾನು ಮಲಗಿದ ಸ್ಥಳದಿಂದಲೇ ಅದು ಗಾಳಿಗೆ ಬಡಿದಾಡುತ್ತಿದ್ದುದನ್ನು ನೋಡಿಕೊಂಡೇ ಮಲಗಿದ್ದನು.

ಅಧ್ಯಾಯ ೧೦

ಉದ್ದೇಶ ನೆರವೇರಿದುದು

ಕ್ರೈಸ್ತರ ಸಂಗಡಕ್ಕೆ ಸೇರಿದ ಒಕ್ಕಲಿಗರ ಮನೆಯಲ್ಲಿ ಶುಚಿಯಾದ ಹಾಸಿಗೆಯ ಮೇಲೆ ಟಾಮ್ ಮಲಗಿದ್ದನು. ಮುದುಕಿಯು ಇವನನ್ನು ಬಹಳ ಪ್ರೀತಿಯಿಂದ ಪರಾಮರಿಸುತ್ತಿದ್ದಳು. ಈ ಕುಟುಂಬದವರ ಪ್ರೀತಿಯು ಕಲ್ಲಿಗೆ ಸಮಾನವಾಗಿದ್ದ ಇವನ ಹೃದಯವನ್ನು ಬಹು ಮೆತ್ತಗೆ ಮಾಡಿತು. ಇದರಿಂದ ತಪ್ಪಿಸಿಕೊಂಡುಹೋಗುತ್ತಿದ್ದ ಜೋರ್ಜ್ ಮೊದಲಾದ ಗುಲಾಮರಿಗೆ ಸಹಾಯವಾಗುವಂತೆ ತನಗೆ ತಿಳಿದ ಕೆಲವು ಗುಟ್ಟಾದ ಸಂಗತಿಗಳನ್ನು ಇವರಿಗೆ ತಿಳಿಸಲು ತೀರ್ಮಾನಿಸಿಕೊಂಡನು. ಒಂದು ದಿನ ಘಾಯಗಳ ನೋವು ತನಗೆ ಸ್ವಲ್ಪ ಕಡಿಮೆಯಾಗಿದ್ದಿತು. ಮುದುಕಿಯು ಪಕ್ಕದಲ್ಲಿಯೇ ಇದ್ದಳು. ಆಗ ಇವನು ಮುದುಕಿಗೆ—ಅಜ್ಜೀ, ಜೋರ್ಜ್, ಎಲೈಜಾ ಇನ್ನೂ ಇಲ್ಲಿಯೇ ಇದ್ದಾರಲ್ಲವೇ ? ಅಂದನು.

ಅಜ್ಜಿ—ಹೌದು, ಇಲ್ಲಿಯೇ ಇದ್ದಾರೆ.

ಟಾಮ್—ಅವರು ಆ ಸಮುದ್ರವನ್ನು ಬೇಗ ದಾಟಿ ಹೋದರೆ ಒಳ್ಳೇದು. ಅವರು ಎಷ್ಟು ಬೇಗ ಇಲ್ಲಿಂದ ಹೊರಡುತ್ತಾರೋ ಅಷ್ಟೂ ಒಳ್ಳೇದೆಂದು ನೆನಸುತ್ತೇನೆ.

ಅಜ್ಜಿ (ಬಟ್ಟೆಯನ್ನು ಹೊಲಿಯುತ್ತಾ)—ಅವರು ಬೇಗನೆ ಹೋಗುತ್ತಾರೆ ಅಂದಳು.

ಟಾಮ್—ಅವರು ಬಹಳ ಎಚ್ಚರಿಕೆಯಾಗಿರಬೇಕು. ಯಾಕೆಂದರೆ ಹಡಗನ್ನು ಹತ್ತುವ ಸ್ಥಳದಲ್ಲಿ ನಮ್ಮ ಕಡೆಯವರಿದ್ದಾರೆ. ಹೋಗಿಬರುವ ಹಡಗುಗಳಲ್ಲಿ ತಪ್ಪಿಸಿಕೊಂಡು ಓಡಿಬಂದಿರುವ ಈ ಗುಲಾಮರನ್ನು ಹುಡುಕುತ್ತಲೇ ಇರುವರು. ಈಗ ಆ ಗುಟ್ಟನ್ನು ನಾನು ನಿಮಗೆ ಹೇಳುವುದರಿಂದ ನನಗೆ ಭಯವೇನೂ ಇಲ್ಲ. ಹೇಗೂ ಇವರು ತಪ್ಪಿಸಿಕೊಂಡರೆ ನನಗೆ ಸಂತೋಷ. ವೇಷ ಬದಲಾಯಿಸಿಕೊಳ್ಳುವಂತೆ ಆ ಹುಡುಗಿಗೆ ಹೇಳಿರಿ. ಆಕೆಯ ರೂಪ, ಬಣ್ಣ ಮೊದಲಾದವುಗಳನ್ನು ತಿಳಿಸುವ ಚಹರೇ ಪಟ್ಟಿಯು

ಅಲ್ಲಿರುವ ನಮ್ಮವರಲ್ಲಿದೆ. ಈ ವಿಷಯದಲ್ಲಿ ಎಚ್ಚರಿಕೆಯಾಗಿರುವಂತೆ ಆ ಹುಡುಗಿಗೆ ಹೇಳಿರಿ ಅಂದನು.

ಅಜ್ಜಿ (ಬಹಳ ಸೌಮ್ಯಭಾವದಿಂದ)—ಆ ವಿಷಯದಲ್ಲಿ ನಾವು ನೋಡಿ ಕೊಳ್ಳುತ್ತೇವೆ ಅಂದಳು.

ಸಮುದ್ರದ ಬಳಿಯಲ್ಲಿ ಇವರಿಗಾಗಿ ಕಾದಿದ್ದಾರೆಂದು ಇವರಿಗೆ ತಿಳಿದ ಮೇಲೆ ಇವರು ಎರಡು ಭಾಗವಾದರು. ಮೊದಲು ಜಿಮ್ ಮತ್ತು ಇವನ ತಾಯಿಯನ್ನು ಕಳುಹಿಸಿಬಿಟ್ಟರು. ಒಂದೆರಡು ರಾತ್ರಿಗಳಾದ ಮೇಲೆ ಜೋರ್ಜ್, ಎಲ್ಯೈಜಾ ಮತ್ತು ಇವರ ಮಗನನ್ನು ಪಟ್ಟಣದೊಳಕ್ಕೆ ಯಾರಿಗೂ ತಿಳಿಯದಂತೆ ಕರೆದುಕೊಂಡುಹೋಗಿ, ತಮ್ಮ ಸ್ನೇಹಿತರೊಬ್ಬರ ಮನೆಯಲ್ಲಿ ಬಿಟ್ಟರು. ಇಲ್ಲಿ ಎಲ್ಯೈಜಾಳ ತಲೆ ಕೂದಲನ್ನು ಮೋಟಾಗಿ ಕತ್ತರಿಸಿ ಗಂಡಸಿನ ಬಟ್ಟೆಗಳನ್ನು ತೊಡಸಿದರು. ಸ್ಮಿತ್ ದೊರಸಾನಿಯು ಕೆನಡಾ ದೇಶದವಳು, ಮಧ್ಯ ಪ್ರಾಯದವಳು. ಈಕೆಯು ಹಿಂದಿರುಗಿ ತನ್ನ ದೇಶಕ್ಕೆ ಹೊರಟಿದ್ದಳು. ಈಕೆಯು ಹ್ಯಾರಿಯನ್ನು ತನ್ನ ಜೊತೆಯಲ್ಲಿ ಕರೆದುಕೊಂಡುಹೋಗುವು ದಾಗಿ ತಾನೇ ಸಂತೋಷದಿಂದ ಒಪ್ಪಿಕೊಂಡಳು. ಚಿಕ್ಕ ಹ್ಯಾರಿಗೆ ಹುಡುಗಿ ಯಂತೆ ಬಟ್ಟೆಗಳನ್ನು ಉಡಿಸಿ, ಹೆಸರು ಹ್ಯಾರಿಯಟ್ ಎಂದು ಬದಲಾಯಿಸಿ ತನ್ನ ಮಗಳೆಂದು ಹೇಳಿಕೊಂಡಳು. ದಯವುಳ್ಳ ಈ ದೊರಸಾನಿಯು ಈ ಚಿಕ್ಕ ಹ್ಯಾರಿಗೆ ಮಿಠಾಯಿ, ಆಟದ ಸಾಮಾನು ಮೊದಲಾದುವುಗಳನ್ನು ಕೊಟ್ಟು ಚೆನ್ನಾಗಿ ಪಳಗಿಸಿಕೊಂಡಳು. ಇವನು ಸಹ ಈ ದೊರಸಾನಿಯನ್ನು ಬಿಟ್ಟು ಇರುತ್ತಿರಲಿಲ್ಲ.

ಇವರು ಮನೆಯನ್ನು ಬಿಟ್ಟು ಹೊರಡುವ ಸಮಯಕ್ಕೆ ಸರಿಯಾಗಿ—ಒಬ್ಬ ನೀಗ್ರೋ ಗಂಡಸು, ಒಬ್ಬ ನೀಗ್ರೋ ಹೆಂಗಸು ಮತ್ತು ಒಬ್ಬ ಚಿಕ್ಕ ಹುಡುಗನು ಬರುತ್ತಾರೆ. ಅವರನ್ನು ಹಿಡಿದು ಇಡಬೇಕೆಂದು ಎಲ್ಲಾ ಹಡಗುಗಳ ಮುಖ್ಯಸ್ಥರಿಗೆ ಅಪ್ಪಣೆಯಾಗಿದೆ ಎಂಬ ವರ್ತಮಾನವು ಬಂದಿತು. ಇವರು ವೇಷಗಳನ್ನು ಬದಲಾಯಿಸಿಕೊಂಡಿದ್ದರು. ಈ ವರ್ತಮಾನವನ್ನು ಕೇಳಿ ಅವರು ಅಷ್ಟಾಗಿ ಭಯಪಡಲಿಲ್ಲ. ಸ್ಮಿತ್ ದೊರಸಾನಿಯು ವೇಷವನ್ನು ಬದಲಾಯಿಸಿಕೊಂಡ ಹ್ಯಾರಿಯಟ್ ಎಂಬ ಹೆಸರುಳ್ಳ ಚಿಕ್ಕ ಹ್ಯಾರಿಯನ್ನು

ಕೈಹಿಡಿದು ಜೊತೆಯಲ್ಲಿಯೇ ಕರೆದುಕೊಂಡು ಹೋದಳು. ಎಲೈಜಾ ಸಹ ಅವರ ಸೇವಕನಂತೆ ಜೊತೆಯಲ್ಲಿಯೇ ಹೊರಟಳು. ಇವರು ಮೂವ್ವರು ಹಡಗಿನೊಳಕ್ಕೆ ಹತ್ತಿಹೋಗುವ ಹಲಿಗೆಯ ಮೇಲೆ ಭಯವಿಲ್ಲದೆ ಹತ್ತಿ ಹೋದರು. ಜೋರ್ಜ್ ಸ್ಮಿತ್ ದೊರೆಸಾನಿಯ ಸಾಮಾನುಗಳನ್ನು ಹಡಗಿನೊಳಕ್ಕೆ ಸಾಗಿಸುತ್ತಿದ್ದನು.

ಸಾಮಾನುಗಳೆಲ್ಲಾ ಹಡಗಿನೊಳಕ್ಕೆ ಸೇರಿಸಿದ ಮೇಲೆ ಜೋರ್ಜ್ ಟಿಕೆಟ್ ತೆಗೆದುಕೊಳ್ಳುವ ಕೊಠಡಿಯ ಬಳಿ ನಿಂತು ತಮ್ಮೆಲ್ಲರಿಗಾಗಿ ಟಿಕೆಟ್ಟುಗಳನ್ನು ಕೊಂಡುಕೊಳ್ಳುವಾಗ ಇಬ್ಬರು ಮನುಷ್ಯರು ಮಾತಾಡುವುದು ಇವನಿಗೆ ಕೇಳಿಸಿತು.

ಇವರಲ್ಲಿ ಒಬ್ಬನು ಹಡಗಿನ ಆಫೀಸಿನಲ್ಲಿ ಒಬ್ಬ ಗುಮಾಸ್ತನು. ಇವನು ಮತ್ತೊಬ್ಬನಿಗೆ—ಹಡಗಿನೊಳಕ್ಕೆ ಬಂದ ಪ್ರತಿಯೊಬ್ಬರನ್ನು ಬಹು ಎಚ್ಚರಿಕೆಯಿಂದ ನೋಡುತ್ತಿದ್ದೇನು. ಅವರು ಈ ಹಡಗಿನಲ್ಲಿಲ್ಲ ಅಂದನು.

ಮತ್ತೊಬ್ಬನು (ಇವನು ಟಾಮನನ್ನು ಬಂಡೆಗಳ ಬಳಿಯಲ್ಲಿ ಬಿಟ್ಟು ಓಡಿಹೋದ ಮಾರ್ಕ್ಸ್)—ಆ ಹೆಂಗಸು ನೀಗ್ರೋ ಹೆಂಗಸಾದರೂ ನಮ್ಮ ಬಿಳೀ ಹೆಂಗಸರಂತೆಯೇ ಕಾಣಿಸುವಳು. ಅದರಿಂದ ಗುರ್ತಿಸುವುದು ಸ್ವಲ್ಪ ಕಷ್ಟವೇ ಸರಿ. ಗಂಡಸಾದರೋ ಅಷ್ಟು ಕಷ್ಟಲ್ಲ. ಅವನ ಒಂದು ಕೈ ಮೇಲೆ ಬರೆಹಾಕಿದ ಗುರ್ತಿದೆ ಅಂದನು. ಜೋರ್ಜ್ ಇವರ ಮಾತುಗಳನ್ನು ಕೇಳಿಸಿಕೊಂಡುದರಿಂದ ಟಿಕೆಟ್ಟುಗಳನ್ನೂ ಚಿಲ್ರೆ ಹಣವನ್ನೂ ಯಾವ ಕೈಯಲ್ಲಿ ತೆಗೆದುಕೊಳ್ಳುತ್ತಿದ್ದನೋ ಆ ಕೈಯು ನಡುಗಲಾರಂಭಿಸಿತು. ಆದರೂ ಹಿಂದಕ್ಕೆ ತಿರುಗಿ ಮಾತಾಡುತ್ತಿದ್ದವನನ್ನು ನೋಡಿಕೊಂಡೇ ಎಲೈಜಾ ತನಗಾಗಿ ಕಾದುಕೊಂಡಿದ್ದ ಹಡಗದ ಮತ್ತೊಂದು ಭಾಗಕ್ಕೆ ಭಯವಿಲ್ಲದೆ ನಡೆದುಹೋದನು.

ಸ್ಮಿತ್ ದೊರೆಸಾನಿಯು ಹ್ಯಾರಿಯನ್ನು ಹೆಂಗಸರು ಕೂತುಕೊಳ್ಳುವ ಭಾಗಕ್ಕೆ ಕರೆದುಕೊಂಡುಹೋದಳು. ಅಲ್ಲಿದ್ದ ಜೊತೆ ಪ್ರಯಾಣಿಕರಾದ ಹೆಂಗಸರು ವೇಷಧಾರಿಯಾಗಿದ್ದ ಈ ಚಿಕ್ಕ ಹುಡುಗಿಯ ಅಂದಚಂದಗಳನ್ನು ನೋಡಿ ನಾನಾ ರೀತಿಯಲ್ಲಿ ಮಾತಾಡಿಕೊಳ್ಳುವವರಾದರು. ಇಷ್ಟರಲ್ಲಿ

ಹಡಗು ಹೊರಡುವುದಕ್ಕಾಗಿ ಗಂಟೆಯನ್ನು ಬಾರಿಸಿದರು. ಸ್ನೇಹಿತರನ್ನು ಕಳುಹಿಸಲು ಬಂದಿದ್ದವರೆಲ್ಲರೂ ಹಡಗನ್ನು ಇಳಿದು ಹೊರಟುಹೋದರು. ಮಾರ್ಕ್ಸ್‌ನು ಹಲಿಗೆಯ ಮೇಲಿನಿಂದ ಇಳಿದು ಹೋಗುತ್ತಿದ್ದನು. ಆದರೂ ತಾನು ಯಾರನ್ನು ಹುಡುಕಿ ಹಿಡಿದುಕೊಂಡುಹೋಗುವುದಕ್ಕಾಗಿ ಇಷ್ಟು ಕಷ್ಟಪಟ್ಟುಕೊಂಡು ಬಂದನೋ ಅವರು ತನಗೆ ಕೆಲವು ಅಡಿಗಳ ದೂರ ದಲ್ಲಿಯೇ ಇದ್ದಾರೆಂದು ಇವನಿಗೆ ತಿಳಿಯದೆ ಹೋಯಿತು.

ತಾವು ಯಾವ ಪ್ರದೇಶಕ್ಕೆ ಹೋದರೆ ಸ್ವತಂತ್ರತೆ ಸಿಕ್ಕುವುದೋ ಆ ಪ್ರದೇಶವನ್ನು ನೋಡಲು ಜೋರ್ಜ್ ಮತ್ತು ಈತನ ಹೆಂಡತಿಯು ಇಪ್ಪತ್ತುನಾಲ್ಕು ಗಂಟೆಗಳ ಕಾಲ ಬಹಳ ಆತುರದಿಂದಲೂ ಲವಲವಿಕೆ ಯಿಂದಲೂ ನಿರೀಕ್ಷಿಸುತ್ತಿದ್ದರು. ತಾವು ಸ್ವತಂತ್ರರಾಗದಂತೆ ಈ ಮಧ್ಯೆ ಯಾವ ಸಮಯದಲ್ಲಿ, ಯಾವ ಸ್ಥಳದಲ್ಲಿ, ಏನಾಗುವುದೋ ಎಂಬ ಭಯವು ಇವರಿಗೆ ಇದ್ದೇ ಇತ್ತು. ಕಡೆಗೆ ಇವರು ನಿರೀಕ್ಷಿಸುತ್ತಿದ್ದ ಪ್ರದೇಶಕ್ಕೆ ಬಂದರು. ಗಂಟೆಯನ್ನು ಬಾರಿಸಿದರು. ಹಡಗು ನಿಂತಿತು. ಜೋರ್ಜಿಗೆ ಉಸಿರಾಡಿಸುವುದೇ ಕಷ್ಟಕ್ಕೆ ಬಂದಿತು. ಕಣ್ಣುಗಳು ಮಂಜಾದವು. ತನ್ನ ಸಾಮಾನುಗಳನ್ನು ತೆಗೆದುಕೊಂಡನು. ತನ್ನ ಹೆಂಡತಿಯನ್ನೂ ಮಗುವನ್ನೂ ಕರೆದುಕೊಂಡು ಸಮುದ್ರ ದಡಕ್ಕೆ ಬಂದನು. ದಡವನ್ನು ಸೇರಿದ ಕೂಡಲೇ ಹುಡುಗಿಯ ವೇಷವನ್ನು ಧರಿಸಿಕೊಂಡಿದ್ದ ತಮ್ಮ ಮಗನೊಂದಿಗೆ ಗಂಡ ಹೆಂಡಿರು ಸಮುದ್ರದ ಮರಳಿನ ಮೇಲೆ ಮೊಣಕಾಲೂರಿ ದೇವರ ಮಹದುಪ ಕಾರಗಳನ್ನು ನೆನಪುಮಾಡಿಕೊಂಡು ಆತನಿಗೆ ಕೃತಜ್ಞತಾಸ್ತೋತ್ರವನ್ನು ಸಲ್ಲಿಸಿದರು.

ಪ್ರೀತಿಯುಳ್ಳ ಒಂದು ಕುಟುಂಬದವರು ಇವರನ್ನು ತಮ್ಮ ಮನೆಯಲ್ಲಿಟ್ಟು ಕೊಂಡರು. ಕೇವಲ ದರಿದ್ರರಾದ ಜೋರ್ಜ್ ಮತ್ತು ಎಲೈಜಾಗೆ ಹಣ ವಾಗಲೀ ಮನೆಯಾಗಲೀ ಸ್ನೇಹಿತರಾಗಲೀ ಇರಲಿಲ್ಲ. ಆದರೆ ತಾವು ಅಪೇಕ್ಷಿಸಿದ ಸ್ವತಂತ್ರತೆಯನ್ನು ಪಡೆದುಕೊಂಡರು. ಇದಕ್ಕಾಗಿ ತಾವು ಪಟ್ಟ ಕಷ್ಟದುಃಖಗಳು ಸಾರ್ಥಕವಾದವೆಂದು ನಂಬಿದರು. ಕೆಲವು ದಿನಗಳಲ್ಲಿಯೇ ಜೋರ್ಜಿಗೆ ಒಂದು ಯಂತ್ರದ ಕಾರ್ಖಾನೆಯಲ್ಲಿ ಕೆಲಸ

ದೊರೆಯಿತು. ಈ ಮೂಲಕ ಇವರ ಜೀವನವು ಸುಖಪ್ರದವಾಯಿತು. ಇಲ್ಲಿಗೆ ಬಂದ ಮೇಲೆ ಇವರಿಗೆ ಮಗಳು ಸಹ ಹುಟ್ಟಿದಳು. ಈಗ ಸಂಸಾರ ದಲ್ಲಿ ಒಟ್ಟು ನಾಲ್ಕು ಮಂದಿಯಾದರು. ಹ್ಯಾರಿ ಬಹಳ ಚುರುಕ ಬುದ್ಧಿಯುಳ್ಳವನು. ವಿದ್ಯದಲ್ಲಿ ದಿನ ದಿನವೂ ವೃದ್ಧಿಯಾಗುತ್ತಾ ಬಂದನು. ಜೋರ್ಜನು ತನ್ನ ಜ್ಞಾನವನ್ನು ವೃದ್ಧಿಮಾಡಿಕೊಳ್ಳುವುದಕ್ಕಾಗಿ ರಾತ್ರಿ ಕಾಲದಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದನು. ಅನೇಕ ವರ್ಷಗಳ ತರುವಾಯ ಜೋರ್ಜನು ತನ್ನ ಕುಟುಂಬವನ್ನು ಫ್ರಾನ್ಸ್ ದೇಶಕ್ಕೆ ಕರೆದುಕೊಂಡು ಹೋದನು. ಅಲ್ಲಿ ಜೋರ್ಜನು ಪ್ರೌಢ ವಿದ್ಯಾಶಾಲೆಯಲ್ಲಿ ಅಭ್ಯಾಸಮಾಡಿ ವಿದ್ಯಾಪಾರಂಗತನಾದನು. ಕೆಲವು ದಿನಗಳ ಮೇಲೆ ಕುಟುಂಬದೊಂದಿಗೆ ಆಫ್ರಿಕಾ ದೇಶಕ್ಕೆ ಬಂದು ಕಪ್ಪುಜನರಾದ ತನ್ನ ದೇಶಬಾಂಧವರಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದರಲ್ಲಿ ನಿರತನಾದನು. ತಾನೂ ತನ್ನವರೂ ಹಿಂದೆ ಗುಲಾಮರಾಗಿದ್ದಾಗ ಅನುಭವಿಸಿದ ಕಷ್ಟಗಳನ್ನು ಮರೆಯಲು ಪ್ರಯತ್ನಿಸುತ್ತಿದ್ದನು.

PRINTED AT THE WESLEY PRESS AND PUBLISHING HOUSE, MYSORE.

ಮೂರನೆಯ ಭಾಗ

ಕುರುಳಿನ ಮಹಿಮೆ

ಕುರುಳಿನ ಮಹಿಮೆ

ಅಧ್ಯಾಯ ೧

ಒಫೀಲಿಯಾಗೆ ಸಿಂಕ್ಲೇರನ ಬಹುಮಾನವು

ನ್ಯೂ ಓರ್ಲೈನ್ಸ್ ಎಂಬ ಒಂದು ಪಟ್ಟಣವು. ಇದರ ಸಮೀಪದಲ್ಲಿ ಒಂದು ದೊಡ್ಡ ತೋಟವು. ಸುಮಾರು ನೂರು ವರ್ಷಗಳ ಹಿಂದೆ ಈ ತೋಟದಲ್ಲಿ ಒಬ್ಬ ಐಶ್ವರ್ಯವಂತನಿದ್ದನು. ಈತನ ಹೆಸರು ಸಿಂಕ್ಲೇರ್. ಇವನು ಅನೇಕ ಮಂದಿ ಕಪ್ಪುಗುಲಾಮರನ್ನು ಇಟ್ಟುಕೊಂಡಿದ್ದನು. ಈತನ ಹೆಂಡತಿಯು ಯಾವ ಕೆಲಸವನ್ನಾದರೂ ಮಾಡಲು ಶಕ್ತಿಯಿಲ್ಲದವಳಾಗಿ ಹಾಸಿಗೆಯನ್ನು ಬಿಟ್ಟು ಏಳುತ್ತಿರಲಿಲ್ಲ. ಈತನಿಗೆ ಆರು ವರ್ಷದ ಒಬ್ಬ ಮಗಳಿದ್ದಳು. ಈ ಮಗುವಿನ ಹೆಸರು ಈವಾ. ಈ ನಮ್ಮ ಕಥೆಯು ಪ್ರಾರಂಭವಾಗುವಾಗ್ಯೆ ಈತನು ತನ್ನ ಚಿಕ್ಕಪ್ಪನನ್ನು ನೋಡುವುದಕ್ಕೆ ಹೋಗಿ ಹಿಂದಿರುಗಿ ಬಂದು ಕೆಲವು ದಿನಗಳು ಮಾತ್ರವೇ ಆಗಿದ್ದವು. ಚಿಕ್ಕಪ್ಪನ ಊರು ಅಮೇರಿಕಾ ದೇಶದ ಉತ್ತರಭಾಗದಲ್ಲಿದ್ದಿತು. ಈತನು ಅಲ್ಲಿಂದ ಬರುವಾಗ ತನ್ನ ಮನೆ ಕೆಲಸಗಳ ಮೇಲ್ವಿಚಾರಣೆಯನ್ನು ಮಾಡಿಕೊಂಡಿರುವುದಕ್ಕೂ ಬಲಹೀನಳಾಗಿದ್ದ ತನ್ನ ಮಗಳನ್ನು ನೋಡಿಕೊಳ್ಳುವುದಕ್ಕೂ ಚಿಕ್ಕಪ್ಪನ ಮಗಳನ್ನು ಕರೆದುಕೊಂಡು ಬಂದಿದ್ದನು. ಈಕೆಯ ಹೆಸರು ಒಫೀಲಿಯಾ.

ಒಫೀಲಿಯಾ ಮನೆಗೆಲಸದಲ್ಲಿ ಸಮರ್ಥಳು ಮತ್ತು ಗುಣದಲ್ಲಿ ದಯಾಳುವು. ಈಕೆಯು ಗುಲಾಮರ ವ್ಯಾಪಾರಕ್ಕೆ ವಿರುದ್ಧವಾಗಿದ್ದ ಸಂಗಡಕ್ಕೆ ಸೇರಿದವಳಾಗಿದ್ದಳು. ಈ ಸಂಗಡದವರು ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡಲು ಏನೇನು ಮಾಡಬೇಕೋ ಅವೆಲ್ಲವುಗಳನ್ನು ಮಾಡುತ್ತಿದ್ದರು. ತಪ್ಪಿಸಿಕೊಂಡು ಓಡಿಹೋಗುವ ಗುಲಾಮರಿಗೆ ಸಹಾಯುಮಾಡುತ್ತಿದ್ದರು. ಅಂತಹವರ ಊಟಾ ಬಟ್ಟೆಗಳಿಗಾಗಿ ಆಯಾ ಸ್ಥಳಗಳಿಗೆ ಹಣವನ್ನು ಸಹ ಒದಗಿಸಿ ಕಳುಹಿಸುತ್ತಿದ್ದರು. ಸಿಂಕ್ಲೇರ್ ದೊರೆಗೂ ಈತನ ಹೆಂಡತಿಗೂ

ಗುಲಾಮರನ್ನಿಟ್ಟುಕೊಂಡಿರುವವರ ವಿಷಯ ಒಫೀಲಿಯಾಳ ಅಭಿಪ್ರಾಯ ವೇನಾಗಿತ್ತೆಂಬುವುದು ಚೆನ್ನಾಗಿ ತಿಳಿದಿದ್ದಿತು. ಆಗಾಗ್ಯೆ ಈ ವಿಷಯದಲ್ಲಿ ಸಿಂಕ್ಲೇರ್ ದೊರೆಯು ತಂಗಿಯನ್ನು ತಮಾಷೆಗಾಗಿ ಪೀಡಿಸುತ್ತಿದ್ದನು. ಆದರೂ ಈಕೆಯು ತನ್ನ ಬುದ್ಧಿಗೆ ಸರಿತೋರಿದಂತೆಯೇ ಮಾಡುತ್ತಿದ್ದಳು. ಅಣ್ಣನ ತೋಟದಲ್ಲಿರುವ ಗುಲಾಮರಿಗೆ ತನ್ನಿಂದಾದಷ್ಟು ಸಹಾಯವನ್ನು ಮಾಡುತ್ತಿದ್ದಳು. ತನಗೆ ಸಮಯವಿದ್ದಾಗಲೆಲ್ಲಾ ಅವರಿಗೆ ಓದುವುದನ್ನೂ ಒಳ್ಳೇ ನಡತೆಯನ್ನೂ ಕಲಿಸುತ್ತಿದ್ದಳು. ಗುಲಾಮರ ವ್ಯಾಪಾರಕ್ಕೆ ವಿರೋಧ ವಾಗಿ ಇವರೊಂದಿಗೆ ಬಾಯೆತ್ತುತ್ತಿರಲಿಲ್ಲ.

ಒಂದು ದಿನ ಬೆಳಿಗ್ಗೆ ಒಫೀಲಿಯಾ ಬಹಳ ಕೆಲಸದಲ್ಲಿದ್ದಳು. ಇಂತಹ ಸಮಯದಲ್ಲಿ ಅಣ್ಣನು—ಒಫೀಲಿಯಾ, ಸ್ವಲ್ಪ ಇಲ್ಲಿಗೆ ಬಂದುಹೋಗು. ನಾನು ನಿನಗೊಂದು ತೋರಿಸುತ್ತೇನೆ ಎಂದು ಕರೆದನು.

ಒಫೀಲಿಯಾ (ಒಳಕ್ಕೆ ಬಂದು)—ಏನಣ್ಣಾ, ಕರೆದಿಯಲ್ಲಾ ಅಂದಳು.

ಸಿಂಕ್ಲೇರನು—ತಂಗೀ, ನಿನಗೊಂದು ಇನಾಮನ್ನು ತಂದಿದ್ದೇನೆ, ಇಲ್ಲಿ ನೋಡು ಎಂದು ಸುಮಾರು ಎಂಟು-ಒಂಬತ್ತು ವರ್ಷ ಪ್ರಾಯದ ಒಬ್ಬ ನೀಗ್ರೋ ಹುಡುಗಿಯನ್ನು ಆಕೆಯ ಎದುರಿಗೆ ನೂಕಿದನು.

ನೀಗ್ರೋ ಜನರು ಸ್ವಾಭಾವಿಕವಾಗಿ ಕಪ್ಪುಬಣ್ಣವುಳ್ಳವರು. ಅದ ರಲ್ಲಿಯೂ ಈ ಹುಡುಗಿಯು ಮತ್ತಷ್ಟು ಕಪ್ಪು. ಗುಂಡಾಗಿಯೂ ಪ್ರಕಾಶ ವಾಗಿಯೂ ಇದ್ದ ಆಕೆಯ ಕಣ್ಣುಗಳೆರಡು ಗಾಜಿನ ಮಣಿಗಳಂತೆ ಹೊಳೆ ಯುತ್ತಿದ್ದವು. ಆಶ್ಚರ್ಯದಿಂದ ಅವಳ ಬಾಯಿಯು ಅರ್ಧ ತೆರದದ್ದಾಗಿ ದ್ದಿತು. ಹಲ್ಲುಗಳು ಬೆಳ್ಳಗೆ ಕಾಣಿಸುತ್ತಿದ್ದವು. ತಲೆಕೂದಲು ಬಹಳ ಒರಟು. ಕುರಿಯ ಉಣ್ಣೆಯಂತಿದ್ದಿತು. ತಲೆಯ ತುಂಬಾ ಚಿಕ್ಕ ಚಿಕ್ಕ ಜಡೆಗಳು ಕೊಂಬುಗಳಂತೆ ಮೇಲಕ್ಕೆ ಎತ್ತಿಕೊಂಡಿದ್ದವು. ಮುಖವಾದರೋ ಈ ಹುಡುಗಿಯು ಮಹಾ ಮೂರ್ಖಳೂ ಕುಯುಕ್ತಿಯುಳ್ಳವಳೂ ಎಂಬುವು ದನ್ನು ಸೂಚಿಸುತ್ತಿದ್ದಿತು.

ಈಕೆಯ ಮೈ ಮೇಲೆ ಒಂದೇ ಪದರದ ಕೊಳಕಾದ ಒಂದು ಹರಕು ಬಟ್ಟೆಯು. ಇದನ್ನು ಗೋಣೀ ಚೀಲದಿಂದ ಹರಿದು ಮಾಡಿದ್ದರು. ಎರಡು

ಕೈಗಳನ್ನು ಜೋಡಿಸಿ ಕಟ್ಟಿಕೊಂಡು ಒಫೀಲಿಯಾ ಮತ್ತು ಸಿಂಕ್ಲೇರ್ ಇವರ ಮುಂದೆ ನಿಂತಿದ್ದಳು.

ಇವಳನ್ನು ನೋಡಿ ಒಫೀಲಿಯಾ ವಿಸ್ಮಯ ಹೊಂದಿದವಳಾಗಿ—ಏನಣ್ಣಾ, ನಿನಗೆ ಹುಚ್ಚು ಹಿಡಿಯಿತೇ? ಈಕೆಯನ್ನು ಯಾಕೆ ತಂದಿ?

ಸಿಂಕ್ಲೇರನು—ಯಾಕೆಂದು ಕೇಳುವಿಯಾ? ಈಕೆಗೆ ನೀನು ವಿದ್ಯೆ ಕಲಿಸುವುದಕ್ಕೆ; ಮತ್ತೇಕೆ ತರಲಿ? ಸಿಳ್ಳೆಹಾಕಿ ನಾಯಿಯನ್ನು ಕರೆಯುವಂತೆ ಈಕೆಯನ್ನು ಕರೆದು—ಇಲ್ಲಿ ನೋಡು, ಟಾಪ್ಸಿ, ಒಂದು ಹಾಡನ್ನು ಹೇಳಿಕೊಂಡು ಸ್ವಲ್ಪ ಕುಣಿ ನೋಡೋಣ ಅಂದನು.

ಟಾಪ್ಸಿಯ ಕರೀ ಕಣ್ಣುಗಳು ಥಳಥಳನೆ ಹೊಳೆದವು. ಕೀಚಲು ಶಬ್ದದಿಂದ ನೀಗ್ರೋ ಜನರ ಒಂದು ಹಾಡನ್ನು ಹಾಡುತ್ತಾ ತಾಳಕ್ಕೆ ಸರಿಯಾಗಿ ಕೈಗಳನ್ನೂ ಕಾಲುಗಳನ್ನೂ ಹಾಕುತ್ತಾ ಗರ್ರನೆ ಸುತ್ತು ತಿರುಗುತ್ತಾ ಮೊಣಕಾಲುಗಳೆರಡನ್ನು ತಾಡಿಸುತ್ತಾ ಕಡೆಯಲ್ಲಿ ನೆಲದ ಮೇಲೆ ಎರಡು-ಮೂರು ಲಾಗಗಳನ್ನು ಹೊಡೆದು ತಟ್ಟನೆ ನಿಲ್ಲಿಸಿ ಹಾಸಿದ್ದ ರತ್ನಗಂಬಳಿಯ ಮೇಲೆ ಕೈಕಟ್ಟಿಕೊಂಡು ಮುಖದಲ್ಲಿ ಬಹು ಗಂಭೀರಭಾವವನ್ನು ತೋರಿಸುತ್ತಾ ನಿಂತುಬಿಟ್ಟಳು.

ಒಫೀಲಿಯಾ ಇದನ್ನು ನೋಡಿ ಆಶ್ಚರ್ಯದಿಂದ ಸ್ತಂಭದಂತೆ ನಿಂತುಬಿಟ್ಟಳು. ಏನು ಮಾತಾಡುವುದಕ್ಕೂ ಆಗಲಿಲ್ಲ.

ಹುಡುಗಾಟದವನಾದ ಸಿಂಕ್ಲೇರನು ಈಕೆಯು ಆಶ್ಚರ್ಯದಿಂದ ಮಾತಾಡದೆ ನಿಂತಿರುವುದನ್ನು ನೋಡಿ ಕೈತಟ್ಟಿಕೊಂಡು ನಗುತ್ತಾ ಒಫೀಲಿಯಾಳನ್ನು ತಮಾಷೆಮಾಡುತ್ತಿದ್ದನು.

ಸಿಂಕ್ಲೇರನು (ತನ್ನ ನಗುವನ್ನು ನಿಲ್ಲಿಸಿದ ಮೇಲೆ ಹುಡುಗಿಯನ್ನು ಕರೆದು)—ಟಾಪ್ಸಿ, ಇಗೋ, ಇವರೇ ನಿನ್ನ ಹೊಸ ಯಜಮಾನಿಯು. ನಾನು ನಿನ್ನನ್ನು ಅವರಿಗೆ ಕೊಡುತ್ತೇನೆ. ಅವರು ಹೇಳಿದಂತೆ ನೀನು ಕೇಳಿಕೊಂಡಿರಬೇಕು, ತಿಳಿಯಿತೋ?

ಟಾಪ್ಸಿ—ಕೇಳಿಕೊಂಡಿರುತ್ತೇನೆ ಬುದ್ಧೀ ಎಂದು ತನ್ನ ತುಂಟ ಕಣ್ಣುಗಳನ್ನು ಮಿಟಿಕಿಸುತ್ತಾ ನಿಂತಳು.

ಸಿಂಕ್ಲೇರನು—ಒಳ್ಳೆಯವಳಾಗಿರುತ್ತೀಯಾ, ಟಾಪ್ಸೀ? ತಿಳಿಯಿತೋ?

ಟಾಪ್ಸಿ (ತಿರುಗಿ ಕಣ್ಣುಗಳನ್ನು ಮಿಟಕಿಸುತ್ತಾ ಬಹಳ ಮರ್ಯಾದೆಯುಳ್ಳವಳಂತೆ ಕೈಗಳನ್ನು ಕಟ್ಟಿಕೊಂಡು)—ಓ . . . ಇರ್‍ತೀನಿ ಬುದ್ಧೀ . . . ಎಂದಳು.

ಒಫೀಲಿಯಾ—ಈ ಹುಡುಗಿಯನ್ನು ಯಾಕೆ ಕೊಂಡುಕೊಂಡಿ? ನಿಮ್ಮ ಮನೆಯಲ್ಲಿ ಎಷ್ಟು ಮಂದಿ ನೀಗ್ರೋ ಮಕ್ಕಳಿದ್ದಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಕಾಲಿಟ್ಟು ನಡೆಯುವುದಕ್ಕೆ ಸ್ಥಳವೇ ಇಲ್ಲ. ಚೋಟಿಗೊಂದು ಗೇಣಿಗೊಂದು ಮಗುವು ಬಿದ್ದಿರುತ್ತದೆ. ಇಂತಹದ್ದರಲ್ಲಿ ಇವು ಸಾಲದು ಎಂದು ಈ ಹುಡುಗಿಯೊಬ್ಬಳನ್ನು ಕೊಂಡುಕೊಂಡು ಬಂದಿಯಾ? ಯಾಕೆ ಕೊಂಡುಕೊಂಡು ಬಂದಿ? ಅಂದಳು.

ಸಿಂಕ್ಲೇರನು—ನೀನು ಓದು ಕಲಿಸುವುದಕ್ಕಾಗಿಯೆಂದು ನಾನು ಆಗಲೇ ಹೇಳಲಿಲ್ಲವೇ? ನೀಗ್ರೋ ಜನರಾದ ಈ ಕಪ್ಪು ಜನರಿಗೆ ವಿದ್ಯೆ ಕಲಿಸಬೇಕೆಂದು ಯಾವಾಗಲೂ ಹೇಳುತ್ತಲೇ ಇರುತ್ತೀ. ಆದರಿಂದ ನಾನು ನಿನಗೆ ಒಬ್ಬ ಹುಡುಗಿಯನ್ನು ಇನಾಮಾಗಿ ಕೊಡಬೇಕೆಂದು ನೆನಸಿ ತಂದಿದ್ದೇನೆ. ನೀನು ಈಕೆಗೆ ಎಷ್ಟರ ಮಟ್ಟಿಗೆ ಓದುವುದಕ್ಕೆ ಕಲಿಸುತ್ತೀ ಎಂದು ನೋಡುತ್ತೇನೆ ಅಂದನು.

ಒಫೀಲಿಯಾ—ನಿಜವಾಗಿ ಈ ಹುಡುಗಿಯು ನನಗೆ ಬೇಕಾಗಿಲ್ಲ. ಈಗ ಇರುವವರನ್ನು ನೋಡಿಕೊಂಡು ಅವರಿಗೆ ಕಲಿಸುವುದೇ ಸಾಕಾಗಿದೆ ಎಂದು ಹೇಳಿದಳು.

ಸಿಂಕ್ಲೇರನು—ತಂಗೀ, ನಿಮ್ಮ ಪಂಗಡದವರು ಮಾಡುವುದೇ ಇಂತಹ ಕೆಲಸವು. ನೀವು ಒಂದು ಸಂಘವನ್ನು ಏರ್ಪಡಿಸಿಕೊಂಡು ಈ ಜನರಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕಾಗಿ ಒಬ್ಬ ಉಪಾಧ್ಯಾಯನನ್ನು ನೇಮಕಮಾಡಿ ಕಳುಹಿಸುವುದೇ ನಿಮ್ಮ ಮುಖ್ಯ ಕೆಲಸವಾಯಿತು. ಆದರೆ ನೀವು ಸ್ವತಃ ಒಬ್ಬ ನೀಗ್ರೋನನ್ನು ನಿಮ್ಮ ಮನೆಯಲ್ಲಿಟ್ಟುಕೊಂಡು ನೀವೇ ಕಲಿಸಲು ಇಷ್ಟಪಡುವುದಿಲ್ಲ. ಕಡೆಗೆ ಅಂತಹದ್ದೇನಾದರೂ ಬಂದರೆ—ಅವರು ಕೊಳಕರು, ಅವರನ್ನು ನೋಡುವುದಕ್ಕೆ ಅಸಹ್ಯವೂ

ಭಯವೂ ಆಗುತ್ತವೆ, ಅಷ್ಟೊಂದು ತೊಂದರೆ ಯಾರು ತೆಗೆದುಕೊಳ್ಳುತ್ತಾರೆ ಎಂಬಿವೇ ಮೊದಲಾದ ಕಾರಣಗಳನ್ನು ಹೇಳುತ್ತೀರಿ ಅಂದನು.

ಒಫೀಲಿಯಾ (ಬಹು ಮೆಲ್ಲನೆ ಧ್ವನಿಯಿಂದ)—ಅಣ್ಣಾ,... ನಾನು ಹಾಗೆ ಎಂದಿಗೂ ನೆನಸುವುದಿಲ್ಲವೆಂದು ನಿನಗೆ ತಿಳಿದೇ ಇದೆ ಎಂದು ಹೇಳಿ, ಆ ಹುಡುಗಿಯನ್ನು ನೋಡಿದಳು.

ಸಿಂಕ್ಲೇರನು ಹೇಳಿದ ಮಾತುಗಳು ಒಫೀಲಿಯಾಳ ಮನಸ್ಸಿಗೆ ತಟ್ಟನೆ ತಗಲಿದವು. ಆದರೂ ಆಕೆಯು ತನ್ನ ಆಂತರ್ಯಭಾವವನ್ನು ಹೊರಪಡಿಸದೆ—ಅಣ್ಣಾ, ಈ ಹುಡುಗಿಯನ್ನು ಏಕೆ ಕೊಂಡುಕೊಳ್ಳಬೇಕಾಗಿದ್ದಿತು? ಅಂತಹ ಅವಶ್ಯಕತೆಯು ಏನಿದ್ದಿತು? ಈಗ ನಿನ್ನ ಮನೆಯಲ್ಲಿ ಎಷ್ಟೋ ಮಂದಿ ಗುಲಾಮರಿದ್ದಾರೆ. ಇವರನ್ನು ನೋಡಿಕೊಳ್ಳುವುದಕ್ಕೇ ನನಗೆ ಸಮಯಸಾಲದು. ಇರುವವರು ಸಾಲದೆಂದು ಇವಳೊಬ್ಬಳನ್ನು ತಂದಿದ್ದೀ, ನಾನೇನು ಮಾಡಲಿ? ಅಂದಳು.

ಸಿಂಕ್ಲೇರನು—ತಂಗೀ, ದಯಮಾಡಿ ಕ್ಷಮಿಸು. ನಿನ್ನನ್ನು ಬಹಳವಾಗಿ ಪೀಡಿಸಿದೆನು. ನಾನು ಈ ಹುಡುಗಿಯನ್ನು ಕೊಂಡುಕೊಂಡು ಬಂದ ಕಾರಣವನ್ನು ಕೇಳು. ಈ ಹುಡುಗಿಯು ಇಬ್ಬರು ಕುಡುಕರ ಮನೆಯಲ್ಲಿದ್ದಳು. ಇವರು ಒಂದು ಖಾನಾವಳಿಯನ್ನು ಇಟ್ಟುಕೊಂಡಿದ್ದಾರೆ. ನಾನು ಪ್ರತಿದಿನವೂ ಈ ಖಾನಾವಳಿಯ ಕಡೆ ಹೋಗಿ ಬರುತ್ತಿರುತ್ತೇನೆ. ಆ ಕಡೆ ನಾನು ಹೋದಾಗಲೆಲ್ಲಾ ಈಕೆಯು ಅಳುವ ಶಬ್ದವನ್ನು ಕೇಳಿ ನನಗೆ ಬೇಸರವಾಗುತ್ತಿದ್ದಿತು. ಆ ಕುಡುಕರ ಬೈಗಳನ್ನೂ ಹೊಡೆತಗಳನ್ನೂ ಈ ಹುಡುಗಿಯು ಎಷ್ಟೆಂದು ಸಹಿಸಾಳು. ಹುಡುಗಿಯೇನೋ ಬುದ್ಧಿವಂತಳೆಂದು ಕಾಣಿಸುತ್ತದೆ. ಈಕೆಯಿಂದ ಏನಾದರೂ ಪ್ರಯೋಜನವಾಗಬಹುದೆಂದು ನೆನಸಿ, ನಿನಗೆ ಇನಾಮಾಗಿ ಕೊಡಲು ಕೊಂಡುಕೊಂಡೆನು. ಈಕೆಯನ್ನು ವಿದ್ಯಾವಂತಳನ್ನಾಗಿ ಮಾಡುವುದಕ್ಕೆ ನಿನ್ನಿಂದಾಗುವುದೇನೋ ಪ್ರಯತ್ನಿಸಿ ನೋಡು. ನನಗಂತೂ ಒಬ್ಬರನ್ನು ಸುಶಿಕ್ಷೆಯಲ್ಲಿ ಬೆಳೆಸುವಂತಹ ವರವನ್ನು ದೇವರು ಕೊಡಲಿಲ್ಲ ಅಂದನು.

ಒಫೀಲಿಯಾ—ಒಳ್ಳೇದಣ್ಣಾ, ನನ್ನಿಂದಾದಷ್ಟು ಪ್ರಯತ್ನಿಸಿ ನೋಡು

ತ್ತೇನೆ. ಎಷ್ಟು ಕೊಳಕಾಗಿದ್ದಾಳೆ ನೋಡು. ಅಯ್ಯೋ ಪಾಪ! ಮೈ ಮುಚ್ಚಿಕೊಳ್ಳುವುದಕ್ಕೆ ಒಂದು ಬಟ್ಟೆಯೂ ಈಕೆಗೆ ಇಲ್ಲವಲ್ಲಾ, ಬಡಪ್ರಾಣಿ.

ಸಿಂಕ್ಲೇರನು—ಹಾಗಾದರೆ ಈಕೆಯನ್ನು ಕರೆದುಕೊಂಡುಹೋಗಿ ಸ್ನಾನಮಾಡಿಸಿ ಬೇರೆ ಬಟ್ಟೆಗಳನ್ನು ಉಡಿಸುವಂತೆ ಸೇವಕರಿಗೆ ಹೇಳು ಎಂದು ಹೇಳಿ, ತನ್ನ ಕೆಲಸದ ಮೇಲೆ ಹೊರಟುಹೋದನು.

ಅಧ್ಯಾಯ ೨

ಟಾಪ್ಸಿಯ ಅವಿವೇಕ ಮತ್ತು ಸುಳ್ಳು

ಸಿಂಕ್ಲೇರನು ಹೊರಟುಹೋದ ತರುವಾಯ ಒಫೀಲಿಯಾ ಸೇವಕಳೊಬ್ಬಳನ್ನು ಕರೆದು—ಈ ಹುಡುಗಿಯನ್ನು ಕರೆದುಕೊಂಡುಹೋಗಿ ಚೆನ್ನಾಗಿ ಸ್ನಾನಮಾಡಿಸು ಎಂದು ಅಪ್ಪಣೆಯನ್ನು ಕೊಟ್ಟಳು. ಯಜಮಾನಿಯ ಅಪ್ಪಣೆಯಂತೆ, ಒಬ್ಬ ನೀಗ್ರೋ ಗುಲಾಮಳು ಈ ಹುಡುಗಿಗೆ ಮೈತೊಳೆಯುತ್ತಿದ್ದಳು. ಒಫೀಲಿಯಾ ಸಹ ಅಲ್ಲಿಯೇ ಇದ್ದಳು. ಹುಡುಗಿಯ ಮೇಲೆ ಇದ್ದ ಹೊಡೆತದ ಗುರುತುಗಳನ್ನೂ ಬರೆಗಳನ್ನೂ ನೋಡಿ ಮನಸ್ಸು ಕರಗಿ ಒಫೀಲಿಯಾ ಕಣ್ಣೀರಿಟ್ಟಳು.

ಟಾಪ್ಸಿಗೆ ಮೈತೊಳೆದದ್ದಾಯಿತು. ಹೊಸ ಬಟ್ಟೆಗಳನ್ನು ತೊಡಿಸಿದ್ದಾಯಿತು. ಒಫೀಲಿಯಾ ಮುಂದೆ ಬಂದು ನಿಂತಳು. ಒಫೀಲಿಯಾ ಇವಳನ್ನು ನೋಡಿ—

ಟಾಪ್ಸೀ, ನಿನಗೆಷ್ಟು ವರ್ಷ ?

ಟಾಪ್ಸಿ (ಬಾಯಿಯನ್ನು ಕಿಸಿದು, ಹಲ್ಲುಗಳನ್ನು ತೋರಿಸುತ್ತಾ)—ನನಗೆ ಗೊತ್ತಿಲ್ಲಮ್ಮಾ ಅಂದಳು.

ಒಫೀಲಿಯಾ—ನಿನಗೆ ಎಷ್ಟು ವರ್ಷ ಎಂದು ಗೊತ್ತಿಲ್ಲವೇ ? ನಿನಗೆ ಯಾರೂ ಹೇಳಲಿಲ್ಲವೇ ? ನಿಮ್ಮ ತಾಯಿಯು ಯಾರು ?

ಟಾಪ್ಸಿ (ಹಲ್ಲು ತೋರಿಸುತ್ತಾ)—ನನಗೆ ತಾಯಿಯು ಎಂದೂ ಇರಲಿಲ್ಲ.

ಒಫೀಲಿಯಾ—ಏನೂ . . . ತಾಯಿಯು ಎಂದೂ ಇರಲಿಲ್ಲವೇ? ಏನು, ಟಾಪ್ಸೀ, . . . ಹೀಗೆ ಹೇಳುತ್ತೀಯಲ್ಲಾ? ನೀನು ಎಲ್ಲಿ ಹುಟ್ಟಿದೆ?

ಟಾಪ್ಸಿ (ಹಲ್ಲುಗಳನ್ನು ಕಿರಿದು)—ನಾನು ಎಂದೂ ಎಲ್ಲಿಯೂ ಹುಟ್ಟಲೇ ಇಲ್ಲ. ಒಬ್ಬ ವರ್ತಕನು ನನ್ನನ್ನೂ ನನ್ನಂತಹ ಇನ್ನೂ ಬಹಳ ಮಂದಿಯನ್ನೂ ಸಾಕಿದನು. ನಮ್ಮನ್ನೆಲ್ಲಾ ಸ್ಯೂ ಅತ್ತೆಯು ನೋಡಿ ಕೊಳ್ಳುತ್ತಿದ್ದಳು.

ಈ ಹುಡುಗಿಯು ನಿಜವನ್ನೇ ಹೇಳುತ್ತಿದ್ದಾಳೆಂದು ಮನಸ್ಸಿನಲ್ಲಿ ತಿಳಿದು ಕೊಂಡು ಸೇವಕಳು ಪಕ್ಕನೆ ನಕ್ಕು—ಅಮ್ಮಾ, ಕೆಲವು ವರ್ತಕರು ನಮ್ಮ ಕಪ್ಪು ಜನರ ಮಕ್ಕಳನ್ನು ಸುಲಭ ಕ್ರಯಕ್ಕೆ ಕೊಂಡುಕೊಂಡು, ದೊಡ್ಡವ ರಾಗುವ ವರೆಗೂ ಬೆಳೆಸಿ, ತರುವಾಯ ಸಂತೆಗಳಲ್ಲಿ ಮಾರಿಬಿಡುತ್ತಾರೆ ಅಂದಳು.

ಒಫೀಲಿಯಾ—ದೇವರ ವಿಷಯ ಎಂದಾದರೂ ಕೇಳಿದ್ದೀಯಾ, ಟಾಪ್ಸೀ?

ಈ ಮಾತುಗಳನ್ನು ಕೇಳಿದ ಕೂಡಲೇ ಟಾಪ್ಸಿಗೆ ಆಶ್ಚರ್ಯವಾಗಿ ಎಂದಿ ನಂತೆ ಹಲ್ಲು ಕಿರಿದಳು.

ಒಫೀಲಿಯಾ—ನಿನ್ನನ್ನು ಯಾರು ಉಂಟುಮಾಡಿದರು, ನಿನಗೆ ಗೊತ್ತೋ?

ಟಾಪ್ಸಿ—ನನಗೆ ತಿಳಿದ ಮಟ್ಟಿಗೆ ನನ್ನನ್ನು ಯಾರೂ ಉಂಟುಮಾಡಲಿಲ್ಲ ಎಂದು ನಕ್ಕಳು.

ಇಂತಹ ಪ್ರಶ್ನೆಯು ಟಾಪ್ಸಿಗೆ ವಿಚಿತ್ರತರವಾಗಿದ್ದುದರಿಂದ ಕಣ್ಣು ಗಳನ್ನು ಮಿಣಮಿಣನೆ ಬಿಟ್ಟುಕೊಂಡು—ಎಂದಾದರೂ ಸರಿಯೇ ನನ್ನನ್ನು ಯಾರಾದರೊಬ್ಬರು ಉಂಟುಮಾಡಿದರೆಂದು ನೆನಸುವುದಿಲ್ಲ. ನಾನೇ ಬೆಳೆದು ಕೊಂಡಿದ್ದೇನೆ.

ಸಂಭಾಷಣೆಯನ್ನು ಬದಲಾಯಿಸಿದರೆ ಒಳ್ಳೇದೆಂದು ಒಫೀಲಿಯಾ—ಟಾಪ್ಸೀ, ನಿನಗೆ ಹೊಲಿಯುವುದಕ್ಕೆ ಬರುತ್ತದೋ? ಎಂದು ಕೇಳಿದಳು.

ಟಾಪ್ಸಿ—ಇಲ್ಲಮ್ಮಾ.

ಒಫೀಲಿಯಾ—ಹಾಗಾದರೆ ನಿನಗೆ ಯಾವ ಕೆಲಸ ಬರುತ್ತದೆ? ಮೊದಲಿದ್ದಲ್ಲಾ ಆ ಯಜಮಾನರ ಮನೆಯಲ್ಲಿ ಏನು ಕೆಲಸ ಮಾಡುತ್ತಿದ್ದಿ?

ಟಾಪ್ಸಿ—... ಮುಸುರೆ ತೊಳೆಯುತ್ತಿದ್ದೆ, ನೀರು ತರುತ್ತಿದ್ದೆ.

ಒಫೀಲಿಯಾ—ಅವರು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರೋ?

ಟಾಪ್ಸಿ (ಒಫೀಲಿಯಾಳನ್ನು ಕಡೆಗಣ್ಣಿನ ನೋಟದಿಂದ ನೋಡಿಕೊಂಡು)—ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರೆಂದು ನೆನಸುತ್ತೇನೆ ಅಂದಳು.

ಟಾಪ್ಸಿಯೊಂದಿಗೆ ಮಾಡಿದ ಸಂಭಾಷಣೆಯಿಂದ ಯಾವ ಪ್ರಯೋಜನವೂ ಆಗಲಿಲ್ಲವೆಂದು ಒಫೀಲಿಯಾ ನಿರಾಶೆಯಾದಳು. ಈ ಹುಡುಗಿಯ ವಿಷಯದಲ್ಲಿ ಏನು ಮಾಡಬೇಕೆಂದು ಆಕೆಗೆ ತಿಳಿಯದೆ ಹೋಯಿತು. ವಿದ್ಯಾಭ್ಯಾಸದ ವಿಷಯದಲ್ಲಿ ಒಫೀಲಿಯಾಗೆ ಇದ್ದ ಅಭಿಪ್ರಾಯವನ್ನು ಒಂದೆರಡು ಮಾತುಗಳಲ್ಲಿ ಹೇಳಬೇಕೆಂದರೆ ಹೀಗೆ ಹೇಳಬಹುದು. ಮಕ್ಕಳು ದೊಡ್ಡವರು ಹೇಳಿದ ಮಾತುಗಳನ್ನು ಕೇಳಬೇಕು. ಹೊಲಿಯುವುದನ್ನೂ ಓದುವುದನ್ನೂ ಕಲಿತುಕೊಳ್ಳಬೇಕು. ಸುಳ್ಳು ಹೇಳಿದರೆ ಶಿಕ್ಷೆಮಾಡಬೇಕು.

ಸಿಂಕ್ಲೇರನ ಮನೆಯ ಗುಲಾಮರೆಲ್ಲರೂ ಟಾಪ್ಸಿಯು ಒಫೀಲಿಯಾಳ ಪಾಲನೆಯಲ್ಲಿರುವವಳೆಂದೇ ತಿಳಿದುಕೊಂಡಿದ್ದರು. ಇತರ ಗುಲಾಮರು ಟಾಪ್ಸಿಯನ್ನು ಅಷ್ಟಾಗಿ ಪ್ರೀತಿಸಿ ಲಕ್ಷ್ಯವಾಡುತ್ತಿರಲಿಲ್ಲ. ಆಕೆಯ ವಿದ್ಯಾಭ್ಯಾಸ ಮೊದಲಾದವುಗಳ ವಿಷಯ ಒಬ್ಬರಾದರೂ ಶ್ರದ್ಧೆಯನ್ನು ತೆಗೆದುಕೊಳ್ಳುತ್ತಲೂ ಇರಲಿಲ್ಲ. ಈಕೆಯ ಭಾರವೆಲ್ಲಾ ಒಫೀಲಿಯಾಳ ಮೇಲೆಯೇ ಬೀಳುವಂತಾಯಿತು. ಈ ಟಾಪ್ಸಿಗೆ ಹಾಸಿಗೆ ಹಾಸುವುದನ್ನು ಕಲಿಸಬೇಕೆಂದು ಒಫೀಲಿಯಾ ತೀರ್ಮಾನಿಸಿಕೊಂಡು, ಮಲಗುವ ಕೋಣೆಗೆ ಕರೆದುಕೊಂಡುಹೋಗಿ ಹಾಸಿಗೆಯನ್ನು ಹಾಸುವುದು ಹೇಗೆ ಎಂದು ಹುಡುಗಿಗೆ ತಿಳಿಯುವಂತೆ ಹೇಳಿದಳು. ಹಾಸಿಗೆ ಹಾಸುವುದು ಹೇಗೆ ಎಂದು ಹುಡುಗಿಗೆ ಒಫೀಲಿಯಾ ಕಲಿಸುತ್ತಿದ್ದಾಗ, ಈ ಹುಡುಗಿಯು ಅಲ್ಲಿದ್ದ ಒಂದು ಕೈವಸ್ತ್ರವನ್ನೂ ಒಂದು ಜಡೆದಾರವನ್ನೂ ಎಳೆದುಕೊಂಡು ತನ್ನ ಅಂಗಿಯ

ತೋಳಿನಲ್ಲಿ ಕಾಣಿಸದಂತೆ ಸಿಕ್ಕಿಸಿಕೊಂಡು ಏನೂ ತಿಳಿಯದವಳಂತೆ ಕೈ ಕಟ್ಟಿಕೊಂಡು ಬಹು ವಿಧೇಯಳಾಗಿ ನಿಂತುಕೊಂಡಳು.

ತಾನು ಹೇಳಿದುದು ಹುಡುಗಿಯು ತಿಳಿದುಕೊಂಡಳೋ ಇಲ್ಲವೋ ಎಂದು ಪರೀಕ್ಷಿಸುವುದಕ್ಕಾಗಿ ಒಫೀಲಿಯಾ ಹುಡುಗಿಗೆ ತೋರಿಸುವುದಕ್ಕಾಗಿ ಹಾಸಿದ್ದ ಹಾಸಿಗೆಯನ್ನು ಕಿತ್ತು ಹಾಕಿ—ಟಾಪ್ಸೀ, ಈಗ ನೀನು ಹಾಸು, ನಿನಗೆ ಬರುತ್ತದೋ ಇಲ್ಲವೋ ನೋಡೋಣ ಅಂದಳು.

ಟಾಪ್ಸಿಯು ಒಫೀಲಿಯಾ ಹೇಳಿಕೊಟ್ಟಂತೆಯೇ ಬಹಳ ಚೆನ್ನಾಗಿ ಹಾಸಿದಳು. ಇದನ್ನು ನೋಡಿ ಒಫೀಲಿಯಾಗೆ ಬಹಳ ಮೆಚ್ಚಿಕೆಯಾಯಿತು. ಇವಳ ದುರಾದೃಷ್ಟಕ್ಕಾಗಿಯೋ ಏನೋ, ಹಾಸಿಗೆಯ ಮೇಲಿನ ದುಪ್ಪಟಿಯನ್ನು ಹಾಸುವಾಗ ಇವಳು ಅಂಗಿಯ ತೋಳಿನಲ್ಲಿ ಬಚ್ಚಿಟ್ಟುಕೊಂಡಿದ್ದ ಜಡೇದಾರದ ಒಂದು ತುದಿಯು ಹೊರಗೆ ಇಳಿಯ ಬಿದ್ದಿತು. ಇದನ್ನು ನೋಡಿ—

ಒಫೀಲಿಯಾ—ಏನಿದು? ಕೆಟ್ಟಹುಡುಗೀ, ಇದನ್ನು ಕದ್ದುಕೊಂಡಿದ್ದೀಯಾ? ಎಂದು ಹೇಳಿ ತೋಳಿನಿಂದ ಜಡೇದಾರವನ್ನು ಎಳೆದುಕೊಂಡಳು. ಟಾಪ್ಸಿಗೆ ಈ ವಿಷಯದಲ್ಲಿ ಸ್ವಲ್ಪವೂ ಭಯವಾಗಲೇ ಇಲ್ಲ. ಯಾವುದನ್ನೂ ತಿಳಿಯದವಳಂತೆ ಆಶ್ಚರ್ಯದಿಂದ ಮಿಟಮಿಟನೆ ಆ ಜಡೇದಾರವನ್ನೇ ನೋಡುತ್ತಿದ್ದಳು. ಆಶ್ಚರ್ಯದಿಂದ—ಏನಿದು, ಇದು ನಿಮ್ಮ ಜಡೇದಾರ ಅಲ್ಲವೇನಮ್ಮಾ? ಇದು ನನ್ನ ಅಂಗಿಯ ತೋಳಿನೊಳಕ್ಕೆ ಹೇಗೆ ಬಂದಿರಬಹುದು?

ಒಫೀಲಿಯಾ—ಟಾಪ್ಸೀ, ಕೆಟ್ಟಹುಡುಗೀ, ನನ್ನ ಬಳಿ ಸುಳ್ಳು ಹೇಳಬೇಡ. ನೀನೇ ಆ ಜಡೇದಾರವನ್ನು ಕದ್ದುಕೊಂಡಿದ್ದೀಯಲ್ಲವೇ?

ಟಾಪ್ಸಿ—ಅಮ್ಮಾ, ನಾನು ಕದ್ದುಕೊಳ್ಳಲಿಲ್ಲ. ಇದನ್ನು ನಾನು ನೋಡಿದುದು ಇದೇ ಮೊದಲನೇ ಸಾರಿ. ಇದಕ್ಕೆ ಮುಂಚೆ ನನ್ನ ಜೀವಮಾನದಲ್ಲಿ ಅದನ್ನು ಎಂದೂ ನೋಡಿರಲಿಲ್ಲ.

ಒಫೀಲಿಯಾ—ಟಾಪ್ಸೀ, ಸುಳ್ಳುಹೇಳುವುದು ಕೆಟ್ಟದ್ದೆಂದು ನಿನಗೆ ಗೊತ್ತಿಲ್ಲವೋ?

ಟಾಪ್ಸಿ (ಮರ್ಯಾದೆಯಿಂದ)—ನಾನು ಎಂದಿಗೂ ಸುಳ್ಳು ಹೇಳುವುದಿಲ್ಲ, ನಾನು ನಿಜವನ್ನೇ ಹೇಳುತ್ತಿದ್ದೇನೆ.

ಒಫೀಲಿಯಾ—ನೀನು ಸುಳ್ಳು ಹೇಳಿದರೆ ನಾನು ನಿನ್ನನ್ನು ಹೊಡೆಯ ಬೇಕಾಗುತ್ತದೆ.

ಟಾಪ್ಸಿ (ಅತ್ತುಕೊಂಡು)—ಅಮ್ಮಾ, ನೀವು ಈ ದಿನವೆಲ್ಲಾ ಹೊಡೆಯು ತ್ತಿದ್ದಾಗ್ಯೂ ನಾನು ಹೇಳುವುದೇ ಇದು, ಮತ್ತೊಂದನ್ನು ಹೇಳಲಾರೆನು. ನಾನು ಈ ಜಡೇದಾರವನ್ನು ಎಂದೂ ನೋಡಲೇ ಇಲ್ಲ. ನೀವು ಹಾಸಿಗೆಯ ಮೇಲೆ ಹಾಕಿದ್ದಿರೇನೋ ನಾನು ದುಪ್ಪಟಿಯನ್ನು ಜಾಡಿಸುವಾಗ ಅದು ನನ್ನ ತೋಳಿನಲ್ಲಿ ಸಿಕ್ಕಿಕೊಂಡಿರಬೇಕು.

ಇದನ್ನು ಕೇಳಿ ಒಫೀಲಿಯಾಗೆ ಬಹಳ ಕೋಪಬಂದು—ಟಾಪ್ಸೀ, ಟಾಪ್ಸೀ, ಎಂತಹ ಸುಳ್ಳನ್ನು ಹೇಳುತ್ತಿದ್ದೀ? ಎಂದು ಆಕೆಯ ಭುಜವನ್ನು ಹಿಡಿದುಕೊಂಡು ಇನ್ನೊಂದು ಸಾರಿ ಇಂತಹ ಸುಳ್ಳು ಹೇಳಬೇಡಾ ಎಂದು ಅಲ್ಲಾಡಿಸಿಬಿಟ್ಟಳು.

ಒಫೀಲಿಯಾ ಟಾಪ್ಸಿಯ ಭುಜವನ್ನು ಹಿಡಿದು ಹೀಗೆ ಅಲ್ಲಾಡಿಸಿ ಕುಲುಕು ತ್ತಿರುವಾಗ ಮತ್ತೊಂದು ತೋಳಿನಲ್ಲಿ ಬಚ್ಚಿಟ್ಟುಕೊಂಡಿದ್ದ ಕೈವಸ್ತ್ರವು ನೆಲದ ಮೇಲೆ ಬಿದ್ದಿತು. ಒಫೀಲಿಯಾ ಮತ್ತಷ್ಟು ಸಿಟ್ಟಿನಿಂದ—ಟಾಪ್ಸೀ, ನೋಡಿ ದೆಯಾ? ಜಡೇದಾರವನ್ನು ಕದಿಯಲಿಲ್ಲವೆಂದು ಈಗಲೂ ಹೇಳುತ್ತೀಯಾ?

ಟಾಪ್ಸಿ—ಅಮ್ಮಾ, ಈ ಕೈವಸ್ತ್ರವನ್ನು ನಾನು ಕದ್ದದ್ದುಂಟು, ಆದರೆ ಜಡೇದಾರವನ್ನು ಕದಿಯಲೇ ಇಲ್ಲ.

ಒಫೀಲಿಯಾ—ಟಾಪ್ಸೀ, ನಿಜವನ್ನು ಒಪ್ಪಿಕೋ, ಈ ಸಾರಿ ನಿನ್ನನ್ನು ಹೊಡೆಯುವುದಿಲ್ಲ ಅಂದಳು.

ಆಗ ಟಾಪ್ಸಿಯು—ಅಮ್ಮಾ, ನಾನು ಜಡೇದಾರವನ್ನೂ ಕದ್ದೆನು, ಕೈ ವಸ್ತ್ರವನ್ನೂ ಕದ್ದೆನು. ನನಗೆ ಬಹಳ ವ್ಯಸನ ಅಂದಳು.

ಒಫೀಲಿಯಾ—ನೀನು ಈ ನಮ್ಮ ಮನೆಗೆ ಬಂದಂದಿನಿಂದ ಇನ್ನೂ ಬಹಳ ಸಾಮಾನುಗಳನ್ನು ತೆಗೆದುಕೊಂಡಿರಬೇಕಲ್ಲವೇ? ನೆನ್ನೆ ಈ ಕೊಠಡಿ ಯಲ್ಲಿ ನಿನ್ನನ್ನು ಬಿಟ್ಟು ಹೋಗಿದ್ದೆನು. ಇಲ್ಲೆಲ್ಲಾ ಓಡಾಡುತ್ತಿದ್ದಿ. ನಿಜವನ್ನು ಒಪ್ಪಿಕೋ ಮತ್ತೇನೇನು ತೆಗೆದುಕೊಂಡಿದ್ದಿ, ನಿನ್ನನ್ನು ಹೊಡೆಯುವುದಿಲ್ಲ.

ಟಾಪ್ಸಿ—ತೆಗೆದುಕೊಂಡಿದ್ದೇನೆ, ಈವಾ ಮಿಸಿಯ ಹವಳದ ಸರವನ್ನು.

ಒಫೀಲಿಯಾ—ಹವಳದ ಸರವನ್ನು ತೆಗೆದುಕೊಂಡಿದ್ದೀಯಾ? ಕೆಟ್ಟ ಹುಡುಗಿ, ಮತ್ತೇನು ತೆಗೆದುಕೊಂಡಿದ್ದೀಯಾ?

ಟಾಪ್ಸಿ—ರೋಜಳು ಕಿವಿಗೆ ಹಾಕಿಕೊಳ್ಳುವ ಹವಳದ ಮುರವನ್ನು ಸಹ ತೆಗೆದುಕೊಂಡಿದ್ದೇನೆ.

ಒಫೀಲಿಯಾ (ಸಿಟ್ಟಿನಿಂದ)—ಹೋಗು, ಅವುಗಳನ್ನು ಎಲ್ಲಿಟ್ಟಿದ್ದೀಯಾ? ಈ ತಕ್ಷಣವೇ ತೆಗೆದುಕೊಂಡು ಬಾ ಎಂದು ಗದರಿಸಿ ಹೇಳಿದಳು.

ಟಾಪ್ಸಿ—ಅವು ಇಲ್ರಮ್ಮಾ, ಅವು ಇಲ್ಲ. ಸುಟ್ಟುಬಿಟ್ಟೆನು, ಎಲ್ಲಿಂದ ತರಲಿ?

ಒಫೀಲಿಯಾ—ಸುಟುಬಿಟ್ಟೆಯಾ? ಎಂತಹ ಸುಳ್ಳಿದು? ಹೋಗಿ ಒಳ್ಳೇ ಮಾತಿನಲ್ಲಿ ಅವುಗಳನ್ನು ತೆಗೆದುಕೊಂಡು ಬಾ. ತರದಿದ್ದರೆ ನಿನ್ನನ್ನು ಹೊಡೆಯುತ್ತೇನೆ.

ಟಾಪ್ಸಿ (ಘಟ್ಟಿಯಾಗಿ ಅಳುತ್ತಾ)—ಅಮ್ಮಾ, ಅವಿಲ್ಲ, ಸುಟ್ಟುಬಿಟ್ಟೆನು. ಅವು ನನ್ನಲ್ಲಿಲ್ಲ ಅಂದಳು.

ಒಫೀಲಿಯಾ—ಅವುಗಳನ್ನು ಯಾಕೆ ಸುಟ್ಟೆ ಟಾಪ್ಸಿ?

ಟಾಪ್ಸಿ—ಯಾಕೆ ಸುಟ್ಟೆ ಎಂದು ಕೇಳುತ್ತೀರಾ? ಯಾಕೆಂದರೆ ನಾನು ಕೆಟ್ಟವಳು, ಬಹಳ ಕೆಟ್ಟವಳು. ಸುಡದೆ ಏನು ಮಾಡಲಿ?

ಇದೇ ಸಮಯದಲ್ಲಿ ಈವಾ ಮಿಸಿಯು ಕೊರಳಿನಲ್ಲಿ ತನ್ನ ಹವಳದ ಸರವನ್ನು ಹಾಕಿಕೊಂಡು ಇವರಿಬ್ಬರು ಇದ್ದ ಕೊಠಡಿಯೊಳಕ್ಕೆ ಬಂದಳು.

ಒಫೀಲಿಯಾ—ಈವಾ, ನೀನು ಹಾಕಿಕೊಂಡಿರುವ ಹವಳದ ಸರ ನಿನಗೆ ಎಲ್ಲಿ ಸಿಕ್ಕಿತು?

ಈವಾ—ಎಲ್ಲಿ ಸಿಕ್ಕಿತು? ಏನು, ಹೀಗೆ ಕೇಳುತ್ತಿದ್ದೀಯಲ್ಲಾ, ಅತ್ತೆ? ಬೆಳಗಿನಿಂದ ಇದು ವರೆಗೂ ನನ್ನ ಕೊರಳಿನಲ್ಲಿಯೇ ಇದೆ.

ಒಫೀಲಿಯಾ—ನೆನ್ನೆ ಅದು ನಿನ್ನ ಕೊರಳಿನಲ್ಲಿತ್ತೋ?

ಈವಾ—ಏನತ್ತೇ? ತಮಾಷೆಮಾಡುತ್ತಿದ್ದೀರಾ? ರಾತ್ರೆ ನನ್ನ ಕೊರಳಿನಲ್ಲಿತ್ತು . . . ಮಲಗುವಾಗ ತೆಗೆದಿಡುವುದಕ್ಕೆ ಸಹ ಮರೆತುಬಿಟ್ಟೆನು ಅಂದಳು.

ರೋಜ ಅದೇ ಸಮಯದಲ್ಲಿ ತನ್ನ ಹವಳದ ಮುರವನ್ನು ಕಿವಿಯಲ್ಲಿ ಹಾಕಿಕೊಂಡು ಒಳಕ್ಕೆ ಬಂದಳು. ಒಫೀಲಿಯಾ ಈಕೆಯ ಕಿವಿಯಲ್ಲಿದ್ದ ಮುರುವುಗಳನ್ನು ನೋಡಿ ನಿರಾಶೆಯಿಂದ—ಇಂತಹ ಹುಡುಗಿಯನ್ನು ನಾನೇನು ಮಾಡಲಿ? ಹವಳದ ಸರವನ್ನೂ ಮುರವನ್ನೂ ತೆಗೆದುಕೊಂಡೆನೆಂದು ಯಾಕೆ ಹೇಳಿದಿ, ಟಾಪ್ಸೀ . . . ?

ಟಾಪ್ಸಿ—ನಿಜವನ್ನು ಒಪ್ಪಿಕೊ ಎಂದು ಹೇಳಿದಿರಲ್ಲಮ್ಮಾ, ನಿಜ ಒಪ್ಪಿ ಕೊಳ್ಳುವುದರ ಹೊರತು ಮತ್ತೇನೂ ನನ್ನ ನೆನಪಿಗೇ ಬರಲಿಲ್ಲ.

ಒಫೀಲಿಯಾ—ನೀನು ಮಾಡದೆ ಇರುವುದನ್ನೆಲ್ಲಾ ನೀನು ಒಪ್ಪಿಕೊಳ್ಳ ಬೇಕೆಂದು ನಾನು ಹೇಳಲಿಲ್ಲ. ನೀನು ಮಾಡಿದವುಗಳ ವಿಷಯ ಒಪ್ಪಿ ಕೊಳ್ಳದೆ ಇರುವುದು ಹೇಗೆ ಸುಳ್ಳೋ ಅದರಂತೆ ನೀನು ಮಾಡದವುಗಳ ವಿಷಯ ಒಪ್ಪಿಕೊಳ್ಳುವುದು ಸಹ ಸುಳ್ಳು. ಟಾಪ್ಸಿಯು ಯಥಾರ್ಥವಾದ ಆಶ್ಚರ್ಯದಿಂದ ಹಾಗೆ ಹೇಳುವುದು ನಿಜವಾಗಿಯೂ ಸುಳ್ಳೇನ್ರಮ್ಮಾ ಎಂದು ಕೇಳಿದಳು.

ಒಫೀಲಿಯಾಗೆ ಈ ಹುಡುಗಿಯ ವಿಷಯದಲ್ಲಿ ಏನು ಮಾಡಬೇಕೆಂದು ತಿಳಿಯದೆ ಹೋಯಿತು. ಈ ಹುಡುಗಿಯ ಕಥಾಂತರವನ್ನೆಲ್ಲಾ ಆ ದಿನ ಸಾಯಂಕಾಲ ತಮ್ಮ ಅಣ್ಣನಿಗೆ ಹೇಳಿ, ಈ ಹುಡುಗಿಯನ್ನು ಹೊಡೆಯದೆ ದಾರಿಗೆ ತರುವುದು ಕಷ್ಟವಾಗಿದೆ ಅಂದಳು.

ಸಿಂಕ್ಲೇರನು—ಹಾಗಾದರೆ ನಿನ್ನ ಮನಸ್ಸಿಗೆ ಬಂದಂತೆ ಚೆನ್ನಾಗಿ ಹೊಡಿ. ನಾನು ಆಕೆಯನ್ನು ನಿನಗೆ ಒಪ್ಪಿಸಿಕೊಟ್ಟಿದ್ದೇನೆ ಅಂದನು.

ಒಫೀಲಿಯಾ—ಮಕ್ಕಳನ್ನು ಹೊಡೆಯಲೇ ಬೇಕು. ಹಾಗೆ ಹೊಡೆಯ ದಿದ್ದರೆ ಅವರು ತಕ್ಕ ದಾರಿಗೆ ಬರುತ್ತಾರೆಂದು ನಾನೆಂದೂ ಕೇಳಲಿಲ್ಲ.

ಸಿಂಕ್ಲೇರನು—ಯಾವುದು ಒಳ್ಳೇದಾಗಿ ನಿನಗೆ ತೋರುತ್ತದೋ ಅದನ್ನು ಮಾಡು. ನೀನು ಆ ಹುಡುಗಿಯನ್ನು ಹೊಡೆಯ ಬೇಕಾದರೆ ನಿನ್ನ ಬಲವನ್ನೆಲ್ಲಾ ಉಪಯೋಗಿಸಿ ಹೊಡೆಯಬೇಕಾಗಿದೆ. ಕಬ್ಬಿಣದ ಕೋಲಿ ನಿಂದ ಈ ಹುಡುಗಿಯನ್ನು ಹೊಡೆದದ್ದನ್ನು ನಾನು ನೋಡಿದ್ದೇನೆ. ಇದು ಮಾತ್ರವಲ್ಲ, ಕೈಗೆ ಸಿಕ್ಕಿದ್ದನ್ನು ತೆಗೆದುಕೊಂಡು ಈಕೆಯನ್ನು ಹೊಡೆದು

ನೆಲಕ್ಕೆ ಕೆಡವಿದ್ದನ್ನು ಸಹ ನೋಡಿದ್ದೇನೆ. ಈ ಹುಡುಗಿಯ ಶರೀರವು ಹೊಡೆಸಿಕೊಂಡು ಕಲ್ಲಿನಂತಾಗಿದೆ ಅಂದನು.

ಒಫೀಲಿಯಾ—ಹಾಗಾದರೆ ಏನು ಮಾಡಬೇಕು ?

ಸಿಂಕ್ಲೇರನು—ಏನು ಮಾಡಬೇಕೋ ನನಗೂ ತಿಳಿಯದು. ಪ್ರಯತ್ನ ಮಾಡಿನೋಡು. ಈ ಕಪ್ಪುಜನರ ವಿಷಯದಲ್ಲಿ ಏನು ಮಾಡಬೇಕೆಂದು ನಿಮ್ಮ ಪಂಗಡದವರು ಯಾವಾಗಲೂ ಹೇಳುತ್ತಿರುವಿರಲ್ಲಾ.

ಒಫೀಲಿಯಾ—ಒಳ್ಳೇದು, ನನ್ನಿಂದಾದಷ್ಟು ಪ್ರಯತ್ನಮಾಡಿ ನೋಡುತ್ತೇನೆ.

ಅಧ್ಯಾಯ ೩

ಟಾಪ್ಸಿಯ ವಿದ್ಯಾಭ್ಯಾಸ

ಒಫೀಲಿಯಾ ಸಿಂಕ್ಲೇರನಿಗೆ ಮಾತುಕೊಟ್ಟಂತೆ ಟಾಪ್ಸಿಗೆ ಓದುವುದಕ್ಕೂ ಹೊಲಿಯುವುದಕ್ಕೂ ಕಲಿಸಲು ಬಹಳ ಕಷ್ಟಪಟ್ಟಳು. ಓದುವುದು ಟಾಪ್ಸಿಗೆ ಇಷ್ಟವಿದ್ದುದರಿಂದ ಬಹಳ ಬೇಗನೆ ಕಲಿತುಕೊಂಡಳು. ಹೊಲಿಯುವುದು ಅಂದರೆ ಈಕೆಗೆ ಸ್ವಲ್ಪವಾದರೂ ಇಷ್ಟವಿರಲಿಲ್ಲ. ಒಫೀಲಿಯಾ ಈಕೆಯನ್ನು ಹೊಲಿಯುವುದಕ್ಕೆಂದು ಕೂಡ್ರಿಸಿದರೆ ಸೂಜಿಗಳನ್ನು ಮುರಿದು ಎಲ್ಲಿ ಯಾದರೂ ದೂರ ಬಿಸಾಡುತ್ತಿದ್ದಳು. ದಾರವನ್ನು ಸಿಕ್ಕುಮಾಡುತ್ತಿದ್ದಳು. ಅಥವಾ ದಾರದ ಉಂಡೆಯನ್ನೇ ಬಿಸಾಡುತ್ತಿದ್ದಳು. ಈಕೆಯು ಮಾಡುತ್ತಿದ್ದ ತುಂಟ ಚೇಷ್ಟೆಗಳನ್ನು ಬಹು ಯುಕ್ತಿಯಿಂದಲೂ ಎಚ್ಚರಿಕೆಯಿಂದಲೂ ಮಾಡಿ ಏನೂ ತಿಳಿಯದವಳಂತೆ ಕೂತುಬಿಡುತ್ತಿದ್ದಳು. ಇಂತಹ ಕೆಲಸಗಳು ಹೇಗಾಗಬಹುದೆಂದು ಒಫೀಲಿಯಾ ಅನುಮಾನಿಸುತ್ತಿದ್ದಾಗ್ಯೂ ಟಾಪ್ಸಿಯ ಯುಕ್ತಿ ಉಪಾಯಗಳನ್ನು ಎಂದೂ ಕಂಡುಹಿಡಿಯಲ್ಲಿಲ್ಲ. ನಕಲಿಮಾಡು ವುದು, ಕುಣಿಯುವುದು, ನೆಗೆಯುವುದು, ಒಬ್ಬರು ಮಾಡುವಂತೆ ತಾನು ಸಹ ಮಾಡುವುದು ಇವುಗಳಲ್ಲಿ ಟಾಪ್ಸಿಯು ಬಹಳ ಚತುರಳು. ಈಕೆಯು

ಆಟವಾಡುವ ಸಮಯದಲ್ಲಿ ತೋಟದಲ್ಲಿದ್ದ ಮಕ್ಕಳೆಲ್ಲರು ಆಕೆಯು ಆಡುವ ಆಟಗಳಿಗೂ ಮಾಡುವ ತಮಾಷೆಗಳಿಗೂ ಆಶ್ಚರ್ಯಪಟ್ಟು ತಮ್ಮ ಬಾಯಿಗಳನ್ನು ಅಗಲವಾಗಿ ತೆರೆದುಕೊಂಡು ಆಕೆಯ ಬೆನ್ನು ಹತ್ತಿ ಹೋಗುತ್ತಿದ್ದರು. ಹಾವಾಡಿಗನ ನಾಗಸ್ವರಕ್ಕೆ ಹಾವು ಆಕರ್ಷಿಸಲ್ಪಡುವಂತೆ ಕಡೆಗೆ ಈವಾ ಸಹ ಈ ಟಾಪ್ಸಿಯು ಮಾಡುವ ತಮಾಷೆಗಳಿಂದ ಆಕರ್ಷಿಸಲ್ಪಟ್ಟು ಆಕೆಯ ಸ್ನೇಹವನ್ನು ಬೆಳೆಸಿದಳು. ಒಫೀಲಿಯಾಗೆ ಈವಾ ಟಾಪ್ಸಿಯ ಸ್ನೇಹಮಾಡುವುದು ಮನಸ್ಸಿರಲಿಲ್ಲ. ಇದನ್ನು ನಿಲ್ಲಿಸಬೇಕೆಂದು ಒಫೀಲಿಯಾ ತನ್ನ ಅಣ್ಣನನ್ನು ಬಹಳ ಕೇಳಿಕೊಂಡಳು.

ಸಿಂಕ್ಲೇರನು—ತಂಗೀ, ಅದಕ್ಕೆ ನೀನು ಅಭ್ಯಂತರಿಸಬೇಡ. ಅದರಿಂದ ಈವಾಗೆ ಪ್ರಯೋಜನವುಂಟಾಗಬಹುದು ಅಂದನು.

ಒಫೀಲಿಯಾ—ಅವಳು ಎಂತಹ ತುಂಟ ಹುಡುಗಿ? ಈಕೆಯ ಸ್ನೇಹದಿಂದ ಈವಾ ಸಹ ಕೆಲವು ತುಂಟಾಟಗಳನ್ನು ಕಲಿತುಕೊಳ್ಳಬಹುದೆಂಬ ಭಯವು ನಿನಗಿಲ್ಲವೇನಣ್ಣಾ?

ಸಿಂಕ್ಲೇರನು—ಅವಳು ಈವಾಗೆ ಎಷ್ಟುಮಾತ್ರಕ್ಕೂ ತುಂಟಾಟಗಳನ್ನು ಕಲಿಸಲು ಆಗುವುದೇ ಇಲ್ಲ. ಇತರ ಮಕ್ಕಳಿಗೆ ಕಲಿಸಬಹುದೇನೋ? ತಾವರೆಯ ಎಲೆಯ ಮೇಲೆ ಮಳೆಯ ಹನಿಗಳು ನಿಲ್ಲದೆ ಹೇಗೆ ಜಾರಿಹೋಗುವುವೋ ಆದರಂತೆ ಟಾಪ್ಸಿಯು ಈವಾಗೆ ಕಲಿಸುವ ತುಂಟಾಟಗಳು ನಿಲ್ಲದೆ ಹೋಗುವುವು ಅಂದನು.

ಮೊದಲು ಮೊದಲು ಸಿಂಕ್ಲೇರನ ಮನೆಯಲ್ಲಿದ್ದ ಗುಲಾಮರು ಟಾಪ್ಸಿಯನ್ನು ಅಲಕ್ಷ್ಯಭಾವದಿಂದ ಕಾಣುತ್ತಿದ್ದರು. ಆದರೆ ಟಾಪ್ಸಿಯೊಂದಿಗೆ ಯಾರಾದರೂ ಹಗೆತನವನ್ನು ಕಟ್ಟಿಕೊಂಡರೆ ಅವರಿಗೆ ಏನಾದರೂ ಒಂದು ಕೇಡಾಗುವುದೆಂದು ಕೆಲವು ದಿನಗಳಾದ ಮೇಲೆ ತಿಳಿದುಕೊಂಡರು. ಹಣವನ್ನು ಹೋಗಲಾಡಿಸಿಕೊಳ್ಳುವುದು, ಕೆಲವರು ಬಟ್ಟೆಗಳನ್ನು ಕೆಡಿಸಿಕೊಳ್ಳುವುದು, ಮರಳುತ್ತಿರುವ ಬಿಸಿನೀರಿನಲ್ಲಿ ಬೀಳುವುದು, ಒಳ್ಳೇ ಬಟ್ಟೆಗಳನ್ನು ಹಾಕಿಕೊಂಡು ಹೊರಗೆ ಬಂದರೆ ಅವುಗಳ ಮೇಲೆ ಮೈಲಿಗೆ ನೀರು ಬೀಳುವುದು ಇವೇ ಮೊದಲಾದ ಅನಾಹುತಗಳು ಸಂಭವಿಸುತ್ತಿದ್ದವು. ಅವರು

ಯಾವಾಗಲೂ ಇದಕ್ಕೆಲ್ಲಾ ಕಾರಣವು ಟಾಪ್ಸಿಯೇ ಎಂದು ಆಕೆಯ ಮೇಲೆ ತಪ್ಪು ಹೊರಿಸಿ ದೂಷಿಸಿದಾಗ್ಯೂ ಈ ಕೆಲಸಗಳು ಅವಳಿಂದಲೇ ಆದುವೆಂದು ಸಾಕ್ಷಿಕೊಡುವವರು ಯಾರೂ ಇರಲಿಲ್ಲ. ಸಾಕ್ಷಿಗಳಿಲ್ಲದೆ ಯಾರನ್ನಾದರೂ ಸರಿಯೆ ಒಫೀಲಿಯಾ ಶಿಕ್ಷೆಮಾಡುವುದಿಲ್ಲವೆಂದು ಎಲ್ಲರಿಗೂ ಚೆನ್ನಾಗಿ ತಿಳಿದಿದ್ದಿತು. ಆದುದರಿಂದ ಟಾಪ್ಸಿ ತಂಟೆಗೆ ಹೋಗದೆ ಸುಮ್ಮನಿರುವುದೇ ಮೇಲು ಎಂದು ಎಲ್ಲರೂ ತಿಳಿದುಕೊಂಡರು.

ಟಾಪ್ಸಿಯು ತನಗೆ ಮನಸ್ಸು ಬಂದಾಗ ಯಾವ ಕೆಲಸವನ್ನೇ ಆಗಲಿ ಬಹಳ ಚೆನ್ನಾಗಿ ಮಾಡುತ್ತಿದ್ದಳು. ಆದರೆ ಕೆಲಸ ಮಾಡದಿರುವುದೇ ಆಕೆಯ ವಾಡಿಕೆಯಾಗಿದ್ದಿತು. ಒಂದು ದಿನ ಒಫೀಲಿಯಾಗೆ ಕೋಪಬಂದು— ಟಾಪ್ಸೀ, ನೀನೇಕೆ ಇಷ್ಟು ಕೆಟ್ಟಹುಡುಗಿಯಾಗಿದ್ದೀ ? ಅಂದಳು.

ಟಾಪ್ಸಿ—ಯಾಕೋ ನನಗೆ ತಿಳಿಯದ್ರಮ್ಮ, ನಾನು ಕೆಟ್ಟವಳಾಗಿರುವುದರಿಂದಲೇ ಕೆಟ್ಟದ್ದನ್ನು ಮಾಡುತ್ತೇನೆಂದು ನೆನಸುತ್ತೇನೆ. ಇದು ನನ್ನ ಹುಟ್ಟುಸ್ವಭಾವ ನೀವು ನನ್ನನ್ನು ಚೆನ್ನಾಗಿ ಹೊಡೆಯಬೇಕ್ರಮ್ಮಾ. ನಾನು ಮೊದಲು ಕೆಲಸಮಾಡುತ್ತಿದ್ದೆನಲ್ಲಾ ಆ ಯಜಮಾನರು ಯಾವಾಗಲೂ ನನ್ನನ್ನು ಹೊಡೆಯುತ್ತಲೇ ಇದ್ದರು. ಹೊಡೆಯದಿದ್ದರೆ ನಾನು ಕೆಲಸ ಮಾಡುವುದೇ ಇಲ್ಲ ಅಂದಳು.

ಟಾಪ್ಸಿ ಹೇಳಿದ್ದು ನಿಜವಿರಬಹುದೆಂದು ಹೊಡೆಯುತ್ತಿದ್ದಳು. ಒಫೀಲಿಯಾ ಈಕೆಯನ್ನು ಹೊಡೆದರೆ ಗಟ್ಟಿಯಾಗಿ ಕೂಗಿಕೊಂಡು ಅಳುವುದು, ಅರಚುವುದು, ನೆಲದ ಮೇಲೆ ಬಿದ್ದು ಹೊರಳಾಡುವುದು, ನೋವಿನಿಂದ ಮೂಲುಗುವುದು, ಕಡೆಗೆ ಹೊಡೆಯ ಬೇಡ್ರಮ್ಮಾ ಎಂದು ಕಾಲಿಗೆ ಬಿದ್ದು ಬೇಡಿಕೊಳ್ಳುವುದು ಹೀಗೆಲ್ಲಾ ಮಾಡುತ್ತಿದ್ದಳು. ಅರ್ಧ ಗಂಟೆಯ ತರುವಾಯ ಇತರ ಸೇವಕರೊಂದಿಗೆ ಯಜಮಾನಿಯು ತನ್ನನ್ನು ಹೊಡೆದದ್ದನ್ನು ಹೇಳಿಕೊಂಡು ನಗಾಡುತ್ತಾ ನಾನೆಂತಹ ಕೆಟ್ಟವಳು ಎಂದು ಅನ್ನುತ್ತಿದ್ದಳು.

ಒಂದು ದಿನ ಒಫೀಲಿಯಾ ಈಕೆಯನ್ನು ಮನೆಯಲ್ಲಿ ಬಿಟ್ಟು ಕೆಲಸದ ಮೇಲೆ ಎಲ್ಲಿಯೋ ಹೋಗಿದ್ದಳು. ಆ ಸಮಯದಲ್ಲಿ ಟಾಪ್ಸಿ ಒಂದು

ಬೆಲೆಯುಳ್ಳ ರೇಷ್ಮೆ ಬಟ್ಟೆಯನ್ನು ತೆಗೆದುಕೊಂಡು ತುಂಡುತುಂಡಾಗಿ ಕತ್ತರಿಸಿ ತನ್ನ ಗೊಂಬೆಗೆ ಬಟ್ಟೆಗಳನ್ನು ಹೊಲಿದಿದ್ದಳು. ಹೊರಗೆ ಹೋಗಿದ್ದ ಒಫೀಲಿಯಾ ಮನೆಗೆ ಬಂದಳು. ಬಟ್ಟೆಯೆಲ್ಲಾ ತುಂಡುತುಂಡಾಗಿ ಮನೆಯಲ್ಲಿ ಬಿದ್ದಿದ್ದಿತು. ಇದನ್ನು ನೋಡಿ ತಮ್ಮ ಅಣ್ಣನನ್ನು ಕರೆಸಿ—ಅಣ್ಣಾ, ಇನ್ನು ಈ ಹುಡುಗಿಯನ್ನು ನೋಡಿಕೊಳ್ಳುವುದಕ್ಕೆ ನನ್ನಿಂದಾಗದು. ಎಷ್ಟೋ ಸಾರಿ ಆಕೆಗೆ ಒಳ್ಳೇ ಮಾತಿನಿಂದ ಬುದ್ಧಿಯನ್ನು ಹೇಳಿದೆನು. ಎಷ್ಟೋ ಸಾರಿ ಗದರಿಸಿದೆನು. ಎಷ್ಟೋ ಸಾರಿ ಹೊಡೆದೆನು. ಪ್ರಯೋಜನವೇ ಇಲ್ಲ. ಮನೆಗೆ ಬರುವಾಗ ಹೇಗಿದ್ದಳೋ ಈಗಲೂ ಹಾಗೆಯೇ ಇದ್ದಾಳೆ. ಸ್ವಲ್ಪವಾದರೂ ಬದಲಾವಣೆಯೇ ಇಲ್ಲ. ನಾನೇನು ಮಾಡಲಿ ? ಅಂದಳು.

ಸಿಂಕ್ಲೇರನು—ಬಾ ಇಲ್ಲಿ, ಟಾಪ್ಸಿ. ಯಾಕೆ ಇಂತಹ ಕೆಟ್ಟವಳಾಗಿದ್ದೀ ?

ಟಾಪ್ಸಿ—ನನ್ನ ಮನಸ್ಸು ಕೆಟ್ಟದ್ದಾಗಿರುವುದರಿಂದ ನಾನೂ ಕೆಟ್ಟವಳಾಗಿದ್ದೇನೆ. ಒಫೀಲಿಯಾ ಅಮ್ಮನು ಸಹ ಹೀಗೆಯೇ ಹೇಳುವುದು ಅಂದಳು.

ಸಿಂಕ್ಲೇರನು—ಒಫೀಲಿಯಾ ಅಮ್ಮ ನಿನಗಾಗಿ ಎಷ್ಟು ಪ್ರಯಾಸಪಟ್ಟಿದ್ದಾರೆಂದು ನಿನಗೆ ತಿಳಿದಿದೆಯೇ, ಟಾಪ್ಸಿ ? ಆಕೆಯು ನಿನಗೆ ಮಾಡಬೇಕಾದುದನ್ನೆಲ್ಲಾ ಮಾಡಿ ಪೂರೈಸಿದ್ದಾರಲ್ಲವೇ ?

ಟಾಪ್ಸಿ—ಹೌದು, ಧಣಿಯವರೇ. ಎಲ್ಲಾ ಮಾಡಿ ಪೂರೈಸಿದ್ದಾರೆ. ನಾನು ಮೊದಲು ಇದ್ದೆನಲ್ಲಾ ಆ ಯಜಮಾನಿಯು ಸಹ ಇದರಂತೆಯೇ ಹೇಳುತ್ತಿದ್ದರು. ಅವರು ನನ್ನನ್ನು ಬಹಳ ಗಟ್ಟಿಗೆ ಹೊಡೆಯುತ್ತಿದ್ದರು. ನನ್ನ ತಲೆಯ ಕೂದಲನ್ನು ಹಿಡಿದು ಎಳೆಯುತ್ತಿದ್ದರು. ನನ್ನ ತಲೆಯನ್ನು ಬಾಗಿಲಿಗೆ ಹಾಕಿ ಜಜ್ಜುತ್ತಿದ್ದರು. ನನ್ನ ತಲೆಯಲ್ಲಿರುವ ಪ್ರತಿಯೊಂದು ಕೂದಲನ್ನು ಕಿತ್ತುಹಾಕಿ ನನ್ನನ್ನು ಚಿತ್ರಹಿಂಸೆಮಾಡಿದಾಗ್ಯೂ ಪ್ರಯೋಜನವೇನಾಯಿತು ? ನಾನು ಕೆಟ್ಟವಳು. ನಾನು ಹೇಗೂ ನೀಗ್ರೋ ಹುಡುಗಿಯು. ಯಾರು ಏನು ಮಾಡಿದಾಗ್ಯೂ ಏನಾಗುವುದು ? ಅಂದಳು.

ಸಿಂಕ್ಲೇರನಿಗೆ ಈ ಹುಡುಗಿಯೊಂದಿಗೆ ಏನು ಮಾತಾಡಬೇಕೆಂದು ತಿಳಿಯದೆ ಹೋಗಿ, ಒಫೀಲಿಯಾ ಮುಖವನ್ನು ನೋಡುತ್ತಾ ನಿಂತನು.

ಒಫೀಲಿಯಾ—ಅಣ್ಣಾ, ಈ ಹುಡುಗಿಯ ತಂಟೆಯೇ ನನಗೆ ಇನ್ನು ಮೇಲೆ ಬೇಕಾಗಿಲ್ಲ. ನನಗೆ ಈ ಹುಡುಗಿಯಿಂದ ಸಾಕಾಯಿತು, ಸಾಕಾಯಿತು ಅಂದಳು.

ಇವರ ಮಾತುಗಳನ್ನೆಲ್ಲಾ ಕೇಳಿಸಿಕೊಂಡಿದ್ದ ಈವಾ ಟಾಪ್ಸಿಗೆ ತನ್ನ ಬಳಿಗೆ ಬರುವಂತೆ ಸೌಜ್ಞೆಮಾಡಿದಳು. ಈವಾ ಮತ್ತು ಟಾಪ್ಸಿ ಇಬ್ಬರೂ ಪಕ್ಕದಲ್ಲಿದ್ದ ಒಂದು ಕೊಠಡಿಯೊಳಕ್ಕೆ ಹೋದರು. ಸಿಂಕ್ಲೇರ್ ಮತ್ತು ಒಫೀಲಿಯಾ ಈ ಇಬ್ಬರು ಹುಡುಗಿಯರು ಏನು ಮಾತಾಡಿಕೊಳ್ಳುತ್ತಾರೋ ಕೇಳಿಸಿಕೊಳ್ಳೋಣವೆಂದು ಕೊಠಡಿಯ ಸಮೀಪ ಅವರ ಕಣ್ಣಿಗೆ ಮರೆಯಾಗಿ ನಿಂತುಕೊಂಡರು.

ಅಧ್ಯಾಯ ೪

ಈವಾ ಮತ್ತು ಟಾಪ್ಸಿ

ಟಾಪ್ಸಿ ಮತ್ತು ಈವಾ ಇಬ್ಬರೂ ಕೊಠಡಿಯೊಳಕ್ಕೆ ಹೋದರು. ಟಾಪ್ಸಿಗೆ ಯಾವುದೂ ಲಕ್ಷ್ಯವೇ ಇಲ್ಲ. ಒಂದು ತರವಾದ ಬಿಂಕದಿಂದ ನಿಂತಿದ್ದಳು. ನಿಂತಿದ್ದ ಈ ಟಾಪ್ಸಿಯನ್ನು ಈವಾ ನೋಡಿ ಕಣ್ಣೀರಿಡುತ್ತಾ—ಟಾಪ್ಸಿ, ಯಾಕೆ ಇಷ್ಟು ಕೆಟ್ಟವಳಾಗಿದ್ದೀಯಮ್ಮಾ, ನೀನು? ಒಳ್ಳೆಯವಳಾಗಿರುವುದಕ್ಕೆ ಯಾಕೆ ಪ್ರಯತ್ನಿಸಬಾರದು? ನೀನು ಯಾರನ್ನೂ ಪ್ರೀತಿಸುವುದಿಲ್ಲವೇ, ಟಾಪ್ಸಿ?

ಟಾಪ್ಸಿ—ಪ್ರೀತಿ ಅಂದರೆ ಏನೋ ನನಗೆ ತಿಳಿಯದು. ಮಿಠಾಯಿ ಅಂದರೆ ಮಾತ್ರ ನನಗೆ ಪ್ರೀತಿಯು, ಅಷ್ಟೇ.

ಈವಾ—ನೀನು ನಿನ್ನ ತಂದೆಯನ್ನೂ ತಾಯಿಯನ್ನೂ ಪ್ರೀತಿಸುವುದಿಲ್ಲವೇ?

ಟಾಪ್ಸಿ—ನನಗೆ ಎಂದಾದರೂ ಸರಿಯೇ ತಂದೆಯೂ ಇರಲಿಲ್ಲ, ತಾಯಿಯೂ ಇರಲಿಲ್ಲ. ಈ ವಿಷಯದಲ್ಲಿ ನಾನು ಮೊದಲೇ ಹೇಳಿದ್ದೇನಲ್ಲಾ?

ಈವಾ—ಓ . . . ಹೌದು, ಹೌದು, ನಾನು ಮರೆತಿದ್ದೆನು. ಆದರೆ ನಿನಗೆ ಅಣ್ಣತಮ್ಮಂದಿರಾಗಲಿ, ಅಕ್ಕತಂಗಿಯರಾಗಲಿ ಚಿಕ್ಕಮ್ಮ, ಅತ್ತೆ ಯಾರು ಇರಲಿಲ್ಲವೇ ?

ಟಾಪ್ಸಿ—ನನಗೆ ಯಾರೂ ಇರಲಿಲ್ಲ, ಯಾವುದೂ ಇರಲಿಲ್ಲ.

ಈವಾ—ಆದರೆ, ಟಾಪ್ಸಿ ನೀನು ಪ್ರಯತ್ನಮಾಡಿದರೆ ಒಳ್ಳೇ ಹುಡುಗಿಯಾಗಿ ಇರಬಹುದಲ್ಲವೇ ?

ಟಾಪ್ಸಿ—ನಾನು ಕಪ್ಪು ನೀಗ್ರೋ ಹುಡುಗಿಯಾಗಿ ಮಾತ್ರ ಇರಬಲ್ಲೆನು. ಅದಕ್ಕೆ ಮೀರಿ ಒಳ್ಳೆಯವಳಾಗಿರಲಾರೆನು. ನನ್ನ ಚರ್ಮ ಸುಲಿದುಹಾಕಿ, ನಾನು ಬೆಳ್ಳಗೆ ಆದರೆ ಒಳ್ಳೆಯವಳಾಗಿರುವುದಕ್ಕೆ ಆಗ ಪ್ರಯತ್ನಮಾಡುತ್ತೇನೆ.

ಈವಾ—ನೀನು ಕಪ್ಪಾಗಿದ್ದರೂ ಏನು? ಜನರು ನಿನ್ನನ್ನು ಪ್ರೀತಿ ಮಾಡುತ್ತಾರೆ ಟಾಪ್ಸಿ. ನೀನು ಒಳ್ಳೆಯವಳಾಗಿದ್ದರೆ ಒಫೀಲಿಯಾ ಯಜಮಾನಿಯು ಸಹ ನಿನ್ನನ್ನು ಪ್ರೀತಿಮಾಡುತ್ತಾರೆ.

ಇದನ್ನು ಕೇಳಿ, ಟಾಪ್ಸಿಯು ಇದು ಸಂಬತಕ್ಕ ಮಾತಲ್ಲಮ್ಮಾ ಎಂದು ಕಿಲಕಿಲನೆ ನಕ್ಕಳು.

ಈವಾ—ಹಾಗೆ ನೀನು ನೆನಸುವುದಿಲ್ಲವೇ ಟಾಪ್ಸಿ ?

ಟಾಪ್ಸಿ—ಆಕೆಯು ಎಂದಿಗೂ ಪ್ರೀತಿಸುವುದಿಲ್ಲ. ಯಾಕೆಂದರೆ ನಾನು ನೀಗ್ರೋ, ಕಪ್ಪಾಗಿದ್ದೇನೆ. ಕಪ್ಪೆಯನ್ನು ಮುಟ್ಟುವುದಕ್ಕೆ ಹೇಗೆ ಅಸಹ್ಯ ಪಡುತ್ತಾರೋ ಅದರಂತೆ ಆಕೆಯು ನನ್ನನ್ನು ಮುಟ್ಟಿಸಿಕೊಳ್ಳುವುದಕ್ಕೆ ಅಸಹ್ಯಪಡುತ್ತಾಳೆ. ನೀಗ್ರೋಳನ್ನು ಯಾರೂ ಪ್ರೀತಿಸುವುದಿಲ್ಲ. ನೀಗ್ರೋಗಳು ಯಾವುದನ್ನೂ ಮಾಡಲಾರರು. ಇದು ಒಂದೂ ನನಗೆ ಬೇಕಾಗಿಲ್ಲ ಅಂದಳು.

ಈವಾ ಬಲಹೀನವಾದ ತನ್ನ ಬಿಳೀ ಕೈಯನ್ನು ಟಾಪ್ಸಿಯ ಭುಜದ ಮೇಲಿಟ್ಟುಕೊಂಡು—ಟಾಪ್ಸೀ, . . . ನಿನಗೆ ತಾಯಿತಂದೆಗಳಾಗಲಿ, ಅಣ್ಣತಮ್ಮಂದಿರಾಗಲಿ, ಸ್ನೇಹಿತರಾಗಲಿ ಇಲ್ಲ. ನೀನು ಒಡವಳೆಂದು ಎಲ್ಲರೂ ನಿನ್ನನ್ನು ತಾತ್ಸಾರಮಾಡುತ್ತಾರೆ. ಆದುದರಿಂದ ನಾನು ನಿನ್ನನ್ನು ಪ್ರೀತಿ

ಮಾಡುತ್ತೇನೆ ಟಾಪ್ಸಿ, ನಿಜವಾಗಿ ನಿನ್ನನ್ನು ಪ್ರೀತಿಮಾಡುತ್ತೇನೆ, ನೀನು ಒಳ್ಳೆಯವಳಾದರೆ ನನಗೆ ಬಹಳ ಸಂತೋಷ. ನಾನು ಬಹಳ ಕಾಯಿಲೆಯಾಗಿದ್ದೇನೆ. ನಾನು ಬಹಳ ದಿನಗಳು ಜೀವಿಸಿರುತ್ತೇನೆಂದು ನೆನಸುವುದಿಲ್ಲ ಟಾಪ್ಸಿ! ನೀನು ಕೆಟ್ಟವಳಾಗಿರುವುದನ್ನು ನೆನಸಿಕೊಂಡರೆ ನನ್ನ ಹೃದಯವು ನೊಂದುಹೋಗುತ್ತದೆ. ನನಗೋಸ್ಕರವಾಗಿಯಾದರೂ ನೀನು ಒಳ್ಳೆಯವಳಾಗಿರುವುದಕ್ಕೆ ಪ್ರಯತ್ನಮಾಡಲಾರೆಯಾ? ನಾನು ನಿನ್ನ ಸಂಗಡ ಇರುವುದೆಲ್ಲಾ ಕೆಲವು ದಿನಗಳು ಮಾತ್ರವೇ ಅಂದಳು.

ಟಾಪ್ಸಿ—ಈವಾ ಮಾತುಗಳನ್ನು ಕಿವಿಗೊಟ್ಟು ಕೇಳಿದಳು. ಕಪ್ಪು ಹುಡುಗಿಯಾದ ಈ ಟಾಪ್ಸಿಯ ಕಣ್ಣುಗಳಲ್ಲಿ ನೀರು ತುಂಬಿ ತುಳುಕುತ್ತಿದ್ದಿತು. ತಲೆಯನ್ನು ಬೊಗ್ಗಿಸಿ ತನ್ನ ಮೊಣಕಾಲುಗಳ ಮೇಲೆ ಇಟ್ಟುಕೊಂಡು ಬಿಕ್ಕಿ ಬಿಕ್ಕಿ ಅತ್ತಳು.

ಈವಾ—ಹಾ! ಬಡ ಹುಡುಗೀ! ಟಾಪ್ಸೀ, . . . ಯೇಸುಸ್ವಾಮಿಯು ಎಲ್ಲರನ್ನು ಒಂದೇ ರೀತಿಯಾಗಿ ಪ್ರೀತಿಸುತ್ತಾನೆ ಎಂಬುವುದು ನಿನಗೆ ತಿಳಿಯದೇ? ನನ್ನನ್ನು ಹೇಗೆ ಪ್ರೀತಿಸುತ್ತಾನೋ ಅದರಂತೆ ನಿನ್ನನ್ನು ಸಹ ಪ್ರೀತಿಸುವುದಕ್ಕೆ ಆತನಿಗೆ ಮನಸ್ಸಿದೆ. ನಿನ್ನನ್ನು ನಾನು ಎಷ್ಟು ಪ್ರೀತಿಸುತ್ತೇನೋ ಅದಕ್ಕಿಂತಲೂ ಆತನು ನಿನ್ನನ್ನು ಹೆಚ್ಚು ಪ್ರೀತಿಮಾಡುತ್ತಾನೆ. ಯಾಕೆಂದರೆ ಆತನು ನನಗಿಂತಲೂ ಒಳ್ಳೆಯವನು. ನೀನು ಒಳ್ಳೆಯವಳಾಗಿರುವುದಕ್ಕೆ ಆತನು ನಿನಗೆ ಸಹಾಯಮಾಡುತ್ತಾನೆ. ಕಡೆಯಲ್ಲಿ ಒಬ್ಬ ಬಿಳೀ ಹುಡುಗಿಯಂತೆ ನೀನು ಸಹ ಪರಲೋಕಕ್ಕೆ ಹೋಗಬಹುದು ಟಾಪ್ಸೀ. . . .

ಈವಾ ಹೇಳಿದ ಮಾತುಗಳು ಇವಳ ಮನಸ್ಸಿಗೆ ಚೆನ್ನಾಗಿ ತಾಗಿದುವು. ಕಡೆಗೆ—ಈವಾ, ನನ್ನ ಚಿಕ್ಕ ಯಜಮಾನಿಯೇ, ನಾನು ಒಳ್ಳೆಯವಳಾಗಿರುವುದಕ್ಕೆ ಪ್ರಯತ್ನಿಸುತ್ತೇನೆ. ಖಂಡಿತವಾಗಿ ಪ್ರಯತ್ನಿಸುತ್ತೇನೆ. ಇದುವರೆಗೂ ಇದು ಯಾವುದನ್ನೂ ನಾನು ಲಕ್ಷ್ಯಮಾಡಲಿಲ್ಲ ಎಂದು ಅಳುತ್ತಾ ಹೇಳಿದಳು.

ಸಿಂಕ್ಲೇರನು ಮತ್ತು ಒಫೀಲಿಯಾ ಅಲ್ಲಿಯೇ ಮರೆಯಲ್ಲಿ ನಿಂತು ಇವರಿಬ್ಬರ ಸಂಭಾಷಣೆಯನ್ನು ಕೇಳುತ್ತಿದ್ದರು. ಸಿಂಕ್ಲೇರನು ಒಫೀಲಿಯಾ

ಳನ್ನು ನೋಡಿ ಪಿಸುಗುಟ್ಟಿಸಲ್ಲಿ—ನನ್ನ ತಾಯಿಯು ನನಗೆ ಏನು ಹೇಳಿದ್ದಳೋ ಈಗ ಅದು ನನ್ನ ನೆನಪಿಗೆ ಬರುತ್ತದೆ. ತಂಗೀ, ನಾವು ಕುರುಡರಿಗೆ ದೃಷ್ಟಿಯನ್ನು ಕೊಡಬೇಕಾದರೆ ಯೇಸು ಕ್ರಿಸ್ತನು ಹೇಗೆ ಮಾಡಿದನೋ ನಾವು ಸಹ ಅದರಂತೆ ಮಾಡಬೇಕು. ನಾವು ಅವರನ್ನು ಹತ್ತಿರಕ್ಕೆ ಕರೆದು ಅವರ ಮೇಲೆ ನಮ್ಮ ಕೈಗಳನ್ನಿಡಬೇಕು ಅಂದನು.

ಒಫೀಲಿಯಾ—ನೀಗ್ರೋ ಜನರ ವಿಷಯ ನನಗೆ ಎಂದಾದರೂ ಒಳ್ಳೇ ಅಭಿಪ್ರಾಯವಿರಲಿಲ್ಲ. ಆ ಹುಡುಗಿಯನ್ನು ಮುಟ್ಟಿಸಿಕೊಳ್ಳುವುದಕ್ಕೆ ನನಗೆ ಮನಸ್ಸು ಒಪ್ಪುವುದಿಲ್ಲವೆಂಬ ಮಾತು ನಿಜವೇ. ಆದರೆ ಆ ವಿಷಯವನ್ನು ಆ ಹುಡುಗಿಯು ಅರಿತುಕೊಂಡಿದ್ದಾಳೆಂದು ನಾನು ನೆನಸಲಿಲ್ಲ.

ಸಿಂಕ್ಲೇರನು—ಒಂದು ಸಣ್ಣ ಕೂಸಿಗಾದರೂ ಈ ಸಂಗತಿಯು ತಿಳಿಯುತ್ತದೆ. ಅದನ್ನು ಮರೆಮಾಡುವುದಕ್ಕೆ ಆಗುವುದಿಲ್ಲ, ಬಹಳ ಕಷ್ಟ. ನಾವು ಅವರಿಗೆ ಎಷ್ಟು ಸಹಾಯಮಾಡಿದಾಗ್ಯೂ ಪ್ರಯೋಜನವಿಲ್ಲ. ನಾವು ಅವರಿಗೆ ಎಷ್ಟು ಪ್ರಯೋಜನವನ್ನುಂಟುಮಾಡುವುದಕ್ಕೆ ಪ್ರಯತ್ನಿಸಿದಾಗ್ಯೂ ಪ್ರಯೋಜನವಿಲ್ಲ. ನಮ್ಮ ಮನಸ್ಸುಗಳಲ್ಲಿ ಅವರ ವಿಷಯದಲ್ಲಿ ಅನಿಷ್ಟವೂ ಅಸಹ್ಯವೂ ಇದ್ದಷ್ಟು ಕಾಲ ಅವರು ಎಂದಿಗೂ ಕೃತಜ್ಞರಾಗಿರಲಾರರು. ಇದು ಆಶ್ಚರ್ಯವಾದ ಸಂಗತಿಯಾದಾಗ್ಯೂ ಅದನ್ನು ನಿಜವೆಂದೇ ಒಪ್ಪಿಕೊಳ್ಳಬೇಕು.

ಅಧ್ಯಾಯ ೫

ಟಾಪ್ಸಿಯ ಬದಲಾವಣೆ

ಚಿಕ್ಕ ಯಜಮಾನಿಯಾದ ಈವಾ ದಿನ ದಿನವೂ ಶರೀರದಲ್ಲಿ ಬಲಹೀನಳಾಗುತ್ತಾ ಬಂದಳು. ಆಕೆಯು ಬಹಳ ದಿನಗಳು ಬದುಕುವುದಿಲ್ಲವೆಂದು ಎಲ್ಲರೂ ಚೆನ್ನಾಗಿ ತಿಳಿದುಕೊಂಡರು. ಒಂದು ದಿನ ಈವಾ ತನ್ನ ಮನೆಯಲ್ಲಿರುವ ಗುಲಾಮರೆಲ್ಲರನ್ನೂ ಕರೆಸಿ, ಅವರಿಗೆ ತನ್ನ ಆಶೀರ್ವಾದವನ್ನೂ ಸ್ವಲ್ಪ ಸ್ವಲ್ಪ ತನ್ನ ಉಂಗುರ ಕೂದಲನ್ನೂ ಕೊಟ್ಟು ಕಳುಹಿಸಿದಳು. ಈವಾ

ಮಲಗಿದ್ದ ಕೊಠಡಿಯಿಂದ ಎಲ್ಲರು ಹೊರಟುಹೋದರೆಂದು ಒಫೀಲಿಯಾ ನೆನಸಿದಳು. ಆದರೆ ಟಾಪ್ಸಿ ಈವಾ ಹಾಸಿಗೆಯ ಪಕ್ಕದಲ್ಲಿ ನಿಂತುಕೊಂಡು ಅಳುತ್ತಿದ್ದಳು. ಇದನ್ನು ಕಂಡು ಒಫೀಲಿಯಾಗೆ ಬಹಳ ಆಶ್ಚರ್ಯವಾಯಿತು.

ನಿಂತು ಅಳುತ್ತಿದ್ದ ಟಾಪ್ಸಿ ಮರಣದ ಹಾಸಿಗೆಯಲ್ಲಿದ್ದ ಈವಾಳಿಗೆ—ನನ್ನ ಚಿಕ್ಕ ಯಜಮಾನಿಯೇ, ನಾನು ಕೆಟ್ಟ ಹುಡುಗಿಯಾಗಿದ್ದೆನು ನಿಜ. ಆದರೂ ನೀನು ಎಲ್ಲರಿಗೂ ಕೊಟ್ಟಂತೆ ನಿನ್ನ ಆಶೀರ್ವಾದವನ್ನೂ ನಿನ್ನ ಉಂಗುರ ಕೂದಲನ್ನೂ ನನಗೆ ಸಹ ಕೊಡುವುದಿಲ್ಲವೇ ಎಂದು ಕಣ್ಣೀರಿನಿಂದ ಬೇಡಿಕೊಂಡಳು.

ಈವಾ—ನನ್ನ ಪ್ರಿಯ ಟಾಪ್ಸೀ, ನಿನಗೂ ನನ್ನ ಆಶೀರ್ವಾದವನ್ನು ಕೊಡುತ್ತೇನೆ. ನಿನಗೂ ನನ್ನ ಕೂದಲನ್ನು ಕೊಡುತ್ತೇನೆ. ನೀನು ನನ್ನ ಕೂದಲನ್ನು ನೋಡುವಾಗಲೆಲ್ಲಾ ನಾನು ನಿನ್ನನ್ನು ಪ್ರೀತಿಮಾಡುತ್ತೇನೆಂದು ನೆನಪುಮಾಡಿಕೊ. ನೀನು ಒಳ್ಳೇ ಹುಡುಗಿಯಾಗಿರಲು ನಾನು ಅಪೇಕ್ಷಿಸಿದೆನೆಂದು ನೆನಪುಮಾಡಿಕೊ.

ಟಾಪ್ಸಿ—ಬಿಕ್ಕಿಬಿಕ್ಕಿ ಅಳುತ್ತಾ, ಈವಾ, ನನ್ನ ಯಜಮಾನಿಯೇ, ನಾನು ಈಗ ಒಳ್ಳೆಯವಳಾಗಿರುವುದಕ್ಕೆ ಪ್ರಯತ್ನಮಾಡುತ್ತಿದ್ದೇನೆ. ಆಹಾ! ಒಳ್ಳೆಯವಳಾಗಿರುವುದು ಎಷ್ಟು ಕಷ್ಟ?

ಈವಾ—ಅದು ಯೇಸುಸ್ವಾಮಿಗೆ ತಿಳಿದಿದೆ ಟಾಪ್ಸಿ. ಆ ಸ್ವಾಮಿಯು ನಿನಗಾಗಿ ದುಃಖಪಡುತ್ತಾನೆ. ಆತನು ನಿನಗೆ ಸಹಾಯಮಾಡುತ್ತಾನೆ ಅಂದಳು.

ಈವಾ ಕೊಟ್ಟ ಕೂದಲನ್ನು ತೆಗೆದುಕೊಂಡು ಕೊಠಡಿಯಿಂದ ಹೊರಕ್ಕೆ ಬರುವಾಗ ಆ ಅಮೂಲ್ಯವಾದ ಕೂದಲನ್ನು ತನ್ನ ಎದೆಯಲ್ಲಿ ಬಚ್ಚಿಟ್ಟು ಕೊಂಡಳು.

ಒಂದೆರಡು ದಿನಗಳಲ್ಲಿಯೇ ಈವಾ ತೀರಿಕೊಂಡಳು. ಆಕೆಯ ಮೇಲೆ ಇಡುವುದಕ್ಕಾಗಿ ಟಾಪ್ಸಿ ಹೂವುಗಳನ್ನು ತೆಗೆದುಕೊಂಡು ಬಂದಳು. ಸತ್ತು ಮಲಗಿದ್ದ ಈವಾಳ ಮುಖವನ್ನು ದೃಷ್ಟಿಸಿ ನೋಡಿದಳು. ದುಃಖವು ಮಿತಿಮೀರಿದುದರಿಂದ ಘಟ್ಟಿಯಾಗಿ ಅಳುತ್ತಾ ಮರಣದ ಹಾಸಿಗೆಯ ಪಕ್ಕದಲ್ಲಿ ನೆಲದ ಮೇಲೆ ಬಿದ್ದುಬಿಟ್ಟಳು.

ಅಳುವ ಶಬ್ದವನ್ನು ಕೇಳಿ ಒಫೀಲಿಯಾ ಕೊಠಡಿಯೊಳಕ್ಕೆ ಬಂದು ಅಳುತ್ತಾ ಬಿದ್ದಿದ್ದ ಟಾಪ್ಸಿಯನ್ನು ಎಬ್ಬಿಸುವುದಕ್ಕಾಗಿಯೂ ಸುಮ್ಮನಿರಿಸುವುದಕ್ಕಾಗಿಯೂ ಎಷ್ಟು ಪ್ರಯತ್ನಿಸಿದಾಗ್ಯೂ ಸಾಧ್ಯವಾಗಲಿಲ್ಲ. ಟಾಪ್ಸಿಯಾದರೋ—ಈವಾ, ಈವಾ, ನನ್ನ ಚಿಕ್ಕ ಯಜಮಾನಿಯೇ, ನಿನ್ನ ಸಂಗಡ ನಾನು ಸಹ ಸತ್ತಿದ್ದರೆ ಚೆನ್ನಾಗಿದ್ದಿತಲ್ಲಾ! ಈವಾ! ಈವಾ! ಎಂದು ಅತ್ತಳು.

ಒಫೀಲಿಯಾ ಪ್ರೀತಿಯಿಂದಲೂ ಮೃದುವಾದ ಸ್ವರದಿಂದಲೂ ಅಳಬೇಡ, ಟಾಪ್ಸಿ . . . ಅಳಬೇಡ . . . ನಿನ್ನ ಚಿಕ್ಕ ಯಜಮಾನಿಯು ಪರಲೋಕಕ್ಕೆ ಹೋಗಿದ್ದಾಳೆ, ಅಳಬೇಡಮ್ಮಾ! ಎದ್ದೇಳು ಅಂದಳು.

ಟಾಪ್ಸಿ—ಆಕೆಯು ನನಗೆ ಕಾಣಿಸುವುದಿಲ್ಲವಲ್ಲಾ, ಆಕೆಯನ್ನು ನಾನು ಎಂದಿಗೂ ನೋಡುವುದಿಲ್ಲ. ಟಾಪ್ಸೀ, . . . ನಿನ್ನನ್ನು ನಾನು ಪ್ರೀತಿಮಾಡುತ್ತೇನೆಂದು ಹೇಳಿದ್ದಳಲ್ಲಾ! ಆಕೆಯು ನಿಜವಾಗಿ ನನ್ನನ್ನು ಪ್ರೀತಿಸಿದಳು. ಹಾ! ಈವಾ! ಈಗ ನನ್ನನ್ನು ಪ್ರೀತಿಸುವವರು ಯಾರೂ ಇಲ್ಲವಲ್ಲಾ! ನಾನೇನು ಮಾಡಲಿ? ನಾನು ಹುಟ್ಟದೆ ಇದ್ದರೆ ಚೆನ್ನಾಗಿತ್ತು ಎಂದು ಹೇಳಿಕೊಂಡು ಅಳುತ್ತಿದ್ದಳು.

ನೆಲದ ಮೇಲೆ ಬಿದ್ದು ಅತಿಯಾಗಿ ಗೋಳಾಡುತ್ತಿದ್ದ ಟಾಪ್ಸಿಯನ್ನು ಒಫೀಲಿಯಾ ಮೆಲ್ಲಗೆ ಎಬ್ಬಿಸಿದಳು. ಎಬ್ಬಿಸುವಾಗ ಕಣ್ಣೀರು ಧಾರಾಳವಾಗಿ ಹರಿಯಿತು. ತನ್ನ ದುಃಖವನ್ನು ಅಣಗಿಸಿಕೊಂಡು—ಟಾಪ್ಸೀ, . . . ಅಳಬೇಡಾ . . . ನಾನು ಆಕೆಯಂತಹವಳಲ್ಲದಿದ್ದಾಗ್ಯೂ, ಟಾಪ್ಸಿ, . . ನಾನು ನಿನ್ನನ್ನು ಪ್ರೀತಿಸುತ್ತೇನೆ. ಆಕೆಯಿಂದ ನಾನು ಕ್ರಿಸ್ತನ ಪ್ರೀತಿಯ ವಿಷಯ ಅಲ್ಪಸ್ವಲ್ಪ ಕಲಿತಿದ್ದೇನೆ. ನಾನು ಪ್ರೀತಿಸುತ್ತೇನೆ ಟಾಪ್ಸಿ, . . . ನಿಜವಾಗಿ ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನು ಒಳ್ಳೇ ಹುಡುಗಿಯಾಗಿ ಬೆಳೆಯಲು ನಾನು ನಿನಗೆ ಸಹಾಯಮಾಡುತ್ತೇನೆಂದು ಆದರಿಸಿದಳು.

ಒಫೀಲಿಯಾಳ ಮೃದುವಾದ ಸ್ವರವೂ ಕಣ್ಣೀರೂ ಆಕೆಯು ಹೇಳಿದ ಮಾತುಗಳಿಗಿಂತಲೂ ಬೆಲೆಯುಳ್ಳವುಗಳಾಗಿ ಟಾಪ್ಸಿಯ ಹೃದಯವನ್ನು ತಾಕಿತು; ಕಡೆಗೆ ನನಗೊಬ್ಬ ಸ್ನೇಹಿತಳು ಸಿಕ್ಕಿದಳಲ್ಲಾ ಎಂದು ಸಮಾಧಾನ

ವನ್ನು ಪಡೆದಳು. ಆ ಘಳಿಗೆಯಿಂದ ಒಫೀಲಿಯಾ ಈ ದಿಕ್ಕಿಲ್ಲದ ಹುಡುಗಿಯ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸಿಕೊಂಡು ಆಕೆಯನ್ನು ಪ್ರೀತಿಸುವುದಕ್ಕೆ ಪ್ರಾರಂಭಿಸಿದಳು. ಆ ಪ್ರೀತಿಯು ಕಡೇ ವರೆಗೆ ಇದ್ದಿತೆಂದು ಹೇಳಬೇಕಾಗಿದೆ.

ಟಾಪ್ಸಿಯು ತಕ್ಷಣವೇ ಒಬ್ಬ ದೇವಭಕ್ತಳಾಗಲಿಲ್ಲ. ಆದರೂ ಈವಾಳ ಜೀವಮಾನವೂ ಆಕೆಯ ಮರಣವೂ ಇವಳನ್ನು ಬಹಳವಾಗಿ ಬದಲಾಯಿಸಿತು. ಇದು ವರೆಗೂ ಇವಳಲ್ಲಿ ನೆಲೆಸಿದ್ದ ಮೊಂಡತನವೇ ಮೊದಲಾದ ದುರ್ಗುಣಗಳು ಮಾಯವಾಗಿ ಒಳ್ಳೆಯವಳಾಗುವ ನಿರೀಕ್ಷೆ ಉಂಟಾಯಿತು. ಒಫೀಲಿಯಾ ಆಕೆಗೆ ವಿದ್ಯಾಭ್ಯಾಸವನ್ನು ಮಾಡಿಸಲು ಬಹಳ ಪ್ರಯಾಸ ತೆಗೆದುಕೊಂಡಳು. ಮತ್ತು ಆಕೆಯನ್ನು ಮುಟ್ಟಿಸಿಕೊಳ್ಳುವುದಕ್ಕೆ ಎಂದಿಗೂ ಹಿಂದೆಗೆಯಲಿಲ್ಲ.

ಒಂದು ದಿನ ಒಫೀಲಿಯಾ ಈ ಹುಡುಗಿಯ ವಿಷಯದಲ್ಲಿ ಸಿಂಕ್ಲೇರನಿಗೆ ನೆನಪು ಹುಟ್ಟಿಸಿ—ಅಣ್ಣಾ, ಟಾಪ್ಸಿಯನ್ನು ನಿನಗೆ ಬಹುಮಾನವಾಗಿ ಕೊಟ್ಟಿದ್ದೇನೆ, ಆಕೆಯು ನಿನ್ನವಳು ಎಂದು ಹೇಳಿದಿಯಲ್ಲಾ? ಹಾಗಾದರೆ, ಈಗ ಆಕೆಗೆ ಸ್ವತಂತ್ರ ಕೊಟ್ಟಿದೆಯೆಂದು ನನಗೆ ಪತ್ರ ಬರೆದುಕೊಡು ಎಂದು ಕೇಳಿದಳು.

ಮಗಳು ಮೃತಳಾದ ಕೆಲವು ದಿನಗಳ ತರುವಾಯ ಸಿಂಕ್ಲೇರನು ಸಹ ಮೃತನಾದನು. ಈತನ ಮರಣಾನಂತರ ಒಫೀಲಿಯಾ ಟಾಪ್ಸಿಯನ್ನು ತನ್ನ ಸ್ವಂತ ಊರಿಗೆ ಕರೆದುಕೊಂಡುಹೋದಳು. ಈಕೆಯ ಸುಶಿಕ್ಷಣದಿಂದ ಟಾಪ್ಸಿಯು ವಿದ್ಯಾವಂತಳೂ ಬುದ್ಧಿವಂತಳೂ ಒಳ್ಳೆಯವಳೂ ಆದಳು. ಈಕೆಯು ಬಹಳ ಒಳ್ಳೇ ಯೌವನಸ್ಥೆಯೆಂದೆನಿಸಿಕೊಂಡಳು. ಕಡೆಗೆ ಈಕೆಯು ಉಪಾಧ್ಯಾಯನಿಯಾಗಿ ಆಫ್ರಿಕಾ ದೇಶಕ್ಕೆ ಹೋಗಿ ತನ್ನ ಸ್ವಜನರನ್ನು ವಿದ್ಯಾವಂತರನ್ನಾಗಿಯೂ ನಾಗರಿಕರನ್ನಾಗಿಯೂ ಮಾಡಲು ಬಹಳ ಪ್ರಯಾಸ ತೆಗೆದುಕೊಂಡಳು. ತನ್ನ ಜನರಿಗೆ ಮುಂದಾಳಾದಳು. ಈಕೆಗೆ ಬಾಲ್ಯದಲ್ಲಿದ್ದ ಮೂರ್ಖತನವೇ ತನ್ನ ಜನರನ್ನು ಅಭಿವೃದ್ಧಿಸ್ಥಿತಿಗೆ ತರಲು ಸಹಾಯವಾಯಿತು.

ಕಥಾ ಸಮಾಪ್ತ.

Printed at the
Wesley Press and Publishing House
Mysore City—1937